ಭಾನುವಾರ, ಜನವರಿ 1, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 1 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಭಾವೈಕ್ಯದ ಬೀಡು, ಕೃಷ್ಣಮೃಗಗಳ ಕಾಡು ಹಾವೇರಿಯಲ್ಲಿ ಇದೇ 6ರಿಂದ ನುಡಿಹಬ್ಬದ ಸಂಭ್ರಮ. ಈ ನೆಪದಲ್ಲಿ ಅಲ್ಲೊಂದು ಸುತ್ತು..

ಐಎಎಸ್, ಐಪಿಎಸ್, ಐಎಫ್‌ಎಸ್ 116 ಅಧಿಕಾರಿಗಳಿಗೆ ಬಡ್ತಿ 9
ಕನ್ನಡ ಸಾಹಿತ್ಯ ಪರಿಷತ್ತಿನ ನಡೆಗೆ ಅಸಮಾಧಾನ
'ದೇಶದಲ್ಲಿ ಬಿಜೆಪಿಗೆ ದೊಡ್ಡಮಟ್ಟದ ವಿರೋಧ' 11
ಸಾಹಿತ್ಯ ಸಮ್ಮೇಳನ: ಹಿಂದೆ ಸರಿದ ಕವಿಗಳು 9

ಪ್ರಿಯ ಓದುಗರೇ
ಹೊಸ ಸೂರ್ಯೋದಯವಾಗಿದೆ. ಮತ್ತೊಂದು ಹೊಸ ವರ್ಷವೂ ಬಂದಿದೆ. ಹೊಸ ವರ್ಷದಲ್ಲಿ ನಿಮ್ಮ ಕನಸುಗಳೆಲ್ಲ ನನಸಾಗಲಿ, ಹಾಕಿಕೊಂಡ ಗುರಿಗಳೆಲ್ಲ ಈಡೇರಲಿ, ಯಶಸ್ಸು ಸದಾ ನಿಮ್ಮ ಜತೆಗಿರಲಿ, ಮುಂಬರುವ ದಿನಗಳು ನಿಮಗೆ ಸಿಹಿಯನ್ನೇ ಹೆಚ್ಚಾಗಿ ಉಣಿಸುವಂತಾಗಲಿ ಎಂದು ನಿಮ್ಮ 'ಪ್ರಜಾವಾಣಿ' ಹೃದಯ ತುಂಬಿ ಹಾರೈಸುತ್ತದೆ. ಹಾಗೆಯೇ ಹೊಸ ವರ್ಷದ ಶುಭಾಶಯವನ್ನೂ ಕೋರುತ್ತದೆ.
–ಸಂಪಾದಕ

ವಿಶೇಷ ಸೂಚನೆ
ಇಂದಿನ ಸಂಚಿಕೆಯೊಂದಿಗೆ 2023ರ ಕ್ಯಾಲೆಂಡರ್ ಕೊಡಲಾಗಿದೆ

ಚಿನಕುರಳಿ
ಪ್ರಕಾಶ್ ಶೆಟ್ಟಿ



ರಸಗೊಬ್ಬರ: ತಪ್ಪದ ಪರದಾಟ

ಒಳನೋಟ
ನೀಗದ ರೈತರ ಸಂಕಷ್ಟ
ಪ್ರತಿಕ್ರಿಯಿಸಿ: 9606038256
feedback@prajavani.co.in

• ಎ.ಎಂ.ಸುರೇಶ

ಬೆಂಗಳೂರು: ಸದಾ ಕಾಲ ಮುಂಗಾರಿನ ಜೊತೆ ಜೂಜಾಡುವ ರೈತ, ಆಡಳಿತ ವ್ಯವಸ್ಥೆಯಲ್ಲಿನ ವೈಫಲ್ಯಗಳಿಂದಾಗಿ ರಸಗೊಬ್ಬರಕ್ಕೂ ಪರದಾಡುವ ಪರಿಸ್ಥಿತಿ ಇದೆ. ಪೂರೈಕೆ ಮತ್ತು ದಾಸ್ತಾನು ವ್ಯವಸ್ಥೆಯಲ್ಲಿನ ಲೋಪ, ಅಕ್ರಮ ದಾಸ್ತಾನು, ಕಾಳಸಂತೆಯಲ್ಲಿ ಮಾರಾಟ, ಅನಧಿಕೃತ 'ಲಿಂಕ್ ವ್ಯವಸ್ಥೆ', ಖಾಸಗಿಯವರ 'ಕೈಚಳಕ' ಇತ್ಯಾದಿಗಳಿಂದ ಬಹುತೇಕ ಕಡೆ ರೈತರಿಗೆ ಬೇಕಾದ ರಸಗೊಬ್ಬರ ಸಕಾಲಕ್ಕೆ ಸಿಗುತ್ತಿಲ್ಲ.

ದೇಶದ ಬೆನ್ನೆಲುಬಾದ ರೈತರು ಪ್ರತಿ ವರ್ಷ ಉಂಟಾಗುತ್ತಿರುವ ಅತಿವೃಷ್ಟಿ, ಅನಾವೃಷ್ಟಿ, ಬೆಳೆದ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗದೆ ಇರುವುದು ಸೇರಿದಂತೆ ನಾನಾ ರೀತಿಯ ಸಂಕಷ್ಟಗಳನ್ನು ಎದುರಿಸುತ್ತಿದ್ದು, ಅದರ ಸಾಲಿಗೆ ರಸಗೊಬ್ಬರ ಸಮಸ್ಯೆಯೂ ಇದೀಗ ಸೇರಿದೆ.

'ಎರಡು-ಮೂರು ವರ್ಷಗಳಿಂದ ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಮುಂಗಾರು, ಹಿಂಗಾರು ಮತ್ತು ಬೇಸಿಗೆಯಲ್ಲಿ ಒಟ್ಟು 114.54 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ರೈತರು ಬಿತ್ತನೆ ಮಾಡುತ್ತಾರೆ. ಇದಕ್ಕಾಗಿ ವಾರ್ಷಿಕ ಅಂದಾಜು 43.76 ಲಕ್ಷ ಟನ್ ರಸಗೊಬ್ಬರ ಬೇಕಾಗುತ್ತದೆ. ಆದರೆ, ಬಿತ್ತನೆ ಕಾಲಕ್ಕೆ ಬೇಕಾದ ರಸಗೊಬ್ಬರ ರೈತರಿಗೆ ಲಭ್ಯವಾಗುತ್ತಿಲ್ಲ.

ರಾಜ್ಯದಲ್ಲಿ ಒಟ್ಟು 3,500 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿದ್ದು (ಸೊಸೈಟಿಗಳು) ಇವುಗಳ ಮೂಲಕ ರೈತರಿಗೆ ರಸಗೊಬ್ಬರ ಮಾರಾಟ ಮಾಡಲಾಗುತ್ತದೆ.

ಅಕ್ರಮವಾಗಿ ಮಾರಾಟ ಮಾಡಲು ಬೆಳಗಾವಿಯಲ್ಲಿ ರಸಗೊಬ್ಬರ ಸಂಗ್ರಹಿಸಿದ್ದ ಗೋದಾಮಿನ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದರು –ಸಂಗ್ರಹ ಚಿತ್ರ

ನ್ಯಾನೊ ಯೂರಿಯಾ ಬಳಕೆಗೆ ನಿರಾಸಕ್ತಿ

ರೈತರು ಅಧಿಕವಾಗಿ ಯೂರಿಯಾ ಬಳಸುತ್ತಿರುವುದರಿಂದ ಭೂಮಿಯ ಫಲವತ್ತತೆ ನಾಶವಾಗುತ್ತಿದೆ. ಇದನ್ನು ತಡೆಯಬೇಕು ಎಂಬ ಉದ್ದೇಶದಿಂದ ದ್ರವ ರೂಪದ ನ್ಯಾನೊ ಯೂರಿಯಾವನ್ನು ಪರಿಚಯಿಸಲಾಗಿದೆ. ಆದರೆ, ಇದರ ಬಳಕೆಗೆ ರೈತರು ಅಷ್ಟಾಗಿ ಆಸಕ್ತಿ ತೋರಿಸುತ್ತಿಲ್ಲ.

ರೈತರು ಈಗ ಬಳಸುತ್ತಿರುವ ಯೂರಿಯಾಗೆ ಹೋಲಿಸಿದರೆ ನ್ಯಾನೊ ಯೂರಿಯಾ ಬೆಲೆ ಸ್ವಲ್ಪ ಕಡಿಮೆ ಇದೆ(ಅರ್ಧ ಲೀಟರ್‌ಗೆ ₹250). ಆದರೂ ನ್ಯಾನೊ ಬದಲು ಮೊದಲಿನಿಂದ ಬಳಸುತ್ತಿರುವ ಯೂರಿಯಾವನ್ನೇ ರೈತರು ಹೆಚ್ಚಾಗಿ ಖರೀದಿಸುತ್ತಿದ್ದಾರೆ.

ನಿರಾಸಕ್ತಿ ಏಕೆ?: ದ್ರವ ರೂಪದ ಯೂರಿಯಾವನ್ನು ನೇರವಾಗಿ ಬೆಳೆಗಳ ಮೇಲೆ ಸಿಂಪಡಿಸಬೇಕು. ಸಾಮಾನ್ಯವಾಗಿ ಒಂದು ಬೆಳೆಗೆ ಎರಡು ಬಾರಿ ಈ ರೀತಿ ಸಿಂಪಡಿಸಬೇಕಾಗುತ್ತದೆ. ಸ್ಪ್ರೇ ಮಾಡಲು ಕೂಲಿಯವರನ್ನು ಎಲ್ಲಿ ಹುಡುಕುವುದು ಎಂಬುದು ರೈತರ ಪ್ರಶ್ನೆ.

ಒಮ್ಮೆ ನ್ಯಾನೊ ಸಿಂಪಡಿಸಿದ ಮೇಲೆ 45 ಗಂಟೆಗಳ ಕಾಲ ಮಳೆ ಬರಬಾರದು. ಅದಕ್ಕೂ ಮುಂಚೆ ಮಳೆ ಬಂದರೆ ಬೆಳೆಗಳಿಗೆ ಉಪಯೋಗ ಆಗುವುದಿಲ್ಲ. ಮಲೆನಾಡಿನಲ್ಲಿ ನಿತ್ಯ ಮಳೆಯಾಗುತ್ತದೆ. ನ್ಯಾನೊ ಖರೀದಿಗೆ ರೈತರು ಹಿಂಜರಿಯಲು ಇದೂ ಒಂದು ಕಾರಣ ಎನ್ನುತ್ತಾರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯದರ್ಶಿ ರಾಮಕೃಷ್ಣ.

ಸಹಕಾರ ಸಂಘಗಳು ಇಲ್ಲದ ಕಡೆ ಏಳು ಸಾವಿರಕ್ಕೂ ಅಧಿಕ ಖಾಸಗಿ ಚಿಲ್ಲರೆ ಡೀಲರ್‌ಗಳಿಗೆ ಪರವಾನಗಿ ನೀಡಿ, ರೈತರಿಗೆ ರಸಗೊಬ್ಬರ ಪೂರೈಕೆ ಮಾಡುವ ಜವಾಬ್ದಾರಿ ನೀಡಲಾಗಿದೆ.

ಸಹಕಾರ ಚಳವಳಿಯ ಪ್ರಭಾವ ಇರುವ ಜಿಲ್ಲೆಗಳಲ್ಲಿ ಉದಾಹರಣೆಗೆ ಮಂಡ್ಯ, ಬೀದರ್, ಧಾರವಾಡ, ಗದಗ ಮೊದಲಾದ ಕಡೆ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿ ಸಂಘಗಳ ಮೂಲಕವೇ ರಸಗೊಬ್ಬರ ಪೂರೈಕೆ ಮಾಡಲಾಗುತ್ತಿದೆ. ಆದರೆ, ಸಹಕಾರ ಸಂಘಗಳು ಎಲ್ಲಾ ಕಡೆ ಇಲ್ಲ. ಹೀಗಾಗಿ ರೈತರು ಖಾಸಗಿಯವರ ಮೇಲೆ ಅವಲಂಬಿತರಾಗಿದ್ದಾರೆ.

ಸೊಸೈಟಿಯವರು ಅಗತ್ಯವಿರುವ ರಸಗೊಬ್ಬರದ ಬೇಡಿಕೆಯ ಪಟ್ಟಿಯೊಂದಿಗೆ, ಅದರ ಮೊತ್ತವನ್ನು ಡಿ.ಡಿ ಅಥವಾ ಆರ್‌ಟಿಜಿಎಸ್ ಮುಖಾಂತರ ಡೀಲರ್‌ಗಳಿಗೆ ಪಾವತಿಸಬೇಕು. ಒಂದು ವೇಳೆ ಮೊದಲೇ ಹಣ ಪಾವತಿಸದಿದ್ದರೆ ಡೀಲರ್‌ಗಳು ಸೊಸೈಟಿಗಳಿಗೆ ರಸಗೊಬ್ಬರ ಸರಬರಾಜು ಮಾಡುವುದಿಲ್ಲ. ಬೆರಳೆಣಿಕೆಯಷ್ಟು ಸಹಕಾರ ಸಂಘಗಳು ಆರ್ಥಿಕ ವಾಗಿ ಪ್ರಬಲವಾಗಿದ್ದು, ಅವುಗಳಿಗೆ ಡಿಸಿಸಿ ಬ್ಯಾಂಕ್‌ನಿಂದ ಸಾಲ ದೊರೆಯುತ್ತದೆ. ಅಂತಹ ಕಡೆ ಡೀಲರ್‌ಗಳಿಗೆ ಮೊದಲೇ ಹಣ ನೀಡಿ, ಅಗತ್ಯವಿರುವ ರಸಗೊಬ್ಬರವನ್ನು ತರಿಸಿಕೊಳ್ಳಲಾಗುತ್ತಿದೆ.

ಆದರೆ, ಬಹುತೇಕ ಸಹಕಾರ ಸಂಘಗಳು ಆರ್ಥಿಕವಾಗಿ ಸಂಕಷ್ಟದಲ್ಲಿವೆ. ಸಾಮಾನ್ಯ ಸಭೆಯಲ್ಲಿ ನಿರ್ಧಾರ ತೆಗೆದುಕೊಂಡು ಮೊದಲೇ ಹಣ ನೀಡಿ ರಸಗೊಬ್ಬರ ತರಿಸುವ ಸ್ಥಿತಿಯಲ್ಲಿ ಇಲ್ಲ. ಅಲ್ಲದೆ ದಿವಾಳಿ ಸ್ಥಿತಿಯಲ್ಲಿರುವ ಸಂಘಗಳಿಗೆ ಸಾಲ ನೀಡಲು ಯಾವ ಬ್ಯಾಂಕ್‌ಗಳೂ ಮುಂದೆ ಬರುತ್ತಿಲ್ಲ. ಇದರಿಂದಾಗಿ ಪೂರ್ಣ ಪ್ರಮಾಣದಲ್ಲಿ ರಸಗೊಬ್ಬರ ತರಿಸಲು ಸೊಸೈಟಿಗಳಿಗೆ ಕಷ್ಟವಾಗುತ್ತಿದೆ.

ಸ್ಥಳೀಯವಾಗಿ ಸೊಸೈಟಿಗಳಲ್ಲಿ ರಸಗೊಬ್ಬರ ಸಿಗದ ಕಾರಣ, ರೈತರು ಕೃಷಿ ಕೆಲಸ ಬಿಟ್ಟು ತಾಲ್ಲೂಕು ಕೇಂದ್ರಗಳಿಗೆ ಅಲೆಯಬೇಕು. ಅಲ್ಲಿ ಮೊದಲೇ ದರ ಜಾಸ್ತಿ. ಇದರೊಂದಿಗೆ ಅಲ್ಲಿಂದ ಊರಿಗೆ ತರಲು ಆಗುವ ವೆಚ್ಚವನ್ನೂ ಅವರೇ ಭರಿಸಬೇಕು. ಹೀಗಾಗಿ ರೈತರಿಗೆ ನೆಮ್ಮದಿಯೇ ಇಲ್ಲದಂತಾಗಿದೆ.

ಸೊಸೈಟಿಗಳ ಮೂಲಕ ಈ ವರ್ಷ ಸಕಾಲಕ್ಕೆ ರೈತರಿಗೆ ಅಗತ್ಯವಿರುವ ರಸಗೊಬ್ಬರ ಪೂರೈಕೆಯಾಗದ ಕಾರಣ ಹಲವು ಕಡೆ ರೈತರು ಖಾಸಗಿಯವರ ಬಳಿ ನಿಗದಿಗಿಂತ ಅಧಿಕ ಹಣ ನೀಡಿ ಖರೀದಿಸಿರುವ ನಿದರ್ಶನಗಳಿವೆ. 'ಸೊಸೈಟಿಯಲ್ಲಿ ಯೂರಿಯಾ ಕೇಳಿದಾಗ ಸ್ಟಾಕ್ ಇಲ್ಲ ಅಂದರು. ಬೇರೆ ದಾರಿ ಇಲ್ಲದೆ ಖಾಸಗಿಯವರ ಬಳಿ ಖರೀದಿಸಿದೆ' ಎನ್ನುತ್ತಾರೆ ಗುಂಡ್ಲುಪೇಟೆ ತಾಲ್ಲೂಕು ಮಗುವಿನಹಳ್ಳಿಯ ರೈತ ಚಿನ್ನಸ್ವಾಮಿ.

'ಈ ವರ್ಷ ಯೂರಿಯಾ, ಡಿಎಪಿಗೆ ಕೊರತೆ ಇತ್ತು. ಶಿವಪುರದ ಸೊಸೈಟಿಯಲ್ಲಿ ನಮಗೆ ಬೇಕಾದ ಗೊಬ್ಬರವೇ ಸಿಗಲಿಲ್ಲ. ಹೀಗಾಗಿ 10.ಕಿ.ಮೀ. ದೂರದಲ್ಲಿರುವ ಗುಂಡ್ಲುಪೇಟೆಯಿಂದ ತರಿಸಿಕೊಂಡೆ. 45 ಕೆ.ಜಿ. ತೂಕದ ಯೂರಿಯಾ ಚೀಲದ ನಿಗದಿತ ಬೆಲೆ ₹266.

8ನೇ ಪುಟ ನೋಡಿ

ಹೊಸ ವರ್ಷಕ್ಕೆ ಸ್ವಾಗತ

ನಗರದ ಬ್ರಿಗೇಡ್ ರಸ್ತೆಯಲ್ಲಿ ಶನಿವಾರ ರಾತ್ರಿ ಸೇರಿದ್ದ ಸೇರಿದ್ದ ಸಾವಿರಾರು ಮಂದಿ ಹೊಸ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಿದರು
–ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಶಿಕ್ಷಕರ ನೇಮಕಾತಿ: ವಿವಾಹಿತ ಮಹಿಳಾ ಅಭ್ಯರ್ಥಿಗಳಿಗೂ ಅವಕಾಶ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಪೋಷಕರ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದ ವಿವಾಹಿತ ಮಹಿಳಾ ಅಭ್ಯರ್ಥಿಗಳನ್ನೂ ಪರಿಗಣಿಸಿ, ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ (6ರಿಂದ 8ನೇ ತರಗತಿ) ಅಂತಿಮ ಆಯ್ಕೆ ಪಟ್ಟಿಯನ್ನು ತ್ವರಿತವಾಗಿ ಪ್ರಕಟಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದೆ.

2022ರ ಮಾರ್ಚ್‌ನಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಗೆ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. 68,849 ಅಭ್ಯರ್ಥಿಗಳು ಸಿಇಟಿ ಬರೆದಿದ್ದರು. ಈಚೆಗೆ 13,363 ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಬಿಡುಗಡೆ ಮಾಡಲಾಗಿತ್ತು.

ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂಬ ಕಾರಣಕ್ಕೆ ವಿವಾಹಿತ ಮಹಿಳಾ ಅಭ್ಯರ್ಥಿಗಳನ್ನು ತಾತ್ಕಾಲಿಕ ಆಯ್ಕೆಪಟ್ಟಿಯಿಂದ ಕೈಬಿಡಲಾಗಿತ್ತು. ಈ ಕ್ರಮವನ್ನು ಪ್ರಶ್ನಿಸಿ 300ಕ್ಕೂ ಹೆಚ್ಚು ಮಹಿಳಾ ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ತಾತ್ಕಾಲಿಕ ಆದೇಶ ನೀಡಿದ್ದ ಕೋರ್ಟ್, ಅಂತಿಮ ತೀರ್ಪಿಗೆ ಒಳಪಡುವ ಷರತ್ತಿನ ಮೇಲೆ ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವಂತೆ ಸೂಚಿಸಿದೆ. ಈ ಕುರಿತು 'ಪ್ರಜಾವಾಣಿ' ನವೆಂಬರ್ 22ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

'ಸರ್ಕಾರದ ಪರವಾಗಿ ಅಂತಿಮ ತೀರ್ಪು ಬರುವ ವಿಶ್ವಾಸವಿದೆ. ಕೆಲವು ಅಭ್ಯರ್ಥಿಗಳು ಮೇಲ್ಮನವಿ ಸಲ್ಲಿಸುವ ಸಾಧ್ಯತೆ ಇರುತ್ತದೆ. ಹೀಗಾಗಿ, ಆಯ್ಕೆಯಾದ ಪ್ರತಿ ಅಭ್ಯರ್ಥಿಗಳಿಂದಲೂ ಅಂತಿಮ ತೀರ್ಪಿನ ಬದ್ಧತೆಯ ಷರತ್ತಿಗೆ ಸಹಿ ಹಾಕಿಸಿಕೊಂಡು ಅಂತಿಮ ಆಯ್ಕೆಪಟ್ಟಿ ಪ್ರಕಟಿಸಲು ನಿರ್ಧರಿಸಲಾಗಿದೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ವಿಶ್ರಾಂತ ಪೋಪ್ 16ನೇ ಬೆನೆಡಿಕ್ಟ್ ನಿಧನ

ವ್ಯಾಟಿಕನ್ ಸಿಟಿ: ವಿಶ್ರಾಂತ ಪೋಪ್, 16ನೇ ಬೆನೆಡಿಕ್ಟ್ (95) ಅವರು ಮೇಟರ್ ಎಕ್ಲೇಸಿಯಾ ನಿವಾಸದಲ್ಲಿ ಶನಿವಾರ ನಿಧನರಾದರು ಎಂದು ವ್ಯಾಟಿಕನ್ ವಕ್ತಾರ ಮ್ಯಾಟಿಯೊ ಬ್ರೂನಿ ತಿಳಿಸಿದ್ದಾರೆ.

ಅವರ ಪಾರ್ಥಿವ ಶರೀರವನ್ನು ಸೇಂಟ್ ಪೀಟರ್ಸ್ ಬೆಸಿಲಿಕಾದಲ್ಲಿ ಸೋಮವಾರ ಬೆಳಿಗ್ಗೆಯಿಂದ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುವುದು. ಅಂತ್ಯಕ್ರಿಯೆಯು ಜನವರಿ 5ರಂದು ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಪೋಪ್ ಫ್ರಾನ್ಸಿಸ್ ಅವರ ನೇತೃತ್ವದಲ್ಲಿ ನಡೆಯಲಿದೆ ಎಂದು ಬ್ರೂನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜರ್ಮನಿಯ ಧರ್ಮಶಾಸ್ತ್ರಜ್ಞರಾಗಿದ್ದ ಬೆನೆಡಿಕ್ಟ್ ಅವರು ಆರು ನೂರು ವರ್ಷಗಳ ಇತಿಹಾಸದಲ್ಲೇ ಪೋಪ್ ಸ್ಥಾನಕ್ಕೆ ರಾಜೀನಾಮೆ ನೀಡಿದ ಮೊದಲ ಧರ್ಮಗುರು ಎನಿಸಿದ್ದರು.

ವಿವರ 10

'25–30 ಸ್ಥಾನ ಗೆದ್ದು ಬ್ಲ್ಯಾಕ್‌ಮೇಲ್ ಮಾಡುವ ಜೆಡಿಎಸ್'

ಏಕಾಂಗಿಯಾಗಿ ಸ್ಪರ್ಧೆ: ಅಮಿತ್ ಶಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ಪಕ್ಷದ ಜತೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಸ್ವತಂತ್ರವಾಗಿ ಸ್ಪರ್ಧಿಸಿ ಬಹುಮತ ಪಡೆದು ಅಧಿಕಾರಕ್ಕೆ ಬರುತ್ತೇವೆ. ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ನೇರ ಹೋರಾಟ ನಡೆಯಲಿದ್ದು, ಜೆಡಿಎಸ್ ಲೆಕ್ಕಕ್ಕಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಅರಮನೆ ಮೈದಾನದಲ್ಲಿ ಬೆಂಗಳೂರು ಮಹಾನಗರದ 'ಬೂತ್ ವಿಜಯ ಸಂಕಲ್ಪ ಸಮಾವೇಶ'ವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, '25ರಿಂದ 30 ಕ್ಷೇತ್ರಗಳನ್ನು ಗೆದ್ದು ಅಧಿಕಾರಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುವ ಜೆಡಿಎಸ್, ಚುನಾವಣೆ ಬಳಿಕ ಅಧಿಕಾರಕ್ಕಾಗಿ ಕಾಂಗ್ರೆಸ್ ಮಡಿಲಿನಲ್ಲಿ ಬೆಚ್ಚಗೆ ಕೂರುತ್ತದೆ. ಆದ್ದರಿಂದ, ಜೆಡಿಎಸ್‌ಗೆ ಮತ ಹಾಕಿದರೆ, ಅದು ಕಾಂಗ್ರೆಸ್‌ಗೆ ಮತ ಹಾಕಿದಂತೆ' ಎಂದು ಹರಿಹಾಯ್ದರು.

'ಬಿಜೆಪಿ ರಾಷ್ಟ್ರಭಕ್ತರ ಸಂಘಟನೆ ಮತ್ತು ಪಕ್ಷ. ಕಾಂಗ್ರೆಸ್ ಪಕ್ಷವು ದೇಶವನ್ನು ವಿಭಜಿಸುವ ತುಕ್ಡೇ ತುಕ್ಡೇ ಗ್ಯಾಂಗ್ ಜತೆಗಿದೆ. ಕರ್ನಾಟಕದ ಮತದಾರರು ದೇಶ ಭಕ್ತರ ಜತೆಗೆ ನಿಲ್ಲಬೇಕೋ ಅಥವಾ ತುಕ್ಡೇ ತುಕ್ಡೇ ಗ್ಯಾಂಗ್ ಜತೆ ನಿಲ್ಲಬೇಕೋ ಎಂಬುದನ್ನು ತೀರ್ಮಾನಿಸುತ್ತಾರೆ' ಎಂದರು.

'ಈ ಹಿಂದೆ ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ಸರ್ಕಾರಗಳು ರಾಷ್ಟ್ರ ವಿರೋಧಿ ಸಂಘಟನೆಯಾದ ಪಿಎಫ್‌ಐ ಕಾರ್ಯಕರ್ತರ ವಿರುದ್ಧದ ಪ್ರಕರಣಗಳನ್ನು ಕೈಬಿಟ್ಟವು. ಆದರೆ, ಪಿಎಫ್‌ಐ ಅನ್ನು ಬಿಜೆಪಿ ನಿಷೇಧಿಸಿತು. ಈ ಸಂಘಟನೆ ದೇಶಕ್ಕೆ ಎಷ್ಟು ಅಪಾಯಕಾರಿ ಎಂಬುದನ್ನು ನೋಡಿದ್ದೇವೆ. ಈ ಸಂಘಟನೆಯನ್ನು ನಿಷೇಧಿಸಿದ್ದರಿಂದ ಸಾವಿರಾರು ಯುವಕ-ಯುವತಿಯರನ್ನು ರಕ್ಷಿಸಿದಂತಾಗಿದೆ' ಎಂದು ಶಾ ಹೇಳಿದರು.

9ನೇ ಪುಟ ನೋಡಿ

ಬಿಜೆಪಿಯ ಬೂತ್ ವಿಜಯ ಸಂಕಲ್ಪ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ನಾಡಪ್ರಭು ಕೆಂಪೇಗೌಡರ ಪ್ರತಿಮೆ ನೀಡಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಿ.ಟಿ.ರವಿ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಪ್ರಲ್ಹಾದ ಜೋಶಿ, ನಳಿನ್‌ಕುಮಾರ್ ಕಟೀಲ್, ಆರ್.ಅಶೋಕ ಇದ್ದರು –ಪ್ರಜಾವಾಣಿ ಚಿತ್ರ

ಬಿಗಿ ಭದ್ರತೆ: ಡ್ರಗ್ಸ್ ವ್ಯಸನಿಗಳು ವಶಕ್ಕೆ

ಬೆಂಗಳೂರು: ನಗರದಲ್ಲಿ ಶನಿವಾರ ಹೊಸ ವರ್ಷಾಚರಣೆ ಸಂಭ್ರಮಕ್ಕೆ 10 ಸಾವಿರಕ್ಕೂ ಹೆಚ್ಚು ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದರು. ಬ್ರಿಗೇಡ್ ರಸ್ತೆ, ಎಂ.ಜಿ. ರಸ್ತೆ ಹಾಗೂ ಚರ್ಚ್‌ಸ್ಟ್ರೀಟ್‌ನಲ್ಲಿ ತಡರಾತ್ರಿ ಸೇರಿದ್ದ ಜನರನ್ನು ಚದುರಿಸಲು ಪೊಲೀಸರು ಹೈರಾಣಾದರು.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು, ಶನಿವಾರ ಬೆಳಿಗ್ಗೆಯಿಂದ ಭಾನುವಾರ ನಸುಕಿನವರೆಗೂ ಹಲವು ಸ್ಥಳಗಳಲ್ಲಿ ಕಾವಲು ಕಾಯ್ದರು.

ಬ್ರಿಗೇಡ್ ರಸ್ತೆ, ಎಂ.ಜಿ. ರಸ್ತೆ, ಚರ್ಚ್‌ಸ್ಟ್ರೀಟ್, ಇಂದಿರಾನಗರ, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ವೈಟ್‌ಫೀಲ್ಡ್‌ಗಳಲ್ಲಿ ಭದ್ರತೆಗೆ ಒತ್ತು ನೀಡಲಾಗಿತ್ತು.

ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಬ್ರಿಗೇಡ್ ರಸ್ತೆಗೆ ಭೇಟಿ ನೀಡಿ, ಭದ್ರತೆ ಪರಿಶೀಲಿಸಿದರು.

ಬ್ರಿಗೇಡ್ ರಸ್ತೆಯಲ್ಲಿ ಪ್ರವೇಶಿಸಿ ಅಪೇರಾ ಜಂಕ್ಷನ್ ಮೂಲಕ ಹೊರಹೋಗಲು ಅವಕಾಶ ಮಾಡಿಕೊಡಲಾಗಿತ್ತು. ಆದರೆ, ಹಲವರು ತಮ್ಮಿಷ್ಟದ ರಸ್ತೆಗಳಲ್ಲಿ ಸುತ್ತಾಡಿದರು. ಇದನ್ನು ತಡೆದ ಪೊಲೀಸರು, ಲಾಠಿ ಹಿಡಿದು ಜನರನ್ನು ಚದುರಿಸಿದರು. ಈ ವೇಳೆ ಕೆಲವರು ಪೊಲೀಸರ ಜೊತೆ ವಾಗ್ವಾದ ನಡೆಸಿದರು.

ಡ್ರಗ್ಸ್ ವ್ಯಸನಿಗಳು ವಶಕ್ಕೆ: ಎಂ.ಜಿ. ರಸ್ತೆಯಲ್ಲಿ ಗಾಂಜಾ ಸೇವಿಸುತ್ತಿದ್ದ ಇಬ್ಬರು ಯುವಕರನ್ನು ಕಬ್ಬನ್ ಪಾರ್ಕ್ ಪೊಲೀಸರು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದರು.

3ನೇ ಪುಟ ನೋಡಿ

ಉಚಿತ ಅಪ್ಪುಗೆ: ಯುವತಿ ಫಜೀತಿ

ಬ್ರಿಗೇಡ್ ರಸ್ತೆಯಲ್ಲಿ ಯುವತಿಯೊಬ್ಬರು, 'ಉಚಿತ ಅಪ್ಪುಗೆ' ಫಲಕ ಹಿಡಿದುಕೊಂಡು ಗಮನ ಸೆಳೆದರು.

ತಮ್ಮನ್ನು ಉಚಿತವಾಗಿ ಅಪ್ಪಿಕೊಳ್ಳಬಹುದೆಂದು ಯುವಕ-ಯುವತಿಯರಿಗೆ ಆಹ್ವಾನ ನೀಡುತ್ತಿದ್ದರು. ಫಲಕ ನೋಡಿದ ಯುವಕ-ಯುವತಿಯರು ಒಬ್ಬೊಬ್ಬರಾಗಿ ಅಪ್ಪುಗೆ ನೀಡಲಾರಂಭಿಸಿದ್ದರು.

ಸ್ಥಳಕ್ಕೆ ಬಂದ ಪೊಲೀಸರು, ಸರದಿಯಲ್ಲಿ ನಿಂತಿದ್ದ ಯುವಕ-ಯುವತಿಯರನ್ನು ಚದುರಿಸಿದರು. ಫಲಕ ಹಿಡಿದಿದ್ದ ಯುವತಿಗೂ ಬುದ್ಧಿವಾದ ಹೇಳಿ, ಸ್ಥಳದಿಂದ ಕಳುಹಿಸಿದರು. ಯುವತಿ, ಸ್ನೇಹಿತರ ಜೊತೆ ಬ್ರಿಗೇಡ್ ರಸ್ತೆಗೆ ಬಂದಿದ್ದರು. ಇವರ ಹೆಸರು ಗೊತ್ತಾಗಿಲ್ಲ.

ಲಘು ಲಾಠಿ ಪ್ರಹಾರ

ಕೋರಮಂಗಲದಲ್ಲಿ ಪಬ್‌ಗಳ ಎದುರು ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರು. ನೂಕುನುಗ್ಗಲು ಸಹ ಉಂಟಾಯಿತು. ಹೀಗಾಗಿ, ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದರು.

ಬ್ರಿಗೇಡ್ ರಸ್ತೆಯಲ್ಲೂ ಪೊಲೀಸರು ಲಾಠಿ ಹಿಡಿದು ಜನರನ್ನು ಸ್ಥಳದಿಂದ ಕಳುಹಿಸಲು ಯತ್ನಿಸಿದರು. ಆದರೆ, ಬಹುತೇಕ ಜನರು ರಸ್ತೆ ಬಿಟ್ಟು ಕದಲಲಿಲ್ಲ.

ಅತಿಥಿ ಉಪನ್ಯಾಸಕರ ಬಿಡುಗಡೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ಮುಂದಿನ ಆದೇಶದವರೆಗೆ ಕರ್ತವ್ಯದಿಂದ ಬಿಡುಗಡೆಗೊಳಿಸಬಾರದೆಂದು ಕಾಲೇಜು ಶಿಕ್ಷಣ ಇಲಾಖೆ ಸೂಚಿಸಿದೆ.

ಅತಿಥಿ ಉಪನ್ಯಾಸಕರನ್ನು ಡಿ.31ರಂದು ಬಿಡುಗಡೆಗೊಳಿಸುವಂತೆ ಇಲಾಖೆ ಈ ಹಿಂದೆ ಸುತ್ತೋಲೆ ಹೊರಡಿಸಿತ್ತು. ಈ ಕುರಿತು 'ಪ್ರಜಾವಾಣಿ' ಡಿ. 30ರಂದು ವಿಶೇಷ ವರದಿ ಪ್ರಕಟಿಸಿತ್ತು. ಇದಾದ ನಂತರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ ಡಿ.31ರಂದು ವ್ಯಾಟ್ಸ್ ಆ್ಯಪ್ ಸಂದೇಶ ಮೂಲಕ ಅತಿಥಿ ಉಪನ್ಯಾಸಕರನ್ನು ಬಿಡುಗಡೆಗೊಳಿಸದಂತೆ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ಎಂ.ಜಿ. ರಸ್ತೆ ಮತ್ತು ಬ್ರಿಗೇಡ್ ರಸ್ತೆಯ ಮಧ್ಯೆ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಕಂಡುಬಂದ ಜನಸಾಗರ —ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ನಗರದ ಪಬ್‌ವೊಂದರಲ್ಲಿ ಯುವಕ–ಯುವತಿಯರು ಕುಣಿದು ಕುಪ್ಪಳಿಸಿದರು —ಪ್ರಜಾವಾಣಿ ಚಿತ್ರ/ ರಂಜು ಪಿ.



ಕೋರಮಂಗಲದ 5ನೇ ಹಂತದಲ್ಲಿ ಶನಿವಾರ ತಡರಾತ್ರಿ ನೆರೆದಿದ್ದ ಜನ —ಪ್ರಜಾವಾಣಿ ಚಿತ್ರ ಪುಷ್ಕರ್ ವಿ.

ಹಳೇ ವರ್ಷಕ್ಕೆ ವಿದಾಯ, ಹೊಸ ವರ್ಷಕ್ಕೆ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳ ಬಳಿಕ ಹೊಸ ವರ್ಷಾಚರಣೆ ಸಂಭ್ರಮದಲ್ಲಿ ಜನರು ಕಿಕ್ಕಿರಿದು ಸೇರಿದ್ದರು. ಶನಿವಾರ ರಾತ್ರಿ ಎಲ್ಲೆಡೆಯು ಯುವಪಡೆಯ ಹರ್ಷೋದ್ಗಾರ ಹಾಗೂ ಕೇಕೆ– ಶಿಳ್ಳೆ ಹೆಚ್ಚಿತ್ತು. ಹೊಸ ವರ್ಷ ಸ್ವಾಗತಿಸಿದ ಜನ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಸಂಭ್ರಮಿಸಿದರು...

ಕೋವಿಡ್ ಕಾರಣದಿಂದಾಗಿ ಸಾರ್ವಜನಿಕ ಸ್ಥಳಗಳಲ್ಲಿ ವರ್ಷಾಚರಣೆಗೆ ಎರಡು ವರ್ಷ ನಿರ್ಬಂಧವಿತ್ತು. ಈ ವರ್ಷ ಎಲ್ಲವನ್ನೂ ಮರೆತು ಜನರು ಸಂಭ್ರಮದಲ್ಲಿ ಮಿಂದೆದ್ದರು.

ರಾತ್ರಿ 12ರ ದಾಟುತ್ತಿದ್ದಂತೆ‌ಯೇ ನಗರದಲ್ಲಿ 2023 ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಲಾಯಿತು. ಜನರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಹೊಸ ವರ್ಷ ಸ್ವಾಗತಿಸಿದರು. ಕೆಲವೆಡೆ, ಪಟಾಕಿ ಸಿಡಿಸಿ ಹೊಸ ವರ್ಷ ಬರಮಾಡಿಕೊಂಡರು.

ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರ, ವೈಟ್‌ಫೀಲ್ಡ್, ಬೆಳ್ಳಂದೂರು, ಕೊತ್ತನೂರು, ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್‌ನ ರಸ್ತೆಗಳು ಜನರಿಂದ ತುಂಬಿ ತುಳುಕಿದವು.

ಹೊಸ ವರ್ಷಾಚರಣೆಗೆಂದೇ ರಸ್ತೆಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ದೀಪಗಳ ಬೆಳಕಿನಲ್ಲಿ ಯುವಕರು ಉತ್ಸಾಹದಿಂದ ಕುಣಿದರು.

ರಸ್ತೆಯ ಒಂದು ಕಡೆಯಿಂದ ಮತ್ತೊಂದು ಬದಿಗೆ ಓಡಾಟ ನಡೆಸುವವರ ಸಂಖ್ಯೆ ಹೆಚ್ಚಿತ್ತು. ಸಂಜೆಯ ಕತ್ತಲು ಕವಿಯುತ್ತಿದ್ದಂತೆ ಈ ರಸ್ತೆಗಳತ್ತ ಜನರು ಬರಲು ಆರಂಭಿಸಿದ್ದರು.

ರಸ್ತೆಗಳಲ್ಲಿ ಮಾತ್ರವಲ್ಲದೆ ನಗರದ ಬಹುತೇಕ ಮನೆಗಳಲ್ಲಿ ನೂತನ ವರ್ಷಾಚರಣೆ ಸಂಭ್ರಮವಿತ್ತು.

ರಾಜರಾಜೇಶ್ವರಿನಗರ, ಗಿರಿನಗರ, ಬಸವನಗುಡಿ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಕೆಂಗೇರಿ, ಬಸವನಗುಡಿ, ಬಸವೇಶ್ವರನಗರ, ವಿಜಯನಗರ, ಮುದ್ದಿನಪಾಳ್ಯ, ಮರಿಯಪ್ಪನಪಾಳ್ಯ, ಯಲಹಂಕ, ಜಾಲಹಳ್ಳಿ, ದಾಸರಹಳ್ಳಿಯ ಹಲವು ಮನೆಗಳಲ್ಲಿ ಕುಟುಂಬಸ್ಥರು ಹೊಸ ವರ್ಷವನ್ನು ಸ್ವಾಗತಿಸಿದರು. ಕೇಕ್ ಕತ್ತರಿಸಿ ಪರಸ್ಪರ ಹಂಚಿ ತಿಂದು ಹೊಸ ವರ್ಷ ಬರಮಾಡಿಕೊಂಡರು.

ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಸಂಭ್ರಮ ಮೇರೆ ಮೀರಿತ್ತು. ನಿವಾಸಿಗಳು ಒಂದೆಡೆ ಸೇರಿ ಕೇಕ್ ಕತ್ತರಿಸಿ ಸಾಮೂಹಿಕ ನೃತ್ಯ ಮಾಡಿದರು. ಲಾನ್ ಹಾಗೂ ಈಜುಕೊಳದ ಬದಿಗಳಲ್ಲಿ ಪಾರ್ಟಿ ಆಯೋಜಿಸಲಾಗಿತ್ತು.

ಮಂದ ಬೆಳಕಿನಲ್ಲಿ ನೃತ್ಯ: ಪಬ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಮಂದ ಬೆಳಕಿನಲ್ಲಿ ಯುವಜನತೆ ನೃತ್ಯ ಮಾಡಿ ಹೊಸ ವರ್ಷ ಸ್ವಾಗತಿಸಿದರು. ವಿಶೇಷ ಪಾರ್ಟಿಗಳಲ್ಲಿ ಮದ್ಯ ಕುಡಿದು, ನಾನಾ ಗೀತೆಗಳಿಗೆ ಹೆಜ್ಜೆ ಹಾಕಿದರು.

ಪಬ್, ರೆಸ್ಟೋರೆಂಟ್‌ಗಳಲ್ಲಿ ಮೊದಲೇ ಸೀಟು ಕಾಯ್ದಿರಿಸಿದವರಿಗೆ ಮಾತ್ರ ಅಲ್ಲಿಗೆ ತೆರಳಲು ಅವಕಾಶವಿತ್ತು. ಕೆಲವು ಪಬ್‌ಗಳಲ್ಲಿ ಗ್ರಾಹಕರ ಸಂಖ್ಯೆ ಕಡಿಮೆ ಇತ್ತು. ಪಬ್‌ಗಳಲ್ಲಿ ನವಜೋಡಿಗಳು ಸಂಗೀತಕ್ಕೆ ಕುಣಿದರು.

ಭರ್ಜರಿ ವ್ಯಾಪಾರ: ಬೇಕರಿಗಳಲ್ಲಿ ವಿಭಿನ್ನವಾದ ಕೇಕ್ ತಯಾರಿಸಲಾಗಿತ್ತು. ಬೆಳಿಗ್ಗೆಯಿಂದಲೂ ಬೇಕರಿಗಳ ಮುಂದೆ ಜನದಟ್ಟಣೆ ಕಂಡುಬಂತು. ಹೊಸ ವಿನ್ಯಾಸದ ಕೇಕ್‌ಗಳನ್ನು ಕತ್ತರಿಸಿ ಜನರು ಸಂಭ್ರಮಿಸಿದರು. ಕೆಲವು ರಸ್ತೆಗಳಲ್ಲಿ ಹೊಸ ವರ್ಷದ ಶುಭಾಶಯ ಕೋರಿ ರಂಗೋಲಿ ಬಿಡಿಸಲಾಗಿತ್ತು.

ಹೊರ ವಲಯದ ರೆಸಾರ್ಟ್‌ಗಳತ್ತ ಜನರ: ಈ ವರ್ಷ ಪ್ರವಾಸಿ ತಾಣಗಳಲ್ಲೂ ಯಾವುದೆ ನಿರ್ಬಂಧ ಇರಲಿಲ್ಲ. ಹೀಗಾಗಿ ರಾಜಧಾನಿಯ ಜನರು ಪ್ರವಾಸಿ ತಾಣಗಳಿಗೆ ಶುಕ್ರವಾರವೇ ತೆರಳಿದ್ದರು. ಮಡಿಕೇರಿ, ಮಂಗಳೂರು, ಉಡುಪಿ, ಚಿಕ್ಕಮಗಳೂರು, ಸಕಲೇಶಪುರ, ಮೂಡಿಗೆರೆ, ಶಿವಮೊಗ್ಗ, ಸಾಗರಕ್ಕೆ ರಾಜಧಾನಿಯ ಜನರು ಹೊಸವರ್ಷದ ನೆಪದಲ್ಲಿ ಪ್ರವಾಸಕ್ಕೆ ತೆರಳಿದ್ದರು.

ಕೆಲವರು ನಗರದ ದಟ್ಟಣೆ ಸಮಸ್ಯೆಯಿಂದ ಪಾರಾಗಲು ನಗರದ ಹೊರವಲಯದ ಪಬ್ ಹಾಗೂ ರೆಸ್ಟೋರೆಂಟ್‌ಗಳಿಗೆ ತೆರಳಿದ್ದರು. ದೇವನಹಳ್ಳಿ ವ್ಯಾಪ್ತಿಯ ರೆಸಾರ್ಟ್, ಹೋಮ್‌ಸ್ಟೇಗಳಿಗೆ ಜನರು ಒಮ್ಮೆಲೆ ವಾಹನಗಳಲ್ಲಿ ತೆರಳಿದ ಪರಿಣಾಮ ಹೆಬ್ಬಾಳ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು.

ಬಿಗಿ ಭದ್ರತೆ, ಡ್ರಗ್ಸ್ ವ್ಯಸನಿಗಳು ವಶಕ್ಕೆ

ಒಂದನೇ ಪುಟದಿಂದ...

ನಗರದ ಹಲವೆಡೆ 10ಕ್ಕೂ ಹೆಚ್ಚು ಡ್ರಗ್ಸ್ ವ್ಯಸನಿಗಳನ್ನು ವಶಕ್ಕೆ ಪಡೆದಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

ಎಂ.ಜಿ. ರಸ್ತೆಯಲ್ಲಿ ಪಾನಮತ್ತರಾಗಿ ಬಿದ್ದಿದ್ದ ಮಹಿಳೆಯೊಬ್ಬರನ್ನು ಪೊಲೀಸರು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ದರು.

ವಾಹನಗಳ ದಟ್ಟಣೆ: ನಗರದ ಹಲವು ರಸ್ತೆಗಳಲ್ಲಿ ಶನಿವಾರ ತಡರಾತ್ರಿ ವಾಹನಗಳ ದಟ್ಟಣೆ ಉಂಟಾಯಿತು.

ಈ ರಸ್ತೆಗಳಲ್ಲಿ ಜನಸಂದಣಿ ಹೆಚ್ಚಿದ್ದರಿಂದ, ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು. ಕೆಲವೇ ನಿಮಿಷಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಮೇಲ್ಸೇತುವೆಗಳಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಿದ್ದರಿಂದ, ಕೆಳಗಿನ ರಸ್ತೆಗಳಲ್ಲೇ ವಾಹನಗಳು ಸಂಚರಿಸಿದವು.

ಮೆಟ್ರೊ ನಿಲ್ದಾಣದಲ್ಲಿ ನೂಕುನುಗ್ಗಲು: ಹೊಸ ವರ್ಷಾಚರಣೆ ಅವಧಿ ಮುಗಿದ ನಂತರ ಜನರು ತಮ್ಮ ವಾಸಸ್ಥಳಗಳತ್ತ ಹೊರಡಲು ಎಂ.ಜಿ.ರಸ್ತೆ, ಕಬ್ಬನ್ ಪಾರ್ಕ್ ಹಾಗೂ ಟ್ರಿನಿಟಿ ವೃತ್ತದ ಮೆಟ್ರೊ ನಿಲ್ದಾಣಗಳಿಗೆ ಲಗ್ಗೆ ಇಟ್ಟರು. ಪ್ರಯಾಣಿಕರ ಸಂಚಾರಕ್ಕೆ ಪ್ರತ್ಯೇಕ ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿತ್ತು. ಹೆಚ್ಚು ಜನರು ಏಕಕಾಲದಲ್ಲಿ ನಿಲ್ದಾಣದೊಳಗೆ ಹೋಗಿದ್ದರಿಂದ ನೂಕುನುಗ್ಗಲು ಉಂಟಾಯಿತು. ಕೆಲವರು ಬ್ಯಾರಿಕೇಡ್ ಜಿಗಿದು, ನಿಲ್ದಾಣದೊಳಗೆ ಹೋದರು.

‘ಪುಸ್ತಕ ಖರೀದಿ: ₹ 8.40 ಕೋಟಿ ಬಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2022ರ ಏಪ್ರಿಲ್‌ನಲ್ಲಿ ಖರೀದಿಸಿದ ಪುಸ್ತಕಗಳ ₹ 8.40 ಕೋಟಿ ಬಾಕಿ ಇದೆ. ಪುಸ್ತಕೋದ್ಯಮಕ್ಕೆ ಸರ್ಕಾರ ಅನ್ಯಾಯ ಮಾಡುತ್ತಿದೆ. ಈ ವಿಷಯವನ್ನು 86ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ನಿಯೋಜಿತ ಸರ್ವಾಧ್ಯಕ್ಷ ದೊಡ್ಡರಂಗೇಗೌಡ ಅವರು ಧ್ವನಿ ಎತ್ತಬೇಕು ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಒತ್ತಾಯಿಸಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಶನಿವಾರ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಆಯೋಜಿಸಿದ್ದ 11 ಕೃತಿಗಳ ಬಿಡುಗಡೆ ಮತ್ತು 2023ನೇ ಸಾಲಿನ ಕ್ಯಾಲೆಂಡರ್ ಅನಾವರಣ ಸಮಾರಂಭದಲ್ಲಿ ಮಾತನಾಡಿದ ಅವರು, ’ಸರ್ಕಾರ ₹50 ಕೋಟಿ ಹಣವನ್ನು ಸಗಟು ಪುಸ್ತಕ ಖರೀದಿಗೆ ಮೀಸಲಿಡಬೇಕು’ ಎಂದು ಒತ್ತಾಯಿಸಿದರು.

‘ಜನ ಪ್ರಕಾಶಕರನ್ನು ಪುಸ್ತಕದ ವ್ಯಾಪಾರಿಗಳನ್ನಾಗಿ ತೀರ್ಮಾನ ಮಾಡಿದ್ದಾರೆ. ಆದರೆ ಪ್ರಕಾಶಕರನ್ನು ಪುಸ್ತಕ ಸಂಸ್ಕೃತಿಯನ್ನು ಬಿತ್ತುವ ಪ್ರಚಾರಕರು ಎಂದು ಮರುನಾಮಕರಣ ಮಾಡಬೇಕು. ನಾವು ಲಾಭಕ್ಕಿಂತ ಹೆಚ್ಚು ಜ್ಞಾನವನ್ನು ಹಂಚುತ್ತೇವೆ’ ಎಂದರು.

ಲೇಖಕಿಯರ ಸಂಘದ ಅಧ್ಯಕ್ಷೆ ಎಚ್. ಎಲ್. ಪುಷ್ಪಾ. ಬಿಎಂಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಮಾತನಾಡಿದರು.

ಪಬ್ಲಿಕ್ ಟಿ.ವಿ ಸಿನಿಮಾ ಡಿಜಿಟಲ್ ವಿಭಾಗದ ಮುಖ್ಯಸ್ಥ ಶರಣು ಹುಲ್ಲೂರು 11 ಕೃತಿಗಳನ್ನು ಪರಿಚಯಿಸಿದರು.

11 ಪುಸ್ತಕಗಳ ಬಿಡುಗಡೆ

ವಿಜಯಲಕ್ಷ್ಮಿ ಸತ್ಯಮೂರ್ತಿ (ಮನಸಿನ ಚಿಲಕ ತೆರೆದಾಗ), ಸಿ.ಆರ್. ಚಂದ್ರಶೇಖರ್ (ಜೀವನ ಸತ್ಯ ಜೀವನ ಪಾಠ), ಕೆ. ಸತ್ಯನಾರಾಯಣ (ಮನುಷ್ಯರು ಬದಲಾಗುವರೆ?), ಮಾಲತಿ ಹೆಗಡೆ (ಅವನಿ), ಡಿ.ಎಸ್. ಶ್ರೀನಿವಾಸ ಪ್ರಸಾದ್ (ಬದುಕೇ ಭಗವಂತ), ಬಿ.ವೈ. ಲಲಿತಾಂಬ (ಕಥಾ ಜಗತ್ತು), ಹೇಮಂತ ಸಾಹಿತ್ಯ ಪ್ರಕಾಶನದ (ಚಂದಮಾಮ ಕಥೆಗಳು–2 ಮತ್ತು ಚಂದಮಾಮ ಕಥೆಗಳು–3), ಎಸ್.ಜಿ. ಮಾಲತಿ ಶೆಟ್ಟಿ (ಪಂಜುರ್ಲಿ), ಬಿ.ಎಸ್. ತಲ್ವಾಡಿ (ಕರಡಿ ಮತ್ತು ಕಳಂಕ) ಮತ್ತು ಚಂದ್ರು ಓಬಯ್ಯ (ರಾಮ ಮತ್ತು ರಾಮು) ಪುಸ್ತಕಗಳನ್ನು ಬಿಡುಗಡೆಮಾಡಿ, ಲೇಖಕರನ್ನು ಸನ್ಮಾನಿಸಲಾಯಿತು.

ಕೃತಕ ಅಂಗಾಂಗ ಅಳವಡಿಕೆ ಶಿಬಿರ

ಬೆಂಗಳೂರು: ರೋಟರಿ ಬೆಂಗಳೂರು ಪೀಣ್ಯ ಹಾಗೂ ಭಗವಾನ್ ಮಹಾವೀರ ವಿಕಲಾಂಗ ಸಹಾಯತ ಸಮಿತಿಯು ಜಂಟಿಯಾಗಿ ಜ.3ರಿಂದ ಜ.9ರವರೆಗೆ ಉಚಿತ ಜೈಪುರ ಕೃತಕ ಅಂಗಾಂಗ ಅಳವಡಿಕೆ ಶಿಬಿರ ಹಮ್ಮಿಕೊಂಡಿದೆ.

ಕೃತಕ ಅಂಗಾಂಗಗಳು ಮತ್ತು ಕ್ಯಾಲಿಪರ್‌ಗಳನ್ನು ಫಲಾನುಭವಿಯ ನಿಖರ ಅಳತೆಗೆ ಅನುಗುಣವಾಗಿ ತಯಾರಿಸಿ, ಅಳವಡಿಸಲಾಗುತ್ತದೆ. ಜೈಪುರದ 20 ತಂತ್ರಜ್ಞರು ಶಿಬಿರದಲ್ಲಿ ತಾಂತ್ರಿಕವಾಗಿ ಸಹಾಯ ಮಾಡುತ್ತಾರೆ. 850 ಕೈ–ಕಾಲುಗಳು, 950 ಕ್ಯಾಲಿಪರ್‌ಗಳು, 750 ಕ್ರಚ್‌ಗಳು, 50 ಗಾಲಿಕುರ್ಚಿಗಳು ಹಾಗೂ 80 ಎಲ್‌ಎಲ್ ಫೋರ್ ಹ್ಯಾಂಡ್‌ಗಳನ್ನು ಒದಗಿಸಲಾಗುತ್ತದೆ. ಅಂಗವಿಕಲರು ಗಣೇಶ್ ಬಾಗ್, ಶ್ರೀ ಎಸ್‌ಎಸ್‌ಬಿಎಸ್ ಜೈನ ಸಂಘ ಟ್ರಸ್ಟ್, ನಂ.9, ಭಗವಾನ್ ಮಹಾವೀರ ರಸ್ತೆ, ಶಿವಾಜಿನಗರ, ಬೆಂಗಳೂರು ಈ ವಿಳಾಸಕ್ಕೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ: 93412 14915 ಅಥವಾ 99866 61172.

ಪೌರಕಾರ್ಮಿಕರಿಗೆ ಪ್ರತಿ ತಿಂಗಳು ವೇತನ

ಬೆಂಗಳೂರು: ಪೌರಕಾರ್ಮಿಕರು, ಗುತ್ತಿಗೆ ನೌಕರರು ಸೇರಿದಂತೆ 12 ವರ್ಗದ ಸಿಬ್ಬಂದಿಗೆ ಪ್ರತಿ ತಿಂಗಳು ವೇತನ ಅಥವಾ ಬಿಲ್ ಪಾವತಿ ಮಾಡಿದ ಮೇಲೆಯೇ ‘ಎ’ ವರ್ಗದ ಸಿಬ್ಬಂದಿಗೆ ವೇತನ ಪಾವತಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ಪಾಲಿಕೆಯ ಗ್ರೂಪ್ ‘ಬಿ’, ‘ಸಿ’, ‘ಡಿ’ ನೌಕರರು, ಡಿ.ಪಿ.ಎಸ್ ಪೌರ ಕಾರ್ಮಿಕರು, ಸಿ ಆ್ಯಂಡ್ ಟಿ ತ್ಯಾಜ್ಯ ವೆಚ್ಚ, ಘನತ್ಯಾಜ್ಯ ನಿರ್ವಹಣೆಯ ಟಿಪ್ಪಿಂಗ್ ಶುಲ್ಕ, ಸಾರ್ವಜನಿಕ ಶೌಚಾಲಯ ನಿರ್ವಹಣೆ ಮತ್ತು ಬೀದಿ ದೀಪಗಳ ನಿರ್ವಹಣೆಯ ಬಿಲ್, ಉದ್ಯಾನ ನಿರ್ವಹಣೆಯ ಬಿಲ್, ಕೆರೆ ನಿರ್ವಹಣೆ ಬಿಲ್, ಮರ ಸವರುವಿಕೆಯ ಬಿಲ್, ಕಸಗುಡಿಸುವಿಕೆ ಯಂತ್ರಗಳ ಬಿಲ್, ಗ್ರೂಪ್ ‘ಎ’ ಅಧಿಕಾರಿಗಳ ವೇತನ, ಮಾರ್ಷಲ್ಸ್ ಮತ್ತು ಹೋಮ್ ಗಾರ್ಡ್ಸ್ ವೇತನ, ಇತರೆ ಎಲ್ಲಾ ಹೊರಗುತ್ತಿಗೆ ನೌಕರರ ವೇತನ ಪಾವತಿ ಆಯಾ ತಿಂಗಳೇ ಆಗಲಿದೆ ಎಂದರು.

‘ಆಸ್ತಿ ತೆರಿಗೆ ಸಂಗ್ರಹವನ್ನು ಹೆಚ್ಚಿಸ ಬೇಕಾದರೆ, ಆ ಹಂತದಲ್ಲಿ ಕೆಲಸ ನಿರ್ವಹಿಸುವವರಿಗೆ ಮೊದಲು ವೇತನ ಪಾವತಿ ಮಾಡಬೇಕಾಗುತ್ತದೆ. ಹೀಗಾಗಿ, ವೇತನ ಬಾಕಿ ಉಳಿಸಿಕೊಳ್ಳುವುದಿಲ್ಲ. ಮುಖ್ಯ ಆಯುಕ್ತರ ಅನುಮತಿಗಾಗಿ ಕಡತ ಕಳುಹಿಸದೆ ಹಣಕಾಸು ವಿಭಾಗದ ವಿಶೇಷ ಆಯುಕ್ತರು ಹಣ ಬಿಡುಗಡೆ ಮಾಡಲಿದ್ದಾರೆ. ಶೇ 100ರಷ್ಟು ಆಸ್ತಿ ತೆರಿಗೆ ವಸೂಲಿ ಮಾಡುವ ಉದ್ದೇಶದಿಂದ ವಿಶೇಷ ಆಯುಕ್ತರು, ವಲಯ ಆಯುಕ್ತರಿಗೆ ತಲಾ 10 ದೊಡ್ಡ ತೆರಿಗೆ ಪಾವತಿ ಬಾಕಿಯನ್ನು ವಸೂಲಿ ಮಾಡುವ ಜವಾಬ್ದಾರಿ ನೀಡಲಾಗಿದೆ’ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಸಿದ್ದೇಶ್ವರ ಶ್ರೀ ಆರೋಗ್ಯ ವಿಚಾರಿಸಿದ ಪ್ರಧಾನಿ

ವಿಜಯಪುರ: ಅನಾರೋಗ್ಯದಿಂದ ಬಳಲುತ್ತಿರುವ ವಿಜಯಪುರ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಶ್ರೀಗಳ ಆರೋಗ್ಯವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಫೋನ್ ಕರೆ ಮಾಡಿ ವಿಚಾರಿಸಿದರು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದಲ್ಲಿರುವ ಜ್ಞಾನ ಯೋಗಾಶ್ರಮಕ್ಕೆ ಶನಿವಾರ ರಾತ್ರಿ ಭೇಟಿ ನೀಡಿ ಶ್ರೀಗಳ ದರ್ಶನ ಪಡೆದು, ಆರೋಗ್ಯ ವಿಚಾರಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪ್ರಧಾನಿ ಅವರಿಗೆ ಫೋನ್ ಕರೆ ಮಾಡಿ ಸ್ವಾಮೀಜಿಗಳೊಂದಿಗೆ ಮಾತನಾಡಿಸಿದರು. ಈ ಸಂದರ್ಭದಲ್ಲಿ ಪ್ರಧಾನಿ ಅವರು ಹೆಚ್ಚಿನ ಚಿಕಿತ್ಸೆ ಒದಗಿಸುವ ಬಗ್ಗೆ ತಿಳಿಸಿದಾಗ ಶ್ರೀಗಳು ಕೈಮುಗಿದು ಕೃತಜ್ಞತೆ ಸಲ್ಲಿಸಿದರು ಎಂದು ಹೇಳಿದರು.

ರಾಜ್ಯ ಸರ್ಕಾರ ಶ್ರೀಗಳಿಗೆ ಅಗತ್ಯ ಚಿಕಿತ್ಸೆ ಒದಗಿಸಲು ವ್ಯವಸ್ಥೆ ಮಾಡಲು ಸಿದ್ಧವಿದೆ. ಆದರೆ, ಶ್ರೀಗಳು ಯಾವುದೇ ಚಿಕಿತ್ಸೆ ತೆಗೆದುಕೊಳ್ಳಲು ಒಪ್ಪುತ್ತಿಲ್ಲ ಎಂದು ತಿಳಿಸಿದರು.

ಶ್ರೀಗಳ ಬಿಪಿ, ಕಿಡ್ನಿ, ಹೃದಯ ಎಲ್ಲವೂ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ತಿಳಿಸಿದ್ದಾರೆ ಎಂದರು.



ದೋಣಿ ಮುಳುಗಿ 13 ಮಂದಿ ಸಾವು

ರಬತ್ (ಮೊರಕ್ಕೊ): ಸ್ಪೇನ್‌ನ ಕ್ಯಾನರಿ ದ್ವೀಪಗಳನ್ನು ತಲುಪಲು ಪ್ರಯತ್ನಿಸುತ್ತಿದ್ದ ವೇಳೆ ದಕ್ಷಿಣ ಕರಾವಳಿಯಲ್ಲಿ ದೋಣಿ ಮುಳುಗಿ ಮೊರಕ್ಕೊದ 13 ಜನರು ಸಾವಿಗೀಡಾಗಿದ್ದು, ಮೃತದೇಹಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೊರಕ್ಕೊದ ಮಾಧ್ಯಮಗಳು ಶನಿವಾರ ವರದಿ ಮಾಡಿವೆ.

ಕ್ಯಾನರಿ ದ್ವೀಪದ ಲಾಸ್‌ಪಾಲ್ಮಾಸ್‌ಗೆ ತಲುಪುವಷ್ಟರಲ್ಲಿ ದೋಣಿಯು ಬಂಡೆಗಲ್ಲಿಗೆ ಬಡಿದ ಪರಿಣಾಮ ಮುಳುಗಿದೆ. ದೋಣಿಯಲ್ಲಿ ಒಟ್ಟು 45 ಪ್ರಯಾಣಿಕರಿದ್ದರು ಎಂದು ಹೆಸ್‌ಪ್ರೆಸ್ ಆನ್‌ಲೈನ್ ನ್ಯೂಸ್ ಸೇವೆ ತನ್ನ ವರದಿಯಲ್ಲಿ ತಿಳಿಸಿದೆ.

ಅಪ್ರಾಪ್ತ ವಯಸ್ಕ ಹಾಗೂ ಮಹಿಳೆಯೊಬ್ಬರು ಸೇರಿದಂತೆ ಒಟ್ಟು 24 ಮಂದಿಯನ್ನು ನೀರಿನಿಂದ ರಕ್ಷಿಸಲಾಗಿದೆ. ಇನ್ನೂ 8 ಮಂದಿ ನಾಪತ್ತೆಯಾಗಿದ್ದಾರೆ.

ನೈಋತ್ಯ ರೈಲ್ವೆ G20

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/50/2022 ದಿನಾಂಕ : 14-07-2022 ಮೂಲಕ ಕರೆಯಲಾದ ಟೆಂಡರ್ ದಿನಾಂಕ : 10-01-2023 ರಂದು ಮುಕ್ತಾಯಗೊಳ್ಳಲಿದ್ದು, ಅದನ್ನು ರದ್ದುಪಡಿಸಲಾಗಿದೆ ಮತ್ತು ಮರುಟೆಂಡರ್ ಕರೆಯಲಾಗಿದೆ.

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/ಇಪಿಸಿ/135/2022 ದಿನಾಂಕ : 27-12-2022

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಕೋಟೆಗಂಗೂರು (ಹೊರತುಪಡಿಸಿ) ಮತ್ತು ಶಿಕಾರಿಪುರ (ಒಳಗೊಂಡು) ನಿಲ್ದಾಣಗಳ ನಡುವೆ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿಗಳು ಮತ್ತು ವಿದ್ಯುತ್ ಸಾಮಾನ್ಯ ಸೇವೆಗಳನ್ನು ಒಳಗೊಂಡಂತೆ ಚೈನೇಜ್ 8.020 ಮತ್ತು ಚೈನೇಜ್ 48.000 ನಡುವೆ ಹೊಸ ಬ್ರಾಡ್‌ಗೇಜ್ ಮಾರ್ಗದ ನಿರ್ಮಾಣ ಹಾಗೂ ಶಿವಮೊಗ್ಗ - ಶಿಕಾರಿಪುರ - ರಾಣೆಬೆನ್ನೂರು ಹೊಸ ಮಾರ್ಗ ಯೋಜನೆಯಲ್ಲಿ ಕೋಟೆಗಂಗೂರು (ಒಳಗೊಂಡು) ಮತ್ತು ಶಿಕಾರಿಪುರ (ಒಳಗೊಂಡು) ನಡುವೆ ರೈಲ್ವೆ ವಿದ್ಯುದೀಕರಣ ಕಾಮಗಾರಿಗಳು **(ಟೆಂಡರ್ ಉಲ್ಲೇಖ ಸಂ. ಎಸ್‌ಎಂಇಟಿ-ಆರ್‌ಎನ್‌ಆರ್-03-ಇಪಿಸಿ-ಆರ್)**	ರೂ. 530,59,00,000/-
2	ಬೆಂಗಳೂರು - ಜೋಲಾರಪೇಟೆ ಸೆಕ್ಷನ್ : ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್, ಬೆಂಗಳೂರು : 4ನೇ ಪಿಟ್ ಲೈನ್, 4 ಪಿಟ್ ಲೈನ್‌ಗಳ ಮೇಲೆ ಕವರ್ಡ್ ಶೆಡ್, ಸೇವಾ ಕಟ್ಟಡ ನಿರ್ಮಾಣ, ವಂದೇ ಭಾರತ್ ಛೇರ್‌ಕಾರ್ ರೈಲುಗಳ ನಿರ್ವಹಣೆಗಾಗಿ ವಿದ್ಯುತ್ (ಸಾಮನ್ಯ) ಮತ್ತು ಟಿಆರ್‌ಡಿ ಕಾಮಗಾರಿಗಳನ್ನು ಒಳಗೊಂಡಂತೆ ವಾಷಿಂಗ್ ಪ್ರದೇಶದೊಂದಿಗೆ ಹಾಲಿ ಇರುವ ಮೆಮು ಶೆಡ್ ವಿಸ್ತರಣೆ ಮತ್ತು ಸಂಬಂಧಿತ ಟ್ರ್ಯಾಕ್ ಕಾಮಗಾರಿಗಳು. (ಸಂಯೋಜಿತ ಕಾಮಗಾರಿ) **(ಟೆಂಡರ್ ಉಲ್ಲೇಖ ಸಂ. ಎಸ್‌ಎಂವಿಬಿ-ವಂದೇಭಾರತ್-01-ಆರ್)**	ರೂ. 54,89,08,186/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **ಕ್ರಸಂ.1ಕ್ಕಾಗಿ 27-01-2023 ರಂದು ಮತ್ತು ಕ್ರಸಂ.2 ಕ್ಕಾಗಿ 11-01-2023 ರಂದು 15:00 ಗಂಟೆಗಳವರೆಗೆ.**

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿ ವ್ಯವಸ್ಥಾಪಕರು / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/581/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಹೇಳಿಕೆ

‘ನೆಹರೂ ಪರಂಪರೆ–ಆತ್ಮಗೌರವ ದೂರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಮೂಲಸತ್ವ ಹಾಗೂ ಆತ್ಮಗೌರವದಿಂದ ನಮ್ಮನ್ನು ದೂರ ತರುವ ಪ್ರಯತ್ನವನ್ನು ನೆಹರೂ ಪರಂಪರೆ ಕಳೆದ 70 ವರ್ಷಗಳಿಂದ ಮಾಡಿತು’ ಎಂದು ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ತಿಳಿಸಿದರು.

ಮೈಂಡ್ ಪುಲ್ ಮೀಡಿಯಾ ನಗರದಲ್ಲಿ ಶನಿವಾರ ಆಯೋಜಿಸಿದ ‘ಸ್ಪಿರಿಟ್ ಆಫ್ ಇಂಡಿಯಾ’ ಸಂವಾದ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಪಾಶ್ಚಿಮಾತ್ಯರು ಶ್ವೇತವರ್ಣ ಮಾತ್ರ ಸುಂದರ ಎಂದು ಸಾರಿ, ತಮ್ಮದೆಲ್ಲವನ್ನೂ ನಮ್ಮ ಮೇಲೆ ಹೇರಿದರು. ನಮ್ಮಲ್ಲಿನ ವೈಜ್ಞಾನಿಕ ಮನೋಧರ್ಮಗಳನ್ನು ಮೂಲೆಗುಂಪು ಮಾಡಲಾಯಿತು. ಸ್ವಾತಂತ್ರ್ಯದ ಬಳಿಕ ಅದನ್ನು ನೆಹರೂ ಪರಂಪರೆ ಮುಂದುವರಿಸಿಕೊಂಡು ಬಂದಿತು. ಭಾರತದ ಚೈತನ್ಯಕ್ಕೆ ಧಕ್ಕೆ ತರುವ ರಹಸ್ಯ ಕಾರ್ಯಸೂಚಿ ಕೆಲಸ ಮಾಡುತ್ತಿದೆ. ಚಲನಚಿತ್ರದಲ್ಲಿ ಪೊಲೀಸರು ಅನ್ಯಾಯದ ಕೆಲಸ ಮಾಡುತ್ತಿರುವಾಗ ಕೇಸರಿ ಶಾಲು ಹಾಕಲಾಗುತ್ತದೆ. ಕೇಸರಿಗೆ ಇನ್ನೊಂದು ಬಣ್ಣ ಹಚ್ಚುವ ದುರುದ್ದೇಶ ಇದರ ಹಿಂದೆ ಇದೆ’ ಎಂದು ಹೇಳಿದರು.

‘ರಾಷ್ಟ್ರೀಯತೆಯಲ್ಲಿ ಗಟ್ಟಿ ಮತ್ತು ಮೃದು ಎಂಬುದು ಇಲ್ಲ. ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಹಾಕಿದರೆ ಕೆಲವರಿಗೆ ಅದು ಸಮಯ ವ್ಯರ್ಥ ಅನಿಸುತ್ತದೆ. ಅದೇ ಹೊರಗಡೆ ಬಂದು ಬಕೆಟ್‌ಗಟ್ಟಲೆ ಪಾಪ್ ಕಾರ್ನ್ ತಿನ್ನುವಾಗ ಸಮಯ ವ್ಯರ್ಥ ಅನಿಸದು’ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ (ಎಡದಿಂದ) ಅನಿಲ್ ಸಹಸ್ರಬುದ್ಧೆ, ಬಿ.ಎಲ್. ಸಂತೋಷ್, ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್, ಚಲನಚಿತ್ರ ಕಲಾವಿದ ಪ್ರಕಾಶ್ ಬೆಳವಾಡಿ ಹಾಗೂ ಇತಿಹಾಸಕಾರ ವಿಕ್ರಮ್ ಸಂಪತ್ ಇದ್ದರು. —ಪ್ರಜಾವಾಣಿ ಚಿತ್ರ

ನ್ಯಾಷನಲ್ ಎಜುಕೇಷನಲ್ ಟೆಕ್ನಾಲಜಿ ಫೋರಮ್ ಅಧ್ಯಕ್ಷ ಅನಿಲ್ ಸಹಸ್ರಬುದ್ಧೆ, ‘ವಿಜ್ಞಾನದ ಆರಂಭ ವೇದ ಕಾಲದಿಂದಲೇ ಆಗುತ್ತದೆ. 1835ರ ನಂತರ ಮೆಕಾಲೆಯಿಂದಾಗಿ ನಮ್ಮ ಶಿಕ್ಷಣ ಪದ್ಧತಿ ಪಕ್ಕಕ್ಕೆ ಸರಿಯಿತು. ಈಗ ಜಾರಿಗೊಂಡಿರುವ ರಾಷ್ಟ್ರೀಯ ಶಿಕ್ಷಣ ನೀತಿಯು ನಮ್ಮತನವನ್ನು ಮರುಸ್ಥಾಪಿಸಲಿದೆ. ಈ ಶಿಕ್ಷಣ ನೀತಿಯಲ್ಲಿ ಮಾತೃಭಾಷೆ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ಭಾರತೀಯ ಭಾಷೆಗಳಲ್ಲಿ ಎಂಜಿನಿಯರಿಂಗ್, ವೈದ್ಯಕೀಯ, ಕಾನೂನು ಸೇರಿ ವಿವಿಧ ಪದವಿಗಳನ್ನು ಪಡೆಯುವ ಕಾಲ ಬಂದಿದೆ. ಆಂಗ್ಲ ಭಾಷೆಯಲ್ಲಿನ ಪಠ್ಯ ಪುಸ್ತಕಗಳನ್ನು 12 ಭಾರತೀಯ ಭಾಷೆಗಳಿಗೆ ಅನುವಾದಿಸಲಾಗುತ್ತಿದೆ’ ಎಂದು ಹೇಳಿದರು.

ವಿದ್ವಾಂಸರನ್ನು ಸೃಷ್ಟಿಸಿ: ಕಲಾವಿದ ಸುಚೇಂದ್ರ ಪ್ರಸಾದ್, ‘ನಮ್ಮ ವಿಶ್ವವಿದ್ಯಾಲಯಗಳಲ್ಲಿ ವಿದ್ವಾಂಸರ ದಂಡನ್ನು ಸೃಷ್ಟಿಸುವ ಕೆಲಸ ಆಗಬೇಕು. ಮಹಾಪ್ರಬಂಧ ಮಂಡಿಸಿದವರೆಲ್ಲ ವಿದ್ವಾಂಸರಾಗುವುದಿಲ್ಲ. ಭಾರತೀಯ ಸಂಸ್ಕೃತಿ ಬಗ್ಗೆ ಆಳವಾಗಿ ಅಧ್ಯಯನ ಮಾಡಿಕೊಂಡವರು ವಿಷಯ ಜ್ಞಾನವನ್ನು ಯುವಜನರಿಗೆ ತಲುಪಿಸಬೇಕು’ ಎಂದು ಅವರು ತಿಳಿಸಿದರು.

ಸಂಸದ ತೇಜಸ್ವಿ ಸೂರ್ಯ, ‘ಇವತ್ತಿನ ತಲೆಮಾರಿನವರಿಗೆ ದೇಶದ ಅಂತಃಸತ್ವ ತಿಳಿಯಬೇಕು. ಭಾರತವು ಸಾವಿರಾರು ವರ್ಷಗಳ ಇತಿಹಾಸ ಇರುವ ಒಂದು ಸಂಸ್ಕೃತಿಯಿಂದ ರೂಪುಗೊಂಡಿದೆ. ಈ ಸಂಸ್ಕೃತಿಗೆ ಜನ್ಮದಿನಾಂಕ ಇಲ್ಲ. ಆದ್ದರಿಂದ ಅಂತ್ಯವೂ ಇರುವುದಿಲ್ಲ. ಮತ್ತೊಮ್ಮೆ ಸ್ವದೇಶಿ, ಸ್ವಧರ್ಮ, ಸ್ವಾವಲಂಬಿ ಹಾಗೂ ಸ್ವಾಭಿಮಾನವನ್ನು ಸ್ಥಾಪಿಸಬೇಕು’ ಎಂದು ಹೇಳಿದರು.

ಪುಸ್ತಕ ಖರೀದಿ: ಶೇ 50 ರಿಯಾಯಿತಿ

ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ಕನ್ನಡ ಪುಸ್ತಕ ಪ್ರಾಧಿಕಾರವು ಜನವರಿ ತಿಂಗಳು ಪೂರ್ತಿ ಪುಸ್ತಕಗಳ ಖರೀದಿಯ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಪ್ರಾಧಿಕಾರದ ವೆಬ್‌ಸೈಟ್ www.kannadapustakapradhikara.com ಮೂಲಕವೂ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಖರೀದಿಸಬಹುದಾಗಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕಿರಣ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080-22107704 ಅಥವಾ 22484516

ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಯತ್ರಿನಗರದ ನಾಗಪ್ಪ ಬ್ಲಾಕ್‌ನಲ್ಲಿ ಅಭಿವೃದ್ಧಿಪಡಿಸಿರುವ ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಯದುಗಿರಿ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಶನಿವಾರ ಲೋಕಾರ್ಪಣೆ ಮಾಡಿದರು.

‘ಆರೋಗ್ಯ ಕೇಂದ್ರ ಒಂದು ವಿಸ್ಮಯಕರವಾದ ಜನೋಪಯೋಗಿ ಉಪಕ್ರಮವಾಗಿದೆ. ಇದು ಸಮಾಜ ಜನರಿಗೆ ಹಲವು ರೀತಿಗಳಲ್ಲಿ ಉಪಯೋಗಕ್ಕೆ ಬರುತ್ತದೆ’ ಎಂದು ಸ್ವಾಮೀಜಿ ಹೇಳಿದರು.

‘ಇಂತಹ ಆರೋಗ್ಯ ಕೇಂದ್ರಗಳು ಕ್ಷೇತ್ರದ ಎಲ್ಲ ಭಾಗಗಳಲ್ಲೂ ಬರಲಿ. ರಾಮಾನುಜಾಚಾರ್ಯರು ಸಾವಿರ ವರ್ಷಗಳ ಹಿಂದೆಯೇ ಸಮಾಜರೂಪಿಯಾದ ಭಗವಂತನ ಸೇವೆಯನ್ನು ಪ್ರತಿಪಾದಿಸಿದ್ದರು. ಸಚಿವರು ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ’ ಎಂದರು.

ಗಾಯತ್ರಿನಗರದ ನಾಗಪ್ಪ ಬ್ಲಾಕ್‌ನಲ್ಲಿ ಅಭಿವೃದ್ಧಿಪಡಿಸಿರುವ ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಯದುಗಿರಿ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಶನಿವಾರ ಲೋಕಾರ್ಪಣೆ ಮಾಡಿದರು

ರಾಜ್ಯಸಭಾ ಸದಸ್ಯ ಜಗ್ಗೇಶ್, ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ತ್ರಿಲೋಕಚಂದ್ರ, ಬಿಬಿಎಂಪಿ ಪಶ್ಚಿಮ ವಲಯದ ಆಯುಕ್ತ ಡಾ.ದೀಪಕ್, ಜಂಟಿ ಆಯುಕ್ತ ಯೋಗೇಶ, ಬಿಬಿಎಂಪಿ ಮಾಜಿ ಸದಸ್ಯರಾದ ಜಯಪಾಲ್, ಮಂಜುನಾಥ, ಮಂಜುನಾಥ ರಾಜು, ಬಿಜೆಪಿ ಮುಖಂಡರಾದ ಡಾ.ವಾಸು, ಸುರೇಶಗೌಡ, ನಾಗೇಶ ಹಾಜರಿದ್ದರು.

ಜ.4ಕ್ಕೆ ‘ಹುಲಿ ಹೆಜ್ಜೆ’ ಗ್ರಂಥ ಬಿಡುಗಡೆ

ಬೆಂಗಳೂರು: ರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಟ್ರಸ್ಟ್ ಜ.4ರಂದು ಬೆಳಿಗ್ಗೆ 10 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ‘ಹುಲಿ ಹೆಜ್ಜೆ’ ಕೃತಿ ಬಿಡುಗಡೆ ಸಮಾರಂಭ ಹಮ್ಮಿಕೊಂಡಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಸಂಚಾಲಕ ಚಿಕ್ಕಹನುಮಂತೇಗೌಡ ಎಚ್.ವಿ., ‘ಹುಲಿಕಲ್ ನಟರಾಜ್ ಅವರಿಗೆ 60 ವರ್ಷಗಳು ತುಂಬುತ್ತಿರುವ ಪ್ರಯುಕ್ತ ಅವರ ಲೇಖನಗಳನ್ನು ಸಂಗ್ರಹಿಸಿ, ಅಭಿನಂದನಾ ಗ್ರಂಥವನ್ನು ಹೊರತರಲಾಗುತ್ತಿದೆ’ ಎಂದರು .

‘ ಮಾಜಿ ಲೋಕಾಯುಕ್ತ ನ್ಯಾ.ಎನ್. ಸಂತೋಷ್ ಹೆಗ್ಡೆ ಅವರು ಕೃತಿಯನ್ನು ಲೋಕಾರ್ಪಣೆ ಮಾಡುತ್ತಾರೆ. ಸಾಹಿತಿ ಕುಂ. ವೀರಭದ್ರಪ್ಪ ಅವರು ಗ್ರಂಥದ ಕುರಿತು ಮಾತನಾಡಲಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಅಧ್ಯಕ್ಷತೆ ವಹಿಸಲಿದ್ದಾರೆ’ ಎಂದು ತಿಳಿಸಿದರು.

ನಗರದಲ್ಲಿ ಇಂದು

ನೂತನ ವರ್ಷಾರಂಭ: ಗೀತ ಗಾಯನ: ವಾಸವಿ ಮಹಿಳಾ ಮಂಡಳಿ, ಪಿಟೀಲು: ರಾಧಿಕಾ ವೆಂಕಟರಾಮನ್, ಭಜನೆ: ಬೆಂಗಳೂರು ದಾಸವಾಣಿ ಮತ್ತು ತಂಡ, ಮ್ಯಾಂಡೋಲಿನ್: ವಿಷ್ಣು ವೆಂಕಟೇಶ್ ಮತ್ತು ತಂಡ, ಭರತನಾಟ್ಯ: ಪದ್ಮಾವತಿ ಕಲಾನಿಕೇತನ ಸಂಸ್ಥೆ, ಸ್ಥಳ ಮತ್ತು ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ವೆಂಕಟೇಶ್ವರಸ್ವಾಮಿ ದೇವಸ್ಥಾನ, ವೈಯಾಲಿಕಾವಲ್, ಮಲ್ಲೇಶ್ವರ, ಬೆಳಿಗ್ಗೆ 9ರಿಂದ

ಕ್ಯಾಲೆಂಡರ್ ಬಿಡುಗಡೆ ಮತ್ತು ತಮಿಳ್ ಸೆಲ್ವಿ ಅವರಿಗೆ ಅಭಿನಂದನೆ: ಕ್ಯಾಲೆಂಡರ್ ಬಿಡುಗಡೆ: ವಿ. ಸೋಮಣ್ಣ, ಅಭಿನಂದನಾ ನುಡಿ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಶೈಲಜಾ ಸೋಮಣ್ಣ, ಆಯೋಜನೆ: ವಿ. ಸೋಮಣ್ಣ ಪ್ರತಿಷ್ಠಾನ, ಸ್ಥಳ: ವಿ. ಸೋಮಣ್ಣ ಅವರ ಗೃಹ ಕಚೇರಿ, ವಿಜಯನಗರ, ಬೆಳಿಗ್ಗೆ 9

‘ನಿರಂತರಂ’ ರಾಷ್ಟ್ರೀಯ ಸಂಗೀತ ಮತ್ತು ನೃತ್ಯೋತ್ಸವ: ಅತಿಥಿಗಳು: ನಾಗಮಣಿ ಶ್ರೀನಾಥ್, ಶ್ರೀನಿವಾಸ್ ಜಿ. ಕಪ್ಪಣ್ಣ, ಟಿ.ಎಸ್. ನಾಗಾಭರಣ, ಭರತನಾಟ್ಯ ಪ್ರದರ್ಶನ: ಕಲಾಸಿಂಧು ಅಕಾಡೆಮಿ ಆಫ್ ಡಾನ್ಸ್, ರಾಜೇಶ್ ಟಿ.ಕೆ., ಮೃದುಳಾ ರಾಮಾನುಜನ್, ಪ್ರಸನ್ನ ಕಸ್ತೂರಿ, ಕುಚಿಪುಡಿ: ವಸಂತ ಕಿರಣ್, ಆಯೋಜನೆ: ಸಂಗೀತ ಸಂಭ್ರಮ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9.30

ವಿದ್ಯಾರ್ಥಿವೇತನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ: ಅತಿಥಿಗಳು: ಉದಯ್ ಬಿ. ಗರುಡಾಚಾರ್, ಅಶೋಕ್ ಹಾರನಹಳ್ಳಿ, ಅಧ್ಯಕ್ಷತೆ: ಎಚ್.ವಿ. ಸತ್ಯನಾರಾಯಣ್, ಆಯೋಜನೆ ಮತ್ತು ಸ್ಥಳ: ಹೊಯ್ಸಳ ಕರ್ನಾಟಕ ಸಂಘದ ಆವರಣ, ಹೊಂಬೇಗೌಡ ನಗರ, ಬೆಳಿಗ್ಗೆ 10

‘ಕುವೆಂಪು-ವರ್ತಮಾನದ ಬೆಳಕಿನಲ್ಲಿ’ ವಿಚಾರ ಸಂಕಿರಣ ಮತ್ತು ಧ್ವಜಸ್ತಂಭದ ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ದ್ವೈವಾರ್ಷಿಕ ಅಧಿವೇಶನ: ಉದ್ಘಾಟನೆ: ರಾಜೇಂದ್ರ ಕುಮಾರ್ ಎಸ್., ಅಧ್ಯಕ್ಷತೆ: ಕೆ. ಪ್ರಹ್ಲಾದ ರಾವ್, ರುದ್ರೇಶ್ ಕೆ.ಎಸ್. ಅತಿಥಿ: ನಾಗಲಕ್ಷ್ಮೀ ಎನ್. ಆಯೋಜನೆ: ಅಖಿಲ ಭಾರತ ಗ್ರಾಮೀಣ ಅಂಚೆ ಸೇವಕರ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

ಕೆ.ಎನ್. ಗಣೇಶಯ್ಯ ಅವರ ಮೂರು ಕೃತಿಗಳು ಲೋಕಾರ್ಪಣೆ: ‘ಜಲ-ಜಾಲ’, ‘ಅತ್ತಿತ್ತದವಲೋಕನ’, ‘ಹಾತೆ-ಜತೆ-ಕತೆ’, ಕೃತಿಗಳ ಬಿಡುಗಡೆ: ಜೋಗಿ, ಅತಿಥಿಗಳು: ಎಂ.ಆರ್. ದತ್ತಾತ್ರಿ, ಕರ್ಕಿ ಕೃಷ್ಣಮೂರ್ತಿ, ಆಯೋಜನೆ: ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

ವಿಶ್ವಮಾನವ ಕುವೆಂಪು ಅವರ 108ನೇ ಜನ್ಮದಿನಾಚರಣೆ: ಅತಿಥಿಗಳು: ಬಿ.ಎಲ್. ಶ್ರೀನಿವಾಸ್, ಕೆ.ಎಲ್. ರಂಗನಾಥರಾವ್, ಉಪಸ್ಥಿತಿ: ಎಚ್. ಎಸ್. ಮಂಡ್ಯ ಬಾಲಸುಬ್ರಹ್ಮಣ್ಯಂ, ಕೆ.ವಿ. ಲಕ್ಷ್ಮಣಮೂರ್ತಿ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ ಅಂಚೆ ಕಚೇರಿ ಪಕ್ಕ, ಬೆಳಿಗ್ಗೆ 10.30

ಶಿವಾತ್ಮಾನಂದ ಸರಸ್ವತೀ ಸ್ವಾಮೀಜಿ ಪುಣ್ಯಸ್ಮರಣೆಯ ಅಂಗವಾಗಿ ನಾಲ್ಕು ಪುಸ್ತಕಗಳ ಬಿಡುಗಡೆ: ಚಂದ್ರಶೇಖರ ಕಂಬಾರ, ಸಾನ್ನಿಧ್ಯ: ರಾಮಚಂದ್ರ ಸ್ವಾಮೀಜಿ, ಯಚ್ಚರೇಶ್ವರ ಸ್ವಾಮೀಜಿ, ಉದ್ಘಾಟನೆ: ಎಸ್. ಮಾಳಿಗಾಚಾರ್, ಅಧ್ಯಕ್ಷತೆ: ಪಿ.ಬಿ. ಬಡಿಗೇರ್, ಅತಿಥಿಗಳು: ಕೆ.ಎಸ್. ಪ್ರಭಾಕರ್, ಪಿ.ಎನ್. ಶ್ರೀನಿವಾಸಾಚಾರ್, ಕೆ.ಆರ್. ಬಡಿಗೇರ್, ಬಾಬು ಪತ್ತಾರ್, ಕೆ.ಪಿ. ಮರಿಯಾಚಾರ್, ನಾಗೇಂದ್ರ ಕಮ್ಮಾರ್, ಉಪಸ್ಥಿತಿ: ವೀರೇಶ್ ಬಡಿಗೇರ್, ಪುಸ್ತಕಗಳು: ‘ಪಂಚಾನನ ಸಂಪುಟ-2’, ‘ಜ್ಞಾನ ಸರಸ್ವತೀ’, ‘ಶ್ರೀ ಮೌನೇಶ್ವರ ತ್ರಿಪದಿಗಳು’, ‘ಜಗದ್ಗುರು ಶ್ರೀ ಯಚ್ಚರೇಶ್ವರ ಭಕ್ತಿ ಗೀತೆಗಳು’, ಪುಸ್ತಕಾವಲೋಕನ: ವಿಜಯಕುಮಾರ ಕಮ್ಮಾರ, ಆಯೋಜನೆ: ಉತ್ತರ ಕರ್ನಾಟಕ ವಿಶ್ವಕರ್ಮ ಯುವ ಬರಹಗಾರರ ಹಾಗೂ ಸಂಶೋಧಕರ ವೇದಿಕೆ, ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ, ಉತ್ತರ ಕರ್ನಾಟಕ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘ, ಮನು ಗ್ರಾಫಿಕ್ಸ್, ಸ್ಥಳ: ಮನು ಗ್ರಾಫಿಕ್ಸ್, ಅಗ್ರಹಾರ ದಾಸರಹಳ್ಳಿ, ಮಾಗಡಿ ರಸ್ತೆ, ಬೆಳಿಗ್ಗೆ 10.30



ಭೀಮಾ ಕೋರೆಗಾಂವ್ ವಿಜಯೋತ್ಸವ ಮತ್ತು ಸ್ವಾಭಿಮಾನಿ ಸಾಂಸ್ಕೃತಿಕ ಸಮಾವೇಶ: ಉದ್ಘಾಟನೆ: ಅಗ್ನಿ ಶ್ರೀಧರ್, ಅಧ್ಯಕ್ಷತೆ: ಅಶ್ವತ್ ಅಂತ್ಯಜ, ಭಾಷಣ: ಎಂ. ವೆಂಕಟಸ್ವಾಮಿ, ಉಪಸ್ಥಿತಿ: ಸುರೇಶ ಗೌತಮ್, ‘ಭೀಮಾ ಕೋರೆಗಾಂವ್ ಮಹಾಯುದ್ಧ’ ಪುಸ್ತಕ ಲೋಕಾರ್ಪಣೆ: ರವಿ ಚೆನ್ನಣ್ಣನವರ್, ಆಯೋಜನೆ: ಸಮತಾ ಸೈನಿಕ ದಳ, ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಪುರಭವನ, ಬೆಳಿಗ್ಗೆ 11

ಜಿ.ಬಿ. ಹರೀಶ್ ಅವರ ‘ಬೌದ್ಧಿಕ ಕ್ಷತ್ರೀಯರು’ ಪುಸ್ತಕ ಬಿಡುಗಡೆ ಮತ್ತು ‘ಹಿಂದೂ ಧರ್ಮ ಮತ್ತು ಸಂಸ್ಕೃತಿ ಯುದ್ಧಗಳು’ ವಿಚಾರ ಸಂಕಿರಣ: ಉಪಸ್ಥಿತಿ: ಕೊನ್ರಾಡ್ ಎಲ್ಸ್ಟ್, ರೋಹಿತ್ ಚಕ್ರತೀರ್ಥ, ಜಿ.ಬಿ. ಹರೀಶ್, ಎಂ. ಕೊಟ್ರೇಶ್, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಸೆನೆಟರಿ ಹಾಲ್, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

‘ಸುಮಂಗಲಿ ಪೂಜೆ’: ಆಯೋಜನೆ: ಶ್ರೀ ಪಾಂಡುರಂಗ ವಿಷ್ಣು ಸಹಸ್ರನಾಮ ಮಂಡಳಿ, ಸ್ಥಳ: ಮಲ್ಲೇಶ್ವರ ಆಟದ ಮೈದಾನ ಎದುರು, ಸಂಜೆ 5

ಅಲಕನಂದಾ ಸಂಗೀತಸಭಾ ಉದ್ಘಾಟನೆ: ಆರ್. ಕೆ. ವಾದೀಂದ್ರಾಚಾರ್, ಉಪಸ್ಥಿತಿ: ನಂದಕಿಶೋರ್ ಆಚಾರ್, ದೇಸಾಯಿ ಸುಧೀಂದ್ರ, ಗಾಯನ: ಅಲಕನಂದಾ ಸಂಗೀತ ಸಭಾ ಸದಸ್ಯರು, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 5.30

ವೀಣಾ ವಾದನ: ಪ್ರಸ್ತುತಿ: ರಮಣ ಬಾಲಚಂದ್ರನ್, ಆಯೋಜನೆ ಮತ್ತು ಸ್ಥಳ: ಶ್ರೀ ರಾಮ ಲಲಿತ ಕಲಾ ಮಂದಿರ, ಬನಶಂಕರಿ 2ನೇ ಹಂತ, ಸಂಜೆ.5.30

ಡಿ.ವಿ.ಜಿ. ಅವರ ‘ಅಂತಃಪುರಗೀತೆ’ ಆಧಾರಿತ ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಶೋಭಾ ಶಶಿಕುಮಾರ್, ಆಯೋಜನೆ: ಗೋಖಲೆ ಸಾರ್ವಜನಿಕ ಸಂಸ್ಥೆ, ಸ್ಥಳ: ಡಿ.ವಿ.ಜಿ. ಸಭಾಂಗಣ, ಬಸವನಗುಡಿ, ಸಂಜೆ 6

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101, ದೂರವಾಣಿ ಸಂಖ್ಯೆ: ಕಛೇರಿ: 08156-295427, ಫ್ಯಾಕ್ಸ್: 08156 - 295427, ಇಮೇಲ್ - eemidcbpura@gmail.com

ಸಂಖ್ಯೆ:ಕಾಸಬ/ತಾಂಶಾ/ಸ.ಇಂ-1/4702ವಿಶೇಷ ಘಟಕ ಯೋಜನೆ/ಮರು ಟೆಂಡರ್/2262/2022-23 ದಿನಾಂಕ: 31/12/2022

ಮರು ಟೆಂಡರ್ ಪ್ರಕಟಣೆ

ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 07/2022-23 ದಿನಾಂಕ : 16/06/2022 ರಲ್ಲಿ ಆಹ್ವಾನಿಸಲಾಗಿದ್ದ 4702 ವಿಶೇಷ ಘಟಕ ಯೋಜನೆ ಅಡಿಯಲ್ಲಿ ಆಹ್ವಾನಿಸಲಾಗಿದ್ದ ಕಾಮಗಾರಿಯ ಇ-ಟೆಂಡರ್‌ನ್ನು ತಾಂತ್ರಿಕ ಕಾರಣಗಳಿಂದ ಮರು ಟೆಂಡರ್ ಕರೆಯಲಾಗಿದೆ ಹಾಗೂ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಅಡಿಯಲ್ಲಿ (ಅಂತರ್ಜಾಲದಲ್ಲಿ) ಬಿಡ್ಡ್‌ನ್ನು ಅಪ್‌ಲೋಡ್ ಮಾಡುವ ದಿನಾಂಕ: 11/01/2023 ರಂದು ಸಂಜೆ 4:00 ಗಂಟೆಯವರೆಗೆ, ಮತ್ತು ತಾಂತ್ರಿಕ ಬಿಡ್ಡ್‌ನ್ನು ತೆರೆಯುವ ದಿನಾಂಕ: 16/01/2023 ಆಗಿರುತ್ತದೆ. ಉಳಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ತಮ್ಮ ವಿಶ್ವಾಸಿ
ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಚಿಕ್ಕಬಳ್ಳಾಪುರ

ಕರ್ನಾಟಕ ಸರ್ಕಾರ

ಕರ್ನಾಟಕ ಚಲನಚಿತ್ರ ಅಕಾಡೆಮಿ

ನಂ.20/ಎ, ಎಫ್.ಎಸ್.ಹೆಚ್, ನಂದಿನಿ ಬಡಾವಣೆ, ಪ್ರೆಸಿಡೆನ್ಸಿ ಶಾಲೆ ಹತ್ತಿರ, ಬೆಂಗಳೂರು-560096 ದೂ: 080-23493410

ಸಂ: ಕ.ಚ.ಅ/ವಾಬಾಟೆಂ/1310/2022-23 ದಿನಾಂಕ: 31-12-2022

ಕರ್ನಾಟಕ ಚಲನಚಿತ್ರ ಅಕಾಡೆಮಿಗೆ ಮಾಸಿಕ ಹಾಗೂ ದಿನದ ಬಾಡಿಗೆ ಆಧಾರದಲ್ಲಿ ವಿವಿಧ ಮಾದರಿ ವಾಹನಗಳನ್ನು ಬಾಡಿಗೆಗೆ ಪಡೆಯಲು

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಕೆಲಸ ಕಾರ್ಯಗಳಿಗೆ **ವಿವಿಧ ಮಾದರಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದಲ್ಲಿ ಹಾಗೂ ಆಯಾ ದಿನದ ಬಾಡಿಗೆ ಆಧಾರದ ಮೇಲೆ ಪಡೆಯಲು** ತಗಲುವ ವೆಚ್ಚದ ಕುರಿತಂತೆ ಬೆಂಗಳೂರಿನಲ್ಲಿ ಕಚೇರಿ ಹೊಂದಿರುವ ಹಾಗೂ ಇ-ಆಡಳಿತ ಇಲಾಖೆಯ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ವಾಹನದ ಮಾಲೀಕರಿಂದ ಏಕ ಲಕೋಟೆಯಲ್ಲಿ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಆಸಕ್ತ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ: **31.12.2022 ರಂದು ಮಧ್ಯಾಹ್ನ 3.00 ಗಂಟೆ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ-ಟೆಂಡರ್‌ಗಳನ್ನು ಇಎಂಡಿ ಮೊತ್ತದೊಂದಿಗೆ ದಿನಾಂಕ: **30.01.2023ರ ಸಂಜೆ 5.00 ಗಂಟೆಯೊಳಗೆ** ಸಲ್ಲಿಸಬಹುದು.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಅರ್ಹತೆ ಷರತ್ತುಗಳ ವಿವರ ಇತ್ಯಾದಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://www.eproc.karnataka.gov.in** ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್‌ನ್ನು ದೂರವಾಣಿ ಸಂಖ್ಯೆ: 080-22631200, +91-080-46010000, +91 080-68948777 ಹಾಗೂ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಕಚೇರಿ (080-23493410)ನ್ನು ಸಂಪರ್ಕಿಸಬಹುದು.

DIPR/CP/3813/YC/2022-23 ಸಹಿ/-ರಿಜಿಸ್ಟ್ರಾರ್

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ),

ಇಸ್ರೋ ಮುಖ್ಯಾಲಯ, ಅಂತರಿಕ್ಷ ಭವನ, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು-560094 ದೂರವಾಣಿ: 080-22172033/2032/2476 ಫ್ಯಾಕ್ಸ್: 080-23513126

ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕೆಲಸಕ್ಕೆ ಐಟಂ ದರದ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು	ಇಸ್ರೋ ಮುಖ್ಯಾಲಯ, ಅಂತರಿಕ್ಷ ಭವನ, ಬೆಂಗಳೂರು ಇಲ್ಲಿಗೆ ಸ್ಮೋಕ್ ಡಿಟೆಕ್ಷನ್ ಮತ್ತು ಫೈರ್ ಅಲಾರಾಂ ಸಿಸ್ಟಮ್‌ನ ಸರಬರಾಜು, ಸ್ಥಾಪನೆ, ಪರೀಕ್ಷೆ ಮಾಡುವುದು ಮತ್ತು ಕಾರ್ಯಾಚರಣೆಗೊಳಿಸುವುದು.
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಜಿ/ಇಸ್ರೋ-ಹೆಚ್‌ಕ್ಯೂ/ಇ/ಸಿ/03/ಪಿ/2022-23 ದಿನಾಂಕ: 30.12.2022
ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ	ರೂ. 51.60 ಲಕ್ಷಗಳು
ಪೂರ್ಣಗೊಳಿಸುವ ಅವಧಿ	ಆರು (06) ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ	30.12.2022, 18:10 ಗಂಟೆಯಿಂದ 12.01.2023, 23:59 ಗಂಟೆವರೆಗೆ.
ಟೆಂಡರ್‌ಗಳನ್ನು ಸ್ವೀಕರಿಸುವ ಕಡೆಯ ದಿನಾಂಕ & ಸಮಯ	16.01.2023, 15:30 ಗಂಟೆಯುವರೆಗೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	16.01.2023, 16:00 ಗಂಟೆಗೆ.
ಇಎಂಡಿ	ರೂ.1,03,200.00

ಆಸಕ್ತಿಯುಳ್ಳ ಟೆಂಡರ್‌ದಾರರು ವಿವರವಾದ ಟೆಂಡರ್ ಪ್ರಕಟಣೆಯುನ್ನು **www.isro.gov.in/tender** ಇಲ್ಲಿ ಪರಿವೀಕ್ಷಿಸಬಹುದು. ಟೆಂಡರ್ ಪ್ರಕಟಣೆ ವಿವರ ಮತ್ತು ಟೆಂಡರ್ ದಸ್ತಾವೇಜುಗಳನ್ನು **https://isro.ewizard.in** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹ ಮುಖ್ಯಸ್ಥರು, ಸಿಎಂಜಿ, ಇಸ್ರೋ ಮುಖ್ಯಾಲಯ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-321/2604/2022-23 ದಿನಾಂಕ: 31.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಡಿ.ಎಸ್.ವೀರಾಂಜನೇಯ	ಆನೇಕಲ್	ಸರ್ಜಾಪುರ	ದೊಮ್ಮಸಂದ್ರ	230/10	1-25.08	ವ್ಯವಸಾಯ ವಲಯ	ವಾಣಿಜ್ಯ
					ಒಟ್ಟು	1-25.08		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸುತ್ತಮುತ್ತಲ ಪ್ರದೇಶದ ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ, ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ಸುತ್ತಮುತ್ತಲ ಪ್ರದೇಶವು ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಇತರೆ ಸಣ್ಣ ಸಣ್ಣ ಉದ್ಯಮಗಳು ಅಭಿವೃದ್ಧಿ ಹೊಂದಲು ಸಹಾಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಪ್ರಶ್ನಿತ ಜಮೀನುಗಳನ್ನು ‘ವ್ಯವಸಾಯ ವಲಯ’ ದಿಂದ ‘ವಾಣಿಜ್ಯ ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/356/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-307/2598/2022-23 ದಿನಾಂಕ: 31.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಹೆಚ್.ಎಲ್. ಶೇಷಪ್ಪ ರೆಡ್ಡಿ ಮತ್ತು ಇತರರುಗಳು	ಆನೇಕಲ್	ಜಿಗಣಿ	ಹುಲಿಮಂಗಲ	208/2 208/4 208/5 209/2(ಪಿ) 210/1 210/3 210/4 210/5 210/6	2-15 1-00 1-00 2-00 0-08 0-23 0-23 0-08 0-08	ವ್ಯವಸಾಯ	ವಸತಿ
					ಒಟ್ಟು	8-05		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಸಿದಂತಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತ, ಸದರಿ ಜಮೀನುಗಳನ್ನು ‘ವ್ಯವಸಾಯ ವಲಯ’ ದಿಂದ ‘ವಸತಿ ವಲಯ’ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/360/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-324/2595/2022-23 ದಿನಾಂಕ:31.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಡಿ.ಎಸ್.ವೀರಾಂಜನೇಯ ಶ್ರೀ ಪಿ.ಮೋಹನ್	ಆನೇಕಲ್	ಸರ್ಜಾಪುರ	ತಿಗಳಚೌಡೇನಹಳ್ಳಿ	24	8-00	ವ್ಯವಸಾಯ ವಲಯ	ವಸತಿ
					ಒಟ್ಟು	8-00		

ಷರಾ:- ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು "ವ್ಯವಸಾಯ ವಲಯ" ದಿಂದ "ವಸತಿ ಉಪಯೋಗಕ್ಕೆ" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/354/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-278/2565/2022-23 ದಿನಾಂಕ: 30.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Agasthya Properties	ಆನೇಕಲ್	ಸರ್ಜಾಪುರ	ಕೊಮ್ಮಸಂದ್ರ	56/3	1-05	ವ್ಯವಸಾಯ ವಲಯ	ವಸತಿ
					ಒಟ್ಟು	1-05		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು ‘ವ್ಯವಸಾಯ ವಲಯ’ ದಿಂದ ‘ವಸತಿ ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/347/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

‘ಮೀಸಲಾತಿ: ಯತ್ನಾಳ ಬಾಯಿ ಮುಚ್ಚಿಕೊಂಡಿರುವುದೇಕೆ?’

ವಿಜಯಪುರ: ‘ಪಂಚಮಸಾಲಿ 2ಎ ಮೀಸಲಾತಿ ವಿಚಾರದಲ್ಲಿ ತಗಾದೆ ಎತ್ತಿದರೆ ಬಿಜೆಪಿಯಿಂದ ಕಿತ್ತು ಹಾಕುವುದಾಗಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಆ ಪಕ್ಷದ ಮುಖಂಡರು ಬೆದರಿಕೆ ಹಾಕಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶನಿವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀಸಲಾತಿ ಕುರಿತು ಯತ್ನಾಳ್ ಹೇಳಿಕೆ ನೀಡಲಿ. ಅಷ್ಟೆಲ್ಲ ಮಾತನಾಡುತ್ತಿದ್ದವರು ಈಗ ಬಾಯಿ ಮುಚ್ಚಿಕೊಂಡಿರುವುದು ಏಕೆ? ಎಂದರು. ‘ಮುಖ್ಯಮಂತ್ರಿ ಅವರೇ ಏಕೆ ಮೀಸಲಾತಿ ವಿಷಯವನ್ನು ಖುದ್ದು ಘೋಷಿಸಲಿಲ್ಲ’ ಎಂದು ಪ್ರಶ್ನಿಸಿದರು.

‘ಸರ್ಕಾರ ನಮ್ಮ ತಲೆಗೆ ತುಪ್ಪ ಸುರಿದಿದೆ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಸರ್ಕಾರ ಮೀಸಲಾತಿ ತುಪ್ಪವನ್ನು ಮೂಗಿಗೆ ಸವರಿದ್ದರೆ ವಾಸನೆ ಆದರೂ ನೋಡಬಹುದಿತ್ತು. ಈಗ ತಲೆಗೆ ಸುರಿದಿದೆ. ಏನೂ ತಿಳಿಯದೇ ಗೊಂದಲದಲ್ಲಿದ್ದೇವೆ’ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಬಸವ ಜಯ ಮೃತ್ಯುಂಜಯ ಶ್ರೀ

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸರ್ಕಾರ ಎಲ್ಲ ಲಿಂಗಾಯತರನ್ನು 2ಡಿ ಗೆ ಸೇರಿಸಿರುವುದು ಬಹಳ ಸಂತೋಷ. ನಮ್ಮ ಹೋರಾಟದಿಂದ ಎಲ್ಲ ಲಿಂಗಾಯತರಿಗೂ ಒಳ್ಳೆಯದಾಗಿದ್ದು, ನಾವು ಅದನ್ನು ಸ್ವಾಗತಿಸುತ್ತೇವೆ’ ಎಂದರು.

‘ಆದರೆ, ನಿಜವಾದ ಹೋರಾಟ ಮಾಡಿದವರು ಪಂಚಮಸಾಲಿಗಳು. ಕಳೆದ 2 ವರ್ಷದಿಂದ ಮನೆ-ಮಠಗಳನ್ನು ಬಿಟ್ಟು ಹೋರಾಟ ಮಾಡಿದ್ದೇವೆ. ನಮ್ಮ ಪಾಲು ಎಷ್ಟು ಎಂದು ಸ್ಪಷ್ಟತೆ ಇಲ್ಲ. ನಾವು ದುಡಿದಿದ್ದಕ್ಕೆ ಸರ್ಕಾರ ಪ್ರತಿಫಲ ಕೊಡಲಿಲ್ಲ’ ಎಂದರು.

ಬೆಳಗಾವಿಯಲ್ಲಿ ಎರಡು ದಿನಗಳಲ್ಲಿ ರಾಜ್ಯ ಮಟ್ಟದ ಪಂಚಮಸಾಲಿ ಕಾರ್ಯಕಾರಿಣಿ ಸಭೆಯನ್ನು ಕರೆಯುತ್ತೇವೆ. ಈ ಮೀಸಲಾತಿ ಸ್ವೀಕರಿಸಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ಅಲ್ಲಿ ಚರ್ಚಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದರು.

ಸೌಭಾಗ್ಯಗೆ ಅದ್ಧೂರಿ ಸ್ವಾಗತ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ್ದ ಆರೋಪದಡಿ ಬಂಧನದಲ್ಲಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ ಜಾಮೀನಿನ ಮೇಲೆ ಬಿಡುಗಡೆಯಾದರು.

ಶನಿವಾರ ಸಂಜೆ ಶಿವಮೊಗ್ಗದಿಂದ ಚಿತ್ರದುರ್ಗ ನಗರಕ್ಕೆ ಬರುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸುವ ಮೂಲಕ ಅದ್ಧೂರಿ ಸ್ವಾಗತ ಕೋರಿದರು.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಟೆಂಡರ್:ಮುಂದೂಡಿಕೆ:2022-23:3598
ದಿನಾಂಕ:23-12-2022

ಟೆಂಡರ್ ಮುಂದೂಡುವ ಪ್ರಕಟಣೆ

ಉಲ್ಲೇಖ: 1.ಈ ಕಚೇರಿ ಅಲ್ಪಾವಧಿ ಪ್ರಕಟಣೆ ಸಂಖ್ಯೆ: ಕಾನಿಇಂ:ಲೋಇ:ವಿಕೊ:KW-3:ಟೆಂ:2022-23:3426:ದಿನಾಂಕ: 09-12-2022.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ ಪ್ರಕಟಣೆ ಮೂಲಕ ಈ ಕಛೇರಿಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು, ಪ್ರಸ್ತುತ ಕಾಮಗಾರಿಗಳನ್ನು, ಈ ಕೆಳಕಾಣಿಸಿದಂತೆ ಮುಂದೂಡಲಾಗಿದೆ.
ವೆಬ್ ಸೈಟ್‌ನಲ್ಲಿ Down load ಮಾಡುವ ದಿನಾಂಕ: : ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿರುವಂತೆ ಪ್ರೀಬಿಡ್ ಮೀಟಿಂಗ್ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿರುವಂತೆ. ಟೆಂಡರ್ ಆಕ್ಷೇಪಣೆ:ಸ್ಪಷ್ಟೀಕರಣಗಳಿಗಾಗಿ ನಿಗದಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯ : ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿರುವಂತೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **06-01-2023 ಸಮಯ 16.00 ಗಂಟೆ**. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **07-01-2023 ಸಮಯ 16.30 ಗಂಟೆ.** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ : **09-01-2023 ಸಮಯ 11.00 ಗಂಟೆ**

ಇದನ್ನು ಹೊರತುಪಡಿಸಿದಂತೆ, ಬಾಕಿ ಉಳಿದ ಸದರಿ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/531/ಎಂಸಿಎ/2022-23

ಅರಣ್ಯ ಕಾಮಗಾರಿಗಳಿಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಸಂಖ್ಯೆ : ಎ6/ಬಿಯುಡಿ/ಇ-ಟೆಂಡರ್/ಸಿಆರ್-38/2022-23 ದಿ. 27-12-2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿನಲ್ಲಿ “ಎನ್.ಸಿ & ಎಂ.ಎ.ಸಿ” ಲೆಕ್ಕಶೀರ್ಷಿಕೆಯಡಿಯಲ್ಲಿ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಲಯಗಳ ಅರಣ್ಯ ಪ್ರದೇಶದಲ್ಲಿ ಅರಣ್ಯ ಕಾಮಗಾರಿಗಳನ್ನು ಕೈಗೊಳ್ಳಲು ಇ-ಟೆಂಡರ್‌ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ 12-01-2023ರ ಸಂಜೆ 4.00 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಒಟ್ಟು 12 ಕಾಮಗಾರಿಗಳು ಮತ್ತು ಅವುಗಳ ಒಟ್ಟು ಟೆಂಡರ್ ಮೊತ್ತ ರೂ. 115.611 ಲಕ್ಷಗಳಾಗಿರುತ್ತದೆ. ಸದರಿ ಟೆಂಡರ್‌ಗೆ ಸಂಬಧಿಸಿದಂತೆ ಹೆಚ್ಚಿನ ಮಾಹಿತಿಯನ್ನು, ಈ ಕಛೇರಿಯಿಂದ ಪಡೆಯಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು,
ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 09/2022-23, ದಿನಾಂಕ: 30.12.2022

ಕಾವೇರಿ ನೀರಾವರಿ ನಿಗಮ ನಿಯಮಿತದಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ www.eproc.karnataka.gov.in ಮುಖಾಂತರ ವಿಭಾಗ ವ್ಯಾಪ್ತಿಯಡಿಯಲ್ಲಿ ಕನಕಪುರ, ರಾಮನಗರ ಹಾಗೂ ಚನ್ನಪಟ್ಟಣ ತಾಲ್ಲೂಕಿನ ವಿವಿಧ ಲೆಕ್ಕಶೀರ್ಷಿಕೆಯ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 11.01.2023 ಸಂಜೆ: 4.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.01.2023 ಸಂಜೆ 4.30 ಗಂಟೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.01.2023 ಬೆಳಿಗ್ಗೆ 11.00 ಗಂಟೆ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಎಂ.ಪಿ. ವಿಭಾಗ, ರಾಮನಗರ
ಕಛೇರಿ ದೂ.ಸಂ: 080-27271259, ಇ-ಮೇಲ್: eempdrmgm@gmail.com

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ವಿಜಯಪುರ ವಿಭಾಗ, ವಿಜಯಪುರ

ಸಂಖ್ಯೆ: ಕಕರಸಾ/ವಿವಿ/ಸಂಚಾರ/ವಾಣಿಜ್ಯ/3450/2022-23 ದಿನಾಂಕ:29.12.2022

ಇ-ಟೆಂಡರ್ ಪ್ರಕಟಣೆಗಳ ವಿವರ

1. **ಇ-ಟೆಂಡರ್ ಪ್ರಕಟಣೆ ಸಂಖ್ಯೆ: 713/22/ಇ/09** (ವಿಭಾಗದಲ್ಲಿ ಬಸ್ ನಿಲ್ದಾಣಗಳಲ್ಲಿ ಖಾಲಿ ಜಾಗದಲ್ಲಿ ಆರ್.ಓ ಪ್ಲಾಂಟ್ ಶುದ್ಧೀಕರಿಸಿದ ನೀರಿನ ಮಾರಾಟಕ್ಕಾಗಿ) ಆನ್‌ಲೈನ್ ಟೆಂಡರ್ ಅರ್ಜಿ ಸಲ್ಲಿಕೆಗೆ ಕೊನೆಯ **ದಿನಾಂಕ & ಸಮಯ: 11.01.2023 ಸಾಯಂಕಾಲ 17.30 ವರೆಗೆ.** ಇ-ಟೆಂಡರ್ ತೆರೆಯುವ (ಸಂಧಾನ) **ದಿನಾಂಕ & ಸಮಯ: 13.01.2023 10.00 ಗಂಟೆಯ ನಂತರ.**
2. **ಇ-ಟೆಂಡರ್ ಪ್ರಕಟಣೆ ಸಂಖ್ಯೆ: 713/22/ಇ/10** (ವಿಭಾಗದಲ್ಲಿ ಖಾಲಿ ಇರುವ / ಖಾಲಿಯಾಗಲಿರುವ ಕಟ್ಟಿದ ಮಳಿಗೆ / ಉಪಹಾರ ಗೃಹ / ಖುಲ್ಲಾ ಜಾಗ & ಇತರೆ. ಆನ್‌ಲೈನ್ ಟೆಂಡರ್ ಅರ್ಜಿ ಸಲ್ಲಿಕೆಗೆ ಕೊನೆಯ **ದಿನಾಂಕ & ಸಮಯ: 16.01.2023 ಸಾಯಂಕಾಲ 17.30 ವರೆಗೆ.** ಇ-ಟೆಂಡರ್ ತೆರೆಯುವ (ಸಂಧಾನ) **ದಿನಾಂಕ & ಸಮಯ: 18.01.2023 10.00 ಗಂಟೆಯ ನಂತರ.**

ಇ-ಟೆಂಡರ್ ಕುರಿತು ಹೆಚ್ಚಿನ ಮಾಹಿತಿಗಾಗಿ ವೆಬಸೈಟ್ https://eproc.karnataka.gov.in ಅಥವಾ ವಿಭಾಗೀಯ ಸಾರಿಗೆ ಅಧಿಕಾರಿಯವರ ದೂರವಾಣಿ ಸಂಖ್ಯೆ:7760992252 ಅಥವಾ 9242094221 ಗೆ ಕರೆಮಾಡಿ ಪಡೆಯಬಹುದಾಗಿದೆ ಅಥವಾ ಕ.ಕ.ರ.ಸಾ ನಿಗಮ, ವಿಜಯಪುರ ವಿಭಾಗ, ವಿಭಾಗೀಯ ಕಚೇರಿ (ಸಂಚಾರ ಶಾಖೆ)ಯಲ್ಲಿ ಬಂದು ವಿಚಾರಿಸಬಹುದಾಗಿದೆ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ಕ.ರ.ಸಾ ನಿಗಮ ವಿಜಯಪುರ ವಿಭಾಗ
ವಾಸಾಸಂಇ/ವಿಜಯಪುರ/715/ಎಂಸಿಎ/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
No: EE/UTP/DN/RNR/PB-3/2022-23/ 2091,2092&2093
Dt::29-12-2022

ಅಲ್ಪಾವಧಿ ಟೆಂಡರ್ & ಮರು ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜೀನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಅರ್ಹ ಗುತ್ತಿಗೆದಾರರಿಂದ 4701&2701 ಲೆಕ್ಕ ಶೀರ್ಷಿಕೆಯಡಿಯಲ್ಲಿ **ರೂ.83.13 ಲಕ್ಷ** ಮೊತ್ತದ 3 ಕಾಮಗಾರಿಗಳಿಗೆ ಏಕ & ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಮುಂದಿನಂತಿದೆ. ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಭರ್ತಿ ಮಾಡಿದ ಬಿಡ್‌ಗಳನ್ನು ಅಪ್ ಲೋಡ್ ಮಾಡುವ ಕೊನೆಯ ದಿ:06.01.2023 ಸಂಜೆ 5-30 ರವರೆಗೆ; ಟೆಂಡರ್ ವಿಚಾರಣೆಗೆ ಕೊನೆಯ ದಿ:04.01.2023 ಸಂಜೆ 5-30 ರವರೆಗೆ, ದ್ವಿ-ಲಕೋಟೆ ತಾಂತ್ರಿಕ ಬಿಡ್‌ನ್ನು ದಿ:07.01.2023 ಸಂಜೆ 5-35 ಗಂಟೆಗೆ ಕೆಳ ಸಹಿದಾರರ ಕಛೇರಿಯಲ್ಲಿ ತೆರೆಯಲಾಗುವುದು. ದ್ವಿ-ಲಕೋಟೆ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್‌ನ ಅನುಮೋದನೆಯ ನಂತರ ತೆರೆಯಲಾಗುವುದು. ಸದರಿ ಟೆಂಡರ್‌ಗಳಲ್ಲಿ ಏನಾದರೂ ತಿದ್ದುಪಡಿ ಮಾಡಿದರೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್/ ದಿನಪತ್ರಿಕೆಗಳಲ್ಲಿ ಹಾಕಲಾಗುವುದು.

ಹೆಚ್ಚಿನ ಮಾಹಿತಿಗಾಗಿ (http://eproc.Karnataka.gov.in) ಮತ್ತು ದೂರವಾಣಿ ಸಂಖ್ಯೆ:08373-297332 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಕಾರ್ಯನಿರ್ವಾಹಕ ಇಂಜೀನೀಯರರು,
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು
1558

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
"ವಾರ್ತಾ ಸೌಧ", #17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು-560001.
ದೂರವಾಣಿ: 080-22028078 ಇಮೇಲ್ : dip.films@gmail.com

2020ನೇ ಕ್ಯಾಲೆಂಡರ್ (ದಿನದರ್ಶಿ) ವರ್ಷದ ಕನ್ನಡ ಮತ್ತು ಕರ್ನಾಟಕದ ಇತರೆ ಪ್ರಾದೇಶಿಕ ಭಾಷೆಯ ಗುಣಾತ್ಮಕ ಚಲನಚಿತ್ರಗಳ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಮತ್ತು ಸಹಾಯಧನಕ್ಕಾಗಿ ಆಹ್ವಾನಿಸಲಾಗಿದ್ದ ಆನ್‌ಲೈನ್ ಅರ್ಜಿ ದಿನಾಂಕ ವಿಸ್ತರಣೆ

ದಿನಾಂಕ: 01.12.2022 ರಂದು 2020 ರ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಹಾಗೂ ಸಹಾಯಧನಕ್ಕಾಗಿ ಆನ್‌ಲೈನ್ (sevasindhuservices.karnataka.gov.in ವೆಬ್‌ಸೈಟ್) ಮೂಲಕ ಆಹ್ವಾನಿಸಲಾಗಿದ್ದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಲಾಗಿದ್ದ ಕೊನೆಯ ದಿನಾಂಕವನ್ನು ವಿಸ್ತರಿಸಿದೆ. ಅದರಂತೆ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 10.01.2023 ಸಂಜೆ 5.00 ಗಂಟೆಯವರೆಗೆ ವಿಸ್ತರಿಸಿದೆ. ಅದೇ ರೀತಿ ಭೌತಿಕ ದಾಖಲೆಗಳನ್ನು ಖುದ್ದಾಗಿ ಕಛೇರಿಗೆ ದಿನಾಂಕ: 25.01.2023. ಬುಧವಾರ ಸಂಜೆ 5.00 ಒಳಗಾಗಿ ಸಲ್ಲಿಸಬೇಕು. ಇನ್ನುಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/-
ಆಯುಕ್ತರು
ವಾತಾಸಂಇ/ವಾಪ್ರ/3793/ಆಕಾರ್/2022-23 ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ತಾಲೂಕ ಪಂಚಾಯತ ಸವಣೂರ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ ತಾಲೂಕ ಪಂಚಾಯತ ಕಾರ್ಯಾಲಯ ಸವಣೂರ
ಮೊಬೈಲ್ ನಂ.9480868125 / ಇಮೇಲ್ ಐಡಿ: apodeotsvn@gmail.com

ಅಧಿಸೂಚನೆ ಸಂಖ್ಯೆ:ತಾಪಂಸ ಲೆಶಾ ಇ-ಪ್ರೊ/ಟೆಂಡರ್-01/2022-23 ದಿನಾಂಕ:23-12-2022

ಟೆಂಡರ್ ಆಹ್ವಾನಿಸುವ ಸೂಚನೆ
ದ್ವಿ ಟೆಂಡರ್ ದಾಖಲಾತಿ ವ್ಯವಸ್ಥೆ (ಇ-ಪ್ರೊಕ್ಯೂರಮೆಂಟ್ ಮುಖಾಂತರ)

ಅನಿರ್ಭಂಧಿತ ಅನುದಾನದಡಿಯಲ್ಲಿ ತಾಲೂಕ ಪಂಚಾಯತ ಸವಣೂರಿಂದ ಡೆಸ್ಕ್, ಕ್ರೀಡಾ ಸಾಮಗ್ರಿಗಳು, ಜಮಖಾನ, ಫೈಬರ್ 1 ಚೇರ್, ಸಿಂಗಲ್ ಒಲೆಗಳ ಪೂರೈಕೆಗಾಗಿ ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

ಅನಿರ್ಭಂಧಿತ ಅನುದಾನದಡಿಯಲ್ಲಿ ತಾಲೂಕ ಪಂಚಾಯತ ಸವಣೂರಿಂದ ಡೆಸ್ಕ, ಕ್ರೀಡಾ ಸಾಮಗ್ರಿಗಳು, ಜಮಖಾನ, ಫೈಬರ್ ಚೇರ್, ಸಿಂಗಲ್ ಒಲೆಗಳನ್ನು ಪೂರೈಸಲು ಟೆಂಡರ್ ನಿಗದಿಪಡಿಸಿದಂತೆ ಮೂಲಸೌಕರ್ಯ ಹೊಂದಿರುವ ಆರ್ಹ ಪೂರೈಕೆದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರಮೆಂಟ್ ನಲ್ಲಿ ದ್ವಿ ಟೆಂಡರ್ ದಾಖಲಾತಿ ವ್ಯವಸ್ಥೆಯಡಿ ಟೆಂಡರ್ ಆಹ್ವಾನಿಸಲಾಗಿದೆ.

(1) ಟೆಂಡರ್ ಆಹ್ವಾನ ಪ್ರಾಧಿಕಾರ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಸವಣೂರ. (2) ಟೆಂಡರ್ ಸ್ವೀಕಾರ ಪ್ರಾಧಿಕಾರ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಸವಣೂರ. (3) ಟೆಂಡರ್ ಅಹ್ವಾನ ಸಂಖ್ಯೆ ದಿನಾಂಕ:ಆರ್.ಡಿ.ಪಿ.ಆರ್/ **01/2022-2 ದಿನಾಂಕ: 23-12-2022**. (4) ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ವಿಳಾಸ **https://eproc.karnataka.gov.in.(5)** ಟೆಂಡರ್‌ಗೆ ಇಡಲಾದ ಮೊತ್ತ **35,72,750.00/-. (6)** ಇ.ಎಮ್.ಡಿ. ಮೊತ್ತ **90000/-.** (7) ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ ಮಾಡಲು ಪ್ರಾರಂಭದ ದಿನಾಂಕ **23-12-2022** (8) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಮತ್ತು ಸಮಯ **06/01/2023 @ 16.00PM. (9)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ **10-01-2023 @ 11.00AM. (10)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ ತಾಂತ್ರಿಕ ಬಿಡ್ ನ ಅನುಮೋದನೆಯ ನಂತರ **12/01/2023 @ 11.00AM. (11)** ಟೆಂಡರ್‌ನ್ನು ತೆರೆಯುವ ಸ್ಥಳ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಸವಣೂರ. **(12)** ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಸವಣೂರ. **(13)** ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ಇ-ಮೇಲ್ ಐಡಿ **9480868125, apodeotsvn@gmail.com**

ಸಹಿ/- ಕಾರ್ಯನಿರ್ವಾಹಕ ಅಧಿಕಾರಿ
ವಾ.ಸಾ.ಇ/ಹಾವೇರಿ/459/2022-23/ದೇಶಪಾಂಡೆಪಬ್ಲಿಸಿಟಿ ತಾಲೂಕ ಪಂಚಾಯತ ಸವಣೂರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ - ಯಲಹಂಕ ವಿಭಾಗ, ಎನ್.ಆರ್. ಚೌಕ, ಬೆಂಗಳೂರು - 560002.

ಸಂಖ್ಯೆ: ಕಾಅ/ರಮೂಸೌ/ವೈಎನ್‌ಕೆ/ಟೆಂಡರ್/14/2022-23 ದಿನಾಂಕ: 31-12-2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ)
ಟರ್ನ್‌ಕೀ ಒಂದೇ ಮೊತ್ತದ ನಿಗದಿತ ಬೆಲೆಯ ವ್ಯತ್ಯಯರಹಿತ ಗುತ್ತಿಗೆ ಆಧಾರದಲ್ಲಿ (ದ್ವಿ-ಲಕೋಟೆ ಪದ್ಧತಿ) (ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರವು ಈ ಕೆಳಗೆ ಪಟ್ಟಿ ಮಾಡಿರುವ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ ದಿನಾಂಕ: 20-09-2019 ರಂದು ಜಿ.ಓ. ಸಂಖ್ಯೆ. ಯುಡಿಡಿ 375 ಎಂಎನ್‌ವೈ 2018 ರ ಅನುಸಾರ ತಾತ್ವಿಕ ಅನಮೋದನೆ ನೀಡಿದೆ ಮತ್ತು ಬಜೆಟ್ ಮಂಜೂರು ಮಾಡಿದೆ.
ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲ ಸೌಕರ್ಯ-ಯಲಹಂಕ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಬಿಬಿಎಂಪಿಯಿಂದ ನಿಗದಿಪಡಿಸಿದ ನಿಯತಾಂಕಗಳ ಆಧಾರದಲ್ಲಿ ಟೆಂಡರ್‌ದಾರರ ಸ್ವಂತ ವಿನ್ಯಾಸ ಆಧರಿಸಿದ ಟರ್ನ್‌ಕೀ ಮೇರೆ, ಒಂದೇ ಮೊತ್ತದ, ನಿಗದಿತ ಬೆಲೆಯ ವ್ಯತ್ಯಯ ರಹಿತ ಆಧಾರದಲ್ಲಿ (ಪರ್ಯಾಯ ಪ್ರಸ್ತಾವನೆಗೆ ಅನುಮತಿಸಲಾಗಿದೆ ಮತ್ತು ಒಂದಕ್ಕೆ ಮಾತ್ರ ಸೀಮಿತವಾಗಿರುತ್ತದೆ) ಈ ಕೆಳಗೆ ತಿಳಿಸಿರುವ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	ಕೆಂಪೇಗೌಡ ವೃತ್ತ ಹಳೇ ಯಲಹಂಕ ಇಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ.	6728.14	67.28

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in** ನಲ್ಲಿ ದಿನಾಂಕ: **31-12-2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **09-01-2023 ರಂದು 15.00 ಗಂಟೆವರೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ, ಯಲಹಂಕ ವಿಭಾಗ, ಬಿಬಿಎಂಪಿ** ಇಲ್ಲಿ. 3) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **09-01-2023 ರಂದು 16.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ (ರಸ್ತೆ ಮೂಲ ಸೌಕರ್ಯ) ಇಲ್ಲಿ ನಡೆಯುವುದು.** 4) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **21-01-2023 ರಂದು 17.30 ಗಂಟೆಗೆ ಅಥವಾ ಮುಂಚಿತವಾಗಿ.** 5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **23-01-2023 ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, (ರಸ್ತೆ ಮೂಲ ಸೌಕರ್ಯ - ಯಲಹಂಕ ವಿಭಾಗ) ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲ ಸೌಕರ್ಯ-ಯಲಹಂಕ ವಿಭಾಗ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.

KARNATAKA GOVERNMENT SECRETARIAT
Additional Chief Secretary to Government
Finance Department
Vidhana Soudha, Bengaluru-560001.

No.: FD/05/BMB/2022 Date: 29-12-2022

KARNATAKA GOVT. STOCK (SECURITIES)

1. **Aggregate Amount: Total Rs.4000 crore [(Rs.2000 crore (2 Year Tenure) and Rs.2000 crore (10 Year Tenure)]**
2. **Method of Issue : By Auction, through PDO, RBI, Mumbai (Fort)**
3. **Date of Auction : January 03, 2023**

Government of Karnataka invites subscription to the above securities. Copies of the Notification and Application forms may be obtained from PDO, RBI, Bangalore. Non-competitive bidding facility has been introduced by RBI to encourage participation of retail investors. The Government stock upto 10% of the notified amount of the sale will be allotted to eligible individuals and institutions. Sample Tender Forms and the revised scheme of Non-competitive bidding facility is available on the website **www.rbi.org.in**

Sd/- (Dr. Ekroop Caur),
Secretary to Government, (Budget & Resources)
Finance Department.
DIPR/CP/RO3777/AAPL/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರರವರ ಕಛೇರಿ, ಕನೀನಿನಿ,
ಶಿಗ್ಗಾಂವ ಏತ ನೀರಾವರಿ ವಿಭಾಗ, ಕೆ.ಸಿ.ಡಿ. ವೃತ್ತ , ಗಣಪತಿ ದೇವಸ್ಥಾನದ ಹಿಂದುಗಡೆ,
ದಾಸನಕೊಪ್ಪ ಮುಖ್ಯ ರಸ್ತೆ , ಧಾರವಾಡ-580 001.
ಫೋನ: 0836-2461218 ಇ-ಮೇಲ್: eesliddwd@gmail.com

No.KNN/SLID/DWD/PB-1/Savanur-Additional/Tender/2022-23/1395 Dt: 29-12-2022

ಅಲ್ಪಾವಧಿ ಟೆಂಡರ್ ಪ್ರಕಟಣೆ(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ಶಿಗ್ಗಾಂವ ಏತ ನೀರಾವರಿ ವಿಭಾಗ ಧಾರವಾಡ ರವರು, ಅರ್ಹ ಸಿವಿಲ್ ನೋಂದಾಯಿತ ಗುತ್ತಿಗೆದಾರರಿಂದ **“Filling up of Additional 14 Nos. and Augmentation to 3 Nos. of MI/ZP Tanks under DC-4 of Savanur Lift Irrigation Scheme including Operation & Maintenance for a period of 5 years on Turn-key Basis"** (ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ.3048.78 ಲಕ್ಷಗಳಿಗೆ) ದ್ವಿ-ಲಕೋಟೆ ಪದ್ಧತಿಯಲ್ಲಿ ಟರ್ನಕೀ ಆಧಾರದ ಮುಖಾಂತರ ಕಾಮಗಾರಿಯನ್ನು ನಿರ್ವಹಿಸಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಗಳನ್ನು ಇ-ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (**http://eproc.karnataka.gov.in**) ಮುಖಾಂತರವೇ **ದಿನಾಂಕ: 09/01/2023 ಬೆಳಿಗ್ಗೆ 11.00** ರಿಂದ ಡೌನಲೋಡ್ ಮಾಡಿಕೊಂಡು **ದಿನಾಂಕ:21/01/2023 ರ ಸಂಜೆ 4.00 ಘಂಟೆ**ವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ ಪೂರ್ವಭಾವಿ ಸಭೆಯನ್ನು **ದಿನಾಂಕ:13/01/2023 ರಂದು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ** ಮುಖ್ಯ ಇಂಜನೀಯರರು, ಕನೀನಿನಿ, ಮಲಪ್ರಭಾ ಯೋಜನಾ ವಲಯ , ಧಾರವಾಡ ಇವರ ಕಚೇರಿಯಲ್ಲಿ ಜರುಗಿಸಲಾಗುವುದು. ತಾಂತ್ರಿಕ ಟೆಂಡರಗಳನ್ನು **ದಿನಾಂಕ:23/01/2023 ರಂದು ಬೆಳಿಗ್ಗೆ 11.00 ಘಂಟೆಗೆ** ಹಾಗೂ ಆರ್ಥಿಕ ಟೆಂಡರ್‌ಗಳನ್ನು **ದಿನಾಂಕ:27/01/2023 ರಂದು ಬೆಳಿಗ್ಗೆ 11.00 ಘಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಟೆಂಡರನಲ್ಲಿ ಯಾವುದೇ ಬದಲಾವಣೆ/ತಿದ್ದುಪಡಿಗಳು ಇದ್ದಲ್ಲಿ ವಿದ್ಯುನ್ಮಾನ ಸಂಗ್ರಹಣೆ **(e-Procurement portal)** ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/-(ಎಸ್.ಕೆ.ಕುಲಕರ್ಣಿ) ಕಾರ್ಯಪಾಲಕ ಇಂಜನಿಯರ್,
ಕನೀನಿನಿ ಶಿಗ್ಗಾಂವ ಏತ ನೀರಾವರಿ ವಿಭಾಗ,
ವಾ.ಸಾ.ಇ/ಧಾ/916/2022-23/ದೇಶಪಾಂಡೆಪಬ್ಲಿಸಿಟಿ ಧಾರವಾಡ

ಸುವರ್ಣ ಕರ್ನಾಟಕ
ನಗರ ಸಭೆ ಕಾರ್ಯಾಲಯ, ಬಾಗಲಕೋಟೆ-587103
Website:www.bagalkotecity.gov.in Post Box No.19
STD:08354-235011 E-mailD: itstaff_ulb_bagalkote@yahoo.co.in.
ಜಿಲ್ಲಾ:ಬಾಗಲಕೋಟೆ) (ಕರ್ನಾಟಕ ರಾಜ್ಯ

ಕ್ರಸಂ: ನಸಬಾ/ಲೋ.ವಿ/ TND/2022-23/1217 ದಿನಾಂಕ:31-12-2022

ಟೆಂಡರ್ ಪ್ರಕಟಣೆ E-Proceurement portal ಮುಖಾಂತರ
e-protal: https://eproc.karnataka.gov.in

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ನಗರಸಭೆ ವ್ಯಾಪ್ತಿಯಲ್ಲಿ ಸನ್ 2022-23ನೇ ಸಾಲಿನ 15ನೇ ಹಣಕಾಸು ಆಯೋಗದ ಟೈಡ್ ಅನುದಾನದಲ್ಲಿ ವಿವಿಧ ವಾಹನ ಮತ್ತು ಮಶೀನಗಳನ್ನು ಪೂರೈಸಲು E-Proceurement portal ನಲ್ಲಿ ನೋಂದಾಯಿತ ಅಧಿಕೃತ ಸರಬರಾಜುದಾರರಿಂದ Standard Tender Documents Kw-1&2 ರಂತೆ ಟೆಂಡರನ್ನು ಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿ ರುತ್ತದೆ

DMA/2022-23/OW/WORK_INDENT144615
DMA/2022-23/OW/WORK_INDENT144616
DMA/2022-23/OW/WORK_INDENT144617
ಹೀಗೆ ರೂ : 61.00 ಲಕ್ಷದ ಕಾಮಗಾರಿ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ದಲ್ಲಿ ಅಥವಾ ಈ ಕಛೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.

1) Last date for submission of bid through E. procurement portal before:10-01-2023 At 16.30 hours. 2) Opening of Technical and Financial bid is on or after : 12-01-2023 at 11.30 AM

ಸಹಿ/-ಸಹಾಯಕ ಕಾರ್ಯಪಾಲಕ ಅಭಿಯಂತರರು
ನಗರಸಭೆ ಬಾಗಲಕೋಟೆ
ಸಹಿ/-ಹಿರಿಯ ಆರೋಗ್ಯ ನಿರೀಕ್ಷಕರು
ನಗರಸಭೆ ಬಾಗಲಕೋಟೆ
ಸಹಿ/-ಪೌರಾಯುಕ್ತರು
ನಗರಸಭೆ ಬಾಗಲಕೋಟೆ
DIPR/BGK/RO-NO-742/MCA/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-40.

ಸಂಖ್ಯೆ: ಕಾಪಾಅ(ಗೋರಾನ)/ಟೆಂಡರ್/ಜಿಎಲ್-29/2022-23 ದಿನಾಂಕ: 30.12.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
	ದ್ವಿಲಕೋಟೆ ಕಾಮಗಾರಿಗಳು		
1.	ವಲಯ ಆಯುಕ್ತರು ಪಶ್ಚಿಮ ವಿಭಾಗಕ್ಕೆ ಕಚೇರಿ ಹೊಸ ಕಟ್ಟಡ ನಿರ್ಮಾಣ ಮಾಡುವುದು.	85.00	1,70,000
2.	ವಾರ್ಡ್ ಸಂಖ್ಯೆ-151 ಮಾರುತಿಮಂದಿರದ ಸಂಗೊಳ್ಳಿ ರಾಯಣ್ಣ ಡಯಾಲಿಸಿಸ್ ಕೇಂದ್ರಕ್ಕೆ 11 ಡಯಾಲಿಸಿಸ್ ಉಪಕರಣಗಳು ಮತ್ತು ಇತರೆ ಸಲಕರಣೆಗಳನ್ನು ಒದಗಿಸುವುದು.	95.00	1,90,000
3.	ವಾರ್ಡ್ ಸಂಖ್ಯೆ-151 ಮಾರುತಿಮಂದಿರದ ಸಂಗೊಳ್ಳಿ ರಾಯಣ್ಣ ಆಟದ ಮೈದಾನಕ್ಕೆ ಸುಧಾರಣೆ ಮತ್ತು ಇತರೆ ಕಾಮಗಾರಿಗಳನ್ನು ಮಾಡುವುದು.	100.00	2,00,000
4.	ವಾರ್ಡ್ ಸಂಖ್ಯೆ-150 ಮಾರೇನಹಳ್ಳಿಯಲ್ಲಿ ಉದ್ಯಾನವನಗಳು ಮತ್ತು ನಾಮಫಲಕಗಳಿಗೆ ಸುಧಾರಣೆಗಳನ್ನು ಮಾಡುವುದು.	100.00	2,00,000
5.	ವಾರ್ಡ್ ಸಂಖ್ಯೆ-150 ಮಾರೇನಹಳ್ಳಿಯ ಬೃ.ಬೆಂ.ಮ.ಪಾಲಿಕೆ ಕಟ್ಟಡಗಳು ಮತ್ತು ಪ್ರಾರ್ಥನಾ ಮಂದಿರಕ್ಕೆ ಹೆಚ್ಚುವರಿ ಕಾಮಗಾರಿ-ಗಳನ್ನು ಮಾಡುವುದು.	100.00	2,00,000
6.	ವಾರ್ಡ್ ಸಂಖ್ಯೆ-148 ಗೋವಿಂದರಾಜನಗರದ 4ನೇ ಮಹಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆಚ್ಚುವರಿ ಕಾಮಗಾರಿಗಳನ್ನು ಮಾಡುವುದು.	120.00	1,80,000
7.	ವಾರ್ಡ್ ಸಂಖ್ಯೆ-146 ಡಾ॥ರಾಜ್‌ಕುಮಾರ್ ವಾರ್ಡ್‌ನಲ್ಲಿ ಹೊಸ ವಾರ್ಡ್ ಕಚೇರಿ ನಿರ್ಮಾಣ ಮಾಡುವುದು.	150.00	2,25,000
8.	ವಾರ್ಡ್ ಸಂಖ್ಯೆ-147 ಎಡಿ ಹಳ್ಳಿ ಧ್ಯಾನಮಂದಿರ-ದಲ್ಲಿ ಹೆಚ್ಚುವರಿ ಕಾಮಗಾರಿಗಳನ್ನು ಮಾಡುವುದು.	150.00	2,25,000
9.	ವಾರ್ಡ್ ಸಂಖ್ಯೆ-149 ಕಾವೇರಿಪುರ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಹೆಚ್ಚುವರಿ ಕಾಮಗಾರಿಗಳು ಮತ್ತು ಬಾಲಯ್ಯನಕೆರೆ ಕೆರೆಗೆ ಸಿಸಿ ಲೈನಿಂಗ್ ಕಾಮಗಾರಿಗಳನ್ನು ಮಾಡುವುದು.	200.00	3,00,000
10.	ವಾರ್ಡ್ ಸಂಖ್ಯೆ-152 ಮೂಡಲಪಾಳ್ಯದ ವ್ಯಾಪ್ತಿಯಲ್ಲಿ ಸಿಸಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವುದು.	200.00	3,00,000
11.	ವಾರ್ಡ್ ಸಂಖ್ಯೆ-153 ಬಿಡಿಎ ಬಡಾವಣೆ, ನಾಗರಭಾವಿ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಪಾದಚಾರಿಮಾರ್ಗಗಳು, ಚರಂಡಿಗಳಿಗೆ ಸುಧಾರಣೆ ಹಾಗೂ ಇತರೆ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು.	300.00	3,00,000
12.	ವಾರ್ಡ್ ಸಂಖ್ಯೆ-151 ಮಾರುತಿಮಂದಿರದ ಸಂಗೊಳ್ಳಿ ರಾಯಣ್ಣ ಡಯಾಲಿಸಿಸ್ ಕೇಂದ್ರದ ಕಟ್ಟಡ ಮತ್ತು ಆಟದ ಮೈದಾನದಲ್ಲಿ ಹೆಚ್ಚುವರಿ ಕಾಮಗಾರಿಗಳನ್ನು ಮಾಡುವುದು.	500.00	5,00,000

ಟೆಂಡರ್ ವೇಳಾಪಟ್ಟಿ: (1) ಬಿಡ್ -ಪೂರ್ವಭಾವಿ ಸಭೆಯನ್ನು ದಿನಾಂಕ **04.01.2023**ರ ಮಧ್ಯಾಹ್ನ **3:30** ಗಂಟೆಗೆ ನಡೆಸಲಾಗುವುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ **10.01.2023**ರ ಸಂಜೆ **4:00** ಗಂಟೆಯವರೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **11.01.2023**ರ ಸಂಜೆ **4:30** ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560001. ಫೋನ್ ಸಂ. 080-22265383
ವೆಬ್‌ಸೈಟ್: www.kiadb.in

ನಂ.ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-39/16713/2022-23 ದಿನಾಂಕ: 30.12.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯ ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿನಲ್ಲಿ ನೋಂದಾಯಿತ ದರ್ಜೆ 1 (ಸಿವಿಲ್) ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಡಿ ಟೆಂಡರನ್ನು ಆಹ್ವಾನಿಸಿದೆ.
ಕಾಮಗಾರಿಯ ಹೆಸರು : ಬಳ್ಳಾರಿ ಜಿಲ್ಲೆಯ ಕುಡುತಿನಿ ತಾಲ್ಲೂಕಿನ ಎಎಂಐಎಲ್ ಬ್ಲಾಕ್ ನಲ್ಲಿ ಹರಗಿನದೋಣಿ ಕೈಗಾರಿಕಾ ಪ್ರದೇಶದ ಕುಡುತಿನಿ ಗ್ರಾಮ ಬ್ಲಾಕ್ ನಲ್ಲಿ ಆರ್ ಸಿಸಿ ಒಳಚರಂಡಿ, ಡಕ್ಟ್ ಗಳು, ಕಲ್ವರ್ಟ್‌ಗಳು, ಆಂತರಿಕ ನೀರು ಸರಬರಾಜು ಮಾರ್ಗಗಳು ಇತ್ಯಾದಿಗಳನ್ನು ಒಳಗೊಂಡಿಂತೆ 30 ಮೀ ಅಗಲ & 18 ಮೀ ಅಗಲದ ಡಾಂಬರೀಕರಣ ರಸ್ತೆಗಳ ನಿರ್ಮಾಣ ಸೇರಿದಂತೆ ಕೈಗಾರಿಕಾ ಬಡಾವಣೆಯ ರಚನೆ ಮಾಡುವ ಕಾಮಗಾರಿ.
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯ : 16.01.2023, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-2
ವಾ.ಸಾ.ಸಂ.ಇ/ವಾಪ್ರ/3806/ಆಕಾರ್/22-23 ಕೆ.ಐ.ಎ.ಡಿ.ಬಿ, ಬೆಂಗಳೂರು.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001. ದೂರವಾಣಿ ಸಂ: 080-29565353, 29566556, 29604556
ಇ-ಮೇಲ್: splocaima21@gmail.com

ಸಂಖ್ಯೆ: SPLOCA/ADM/GEN/80/2022-23 ದಿನಾಂಕ: 30.12.2022

ಪ್ರಕಟಣೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅದಿನಿಯಮ, 2004ರ ಅಡಿಯಲ್ಲಿ ಈ ಕೆಳಕಂಡ ದೂಷಿತ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸುವ ಸಲುವಾಗಿ ಸಕ್ಷಮ ಪ್ರಾಧಿಕಾರವನ್ನು ನೇಮಕ ಮಾಡಲಾಗಿದೆ.

ಕ್ರ.ಸಂ.	ದೂಷಿತ ಕಂಪನಿಗಳ ಹೆಸರು
1	Ahana Souhardha Credit Co-operative Society Limited, Vijayanagara District, Hospete.
2	Al-Falah Consumer Needs & Al-Fatah Distributors Private Limited, Kausernagar.
3	M/s.Barak Investment Consultant Pvt. Ltd.,
4	Chanakya Finance Company.
5	Himmel Advisory.
6	Homigo Reality Pvt.Ltd.
7	Janasneha Real Wealth Solutions Pvt Ltd.
8	Karnataka Co-operative Spciety, Athani.
9	Market Trends Pvt Ltd.,
10	Spice India Group (Akash Sruti Spice India Pvt. Ltd).
11	Sri Karuppuswamy Promoters.

ಸದರಿ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸುವ ನಿಟ್ಟಿನಲ್ಲಿ, ಸದರಿ ಸಂಸ್ಥೆ ಹಾಗೂ ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಹೆಸರಿನಲ್ಲಿ ಇರುವ ಆಸ್ತಿಗಳನ್ನು ಪತ್ತೆ ಹಚ್ಚಿ ಜಪ್ತಿ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ, ಸಾರ್ವಜನಿಕರು ಮೇಲ್ಕಂಡ ದೂಷಿತ ಸಂಸ್ಥೆಯ ಹೆಸರಿನಲ್ಲಿರುವ ಆಸ್ತಿಗಳ ವಿವರಗಳು, ಹಾಗೆಯೇ ಸದರಿ ಸಂಸ್ಥೆಯ ನಿರ್ದೇಶಕರು, ಪ್ರವರ್ತಕರು, ನಿರ್ವಾಹಕರುಗಳ ಹೆಸರಿನಲ್ಲಿರುವ ಸ್ವತ್ತುಗಳ ವಿವರ ತಿಳಿದಿದ್ದಲ್ಲಿ ಈ ಪ್ರಾಧಿಕಾರಕ್ಕೆ, ತಿಳಿಸಲು ಈ ಮೂಲಕ ಕೋರಿದೆ. ಮಾಹಿತಿಯನ್ನು ಮೇಲ್ಕಂಡ ವಿಳಾಸ ಒದಗಿಸಬೇಕು.

ಸಹಿ/- ಜಂಟಿ ಕಾರ್ಯದರ್ಶಿ,
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಛೇರಿ
(ಐ.ಎಂ.ಎ. ಹಾಗೂ ಇತರೆ ಕಂಪನಿ ವಂಚನೆ ಪ್ರಕರಣ)
ವಾಸಾಸಂಇ/ವಾಪ್ರ/ಜಿಎ/3821/2022-23 ಬೆಂಗಳೂರು

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಎಸ್.ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು.

1.	ಟೆಂಡರ್ ಅರ್ಜಿಯನ್ನು ಸ್ವೀಕರಿಸುವ ಪ್ರಾಧಿಕಾರ	ಉಪ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬೆಂಗಳೂರು.
2.	ಟೆಂಡರ್ ಉಲ್ಲೇಖ ಮತ್ತು ಪ್ರಕಟಣೆ	ಟೆಂಡರ್ ನೋಟಿಫಿಕೇಷನ್ ಸಂಖ್ಯೆ: ದಿನಾಂಕ:ಬೆ.ನ.ಜಿ.ಪಂ/ಅಭಿ(5)ಆರೋಗ್ಯ/ಸಿ.ಅರ್- 08/2022-23 ದಿನಾಂಕ: 31-12-2022
3.	ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ	02-01-2023 ಸಮಯ 11.00 ಪೂರ್ವಾಹ್ನ
4.	ಟೆಂಡರ್ ಹೆಸರು	ಬೆಂಗಳೂರು ನಗರ ಜಿಲ್ಲೆಯ ಪ್ರತಿ 86 ಗ್ರಾಮ ಪಂಚಾಯತ್‌ಗಳಿಗೆ ಆರೋಗ್ಯ ಕಿಟ್ ಮತ್ತು ವೈದ್ಯಕೀಯ ಸಲಕರಣೆಗಳ ಪೂರೈಕೆ (3-ಕರೆ) ಅಲ್ಪಾವಧಿ ಟೆಂಡರ್
5.	ಮಾದರಿ ಕೀಟ್ ಸಲ್ಲಿಸುವ ದಿನಾಂಕ	ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್‌ದಾರರು 05-01-2023 ರಂದು ಸಮಯ ಪೂರ್ವಾಹ್ನ 10.30ಗೆ ಮಾದರಿ ಉಪಕರಣಗಳನ್ನು ಸಲ್ಲಿಸಬೇಕು ಮತ್ತು ಬೆಂಗಳೂರು ನಗರ ಡಿಎಚ್‌ಓ-ಆರ್‌ಸಿಎಚ್‌ಓ ಇವರಿಂದ ದೃಢೀಕರಣ ಪತ್ರವನ್ನು ಪಡೆಯಬೇಕು. ಇಲ್ಲದಿದ್ದರೆ ಬಿಡ್ಡದಾರರು ತಾಂತ್ರಿಕ ಬಿಡ್ ಅನ್ನು ತಿರಸ್ಕರಿಸಲಾಗುತ್ತದೆ.
6.	ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ	09-01-2023 ಸಮಯ 4.00 ಸಂಜೆ
7.	ಟೆಂಡರ್ ತೆರೆಯುವ ದಿನಾಂಕ	
	1) ಪೂರ್ವ ಬಿಡ್ ಸಭೆ	04-01-2023 ಸಂಜೆ:3.00
	2) ತಾಂತ್ರಿಕ ಲಕೋಟೆ	10-01-2023 ಪೂರ್ವಾಹ್ನ:11.00
	2) ಆರ್ಥಿಕ ಲಕೋಟೆ	11-01-2023 ಪೂರ್ವಾಹ್ನ:11.00
8.	ಇ.ಎಂ.ಡಿ. ಮೊತ್ತ	ರೂ. 51600.00/-
9.	ಟೆಂಡರ್ ಡಾಕ್ಯೂಮೆಂಟ್ ಲಭ್ಯವಾಗುವ ವೆಬ್‌ಸೈಟ್‌ನ ವಿಳಾಸ	https://eproc.karnataka.gov.in
10.	ಹೆಚ್ಚಿನ ಮಾಹಿತಿಗಾಗಿ	ಉಪ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬೆಂಗಳೂರು.

ಸಹಿ/-
ಉಪ ಕಾರ್ಯದರ್ಶಿ
ವಾಸಾಸಂಇ/ವಾಪ್ರ/3811/ಅಲಕ್‌ನಂದ/2022-23 ಬೆಂಗಳೂರು ನಗರ ಜಿಲ್ಲಾ ಪಂಚಾಯಿತ್, ಬೆಂಗಳೂರು

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001. ದೂರವಾಣಿ ಸಂ: 080-29565353, 29566556, 29604556
ಇ-ಮೇಲ್: splocaima21@gmail.com

ಸಂಖ್ಯೆ: SPLOCA/ADM/74/2022-23 ದಿನಾಂಕ: 22.12.2022

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

Special Officer and Competent Authority IMA & Other KPID scam cases Invites tender from interested agencies/ firms/ companies/printing press to create/develop formats, applications, documents, books and provide printing services for the same to the office of SPLOCA and all stakeholders of SPLOCA as mentioned in the tender dcoument. The Interested may submit the proposal as detailed in the tender document through E-procurement portal http://www.eproc.karnataka.gov.in on or before specified date. Approximate value of tender: **Rs. 30/- lakhs**.
Calendar of events:
Commencement of download of e-Tender Form from website https://eproc.Karnataka.gov.in-28.12.2022 onwards. Last Date for Queries on or before: **07.01.2023 upto 5:00 p.m.** Pre-bid Meeting: **09.01.2023 at 11:00 a.m.** Last Date for Uploading of Tender in e-procurement platform on or before: **10.01.2023 upto 5:00 p.m.** Opening of Technical Bid: **12.01.2023 till 12:00 p.m.** Submission of Samples: **17.01.2023 at 11:00 a.m.** Opening of Financial Bid: **Will be intimated.**
Place for any query: Above Office Address.

ಸಹಿ/- ಜಂಟಿ ಕಾರ್ಯದರ್ಶಿ,
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಯವರ ಕಛೇರಿ
(ಐ.ಎಂ.ಎ. ಹಾಗೂ ಇತರೆ ಕಂಪನಿ ವಂಚನೆ ಪ್ರಕರಣ)
ವಾಸಾಸಂಇ/ವಾಪ್ರ/ಜಿಎ/3820/2022-23 ಬೆಂಗಳೂರು

ಬೆಂಗಳೂರಿನ ಅತಿ ಉದ್ದದ ಸುರಂಗ ಮಾರ್ಗ: 2024ರ ಅಂತ್ಯಕ್ಕೆ ಕಾರ್ಯಾರಂಭ

ಗೊಟ್ಟಿಗೆರೆ–ನಾಗವಾರ ಮೆಟ್ರೊ: ಬೇಕಿನ್ನು 2 ವರ್ಷ

• ವಿಜಯಕುಮಾರ್ ಎಸ್.ಕೆ.

21.25 ಕಿ.ಮೀ. ಗೊಟ್ಟಿಗೆರೆ–ನಾಗವಾರ ಮಾರ್ಗದ ಉದ್ದ

13.9 ಕಿ.ಮೀ (ಡೈರಿ ಸರ್ಕಲ್–ನಾಗವಾರ) ಸುರಂಗ ಮಾರ್ಗದ ಉದ್ದ

₹11,500 ಕೋಟಿ ಅಂದಾಜು ವೆಚ್ಚ

ಬೆಂಗಳೂರು: ನಗರದ ಅತಿ ಉದ್ದದ ಸುರಂಗ ಮಾರ್ಗ ಒಳಗೊಂಡ ಮೆಟ್ರೊ ರೈಲು ಮಾರ್ಗ ಎಂದರೆ ಗೊಟ್ಟಿಗೆರೆ–ನಾಗವಾರ ಮಾರ್ಗ. ಸುರಂಗ ಕೊರೆಯುವ ಸವಾಲಿನ ಕೆಲಸ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಈ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ಎರಡು ವರ್ಷ ಬೇಕಿದೆ.

ಒಟ್ಟಾರೆ 21.25 ಕಿಲೋ ಮೀಟರ್ ಉದ್ದದ ಪಿಂಕ್ ಮಾರ್ಗದಲ್ಲಿ ಗೊಟ್ಟಿಗೆರೆ–ಡೇರಿ ವೃತ್ತದ ತನಕ ಮಾತ್ರ ಎಲಿವೇಟೆಡ್(ಎತ್ತರಿಸಿದ) ಮಾರ್ಗ ನಿರ್ಮಾಣವಾಗಲಿದೆ. ಉಳಿದ 13.9 ಕಿಲೋ ಮೀಟರ್(ಡೇರಿ ವೃತ್ತ–ನಾಗವಾರ) ಸುರಂಗ ಮಾರ್ಗವೇ ಇದ್ದು, ನಾಲ್ಕು ಪ್ಯಾಕೇಜ್‌ಗಳಲ್ಲಿ ಕಾಮಗಾರಿ ನಡೆಯುತ್ತಿದೆ.

ನಮ್ಮ ಮೆಟ್ರೊ ಮುಂದೇನು? 5

ಡೇರಿ ವೃತ್ತದಿಂದ ನಾಗವಾರ ರಾಷ್ಟ್ರೀಯ ಮಿಲಿಟರಿ ಶಾಲೆ ತನಕದ ಮೊದಲ ಪ್ಯಾಕೇಜ್‌ನಲ್ಲಿ ಸುರಂಗ ಕಾಮಗಾರಿಯನ್ನು ಎರಡು(ರುದ್ರ, ವಾಮಿಕಾ, ವರದಾ) ಟಿಬಿಎಂಗಳು(ಟನಲ್ ಬೋರಿಂಗ್ ಮಷಿನ್) ನಿರ್ವಹಿಸುತ್ತಿದ್ದು, ಶೇ 56ರಷ್ಟು ಪೂರ್ಣಗೊಂಡಿದೆ. ರಾಷ್ಟ್ರೀಯ ಮಿಲಿಟರಿ ಶಾಲೆಯಿಂದ ಶಿವಾಜಿನಗರ ತನಕದ ಕಾಮಗಾರಿಯನ್ನು ಎರಡು ಟಿಬಿಎಂಗಳು(ಲಾವಿ, ಅವನಿ) ನಿರ್ವಹಿಸುತ್ತಿದ್ದು, ಶೇ 76ರಷ್ಟು ಪೂರ್ಣಗೊಂಡಿದೆ.

ಶಿವಾಜಿನಗರದಿಂದ ಟ್ಯಾನರಿ ರಸ್ತೆ ತನಕದ ಕಾಮಗಾರಿಯನ್ನು ಎರಡು ಟಿಬಿಎಂಗಳು(ಉರ್ಜಾ, ವಿಂಧ್ಯಾ) ನಿರ್ವಹಿಸುತ್ತಿದ್ದು, ಶೇ 73ರಷ್ಟು ಪೂರ್ಣಗೊಂಡಿದೆ. ಟ್ಯಾನರಿ ರಸ್ತೆಯಿಂದ ನಾಗವಾರ ತನಕ ಎರಡು ಟಿಬಿಎಂಗಳು (ಭದ್ರ, ತುಂಗಾ) ಸುರಂಗ ಕೊರೆಯುತ್ತಿದ್ದು, ಶೇ 36ರಷ್ಟು ಕಾಮಗಾರಿ ಪೂರ್ಣಗೊಂಡಿದೆ. 11 ನಿಲ್ದಾಣಗಳು ನೆಲದಡಿಯಲ್ಲೇ ನಿರ್ಮಾಣವಾಗುತ್ತಿದ್ದು, ಕಾಮಗಾರಿ ಭರದಿಂದ ಸಾಗಿದೆ. ಜಯದೇವ ಜಂಕ್ಷನ್, ಎಂ.ಜಿ.ರಸ್ತೆ ಮತ್ತು ನಾಗವಾರದಲ್ಲಿ ಇಂಟರ್ ಚೇಂಜ್ ನಿಲ್ದಾಣಗಳು ನಿರ್ಮಾಣವಾಗುವುದು ಈ ಮಾರ್ಗದ ಮತ್ತೊಂದು ವಿಶೇಷ.

ಗೊಟ್ಟಿಗೆರೆಯಿಂದ ನಾಗವಾರಕ್ಕೆ ಸಂಪರ್ಕಿಸುವ ಈ ಮಾರ್ಗವು ದಕ್ಷಿಣ ಬೆಂಗಳೂರಿನಿಂದ ವಿಮಾನ ನಿಲ್ದಾಣಕ್ಕೆ ತೆರಳುವ ಮತ್ತು ಪ್ರಮುಖ ವಾಣಿಜ್ಯ ಕೇಂದ್ರಗಳನ್ನು ಸಂಪರ್ಕಿಸುವ ಮಾರ್ಗವಾಗಿದೆ. ಎತ್ತರಿಸಿದ ಕಾಮಗಾರಿ ಬೇಗ ಪೂರ್ಣಗೊಳ್ಳಲಿದ್ದು, ಸುರಂಗ ಮಾರ್ಗದ ಕಾಮಗಾರಿ 2024ರ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಅಂದಾಜಿಸಿದ್ದಾರೆ.

ಶಿವಾಜಿನಗರದಲ್ಲಿ ಮೆಟ್ರೊ ರೈಲು ನಿಲ್ದಾಣದ ಕಾಮಗಾರಿ ಪ್ರಗತಿಯಲ್ಲಿದೆ

–ಪ್ರಜಾವಾಣಿ ಚಿತ್ರಗಳು/ರಂಜು ಪಿ.

ವಿಮಾನ ನಿಲ್ದಾಣ ಮಾರ್ಗಕ್ಕೆ ಸಂಪರ್ಕ

ನಗರದ ಕೇಂದ್ರ ಭಾಗದಿಂದ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮೆಟ್ರೊ ರೈಲು ಮಾರ್ಗ ಇದಾಗಲಿದೆ.

ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರ, ಹೆಬ್ಬಾಳ ಮಾರ್ಗವಾಗಿ ವಿಮಾನ ನಿಲ್ದಾಣ ತಲುಪುವ ನೀಲಿ ಮಾರ್ಗಕ್ಕೆ ನಾಗವಾರ ಜಂಕ್ಷನ್‌ನಲ್ಲಿ ಈ ಮಾರ್ಗ ಸೇರ್ಪಡೆಯಾಗಲಿದೆ. ಪ್ರಯಾಣಿಕರು ಈ ನಿಲ್ದಾಣದಲ್ಲಿ ಇಳಿದು ವಿಮಾನ ನಿಲ್ದಾಣಕ್ಕೆ ಪ್ರಯಾಣಿಸಬಹುದಾಗಿದೆ.

ಮೂರು ಇಂಟರ್ ಚೇಂಜ್ ನಿಲ್ದಾಣ

ಎಂ.ಜಿ.ರಸ್ತೆ, ಶಿವಾಜಿನಗರ, ಪಾಟರಿಟೌನ್, ಟ್ಯಾನರಿ ರಸ್ತೆ ಮೂಲಕ ಹಾದು ಹೋಗಲಿದ್ದು, ಅತ್ಯಂತ ವಾಹನ ದಟ್ಟಣೆ ಮತ್ತು ಕಿಷ್ಕಿಂಧೆಯಂತಿರುವ ಈ ಪ್ರದೇಶಗಳಲ್ಲಿ ಎಲ್ಲಾ ನಿಲ್ದಾಣಗಳು ನೆಲದಡಿಯಲ್ಲೇ ನಿರ್ಮಾಣ ಆಗಲಿವೆ. ಜಯದೇವ ಜಂಕ್ಷನ್, ಎಂ.ಜಿ.ರಸ್ತೆ ಮತ್ತು ನಾಗವಾರದಲ್ಲಿ ಇಂಟರ್ ಚೇಂಜ್(ಮಾರ್ಗ ಬದಲಾವಣೆ) ನಿಲ್ದಾಣಗಳು ನಿರ್ಮಾಣವಾಗುತ್ತಿವೆ. ಜಯದೇವ ಜಂಕ್ಷನ್‌ನಲ್ಲಿ ರಸ್ತೆ ಮೇಲೆ ಎತ್ತರಿಸಿದ ಬಸ್ ಮಾರ್ಗ, ಅದರ ಮೇಲೆ ಹಳದಿ(ಆರ್.ವಿ.ರಸ್ತೆ–ಬೊಮ್ಮಸಂದ್ರ) ಮೆಟ್ರೊ ಮಾರ್ಗ, ಅದರ ಮೇಲೆ ಪಿಂಕ್ ಮಾರ್ಗ(ಗೊಟ್ಟಿಗೆರೆ–ನಾಗವಾರ) ನಿರ್ಮಾಣವಾಗುತ್ತಿದೆ. ನಗರದ ಅತಿ ಎತ್ತರದ ಮೆಟ್ರೊ ರೈಲು ಮಾರ್ಗ ಇದಾಗಲಿದೆ.

ಪಿಂಕ್ ಮಾರ್ಗದ ನಿಲ್ದಾಣಗಳು

- ನಾಗವಾರ
- ಅರೇಬಿಕ್ ಕಾಲೇಜು
- ವೆಂಕಟೇಶಪುರ
- ಟ್ಯಾನರಿ ರಸ್ತೆ
- ಪಾಟರಿ ಟೌನ್
- ಕಂಟೋನ್ಮೆಂಟ್
- ಶಿವಾಜಿನಗರ
- ಎಂ.ಜಿ. ರಸ್ತೆ
- ವೆಲ್ಲಾರ
- ಲ್ಯಾಂಗ್‌ಫೋರ್ಡ್ ಟೌನ್
- ಮೈಕೊ ಇಂಡಸ್ಟ್ರೀಸ್
- ಡೇರಿ ಸರ್ಕಲ್
- ಸ್ವಾಗತ್ ರೋಡ್ ಕ್ರಾಸ್
- ಜಯದೇವ ಆಸ್ಪತ್ರೆ ಜಂಕ್ಷನ್
- ಜೆ.ಪಿ. ನಗರ ನಾಲ್ಕನೇ ಹಂತ
- ಐಐಎಂ (ಬಿ)
- ಹುಳಿಮಾವು

ಜಯದೇವ ಜಂಕ್ಷನ್‌ನಲ್ಲಿ ನಿಲ್ದಾಣ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದು

ಎತ್ತರಿಸಿದ ಮಾರ್ಗದ ಕಾಮಗಾರಿ ಬೇಗ ಪೂರ್ಣಗೊಳ್ಳಲಿದ್ದು, ಸುರಂಗ ಮಾರ್ಗದ ಕಾಮಗಾರಿ 2024ರ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಅಂಜುಂ ಪರ್ವೇಜ್, ಬಿಎಂಆರ್‌ಸಿಎಲ್ ಎಂ.ಡಿ

ಸುದ್ದಿ 2 ನಿಮಿಷ

ವಜ್ರ ಬಸ್: ದೈನಿಕ, ಮಾಸಿಕ ಪಾಸ್ ದರ ಇಂದಿನಿಂದ ಏರಿಕೆ

ಬೆಂಗಳೂರು: ಬಿಎಂಟಿಸಿಯು 'ವಜ್ರ ಸೇವೆಯ ಬಸ್'ಗಳ ದೈನಿಕ ಹಾಗೂ ಮಾಸಿಕ ಪಾಸಿನ ದರವನ್ನು ಏರಿಕೆ ಮಾಡಿದ್ದು, ಜ.1ರಿಂದ ಹೊಸ ದರಗಳು ಜಾರಿಗೆ ಬರಲಿವೆ.

ಇಂಧನ ಬೆಲೆ ಏರಿಕೆಯಾಗಿದ್ದು, ಸಂಸ್ಥೆಯ ಆರ್ಥಿಕ ಹಿತವನ್ನು ಗಮನದಲ್ಲಿಟ್ಟುಕೊಂಡು ದರ ಏರಿಕೆ ಮಾಡಲಾಗುತ್ತಿದೆ. ಸಾಮಾನ್ಯ ಮಾಸಿಕ ಪಾಸುದಾರರು ಮತ್ತು ಹಿರಿಯ ನಾಗರಿಕ ಸಾಮಾನ್ಯ ಮಾಸಿಕ ಪಾಸುದಾರರು ಭಾನುವಾರದಂದು ಮಾನ್ಯತಾ ಪಾಸಿನ ಜತೆಗೆ ವಜ್ರ ಸೇವೆಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಕಲ್ಪಿಸಿದ್ದ ಸೌಲಭ್ಯವನ್ನು ವಾಪಸ್ ಪಡೆಯಲಾಗಿದೆ.

ವಜ್ರ ಮಾಸಿಕ ಪಾಸು ₹ 1,500ರಿಂದ ₹ 1,800ಕ್ಕೆ, ವಜ್ರ ದೈನಿಕ ಪಾಸಿನ ದರವನ್ನು ₹ 100ರಿಂದ ₹ 120ಕ್ಕೆ, ಸಾಮಾನ್ಯ ಮಾಸಿಕ ಪಾಸುದಾರರು ವಜ್ರ ವಾಹನಗಳಲ್ಲಿ ಪ್ರತಿ ಪ್ರಯಾಣಕ್ಕೆ ನೀಡಬೇಕಿದ್ದ ಚೀಟಿ ದರವನ್ನು ₹ 20ರಿಂದ ₹ 25ಕ್ಕೆ ಹಾಗೂ ಹಿರಿಯ ನಾಗರಿಕರ ಸಾಮಾನ್ಯ ಮಾಸಿಕ ಪಾಸುದಾರರ ಪ್ರತಿ ಪ್ರಯಾಣದ ಚೀಟಿ ದರವನ್ನು ₹ 20ರಿಂದ 25ಕ್ಕೆ ಏರಿಸಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

ವಿದೇಶದಿಂದ ಬಂದ ಪ್ರಯಾಣಿಕರಿಗೆ ಏಳು ದಿನ ಕ್ವಾರಂಟೈನ್

ಬೆಂಗಳೂರು: ಕೋವಿಡ್ ಅಧಿಕ ಪ್ರಕರಣಗಳು ವರದಿಯಾದ ಚೀನಾ, ಹಾಂಕಾಂಗ್, ಜಪಾನ್, ದಕ್ಷಿಣ ಕೊರಿಯಾ, ಸಿಂಗಾಪುರ ಹಾಗೂ ಥಾಯ್ಲೆಂಡ್‌ನಿಂದ ಬರುವ ಪ್ರಯಾಣಿಕರು ಕಡ್ಡಾಯವಾಗಿ ಏಳು ದಿನ ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ (ಕ್ವಾರಂಟೈನ್) ಒಳಗಾಗಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಸುತ್ತೋಲೆ ಹೊರಡಿಸಲಾಗಿದ್ದು, ಕರ್ನಾಟಕದಲ್ಲಿ ಸದ್ಯ ಪ್ರತಿನಿತ್ಯ 30ರಿಂದ 40 ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಸೋಂಕು ದೃಢ ಪ್ರಮಾಣ ಕಳೆದ ಐದು ತಿಂಗಳಿಂದ ಶೇ 0.5ರಿಂದ ಶೇ 0.7ರಷ್ಟಿದೆ. ರೂಪಾಂತರಿ ವೈರಾಣುವಿನ ಪತ್ತೆಯಿಂದಾಗಿ ವಿದೇಶಗಳಲ್ಲಿ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ಆದ್ದರಿಂದ ಸೋಂಕಿತರ ಸಂಪರ್ಕ ಪತ್ತೆಗೆ ಆದ್ಯತೆ ನೀಡಬೇಕು ಎಂದು ತಿಳಿಸಲಾಗಿದೆ.

ಗುರುತಿಸಲಾದ ದೇಶಗಳಿಂದ ಬರುವವರು ಸೋಂಕಿತರಾಗಿಲ್ಲ ಎನ್ನುವುದರ ಬಗ್ಗೆ ಕೋವಿಡ್ ಆರ್‌ಟಿ–ಪಿಸಿಆರ್ ವರದಿ ಹಾಜರುಪಡಿಸಬೇಕು. ಅವರನ್ನು ವಿಮಾನ ನಿಲ್ದಾಣದಲ್ಲಿ ತಪಾಸಣೆಗೆ ಒಳಪಡಿಸಬೇಕು. ಜ್ವರ ಸೇರಿ ವಿವಿಧ ಲಕ್ಷಣಗಳನ್ನು ಹೊಂದಿದ್ದಲ್ಲಿ ಗುರುತಿಸಲಾದ ಆಸ್ಪತ್ರೆಗೆ ಕರೆದೊಯ್ದು, ದಾಖಲಿಸಬೇಕು. ಅವರಿಗೆ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆ ನಡೆಸಬೇಕು. ಸೋಂಕು ದೃಢಪಟ್ಟಲ್ಲಿ ಚಿಕಿತ್ಸೆ ಮುಂದುವರಿಸಿ, ಮಾದರಿಯನ್ನು ವೈರಾಣು ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಒಳಪಡಿಸಬೇಕು ಎಂದು ಹೇಳಲಾಗಿದೆ.

ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ಒಳಗಾದ ಅವಧಿಯಲ್ಲಿ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಲ್ಲಿ ಆರೋಗ್ಯ ಅಧಿಕಾರಿಗಳನ್ನು ಸಂಪರ್ಕಿಸಿ, ಕೋವಿಡ್ ಪರೀಕ್ಷೆಗೆ ಒಳಪಡಬೇಕು. ಸೋಂಕು ದೃಢಪಟ್ಟಲ್ಲಿ ಆಸ್ಪತ್ರೆಗೆ ಸ್ಥಳಾಂತರವಾಗಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮಾಧ್ಯಮ ಇಲ್ಲದಿದ್ದರೆ ಪ್ರಜಾಪ್ರಭುತ್ವ ಉಳಿಯುತ್ತಿರಲಿಲ್ಲ: ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಧ್ಯಮ ಕ್ಷೇತ್ರ ಇಲ್ಲದೆ ಹೋಗಿದ್ದರೆ ಪ್ರಜಾಪ್ರಭುತ್ವ ಉಳಿಯುತ್ತಿರಲಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಭಿಪ್ರಾಯಪಟ್ಟರು.

ಬೆಂಗಳೂರು ಪ್ರೆಸ್ ಕ್ಲಬ್‌ನ 2022ನೇ ಸಾಲಿನ 'ವರ್ಷದ ವ್ಯಕ್ತಿ' ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 'ಪತ್ರಕರ್ತರು ಸಾಮಾಜಿಕ ನ್ಯಾಯದ ಜತೆಗೆ ಯಾವುದು ಸರಿಯಿದೆ? ಈ ದೇಶಕ್ಕೆ ಏನು ಅಗತ್ಯವಿದೆ? ಎನ್ನುವುದನ್ನೂ ಬರೆಯಬೇಕು' ಎಂದರು.

ಮಾಧ್ಯಮಕ್ಕೆ ಮಂತ್ರಿ ಮಾಡುವ ಶಕ್ತಿಯಿದೆ: '2009ರಲ್ಲಿ ರಾಜ್ಯದಿಂದ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಆರು ಸಂಸದರಲ್ಲಿ ಎಸ್.ಎಂ. ಕೃಷ್ಣ, ವೀರಪ್ಪ ಮೊಯಿಲಿ ಸಚಿವರಾದರು. ನನಗೆ ಸಚಿವ ಸ್ಥಾನದ ಭರವಸೆ ನೀಡಲಾಗಿತ್ತು. ಆಗಲೇ ಇಬ್ಬರು ಸಚಿವರಾಗಿದ್ದರಿಂದ ನನಗೆ ಸಚಿವ ಸ್ಥಾನ ಸಿಗುವುದಿಲ್ಲವೆಂದು ಗೆಳೆಯರ ಜೊತೆ ಬೌದ್ಧ ಗಯಾದತ್ತ ಹೊರಟಿದ್ದೆ. ಬೇಸರದಿಂದ ಖರ್ಗೆ ಹೋಗಿದ್ದಾರೆ ಎಂಬ ರೀತಿಯಲ್ಲಿ ಪತ್ರಿಕೆಗಳಲ್ಲಿ ಸುದ್ದಿಗಳು ಬಂದವು. ತಕ್ಷಣ ಗುಲಾಂನಬಿ ಆಜಾದ್ ಕರೆ ಮಾಡಿ, 'ದೆಹಲಿಯಲ್ಲಿ ಇರುವುದು ಬಿಟ್ಟು ಅಲ್ಲಿಗೆ ಏಕೆ ಹೋಗಿದ್ದೀರಿ ಬನ್ನಿ' ಎಂದು ಕರೆದರು. 'ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿದ್ದವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅನ್ಯಾಯ ಮಾಡಿದರು' ಎಂಬ ರೀತಿಯಲ್ಲಿಯೂ ನನ್ನ ಬಗ್ಗೆ ಸುದ್ದಿಗಳನ್ನು ಬರೆಯಲಾಗಿತ್ತು. ಆ ಮೇಲೆ ನನಗೆ ಸಚಿವ ಸ್ಥಾನ ಸಿಕ್ಕಿತ್ತು. ಹೀಗಾಗಿ, ಮಾಧ್ಯಮಗಳಿಗೆ ಮಂತ್ರಿ ಮಾಡುವ ಶಕ್ತಿಯಿದೆ' ಎಂದು ನೆನಪಿಸಿಕೊಂಡರು.

ಪ್ರೆಸ್ ಕ್ಲಬ್ 'ವಿಶೇಷ ಪ್ರಶಸ್ತಿ'ಯನ್ನು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಮತ್ತು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ಪ್ರದಾನ ಮಾಡಲಾಯಿತು. ಅಲ್ಲದೆ, 32 ಮಂದಿಗೆ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿಗಳನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಪ್ರದಾನ ಮಾಡಿದರು. ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಲ್ಲಪ್ಪ ಮತ್ತಿತರರು ಇದ್ದರು.

ಬೆಂಗಳೂರು ಪ್ರೆಸ್‌ಕ್ಲಬ್‌ನ 2022ನೇ ಸಾಲಿನ 'ವರ್ಷದ ವ್ಯಕ್ತಿ' ಪ್ರಶಸ್ತಿಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಶನಿವಾರ ಪ್ರದಾನ ಮಾಡಲಾಯಿತು. (ಎಡದಿಂದ) ನಿವೃತ್ತ ನ್ಯಾಯಮೂರ್ತಿ ಗೋಪಾಲ ಗೌಡ, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್. ಶ್ರೀಧರ್, ಖಜಾಂಚಿ ಬಿ.ಎನ್. ಮೋಹನ್ ಕುಮಾರ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು ಇದ್ದರು

–ಪ್ರಜಾವಾಣಿ ಚಿತ್ರ

ಖರ್ಗೆ ಅಸಮಾಧಾನ

ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರಿಗೆ ಮೊದಲು 'ವಿಶೇಷ ಪ್ರಶಸ್ತಿ' ನೀಡಿ, ಬಳಿಕ 'ವರ್ಷದ ವ್ಯಕ್ತಿ' ಪ್ರಶಸ್ತಿ ಪ್ರದಾನ ಮಾಡಿದ ಪ್ರೆಸ್ ಕ್ಲಬ್ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಖರ್ಗೆ, 'ನನಗೆ ಮಾಡಿದನ್ನು ಬೇರೆ ಯಾರಿಗೂ ಮಾಡಲು ಹೋಗಬೇಡಿ' ಎಂದರು.

'ಶಿಷ್ಟಾಚಾರದಂತೆ ನಡೆಯಬೇಕು. ಹೀಗಾಗಿಯೇ ನಾನು ಬಂದಿದ್ದು. ದುಡ್ಡೇ ದೊಡ್ಡಪ್ಪ ಅಂದರೆ, ಮಂತ್ರಿಗಳೇ ಮೊದಲಾದರೆ ನಾವು ಯಾಕೆ ಬೇಕು? ನೀವು ಆಲೋಚನೆ ಮಾಡಿ. ಇದು ಪ್ರೆಸ್. ಎಲ್ಲರನ್ನೂ ಒಂದೇ ರೀತಿ ನೋಡಬೇಕು. ಪ್ರಭುತ್ವ ಯಾರ ಕಡೆ ಇರುತ್ತದೊ ಅವರಷ್ಟೇ ಆಗಬಾರದು. ಧ್ವನಿ ಇಲ್ಲದವರಿಗೆ ಧ್ವನಿ ಕೊಡುವ ಕೆಲಸ ಮಾಡಬೇಕು' ಎಂದರು.

'ಸ್ವಲ್ಪ ವ್ಯತ್ಯಾಸವಾದರೂ ಅದು ನಿಮಗೇ ತೊಂದರೆ. ಇವತ್ತು ನಾನು ಅನುಭವಿಸಿದ್ದನ್ನು ನಾಳೆ ನೀವೂ ಅನುಭವಿಸಬೇಕಾಗುತ್ತದೆ. ಸಣ್ಣಪುಟ್ಟ ಕೆಲಸಕ್ಕೆ ನಮ್ಮ ಸಿದ್ಧಾಂತ ಬಿಡುತ್ತೇವೊ, ತತ್ವಗಳನ್ನು, ನೀತಿಗಳನ್ನು ಬಿಡುತ್ತೇವೆಯೊ ಆಗ ಪ್ರಜಾಪ್ರಭುತ್ವದ ಕೊಲೆಯಾಗುತ್ತದೆ. ಸಂವಿಧಾನ ಕೂಡ ಕೊಲೆ ಆಗುತ್ತದೆ. ಪ್ರೆಸ್ ಕ್ಲಬ್ ಈ ಹಿಂದೆ ನಡೆದು ಬಂದ ದಾರಿಯಲ್ಲಿ ನಡೆಯಲಿ. ಕೊನೆಗೆ ಬಂದವರಿಗೆ ಹಾರ ಹಾಕುವ ಕೆಲಸ ಮಾಡಬೇಡಿ' ಎಂದೂ ಹೇಳಿದರು.

ಗಾಲಿ ಕುರ್ಚಿ ವಿತರಣೆ

ವಿಶ್ವ ಅಂಗವಿಕಲ ದಿನಾಚರಣೆ ಅಂಗವಾಗಿ ಪ್ರಗತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಶುಕ್ರವಾರ ಮಲ್ಲೇಶ್ವರದ ಸೇವಾ ಸದನದಲ್ಲಿ ನಡೆದ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಅಂಗವಿಕಲರಿಗೆ ಗಾಲಿ ಕುರ್ಚಿಗಳನ್ನು ವಿತರಣೆ ಮಾಡಲಾಯಿತು. ಹಾಸ್ಯ ಕಲಾವಿದರಾದ ಡಿಂಗ್ರಿ ನಾಗರಾಜ್, ಗಣೇಶ್ ರಾವ್ ಕೇಸರ್‌ಕರ್, ಮನೋಜ್ ಕುಮಾರ್, ಟ್ರಸ್ಟ್‌ನ ಮುನೇಶ್ ಜೋಗಳಕಾಷ್ಠಿ ಇದ್ದರು

ಆವತಿ: ಕೇಂದ್ರೀಯ ಪತ್ತೆದಾರಿ ತರಬೇತಿ ಶಾಲಾ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಅಮಿತ್ ಶಾ

'ಪೊಲೀಸ್ ದಳಗಳ ಸಮನ್ವಯ ಮಂತ್ರ'

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: 'ಭಯೋತ್ಪಾದನೆ, ಗಡಿ ವ್ಯಾಜ್ಯ ಸೇರಿದಂತೆ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವ ಸಂಬಂಧ ದೇಶದ ಮಹಾನಗರಗಳ ಕಾನೂನು ಮತ್ತು ಸುವ್ಯವಸ್ಥೆ ಬಲಪಡಿಸಲು ಎಲ್ಲಾ ಪೊಲೀಸ್ ವಿವಿಧ ದಳಗಳ ನಡುವೆ ಸಮನ್ವಯ ಸಾಧಿಸಿ, ಭದ್ರತೆ ಹೆಚ್ಚಿಸಲು ಕೇಂದ್ರೀಯ ಪತ್ತೆದಾರಿ ತರಬೇತಿ ಶಾಲೆಯು ಮಹತ್ವದ ವೇದಿಕೆಯಾಗಲಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ತಾಲ್ಲೂಕಿನ ಆವತಿಯಲ್ಲಿ ಶನಿವಾರ ಕೇಂದ್ರೀಯ ಪತ್ತೆದಾರಿ ತರಬೇತಿ ಶಾಲೆಯ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಅನಂತ ವಿದ್ಯಾನಿಕೇತನ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತ ಟಿಬೆಟ್ ಗಡಿ ರಕ್ಷಣಾ ದಳದ ಬೆಂಗಳೂರು ವಿಭಾಗದ ವಿವಿಧ ಕಟ್ಟಡಗಳನ್ನು ವರ್ಚುವಲ್ ವೇದಿಕೆ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಉತ್ತಮ ವಾತಾವರಣವಿರುವ ಸ್ಥಳವನ್ನು ಕೇಂದ್ರೀಯ ಗುಪ್ತಚರ ತರಬೇತಿ ಸಂಸ್ಥೆಯ ಕಟ್ಟಡಕ್ಕೆ ಒದಗಿಸಿದೆ. ಪೊಲೀಸ್ ದಳವನ್ನು ಬಲಪಡಿಸಲು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು. ಇದರಿಂದ ದೇಶದ ಆಂತರಿಕ ಭದ್ರತೆ ಮತ್ತು ಪೊಲೀಸ್ ವ್ಯವಸ್ಥೆಗೆ ಪ್ರಯೋಜನಕಾರಿಯಾಗಲಿದೆ ಎಂದು ಹೇಳಿದರು.

ಸಮಾಜ ನಿರಂತರವಾಗಿ ಬದಲಾಗುತ್ತಿರುತ್ತದೆ. ಅದರ ವಿಚಾರ, ಧೋರಣೆ ಹಾಗೂ ಸ್ವರೂಪಕ್ಕೆ ತಕ್ಕಂತೆ ಪೊಲೀಸ್ ವ್ಯವಸ್ಥೆಯು ಮೇಲ್ದರ್ಜೆಗೊಳ್ಳಬೇಕು. ಇಲ್ಲಿ ನಡೆಯುವ ಸಂಶೋಧನೆ ಆಧಾರಿಸಿ ಸಾಕಷ್ಟು ಸುರಕ್ಷತಾ ತಂತ್ರಗಳು, ರಣನೀತಿಯನ್ನು ಸುಲಭವಾಗಿ ರೂಪಿಸಿಕೊಳ್ಳಬಹುದು. ವಿನಿಮಯ ತಂತ್ರದೊಂದಿಗೆ ಸಮಗ್ರ ಪೊಲೀಸಿಂಗ್ ಬಳಕೆ ಮೂಲಕ ವಿವಿಧ ಪೊಲೀಸ್ ಸಂಸ್ಥೆಗಳ ನಡುವೆ ಸಮನ್ವಯತೆ ಸಾಧಿಸಿ ಹೊಸ ವಿಚಾರ ಕಲಿಕೆಯೊಂದಿಗೆ ಸವಾಲು ನಿವಾರಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ದೇಶದ ಮಹಾನಗರಗಳಲ್ಲಿ ಬಹು ಭಾಷಿಕರು ನೆಲೆಸಿದ್ದಾರೆ. ಇದು ಮುಂಬರುವ ದಿನಗಳಲ್ಲಿ ಪೊಲೀಸ್ ಕಾರ್ಯವೈಖರಿಗೆ ಸವಾಲಾಗಲಿದೆ. ಮಹಾನಗರಗಳ ಸುರಕ್ಷತೆಯ ಸಂಶೋಧನೆ ಮತ್ತು ಅಧ್ಯಯನ ಇಲ್ಲಿ ನಡೆಯಲಿವೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಂಸದೀಯ ವ್ಯವಹಾರಗಳ, ಗಣಿ ಮತ್ತು ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ, ಗೃಹ ಸಚಿವ ಆರಗ ಜ್ಞಾನೇಂದ್ರ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ. ಸುಧಾಕರ್, ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಮಹಾನಿರ್ದೇಶಕ ಬಾಲಾಜಿ ಶ್ರೀವಾಸ್ತವ, ಭಾರತ ಟಿಬೆಟ್ ಗಡಿ ಪೊಲೀಸ್ ದಳದ ಮಹಾನಿರ್ದೇಶಕ ಅನೀಶ್ ದಯಾಳ್, ಹೆಚ್ಚುವರಿ ಮಹಾನಿರ್ದೇಶಕ ನೀರಜ್ ಸಿನ್ಹಾ ಮತ್ತಿತರರು ಇದ್ದರು.

ದೇವನಹಳ್ಳಿ ತಾಲ್ಲೂಕಿನ ಆವತಿಯಲ್ಲಿ ಕೇಂದ್ರೀಯ ಪತ್ತೆದಾರಿ ತರಬೇತಿ ಶಾಲೆಯ ಕಟ್ಟಡಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಶಂಕುಸ್ಥಾಪನೆ ನೆರವೇರಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಆರಗ ಜ್ಞಾನೇಂದ್ರ, ಡಾ.ಕೆ. ಸುಧಾಕರ್ ಇದ್ದರು

ಕೇಂದ್ರ ಪತ್ತೆದಾರಿ ತರಬೇತಿ ಸಂಸ್ಥೆ

ಬ್ಯೂರೋ ಆಫ್ ಪೊಲೀಸ್ ರೀಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ (ಬಿಪಿಆರ್‌ಡಿ) ಸಂಸ್ಥೆಯಡಿ ಕಾರ್ಯ ನಿರ್ವಹಿಸುವ ಕೇಂದ್ರೀಯ ಪತ್ತೆದಾರಿ ತರಬೇತಿ ಸಂಸ್ಥೆಯನ್ನು ಅರ್ಬನ್ ಪೊಲೀಸಿಂಗ್ (ಸ್ಮಾರ್ಟ್ ಸಿಟಿ ಪೊಲೀಸಿಂಗ್) ಹಾಗೂ ಬ್ಲಾಕ್ ಚೈನ್ ತಂತ್ರಜ್ಞಾನದ ಉತ್ಕೃಷ್ಟತಾ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗುತ್ತದೆ. ಈ ಕೇಂದ್ರದಲ್ಲಿ ಎಲ್ಲಾ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳು, ಸಿಪಿಓಗಳು ಹಾಗೂ ಸಿಎಪಿಎಫ್‌ಗಳ ಪೊಲೀಸ್ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತದೆ.

ಐಟಿಬಿಪಿ ಕಟ್ಟಡ ಉದ್ಘಾಟನೆ

ಬೆಂಗಳೂರಿನಲ್ಲಿರುವ ಇಂಡೋ ಟಿಬೆಟಿಯನ್ ಬಾರ್ಡರ್ ಪೊಲೀಸ್ ಪ್ರಾದೇಶಿಕ ಪ್ರಧಾನ ಕಚೇರಿಯ ಹಲವು ಯೋಜನೆಗಳ ಉದ್ಘಾಟಿಸಲಾಯಿತು. 120 ಸೈನಿಕರ ಬ್ಯಾರಕ್, 42 ವಸತಿ ಕಟ್ಟಡ, ಜಂಟಿ ಆಡಳಿತಾತ್ಮಕ ಕಟ್ಟಡ, ಅಧಿಕಾರಿಗಳ ಹಾಗೂ ಅಧೀನ ಅಧಿಕಾರಿಗಳ ಮೆಸ್ ಕಟ್ಟಡವನ್ನು ಆನ್‌ಲೈನ್ ಮೂಲಕ ಉದ್ಘಾಟಿಸಲಾಯಿತು.

ಸಂಕ್ಷಿಪ್ತ ಸುದ್ದಿ

ಶೂನ್ಯ ತ್ಯಾಜ್ಯ ಅಡುಗೆಮನೆಗೆ ಅಮಿತ್ ಶಾ ಭೇಟಿ

ಬೆಂಗಳೂರು: ಅದಮ್ಯ ಚೇತನ ಸಂಸ್ಥೆ ನಡೆಸುತ್ತಿರುವ 'ಶೂನ್ಯ ತ್ಯಾಜ್ಯ ಅಡುಗೆ ಮನೆಗೆ' ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ ನೀಡಿದ್ದರು.

ನಗರದ ಗವಿಪುರದ ಗುಟ್ಟಹಳ್ಳಿಯಲ್ಲಿರುವ ಅದಮ್ಯ ಚೇತನ ಸಂಸ್ಥೆಯ ಶೂನ್ಯ ತ್ಯಾಜ್ಯ ಅಡುಗೆ ಮನೆಯಲ್ಲಿ ಪ್ರತಿನಿತ್ಯ ನಡೆಯುವಂತಹ ಅಡುಗೆ ತಯಾರಿಯ ಕೆಲಸಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡರು. ಈ ಸಂಸ್ಥೆ ಸ್ಥಾಪನೆಯ ಹಿಂದೆ ಅನಂತಕುಮಾರ್ ಅವರ ಅದಮ್ಯ ಕನಸುಗಳ ಬಗ್ಗೆ ತೇಜಸ್ವಿನಿ ಅನಂತಕುಮಾರ್ ಗೃಹ ಸಚಿವರಿಗೆ ವಿವರಣೆ ನೀಡಿದರು.

ಈ ಅಡುಗೆ ಮನೆಯಲ್ಲಿ ಪ್ರತಿ ನಿತ್ಯ ಸುಮಾರು 70 ಸಾವಿರಕ್ಕೂ ಹೆಚ್ಚು ಊಟಗಳನ್ನು ತಯಾರಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ತ್ಯಾಜ್ಯ ಉತ್ಪತ್ತಿಯಾಗದಂತೆ ಕ್ರಮ ವಹಿಸಲಾಗಿದೆ. ಹಾಗೆಯೇ, ಉಪಯೋಗಿಸಿದ ನೀರಿನ ಮರುಬಳಕೆ ಮಾಡಲಾಗುತ್ತದೆ. ಪೆಟ್ರೋಲಿಯಂ ಉತ್ಪನ್ನಗಳನ್ನು ಬಳಸದೇ ಅಡುಗೆ ಮಾಡುವುದು ಈ ಅಡುಗೆ ಮನೆಯ ಮತ್ತೊಂದು ವಿಶೇಷವಾಗಿದೆ ಎಂದು ವಿವರಿಸಿದರು. ಅನಂತ ಸೇವಾ ಉತ್ಸವದಲ್ಲಿ 'ತೇಜಸ್ ಯುದ್ಧವಿಮಾನ ಅಭಿವೃದ್ಧಿಯ ಯಶೋಗಾಥೆ' ಪುಸ್ತಕದ ಕನ್ನಡ ಅವತರಣಿಕೆಯನ್ನು ಅಮಿತ್ ಶಾ ಬಿಡುಗಡೆ ಮಾಡಿದರು.

'ಬೆಂಗಳೂರಿನಲ್ಲಿ ಸಕ್ಕರೆ ವಲಯ ನಿರ್ದೇಶನಾಲಯ'

ಬೆಂಗಳೂರು: 'ಕಬ್ಬು ಅಭಿವೃದ್ಧಿ ಮತ್ತು ನಿರ್ದೇಶನಾಲಯವನ್ನು ಬೆಳಗಾವಿಗೆ ಸ್ಥಳಾಂತರ ಮಾಡಿದ್ದರಿಂದ ಹಳೇ ಮೈಸೂರು ಭಾಗದ ರೈತರಿಗೆ ಅನನುಕೂಲವಾಗಲಿದೆ. ಹೀಗಾಗಿ, ಬೆಂಗಳೂರು ವಿಭಾಗದಲ್ಲಿ ವಲಯ ನಿರ್ದೇಶನಾಲಯ ತೆರೆಯಬೇಕು. ಸಕ್ಕರೆ ನಿರ್ದೇಶಕರು ವಾರದಲ್ಲಿ ಎರಡು ದಿನ ಬೆಂಗಳೂರಿನಲ್ಲಿ ರೈತರಿಗೆ ಲಭ್ಯವಾಗಬೇಕು' ಎಂದು ಸಕ್ಕರೆ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಅವರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಮಾಡಿದ್ದಾರೆ.

'ಮನವಿಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ' ಎಂದು ಗೂಳಿಗೌಡ ತಿಳಿಸಿದ್ದಾರೆ.

ಮುಂಬೈ ಪೊಲೀಸರ ಸೋಗು: ಎಫ್‌ಐಆರ್

ಬೆಂಗಳೂರು: ಮುಂಬೈ ಪೊಲೀಸರೆಂದು ಹೇಳಿ ಮಹಿಳೆಯೊಬ್ಬರನ್ನು ಬೆದರಿಸಿ ₹ 2.75 ಲಕ್ಷ ವಸೂಲಿ ಮಾಡಲಾಗಿದ್ದು, ಈ ಸಂಬಂಧ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನೆಲಗೆದರನಹಳ್ಳಿ ನಿವಾಸಿಯಾಗಿರುವ 29 ವರ್ಷದ ಮಹಿಳೆ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಮಹಿಳೆ, 2 ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿದ್ದಾರೆ. ಡಿ. 15ರಂದು ಮಹಿಳೆಗೆ ಕರೆ ಮಾಡಿದ್ದ ಆರೋಪಿ, ಮುಂಬೈ ಪೊಲೀಸ್ ಎಂಬುದಾಗಿ ಪರಿಚಯಿಸಿಕೊಂಡಿದ್ದ. 'ನಿಮ್ಮ ವಿಳಾಸಕ್ಕೆ ತೈವಾನ್‌ನಿಂದ ಕೆಲ ಪಾರ್ಸೆಲ್‌ಗಳು ಬಂದಿವೆ. ಅದರಲ್ಲಿ ನಿಷೇಧಿತ ವಸ್ತುಗಳಿದ್ದು, ನಿಮ್ಮ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಪ್ರಕರಣ ದಾಖಲು ಮಾಡಬಾರದೆಂದರೆ ಹಣ ನೀಡಬೇಕು' ಎಂದು ಆರೋಪಿ ಬೇಡಿಕೆ ಇರಿಸಿದ್ದ. ಹೆದರಿದ್ದ ಮಹಿಳೆ, ಆರೋಪಿ ಹೇಳಿದ್ದ ಖಾತೆಗಳಿಗೆ ₹ 2.72 ಲಕ್ಷ ಹಾಕಿದ್ದರು' ಎಂದೂ ತಿಳಿಸಿವೆ.

ನಗರದ ಸೇವಾ ಸದನ ಸಭಾಂಗಣದಲ್ಲಿ ನಡೆದ ಇಂಟರ್‌ನ್ಯಾಷನಲ್ ಆರ್ಟ್ಸ್ ಆ್ಯಂಡ್ ಕಲ್ಚರಲ್ ಫೌಂಡೇಶನ್ ವತಿಯಿಂದ ಶ್ರೀವತ್ಸ ಶಾಂಡಿಲ್ಯ ನೇತೃತ್ವದಲ್ಲಿ 'ಶಾಂಡಿಲ್ಯ' ರಾಷ್ಟ್ರೀಯ ಕಲಾ ಉತ್ಸವ ನಡೆಯಿತು

ವೈಕುಂಠ ಏಕಾದಶಿ ಅಂಗವಾಗಿ ಭಕ್ತರಿಗೆ ವಿತರಿಸಲು ಶರವಣ ಚಾರಿಟಬಲ್ ಟ್ರಸ್ಟ್ ಒಂದು ಲಕ್ಷ ಲಡ್ಡು ತಯಾರಿಸಿದೆ

– ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಮೆಜೆಸ್ಟಿಕ್‌ನ ಸುರಂಗ ಮಾರ್ಗದಲ್ಲಿ ಒತ್ತುವರಿ ಮಾಡಿಕೊಂಡು ವ್ಯಾಪಾರ

ಅಕ್ರಮ ಮಳಿಗೆ: ಜನ ಹೀಗಂತಾರೆ...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ಆದೇಶವನ್ನು ಗಾಳಿಗೆ ತೂರಿ, ಮೆಜೆಸ್ಟಿಕ್‌ನ ಸುರಂಗ ಮಾರ್ಗದಲ್ಲಿ ಅಕ್ರಮ ವ್ಯಾಪಾರ ನಡೆಸುತ್ತಿರುವ ಮಳಿಗೆಗಳನ್ನು ತೆರವು ಮಾಡಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮೆಜೆಸ್ಟಿಕ್ ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣಕ್ಕೆ ಹೊಂದಿಕೊಂಡು ನಿರ್ಮಿಸಿರುವ ಸುರಂಗ ಮಾರ್ಗದಲ್ಲಿ ಅಕ್ರಮ ವ್ಯಾಪಾರ ಹೆಚ್ಚಾಗಿದೆ. ಇದರಿಂದ ಜನರು ಅನುಭವಿಸುತ್ತಿರುವ ಯಾತನೆ ಬಗ್ಗೆ 'ಮೆಜೆಸ್ಟಿಕ್ ಅಕ್ರಮ ವ್ಯಾಪಾರ: ಪ್ರಶ್ನಿಸಿದರೆ ಇರಿತ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಡಿ. 31ರಂದು ವರದಿ ಪ್ರಕಟಿಸಲಾಗಿತ್ತು.

ವರದಿಗೆ ಪ್ರತಿಕ್ರಿಯಿಸಿ ಅಭಿಪ್ರಾಯ ಹಂಚಿಕೊಂಡಿರುವ ಸಾರ್ವಜನಿಕರು, 'ಮಾಮೂಲಿ ವಸೂಲಿ ಮಾಡಿ ಅಕ್ರಮ ವ್ಯಾಪಾರಕ್ಕೆ ಅವಕಾಶ ಮಾಡಿಕೊಡುತ್ತಿರುವ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಪೊಲೀಸರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ. ಕೆಲ ಸಾರ್ವಜನಿಕರ ಆಯ್ದ ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ

ನ್ಯಾಯಾಲಯದ ಆದೇಶವನ್ನು ಅಧಿಕಾರಿಗಳು ಜಾರಿಗೆ ತರುತ್ತಿಲ್ಲ. ಇಂಥ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಬೇಕು. ಅಕ್ರಮದ ಬಗ್ಗೆ ಸಾರ್ವಜನಿಕರು ಮಾಹಿತಿ ನೀಡಿದರೂ ಉಪ್ಪಾರಪೇಟೆ ಪೊಲೀಸರು ಮತ್ತು ಬಿಬಿಎಂಪಿ ಸಿಬ್ಬಂದಿ, ವ್ಯಾಪಾರಿಗಳಿಂದಲೇ ಮಾಮೂಲಿ ಪಡೆದು ಮೌನವಾಗಿರುವುದು ಅಕ್ಷಮ್ಯ ಅಪರಾಧ. ಸಾರ್ವಜನಿಕರ ಗಂಭೀರ ಗಂಭೀರ ಸಮಸ್ಯೆಯನ್ನು ತೆರೆದಿಟ್ಟಿರುವ 'ಪ್ರಜಾವಾಣಿ' ಪತ್ರಿಕೆಗೆ ಧನ್ಯವಾದ.

ಶಿವ ಪ್ರಸಾದ್, ಬೆಂಗಳೂರು

ವ್ಯಾಪಾರಿಗಳ ಪರ ರಾಜಕಾರಣಿ ಸಂಬಂಧಿ

ಸುರಂಗ ಮಾರ್ಗದ ಅಕ್ರಮ ವ್ಯಾಪಾರದಿಂದ ಬರುವ ಮಾಮೂಲಿಯಿಂದಲೇ ಕೆಲವರ ಜೀವನ ಸಾಗುತ್ತಿದೆ. ರಾಜಕಾರಣಿಯೊಬ್ಬರ ಸಂಬಂಧಿಯೇ ಅಕ್ರಮ ವ್ಯಾಪಾರಿಗಳ ಪರವಿದ್ದಾರೆ. ಇದರಿಂದಲೇ ಹೈಕೋರ್ಟ್ ಆದೇಶ ಪಾಲನೆಯಾಗುತ್ತಿಲ್ಲ.

ಜ್ಯೋತಿ, ಬೆಂಗಳೂರು

ಠಾಣೆ ಸಮೀಪದಲ್ಲೇ ವ್ಯಾಪಾರ: ಕಣ್ಮುಚ್ಚಿ ಕುಳಿತಿದ್ದೇಕೆ?

ಸುರಂಗ ಮಾರ್ಗದಲ್ಲಿರುವ ವ್ಯಾಪಾರಿಗಳು ರೌಡಿಗಳಂತೆ ವರ್ತಿಸುತ್ತಾರೆ. ವ್ಯಾಪಾರದಲ್ಲಿ ಚೌಕಾಶಿ ಮಾಡಿದ ಮೇಲೆ ವಸ್ತು ಖರೀದಿಸಲೇ ಬೇಕೆಂದು ಬೆದರಿಸುತ್ತಾರೆ. ಉಪ್ಪಾರಪೇಟೆ ಠಾಣೆ ಸಮೀಪದಲ್ಲೇ ಸುರಂಗ ಮಾರ್ಗವಿದ್ದು, ಇಲ್ಲಿ ಅಕ್ರಮ ನಡೆಯುತ್ತಿದ್ದರೂ ಪೊಲೀಸರು ಕಣ್ಮುಚ್ಚಿ ಕುಳಿತಿರುವುದು ಏಕೆ? ಸಾರ್ವಜನಿಕರ ಸಂಚಾರಕ್ಕೆ ಮೀಸಲಾದ ಸುರಂಗ ಮಾರ್ಗವನ್ನು ಅತಿಕ್ರಮಿಸಿಕೊಂಡಿರುವ ಎಷ್ಟೋ ವ್ಯಾಪಾರಿಗಳು ಬಾಡಿಗೆ ಕೊಡುವುದಿಲ್ಲ. ಬಿಬಿಎಂಪಿ ಕೆಲ ಅಧಿಕಾರಿಗಳಿಗೆ ಮಾಮೂಲಿ ಕೊಟ್ಟು ಸುಮ್ಮನಾಗುತ್ತಿದ್ದು, ಇದು ಹಗಲು ದರೋಡೆ.

ಸುರೇಶ್, ಹರಿಹರ

ಹೆಚ್ಚಾದ ಭ್ರಷ್ಟಾಚಾರ

ಬಿಬಿಎಂಪಿ ವ್ಯಾಪ್ತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಬಿಬಿಎಂಪಿಯ ಕೆಲ ಅಧಿಕಾರಿಗಳಿಗೆ ಲಂಚ ನೀಡಿದರೆ ಮೆಜೆಸ್ಟಿಕ್ ಮಾತ್ರವಲ್ಲದೇ ಎಲ್ಲಿ ಬೇಕಾದರೂ ವ್ಯಾಪಾರಕ್ಕೆ ಅನುಮತಿ ನೀಡುತ್ತಾರೆ

ಪ್ರಕಾಶ್, ಬಸವ ಕಲ್ಯಾಣ

ಭ್ರಷ್ಟ ವ್ಯವಸ್ಥೆಯಿಂದ ಜನ ವಿರೋಧಿ ನಡೆ

ಸಮಾಜಘಾತುಕ ಶಕ್ತಿಗಳ ಪರವಾಗಿರುವ ವ್ಯವಸ್ಥೆಯೇ ಭ್ರಷ್ಟವಾಗಿದೆ. ಇಂಥ ಭ್ರಷ್ಟ ವ್ಯವಸ್ಥೆ, ಜನರ ವಿರುದ್ಧವೇ ಸದಾ ಕೆಲಸ ಮಾಡುತ್ತಿದೆ

ಮಾರ್ಟಿನ್, ಮೈಸೂರು

ಪ್ರಜಾವಾಣಿ 75

ಸುರಂಗ ಮಾರ್ಗದ ಮಳಿಗೆಗಳಿಂದ ಸಮಸ್ಯೆ ಎದುರಿಸುತ್ತಿರುವವರಲ್ಲಿ ನೀವೂ ಒಬ್ಬರಾಗಿದ್ದರೆ, ಚುಟುಕಾಗಿ ಬರೆದು ಕಳಿಸಿ. ನಿಮ್ಮ ಹೆಸರು, ವಿಳಾಸ, ಭಾವಚಿತ್ರವನ್ನೂ ಕಳುಹಿಸಿ.

96060 38256

ಬೆಂಗಳೂರು– ಮೈಸೂರು ಪ್ರಾಯೋಗಿಕ ಬಸ್ ಸಂಚಾರ

ಕೆಎಸ್‌ಆರ್‌ಟಿಸಿಗೂ ಬಂತು ಇ.ವಿ ಬಸ್

ಪ್ರಜಾವಾಣಿ ವಾರ್ತೆ

ಕೆಎಸ್‌ಆರ್‌ಟಿಸಿಯ ಇ.ವಿ ಬಸ್‌ಗೆ ಸಾರಿಗೆ ಸಚಿವ ಬಿ.ಶ್ರೀರಾಮುಲು ಶನಿವಾರ ಹಸಿರು ನಿಶಾನೆ ತೋರಿದರು. ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಂ.ಚಂದ್ರಪ್ಪ, ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್ ಮೊದಲಾದವರು ಹಾಜರಿದ್ದರು

ಬೆಂಗಳೂರು: ಕೆಎಸ್‌ಆರ್‌ಟಿಸಿಯಿಂದ ಮೊದಲ ಅಂತರ ನಗರಗಳ ನಡುವೆ ಎಲೆಕ್ಟ್ರಿಕ್ ಬಸ್ ಸಂಚಾರ ಆರಂಭವಾಗಿದ್ದು 'ಪವರ್ ಪ್ಲಸ್'ಗೆ ಶನಿವಾರ ಚಾಲನೆ ಸಿಕ್ಕಿತು. ಬೆಂಗಳೂರಿನಿಂದ ಮೈಸೂರಿಗೆ ಹೊರಟ ಇ.ವಿ ಬಸ್‌ಗೆ ಸಾರಿಗೆ ಸಚಿವ ಬಿ.ಶ್ರೀರಾಮುಲು ಹಾಗೂ ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಂ.ಚಂದ್ರಪ್ಪ ಚಾಲನೆ ನೀಡಿದರು.

ಬಸ್‌ನ ವಿಶೇಷತೆ ಏನು?: ಎಲೆಕ್ಟ್ರಾ ಕಂಪನಿ ಅಭಿವೃದ್ಧಿಗೊಳಿಸಿರುವ ಈ ಬಸ್, ಆರಾಮದಾಯಕ ಪುಶ್‌ಬ್ಯಾಕ್ ಆಸನಗಳನ್ನು ಹೊಂದಿದೆ. ಗುಡ್ಡಗಾಡು, ಬಯಲು ಪ್ರದೇಶಗಳಲ್ಲಿ ಸುಗಮವಾಗಿ ಸಂಚರಿಸಲಿದೆ. ಪ್ರತಿ ಚಾರ್ಜ್‌ಗೆ 300 ಕಿ.ಮೀ ದೂರ ಪ್ರಯಾಣಿಸಬಹುದಾಗಿದೆ. 3 ಗಂಟೆಯ ಅವಧಿಯಲ್ಲಿ ಬ್ಯಾಟರಿ ಸಂಪೂರ್ಣ ರೀಚಾರ್ಜ್ ಆಗಲಿದೆ. ನಿರ್ವಾಹಕ, ಚಾಲಕ ಸೇರಿ 43 ಆಸನ ಸಾಮರ್ಥ್ಯವಿದೆ. ಸಿ.ಸಿ.ಟಿ.ವಿ ಕ್ಯಾಮೆರಾಗಳು, ತುರ್ತು ಬಟನ್, ಅಗ್ನಿಶಾಮಕ ಸಾಧನ, ಪ್ರಥಮ ಚಿಕಿತ್ಸಾ ಕಿಟ್, ಗ್ಲಾಸ್ ಹ್ಯಾಮರ್ ಮುಂತಾದ ಸುರಕ್ಷತಾ ಕ್ರಮಗಳಿವೆ. ಪ್ರಯಾಣಿಕರ ಬಳಕೆಗೆ ವೈ–ಫೈ ಮತ್ತು ಪ್ರತಿ ಆಸನಕ್ಕೂ ಯುಎಸ್‌ಬಿ ಚಾರ್ಜರ್ ಅಳವಡಿಸಲಾಗಿದೆ. ಪ್ರಯಾಣಿಕರ ಲಗೇಜ್ ಇಡಲು ಸ್ಥಳಾವಕಾಶವಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್ ತಿಳಿಸಿದರು.

'ಪ್ರಾಯೋಗಿಕ ಬಸ್ ಸಂಚಾರ ಯಶಸ್ವಿಯಾದರೆ, ಬೆಂಗಳೂರಿನಿಂದ ಮಡಿಕೇರಿ, ವಿರಾಜಪೇಟೆ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಮಾರ್ಗದಲ್ಲಿ ಹವಾನಿಯಂತ್ರಿತ 50 ಇ.ವಿ ಬಸ್‌ಗಳು ಸಂಚರಿಸಲಿವೆ. ಬೆಂಗಳೂರು, ಮೈಸೂರಿನಲ್ಲಿ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲಾಗಿದೆ. ಮಡಿಕೇರಿ, ವಿರಾಜಪೇಟೆ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರಿನಲ್ಲಿ ಚಾರ್ಜಿಂಗ್ ಕೇಂದ್ರದ ಕಾಮಗಾರಿ ಪ್ರಗತಿಯಲ್ಲಿವೆ' ಎಂದರು.

ಸಾರಿಗೆ ಸಚಿವ ಬಿ.ಶ್ರೀರಾಮುಲು ಮಾತನಾಡಿ, 'ಕೆಎಸ್‌ಆರ್‌ಟಿಸಿಗೆ 3,500 ಹೊಸದಾಗಿ ಬಸ್‌ಗಳನ್ನು ಖರೀದಿಸಲಾಗುತ್ತಿದೆ. ಫೆಬ್ರುವರಿಗೆ ಬೆಂಗಳೂರಿನಲ್ಲಿ ಡಬಲ್ ಡೆಕ್ಕರ್ ಬಸ್ ಸಂಚಾರಕ್ಕೆ ಚಾಲನೆ ನೀಡಲಾಗುವುದು' ಎಂದರು.

ವೇತನ ಪರಿಷ್ಕರಣೆ: ಸಚಿವರ ಭರವಸೆ

'ಸಾರಿಗೆ ಇಲಾಖೆ ಚಾಲಕರು ಹಾಗೂ ನಿರ್ವಾಹಕರ ವೇತನ ಪರಿಷ್ಕರಣೆ ಮಾಡಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆಗೆ ಚರ್ಚಿಸಲಾಗಿದೆ. ಬೇರೆ ಬೇರೆ ಕಾರಣಕ್ಕೆ ವಜಾಗೊಂಡಿದ್ದ ಸಿಬ್ಬಂದಿಯನ್ನು ಷರತ್ತು ರಹಿತವಾಗಿ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತಿದೆ' ಎಂದು ಸಚಿವ ಶ್ರೀರಾಮುಲು ಹೇಳಿದರು.

ಗುದದ್ವಾರದಲ್ಲಿದ್ದ 532 ಗ್ರಾಂ ಚಿನ್ನ ಜಪ್ತಿ

₹ 28.73 ಲಕ್ಷ ಮೌಲ್ಯದ ಬಂಗಾರ ವಶ, ಮಹಿಳೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುದದ್ವಾರದಲ್ಲಿ ಚಿನ್ನ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ ಮಹಿಳೆಯೊಬ್ಬರನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದಾರೆ.

'ಜಿ8–44 ವಿಮಾನದಲ್ಲಿ ಮಾಲ್ಡೀವ್ಸ್‌ನಿಂದ ನಗರಕ್ಕೆ ಬಂದಿದ್ದ ಮಹಿಳೆಯನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ಅವರ ಗುದದ್ವಾರದಲ್ಲಿ 532 ಗ್ರಾಂ ಚಿನ್ನ ಪತ್ತೆಯಾಗಿದೆ. ಚಿನ್ನವನ್ನು ಪೇಸ್ಟ್ ರೂಪದಲ್ಲಿ ಉಂಡೆಗಳಾಗಿ ಮಾಡಿ, ಗುದದ್ವಾರದಲ್ಲಿ ಇಟ್ಟುಕೊಳ್ಳಲಾಗಿತ್ತು. ಜಪ್ತಿ ಮಾಡಲಾದ ಚಿನ್ನದ ಮೌಲ್ಯ ₹ 28.73 ಲಕ್ಷ' ಎಂದು ಕಸ್ಟಮ್ಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ' ತಿಳಿಸಿದರು.

'ವಿಮಾನದ ಮೂಲಕ ಚಿನ್ನ ಸಾಗಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಹೀಗಾಗಿ, ವಿಮಾನ ನಿಲ್ದಾಣದಲ್ಲಿ ತಪಾಸಣೆ ಬಿಗಿಗೊಳಿಸಲಾಗಿತ್ತು. ಮಾಲ್ಡೀವ್ಸ್‌ನಿಂದ ಬಂದು ನಿಲ್ದಾಣದಿಂದ ಹೊರಬರುತ್ತಿದ್ದ ಮಹಿಳೆ ಬಗ್ಗೆ ಅನುಮಾನ ಬಂದಿತ್ತು' ಎಂದರು.

'ಮಹಿಳೆಯ ಬ್ಯಾಗ್ ಹಾಗೂ ದೇಹದ ಹೊರಭಾಗದಲ್ಲಿ ತಪಾಸಣೆ ನಡೆಸಿದಾಗ ಯಾವುದೇ ಚಿನ್ನ ಕಂಡುಬಂದಿರಲಿಲ್ಲ. ಮಹಿಳೆ ವರ್ತನೆಯು ಮತ್ತಷ್ಟು ಅನುಮಾನ ಮೂಡಿಸಿತ್ತು. ಮಹಿಳೆಯನ್ನು ವಶಕ್ಕೆ ಪಡೆದ ಮಹಿಳಾ ಸಿಬ್ಬಂದಿ, ಕೊಠಡಿಗೆ ಕರೆದೊಯ್ದು ಹೆಚ್ಚಿನ ತಪಾಸಣೆ ನಡೆಸಿದ್ದರು. ಅವಾಗಲೇ ಗುದದ್ವಾರದಲ್ಲಿ ಚಿನ್ನ ಬಚ್ಚಿಟ್ಟುಕೊಂಡಿದ್ದು ಗೊತ್ತಾಯಿತು' ಎಂದು ತಿಳಿಸಿದರು.

'ಚಿನ್ನ ಅಕ್ರಮ ಸಾಗಣೆ ಜಾಲವೊಂದರ ಸದಸ್ಯರಾಗಿ ಮಹಿಳೆ ಕೆಲಸ ಮಾಡುತ್ತಿದ್ದ ಮಾಹಿತಿ ಇದೆ. ಪ್ರಕರಣ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಒಳ ಉಡುಪಿನಲ್ಲಿ 210 ಗ್ರಾಂ ಚಿನ್ನ

ದುಬೈನಿಂದ ಬೆಂಗಳೂರಿಗೆ ಬಂದಿದ್ದ ಪ್ರಯಾಣಿಕರೊಬ್ಬರ ಒಳ ಉಡುಪಿನಲ್ಲಿದ್ದ 210 ಗ್ರಾಂ ಚಿನ್ನವನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ಇಕೆ– 564 ವಿಮಾನದಲ್ಲಿ ಬಂದಿದ್ದ ಪ್ರಯಾಣಿಕನನ್ನು ತಪಾಸಣೆ ನಡೆಸಲಾಯಿತು. ಆತ, ಒಳ ಉಡುಪಿನಲ್ಲಿ ಚಿನ್ನ ಬಚ್ಚಿಟ್ಟುಕೊಂಡಿದ್ದು ಗೊತ್ತಾಯಿತು. ಜಪ್ತಿ ಮಾಡಿರುವ 210 ಗ್ರಾಂ ಚಿನ್ನದ ಮೌಲ್ಯ ₹ 11.18 ಲಕ್ಷ' ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಮಾರಕಕ್ಕೆ ಒತ್ತಾಯಿಸಿ ವಿಷ್ಣು ಅಭಿಮಾನಿಗಳು ಪಾದಯಾತ್ರೆ ನಡೆಸಿದರು

ಸ್ಮಾರಕ ಪೂರ್ಣಗೊಳಿಸಲು ಒತ್ತಾಯ

ಕೆಂಗೇರಿ: ಮೈಸೂರಿನಲ್ಲಿ ನಿರ್ಮಾಣ ಹಂತದ ವಿಷ್ಣು ಸ್ಮಾರಕ ಶೀಘ್ರ ಪೂರ್ಣಗೊಳಿಸುವಂತೆ ಒತ್ತಾಯಿಸಿ ವಿಷ್ಣುವರ್ಧನ್ ಅವರ ವಿವಿಧ ಅಭಿಮಾನಿ ಸಂಘಟನೆಯ ಸದಸ್ಯರು ಪಾದಯಾತ್ರೆ ನಡೆಸಿ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ವಿಷ್ಣುವರ್ಧನ್ ಅವರ 13ನೇ ಪುಣ್ಯಸ್ಮರಣೆ ನಿಮಿತ್ತ ಮೆರವಣಿಗೆ ಮೂಲಕ ನೂರಾರು ಸಂಖ್ಯೆಯಲ್ಲಿ ಅಭಿಮಾನ್ ಸ್ಟುಡಿಯೊಗೆ ಆಗಮಿಸಿದ ಅಭಿಮಾನಿಗಳು ಆವರಣದಲ್ಲಿರುವ ಸಮಾಧಿ ಸ್ಥಳಕ್ಕೆ ಪೂಜೆ ನೆರವೇರಿಸಿದರು.

ವಿಷ್ಣು ಪುಣ್ಯ ಭೂಮಿ ಟ್ರಸ್ಟ್ ಅಧ್ಯಕ್ಷ ಟಿ. ತಿಮ್ಮರಾಜು ಮಾತನಾಡಿ, 'ನಾಡಿನ ಶ್ರೇಷ್ಠ ನಟನಿಗೆ ಸರ್ಕಾರ ಸೂಕ್ತ ಗೌರವ ತೋರುತ್ತಿಲ್ಲ. ನಾಲ್ಕಾರು ಸರ್ಕಾರ ಅಧಿಕಾರಕ್ಕೆ ಬಂದರೂ ಸ್ಮಾರಕ ನಿರ್ಮಾಣ ಭರವಸೆಯಾಗಿಯೇ ಉಳಿದಿದೆ. ಸರ್ಕಾರದ ನಿರ್ಲಕ್ಷ್ಯವನ್ನು ಅಭಿಮಾನಿಗಳು ಹಾಗೂ ರಾಜ್ಯದ ಗಮನಕ್ಕೆ ತರುವ ನಿಟ್ಟಿನಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಸರ್ಕಾರದ ಈ ತಾರತಮ್ಯವನ್ನು ಹೆಚ್ಚು ದಿನ ಅಭಿಮಾನಿಗಳು ಸಹಿಸಿಕೊಳ್ಳುವುದಿಲ್ಲ' ಎಂದು ಎಚ್ಚರಿಸಿದರು.

ವಿಷ್ಣು ಸೇನಾ ಸಮಿತಿ ವತಿಯಿಂದ ಆದರ್ಶ ಯಾತ್ರೆ ಮೂಲಕ ಮೈಸೂರಿನಿಂದ ಬೆಂಗಳೂರಿಗೆ ಆಗಮಿಸಿದ್ದ ಅಭಿಮಾನಿಗಳನ್ನು ಸ್ಥಳೀಯ ಅಭಿಮಾನಿಗಳು ಅಭಿನಂದಿಸಿ ಕೆಂಗೇರಿಯಿಂದ ಅಭಿಮಾನ್ ಸ್ಟುಡಿಯೊವರೆಗೆ ಮೆರವಣಿಗೆ ಮೂಲಕ ಕರೆತಂದರು.

'ಆನ್‌ಲೈನ್ ಸ್ನೇಹಿತೆ' ಸೇವೆ: ₹ 7.30 ಲಕ್ಷ ಕಳೆದುಕೊಂಡ

ಬೆಂಗಳೂರು: ಆನ್‌ಲೈನ್ ಮೂಲಕ ಸ್ನೇಹಿತೆ ಸೇವೆ ಪಡೆಯಲು ಮುಂದಾಗಿದ್ದ ನಗರದ ನಿವಾಸಿಯೊಬ್ಬರು ₹ 7.30 ಲಕ್ಷ ಕಳೆದುಕೊಂಡಿದ್ದು, ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದಾರೆ.

'ಮಂಗಮ್ಮನಪಾಳ್ಯದ 44 ವರ್ಷದ ನಿವಾಸಿ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸ್ ಮೂಲಗಳು ತಿಳಿಸಿವೆ.

'ವೃತ್ತಿಯಲ್ಲಿ ಟೈಲರ್ ಆಗಿರುವ ದೂರುದಾರರಿಗೆ ಆರೋಪಿ ಇತ್ತೀಚೆಗೆ ಕರೆ ಮಾಡಿದ್ದ. 'ನಮ್ಮಲ್ಲಿ ಸ್ನೇಹಿತೆಯರ ಸೇವೆ ಲಭ್ಯವಿದೆ. ನಿಮಗೆ ಸ್ನೇಹಿತೆ ಬೇಕಾದರೆ ಕಳುಹಿಸುತ್ತೇವೆ. ನೋಂದಣಿ ಶುಲ್ಕ ಮಾತ್ರ ಪಾವತಿಸಬೇಕು' ಎಂಬುದಾಗಿ ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ಆರಂಭದಲ್ಲಿ ₹ 2,100 ಪಾವತಿಸಿದ್ದರು. ಆದರೆ, ಯಾವುದೇ ಸ್ನೇಹಿತೆಯನ್ನು ಕಳುಹಿಸಿರಲಿಲ್ಲ.'

'ಪುನಃ ಹಣಕ್ಕೆ ಒತ್ತಾಯಿಸಿದ್ದ ಆರೋಪಿ, ದೂರುದಾರರಿಂದ ಮತ್ತಷ್ಟು ಹಣ ಪಡೆದಿದ್ದ. ಇದಾದ ನಂತರವೂ ಸ್ನೇಹಿತೆಯನ್ನು ಕಳುಹಿಸಿರಲಿಲ್ಲ. ಬೇಸತ್ತ ದೂರುದಾರ, ಹಣ ವಾಪಸು ನೀಡುವಂತೆ ಒತ್ತಾಯಿಸಿದ್ದರು. ಹಣ ಮರು ಪಾವತಿಸಲು ಮತ್ತಷ್ಟು ಶುಲ್ಕ ಪಾವತಿಸಬೇಕೆಂದು ಆರೋಪಿ ಹೇಳಿದ್ದ. ಅದನ್ನೂ ನಂಬಿದ್ದ ದೂರುದಾರ ಹಂತ ಹಂತವಾಗಿ ₹ 7.30 ಲಕ್ಷ ನೀಡಿದ್ದರು. ಇದಾದ ನಂತರ, ಆರೋಪಿ ನಾಪತ್ತೆಯಾಗಿದ್ದಾನೆ' ಎಂದು ಮೂಲಗಳು ಹೇಳಿವೆ.

ಕ್ರಿಪ್ಟೊ ಕರೆನ್ಸಿ: ₹ 6.13 ಲಕ್ಷ ವಂಚನೆ

ಬೆಂಗಳೂರು: ಕ್ರಿಪ್ಟೊ ಕರೆನ್ಸಿ ಹೂಡಿಕೆ ಹೆಸರಿನಲ್ಲಿ ₹ 6.13 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜೆ.ಪಿ. ನಗರ ನಿವಾಸಿಯಾಗಿರುವ 37 ವರ್ಷದ ಮಹಿಳೆಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಮಹಿಳೆಯು ಉದ್ಯೋಗ ಹುಡುಕುತ್ತಿದ್ದರು. ಹಲವು ಜಾಲತಾಣಗಳಲ್ಲಿ ರೆಸ್ಯುಮೆ ಅಪ್‌ಲೋಡ್ ಮಾಡಿದ್ದರು. ವಾಟ್ಸ್‌ಆ್ಯಪ್ ಮೂಲಕ ಮಹಿಳೆಗೆ ಸಂದೇಶ ಕಳುಹಿಸಿದ್ದ ಆರೋಪಿ, ಉದ್ಯೋಗ ಖಾಲಿ ಇರುವುದಾಗಿ ಹೇಳಿದ್ದ. ನಂತರ, ಇಬ್ಬರು ಪರಸ್ಪರ ಚಾಟಿಂಗ್ ಮಾಡಲಾರಂಭಿಸಿದ್ದರು.'

'ಕ್ರಿಪ್ಟೊ ಕರೆನ್ಸಿ ಮೇಲೆ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಗಳಿಸಬಹುದೆಂದು ಆರೋಪಿ ಹೇಳಿದ್ದ. ಮಹಿಳೆ ₹ 6.13 ಲಕ್ಷ ಹೂಡಿಕೆ ಮಾಡಿದ್ದರು. ನಂತರ ಆರೋಪಿ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾನೆ' ಎಂದು ತಿಳಿಸಿದರು.

ಮರಗಳನ್ನು ಉಳಿಸಬೇಕು ಎಂಬ ಪರಿಸರ ಕಾರ್ಯಕರ್ತರ ಆಗ್ರಹದ ನಡುವೆಯೂ ಕಾವೇರಿ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ ರಸ್ತೆ ವಿಸ್ತರಣೆಗಾಗಿ ಬೃಹತ್ ಮರಗಳನ್ನು ಬಿಬಿಎಂಪಿ ಸಿಬ್ಬಂದಿ ಧರೆಗುರುಳಿಸಿದರು.
ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ್

ಗೆಳತಿಯಿಂದ ಹಣಕ್ಕಾಗಿ ಬ್ಲ್ಯಾಕ್‌ಮೇಲ್

ಬೆಂಗಳೂರು: ಡೇಟಿಂಗ್ ಆ್ಯಪ್ ಗೆಳತಿ ಜೊತೆಗಿನ ವಿಡಿಯೊ ಕರೆ ದೃಶ್ಯಗಳನ್ನು ಮುಂದಿಟ್ಟುಕೊಂಡು ಯುವಕರೊಬ್ಬರನ್ನು ಬ್ಲ್ಯಾಕ್‌ಮೇಲ್ ಮಾಡಲಾಗಿದ್ದು, ಈ ಸಂಬಂಧ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅರಮನೆ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ನಿವಾಸಿಯಾದ 26 ವರ್ಷದ ಯುವಕ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ಮೊಬೈಲ್ ನಂಬರ್ ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಯುವಕನಿಗೆ ಡೇಟಿಂಗ್ ಆ್ಯಪ್‌ವೊಂದರಲ್ಲಿ ಯುವತಿಯೊಬ್ಬಳ ಪರಿಚಯವಾಗಿತ್ತು. ನಂತರ, ಅವರಿಬ್ಬರೂ ಪರಸ್ಪರ ಚಾಟಿಂಗ್ ಮಾಡಲಾರಂಭಿಸಿದ್ದರು. ಮೊಬೈಲ್ ನಂಬರ್ ಬದಲಾಯಿಸಿಕೊಂಡಿದ್ದರು. ವಾಟ್ಸ್‌ಆ್ಯಪ್‌ನಲ್ಲೂ ವಿಡಿಯೊ ಕರೆ ಮಾಡುತ್ತಿದ್ದರು.'

'ವಿಡಿಯೊ ಕರೆ ಚಿತ್ರೀಕರಿಸಿಕೊಂಡಿರುವ ಆರೋಪಿಗಳು, ದೂರುದಾರರಿಗೆ ಹಣಕ್ಕೆ ಬೇಡಿಕೆ ಇರಿಸಿದ್ದರು. ಹಣ ನೀಡದಿದ್ದರೆ ಜಾಲತಾಣಗಳಲ್ಲಿ ವಿಡಿಯೊ ಹರಿಬಿಡುವುದಾಗಿ ಬೆದರಿಸಿದ್ದರು. ಯುವಕ, ₹ 30ಸಾವಿರ ನೀಡಿದ್ದರು. ಪುನಃ ಆರೋಪಿಗಳು ಹಣಕ್ಕೆ ಒತ್ತಾಯಿಸುತ್ತಿದ್ದರಿಂದ ಯುವಕ ದೂರು ನೀಡಿದ್ದಾರೆ'. 'ಆ್ಯಪ್‌ನಲ್ಲಿ ನಕಲಿ ಖಾತೆ ತೆರೆದಿದ್ದ ಯುವತಿಯೇ ತನ್ನ ಸಹಚರರ ಮೂಲಕ ಕೃತ್ಯ ಮಾಡಿಸಿರುವ ಅನುಮಾನವಿದೆ' ಎಂದು ಮೂಲಗಳು ಹೇಳಿವೆ.

24 ಗಂಟೆ ಹೋಟೆಲ್ ತೆರೆಯಲು ಬೇಡಿಕೆ

ಬೆಂಗಳೂರು: ಹೋಟೆಲ್‌ಗಳನ್ನು 24 ಗಂಟೆಯೂ ತೆರೆಯಲು ಅವಕಾಶ ನೀಡಬೇಕು ಎನ್ನುವುದೂ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ಆಗ್ರಹಿಸಿದೆ.

ಹೋಟೆಲ್ ಉದ್ಯಮವನ್ನು ಸುಲಭವಾಗಿ ನಡೆಸಲು ಅನುಕೂಲವಾಗುವಂತೆ ಟ್ರೇಡ್ ಲೈಸೆನ್ಸ್ ಮತ್ತು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಪರವಾನಗಿಯನ್ನು ಒಂದೇ ಬಾರಿ ಶಾಶ್ವತವಾಗಿ ನೀಡಬೇಕು. ರಾಜ್ಯದಲ್ಲಿ ಈ ಉದ್ಯಮಕ್ಕೆ ಕೈಗಾರಿಕಾ ಮಾನ್ಯತೆ ಮತ್ತು ಕಾರ್ಮಿಕರ ವೃತ್ತಿಪರ ತೆರಿಗೆಯ ಸಂಬಳದ ಮಿತಿಯನ್ನು ₹15 ಸಾವಿರದಿಂದ ₹30 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದೆ.



APARTMENTS FOR SALE IN VARIOUS LOCATIONS

ELECTRONIC CITY	YELAHANKA	HENNUR ROAD	CHANDAPURA	BEGUR	THANISANDRA MAIN ROAD	SARJAPURA
PRM/KA/RERA/1251/308/PR/201201/003733	PRM/KA/RERA/1251/309/PR/211209/004576		PRM/KA/RERA/1251/308/PR/280222/004739	PRM/KA/RERA/1251/446/PR/110722/005059	PRM/KA/RERA/1251/309/PR/180120/001878	PRM/KA/RERA/1251/308/PR/290122/004660
NEAR BOSCH HOSA ROAD JUNCTION	ISRO LAYOUT PHASE - II	DODDAGUBBI NEAR DECATHLON	10 MINS. NARAYANA HRUDAYALAYA	10 MINS. SILK BOARD (MADIWALA)	10 MINS. FROM MANYATA TECH PARK	SARJAPURA - ATTIBELE ROAD
₹ 35.00 - 39.37 Lakhs*	₹ 37.46 - 64.68 Lakhs*	₹ 31.36 - 79.60 Lakhs*	₹ 27.45 - 37.20 Lakhs*	₹ 31.96 - 52.64 Lakhs*	₹ 1.20 - 1.49 Crores*	₹ 29.04 - 37.35 Lakhs*
2-BHK	2 & 3-BHK	1, 2 & 3-BHK	2 & 3-BHK	1, 2 & 3-BHK	3-BHK	2 & 3-BHK
₹ 3,500 / Sq. Ft.	₹ 4,200 / Sq. Ft.	READY TO OCCUPY	₹ 3,000 / Sq. Ft.	₹ 4,000 / Sq. Ft.	READY TO OCCUPY	₹ 3,000 / Sq. Ft.
9164 045 000	8880 758 758	8880 465 465	8880 013 310	8880 472 472	8088 779 779	9164 122 000

Contents of this advertisement are only for information; This is not an offer for agreement, and interpretation is not allowed. Reach our sales team for precise communication. And we value your independent inquiries before any definite conclusion. The apartment elevation, colour, landscaping or any features shown are indicative and for representation purposes only. All investment schemes, offers and discounts are subject to the management's discretion and subject to availability. All directions, locations, landmarks and travel times are from various sources and may not be of geographical accuracy, and the use of reliable resources is at your discretion, visit: www.rera.karnataka.gov.in *T & C Apply www.dsmaxproperties.com ಡಿಎಸ್ ಮ್ಯಾಕ್ಸ್

ಪ್ರಜಾವಾಣಿ

ಪ್ರಜಾವಾಣಿ ಸಾಧಕರು 2023

‘ಪ್ರಜಾವಾಣಿ’ ಪಾಲಿಗಿದು ಅಮೃತ ಮಹೋತ್ಸವದ ವರ್ಷ. 75 ವರ್ಷಗಳ ಹಾದಿಯಲ್ಲಿ ಜನಮುಖಿಯಾಗಿರುವ ಪತ್ರಿಕೆ, ನಮ್ಮ ನಡುವಿನ ಪ್ರತಿಭಾವಂತರನ್ನು ಗುರುತಿಸುವ ಕೆಲಸವನ್ನೂ ಮಾಡುತ್ತಾ ಬಂದಿದೆ. 2020ರಿಂದ ಪ್ರತಿವರ್ಷ ಆಯಾ ಇಸವಿಯ ಕೊನೆಯ ಎರಡು ಅಂಕಿಗಳಿಗೆ ಹೊಂದುವಷ್ಟು ಸಂಖ್ಯೆಯ ಸಾಧಕರನ್ನು ಆಯ್ಕೆ ಮಾಡಿ, ಸನ್ಮಾನಿಸುತ್ತಿದೆ. ಶಿಕ್ಷಣ, ಸಮಾಜಸೇವೆ, ವಿಜ್ಞಾನ, ಕ್ರೀಡೆ, ಸಾಹಿತ್ಯ–ಕಲೆ–ಮನರಂಜನೆ, ಪರಿಸರ, ಉದ್ಯಮ, ಸಂಶೋಧನೆ, ಆಡಳಿತ, ಕನ್ನಡ ಕೈಂಕರ್ಯ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮಷ್ಟಕ್ಕೆ ತಾವು ಸದ್ದಿಲ್ಲದೆ ಸೇವೆ ಸಲ್ಲಿಸುತ್ತಿರುವ 23 ಸಾಧಕರನ್ನು 2023ರ ಹೊಸವರ್ಷಕ್ಕೆ ಸಾಂಕೇತಿಕವಾಗಿ ಆಯ್ಕೆ ಮಾಡಲಾಗಿದೆ. ಸಾಧಕರ ಕಿರು ಪರಿಚಯವನ್ನು ಇಲ್ಲಿ ನೀಡಲಾಗಿದ್ದು, ಅವರ ಹೆಜ್ಜೆಗುರುತುಗಳು ಈ ಅಕ್ಷರ ಚೌಕಟ್ಟನ್ನೂ ಮೀರಿದ್ದು. ಹೊಸ ವರ್ಷವನ್ನು ಈ ಸಾಧಕರೊಟ್ಟಿಗೆ ಬರಮಾಡಿಕೊಳ್ಳುವುದಕ್ಕೆ ಪತ್ರಿಕಾ ಬಳಗ ಹರ್ಷಿಸುತ್ತದೆ.

‘ಹರಿವಿ’ನಿಂದ ಸಾಧನೆಯ ಸರಿದಾರಿವರೆಗೆ..

ಹೆಸರು : ಮಂಸೋರೆ
ವೃತ್ತಿ : ಸಿನಿಮಾ ನಿರ್ದೇಶಕ
ಸಾಧನೆ : ಸಾಮಾಜಿಕ ಕಳಕಳಿಯ ಸಿನಿಮಾಗಳ ಕಟ್ಟುವಿಕೆ

ಮಂಸೋರೆ ಕನ್ನಡ ಚಿತ್ರರಂಗದ ಪ್ರಮುಖ ನಿರ್ದೇಶಕ. ‘ನಾತಿಚರಾಮಿ’,‘ಹರಿವು’, ‘ಆ್ಯಕ್ಟ್–1978’ ಮುಂತಾದ ಸಾಮಾಜಿಕ ಸಂದೇಶವುಳ್ಳ ಚಿತ್ರಗಳನ್ನು ನಿರ್ದೇಶಿಸಿರುವ ಅವರು ರಾಷ್ಟ್ರ ಪ್ರಶಸ್ತಿಗೆ ಪಾತ್ರರಾದ ಸಾಧಕರೂ ಹೌದು. ವಿಭಿನ್ನ ದೃಷ್ಟಿಕೋನದ ಸಿನಿಮಾಗಳ ಮೂಲಕ ಕನ್ನಡದ ಪ್ರೇಕ್ಷಕರ ಮನ ಗೆದ್ದಿರುವ ಅವರು, ಸದ್ಯ ‘19.20.21’ ಚಿತ್ರದ ಬಿಡುಗಡೆಯ ಸಿದ್ಧತೆಯಲ್ಲಿದ್ದಾರೆ.

2014ರಲ್ಲಿ ಅವರು ನಿರ್ದೇಶಿಸಿದ್ದ, ತಂದೆ ಮತ್ತು ಮಗನ ಭಾವನಾತ್ಮಕ ಕಥೆ ಒಳಗೊಂಡ ‘ಹರಿವು’ ಸಿನಿಮಾ ಕೂಡ ರಾಷ್ಟ್ರ ಪ್ರಶಸ್ತಿ ಪಡೆದಿತ್ತು. ಅವರ ಎರಡನೇ ಚಿತ್ರ ‘ನಾತಿಚರಾಮಿ’ಯಲ್ಲಿ ಆಧುನಿಕ ಜಗತ್ತಿನ ಮಹಿಳೆಯೊಬ್ಬಳ ದೈಹಿಕ ಮತ್ತು ಮಾನಸಿಕ ತುಮುಲ, ತಳಮಳಗಳನ್ನು ಕಟ್ಟಿಕೊಟ್ಟಿದ್ದರು. 66ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ ಐದು ವಿಭಾಗಗಳಲ್ಲಿ ಈ ಸಿನಿಮಾ ಪ್ರಶಸ್ತಿ ಪಡೆದಿದೆ. ಕನ್ನಡ ಚಿತ್ರರಂಗದ ಮಟ್ಟಿಗೆ ಇದೊಂದು ಹೊಸ ದಾಖಲೆ. ಕಿರುಚಿತ್ರ ನಿರ್ಮಾಣದಲ್ಲೂ ಗಮನ ಸೆಳೆದವರು ಈ ನಿರ್ದೇಶಕ. ಮಂಸೋರೆ ಏನೇ ಮಾಡಲಿ, ಅದರ ಹಿಂದೆ ಸಾಮಾಜಿಕ ಕಳಕಳಿಯ ಎಳೆಯೊಂದು ಕೆಲಸ ಮಾಡುತ್ತದೆ ಎನ್ನುವ ಮಾತು ಜನಜನಿತ.

ಬೆನ್ನುಹುರಿಯ ನೋವು ಮೀರಿದ ಸಾಧನೆ

ಹೆಸರು : ಒ.ಸಿ. ಅನುಷಾ
ವೃತ್ತಿ : ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ಸಂಸ್ಥೆಯಲ್ಲಿ ಶಿಕ್ಷಕಿ
ಸಾಧನೆ : ಬೆನ್ನುಹುರಿ ಸಮಸ್ಯೆ ಮೀರಿಯೂ ಶಿಕ್ಷಣ, ಕ್ರೀಡಾಕ್ಷೇತ್ರದಲ್ಲಿ ಛಾಪು

ಆಕೆ ಎಲ್ಲ ಮಕ್ಕಳಂತೆಯೇ ಪುಟ್ಟ ಪುಟ್ಟ ಹೆಜ್ಜೆಯಿಡುತ್ತಾ ಪೋಷಕರ ಮುದ್ದಿನ ಮಗಳು.ಆಕೆಗೆ ಎರಡು ವರ್ಷವಿದ್ದಾಗ (1996) ಎದುರಾದ ಘಟನೆಯೊಂದು ಬದುಕಿಗೇ ಆಘಾತ ನೀಡಿತು. ಆದರೆ, ಸ್ಥೈರ್ಯ ಕಳೆದುಕೊಳ್ಳದೆ ಬದುಕು ರೂಪಿಸಿಕೊಂಡಿದ್ದಾರೆ ಒ.ಸಿ.ಅನುಷಾ. ಪ್ಯಾರಾ ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್ ಆಟಗಾರ್ತಿಯಾಗಿ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದಲ್ಲಿ ಮಿಂಚುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಮಲ್ಲಾಡಿಹಳ್ಳಿಯ ಇವರು ಒ.ಎಸ್.ಚಿದಾನಂದ– ಆಶಾ ದಂಪತಿ ಪುತ್ರಿ. ಈಗ ಬೆಂಗಳೂರಿನಲ್ಲೇ ಕೆಲಸ.

ಕಟ್ಟಡದ ಮೊದಲ ಅಂತಸ್ತಿನಿಂದ ಬಿದ್ದ ಪರಿಣಾಮ ಅನುಷಾಗೆ ಬೆನ್ನುಹುರಿ ಸಮಸ್ಯೆ ಕಾಣಿಸಿಕೊಂಡಿತ್ತು. ಹಲವು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೂ ಚೇತರಿಕೆ ಸಾಧ್ಯವಾಗಲಿಲ್ಲ. ಅನುಷಾ ಅವರು ಅದೇ ನೋವಿನ ನಡುವೆಯೂ ಶಿಕ್ಷಣ ಪಡೆದು, ಈಗ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ತೋರುತ್ತಿದ್ದಾರೆ. ಭುವನೇಶ್ವರದಲ್ಲಿ ನಡೆದಿದ್ದ ರಾಷ್ಟ್ರೀಯ ಬ್ಯಾಡ್ಮಿಂಟನ್‌ನಲ್ಲಿ ಕಂಚು ಹಾಗೂ ರಾಜ್ಯಮಟ್ಟದ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ ಪಡೆದಿದ್ದಾರೆ. ಮುಂದಿನ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಅನುಷಾ ಸಿದ್ಧತೆಯಲ್ಲಿದ್ದಾರೆ.

‘ಡಿ.ಇಡಿ ಶಿಕ್ಷಣ ಪಡೆಯಲು ಮುಂದಾದ ವೇಳೆ, ಪ್ರಾಯೋಗಿಕ ಕಾರ್ಯ ನಡೆಸಲು ನಿಮ್ಮಿಂದ ಆಗದು. ಶಿಕ್ಷಕರಾಗುವವರು ಸಾಕಷ್ಟು ಓಡಾಟ ನಡೆಸಬೇಕೆಂದು ಡಿ.ಇಡಿ ಪ್ರವೇಶಕ್ಕೆ ಶಿಕ್ಷಣ ಸಂಸ್ಥೆಗಳು ನಿರಾಕರಿಸಿದ್ದವು. ಹೋರಾಟದ ಬಳಿಕ ಸಂಸ್ಥೆಯೊಂದರಲ್ಲಿ ಡಿ.ಇಡಿಗೆ ಪ್ರವೇಶವೂ ಸಿಕ್ಕಿತು. ಈಗ ಬಿಎ, ಬಿ.ಇಡಿ ಶಿಕ್ಷಣ ಸಹ ಪೂರೈಸಿದ್ದೇನೆ. ಪ್ರಸ್ತುತ ಬೆಂಗಳೂರಿನ ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ಸಂಸ್ಥೆಯಲ್ಲಿ ಶಿಕ್ಷಕಿ ಆಗಿ ಕೆಲಸ ಮಾಡುತ್ತಿದ್ದೇನೆ’ ಎಂದು ಹೇಳುತ್ತಾರೆ ಅನುಷಾ.

‘2017ರಲ್ಲಿ ಎಪಿಡಿ ಸಂಸ್ಥೆಯ ಬಗ್ಗೆ ತಿಳಿಯಿತು. ಅಲ್ಲಿಗೆ ಬಂದ ಮೇಲೆ ನನ್ನ ಬದುಕಿನ ಚಿತ್ರಣ ಬದಲಾಯಿತು’ ಎಂದು ಭಾವುಕರಾದರು.

ಅಭಿನಯದ ಗುಂಗು... ಸಾಹಿತ್ಯದ ಚುಂಗು

ಹೆಸರು : ರಂಜನಿ ರಾಘವನ್
ವೃತ್ತಿ : ಕಿರುತೆರೆ ನಟಿ
ಸಾಧನೆ : ನಟನೆಯ ಛಾಪು, ಸಾಹಿತ್ಯದ ಒಲವು

ಕನ್ನಡದ ಮನೆ ಮಾತಾಗಿರುವ ನಟಿ ರಂಜನಿ ರಾಘವನ್. ಕಿರುತೆರೆ ಹಾಗೂ ಹಿರಿತೆರೆ ಎರಡರಲ್ಲೂ ಅಭಿನಯದ ಮೂಲಕ ಕನ್ನಡಿಗರ ಮನಗೆದ್ದವರು. ಕಥೆಗಾರ್ತಿಯಾಗಿ ಸಾಹಿತ್ಯ ಲೋಕದಲ್ಲೂ ಛಾಪು ಮೂಡಿಸಿದವರು. ತಮ್ಮ 15 ಕಥೆಗಳ ಗುಚ್ಛ ‘ಕತೆ ಡಬ್ಬಿ’ಯ ಮೂಲಕ ಸಂಚಲನ ಉಂಟು ಮಾಡಿದವರು. ಒಂದು ವರ್ಷದಲ್ಲಿ 20 ಆವೃತ್ತಿಗಳನ್ನು ಕಂಡ ‘ಕತೆ ಡಬ್ಬಿ’ ಇನ್ನೂ ಬೇಡಿಕೆಯಲ್ಲಿರುವ ಕೃತಿ. ಹೊಸ ಓದುಗರನ್ನು ಕನ್ನಡಕ್ಕೆ ಕೊಟ್ಟ ಹೆಮ್ಮೆ ಇವರದ್ದು.

‘ಕೆಳದಿ ಚನ್ನಮ್ಮ’ ಧಾರಾವಾಹಿಯಲ್ಲಿ ಒಂದು ಪುಟ್ಟ ಪಾತ್ರದ ಮೂಲಕ ಕಿರುತೆರೆಗೆ ಹೆಜ್ಜೆ ಇಟ್ಟ ರಂಜನಿ ರಾಘವನ್, ‘ಪುಟ್ಟಗೌರಿ ಮದುವೆ’ ಹಾಗೂ ‘ಕನ್ನಡತಿ’ ಧಾರಾವಾಹಿಗಳಿಂದ ಮನೆಮಾತಾದವರು. ‘ರಾಜಹಂಸ’, ‘ಠಕ್ಕರ್’, ‘ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ’ – ಈಗಾಗಲೇ ತೆರೆ ಕಂಡಿರುವ ಇವರ ಅಭಿನಯದ ಚಿತ್ರಗಳು. ಕಿರುತೆರೆಯ ಅನೇಕ ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ. ಮಿಸ್ ಇಂಡಿಯಾ ಸೂಪರ್ ಮಾಡೆಲ್ ಕಿರೀಟವೂ ಇವರಿಗೆ ಸಂದಿದೆ. ‘ಸ್ವೈಪ್ ರೈಟ್’ ಇವರ ಮೊದಲ ಕಾದಂಬರಿ, ಇತ್ತೀಚೆಗಷ್ಟೇ ಬಿಡುಗಡೆಯಾಗಿದೆ.



ಮರಗಳಿಗೆ ಚಿಕಿತ್ಸೆ ನೀಡುವ ವೈದ್ಯ

ಹೆಸರು : ವಿಜಯ್ ನಿಶಾಂತ್
ವೃತ್ತಿ : ಪರಿಸರ ಕಾರ್ಯಕರ್ತ
ಸಾಧನೆ : ನಗರ ಸಂರಕ್ಷಣೆ ಕಾಯಕ. ಪ್ರಮುಖವಾಗಿ ಮರಗಳ ರಕ್ಷಣೆ ಹಾಗೂ ಗಿಡಮರಗಳ ರೋಗಕ್ಕೆ ಚಿಕಿತ್ಸೆ ನೀಡುವ ‘ಟ್ರೀ ಡಾಕ್ಟರ್’.

ಬೆಂಗಳೂರು ಸೇರಿದಂತೆ ರಾಜ್ಯ ಹಲವು ಭಾಗಗಳಲ್ಲಿ ಮರಗಳ ಆರೈಕೆ, ರಕ್ಷಣೆ, ಪೋಷಣೆ ಹಾಗೂ ನಗರ ಅರಣ್ಯೀಕರಣ ಕಾರ್ಯದಲ್ಲಿ 2002ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ ವಿಜಯ್ ನಿಶಾಂತ್. ಬಿಬಿಎಂಪಿ ಅರಣ್ಯ ಘಟಕದಲ್ಲಿ ದಶಕಕ್ಕೂ ಹೆಚ್ಚು ಕಾಲ ಅಧಿಕೃತ ಸ್ವಯಂಸೇವಕನಾಗಿ ಕೆಲಸ ಮಾಡಿ, ನಗರ ವನ್ಯಜೀವಿಗಳ ರಕ್ಷಣೆ, ಅವುಗಳ ಪುನರ್ವಸತಿಯಲ್ಲಿ ಕೆಲಸ ಮಾಡಿದ್ದಾರೆ.

ಮಕ್ಕಳಿಗೆ ಪರಿಸರ ಹಾಗೂ ನಗರ ಅರಣ್ಯೀಕರಣದ ಬಗ್ಗೆ ಅರಿವು ಮೂಡಿಸಲು ಶಾಲೆ ಹಾಗೂ ಸಂಘಸಂಸ್ಥೆಗಳ ಮೂಲಕ ಶಾಲಾ–ಕಾಲೇಜುಗಳಲ್ಲಿ ಹಲವು ಜಾಗೃತಿ ಕಾರ್ಯಕ್ರಮ ನೀಡಿದ್ದಾರೆ. ನಗರದಲ್ಲಿ ಬುಡಮೇಲಾಗುತ್ತಿದ್ದ 6 ಸಾವಿರಕ್ಕೂ ಹೆಚ್ಚು ಮರಗಳನ್ನು ಹೋರಾಟದ ಮೂಲಕ ಅಲ್ಲಿಯೇ ಉಳಿಸಿದ್ದಾರೆ. ಇದರ ಜೊತೆಗೆ, ಅಭಿವೃದ್ಧಿ ಕಾಮಗಾರಿಯಿಂದ ನಾಶವಾಗುವ ಬೃಹತ್ ಮರಗಳನ್ನು ಬುಡಸಮೇತ ಬೇರೆಡೆಗೆ ಸ್ಥಳಾಂತರಿಸಿ, ಮರುಜೀವ ನೀಡಿದ್ದಾರೆ.

ನಗರದ ಹಲವು ಭಾಗಗಳಲ್ಲಿ ಮರ–ಗಿಡಗಳಲ್ಲಿರುವ ಸಮಸ್ಯೆಯನ್ನು ಅರಿತು ಅವುಗಳನ್ನು ಶುದ್ಧ ಮಾಡಿ, ಔಷಧ ನೀಡಿದ್ದಾರೆ ವಿಜಯ್. ಈ ಕಾಯಕದಿಂದ ಅವರಿಗೆ ಭಾರತದ ಪ್ರಥಮ ಹಾಗೂ ಏಕೈಕ ‘ಟ್ರೀ ಡಾಕ್ಟರ್’ ಎಂಬ ಖ್ಯಾತಿಯೂ ಬಂದಿದೆ. ನಾಲ್ಕು ಸದಸ್ಯರ ತಂಡದ ವೃಕ್ಷ ಪ್ರತಿಷ್ಠಾನದ ವತಿಯಿಂದ ಜಯನಗರ, ಪಟ್ಟಾಭಿರಾಮನಗರ, ಬೈರಸಂದ್ರದಲ್ಲಿರುವ ಎಲ್ಲ ಮರಗಳ ಸಮೀಕ್ಷೆ ಮಾಡಿ, ಪ್ರತಿಯೊಂದು ಮರವನ್ನು ‘ಟ್ರೀ ಮ್ಯಾಪಿಂಗ್’ನಲ್ಲಿ ಅಳವಡಿಸಿ, ಮಾಹಿತಿ ಒದಗಿಸಿದ್ದಾರೆ. ರಾಜ್ಯದ ಪ್ರಥಮ ‘ವೃಕ್ಷ ಸಮಿತಿ’ಯ ಸದಸ್ಯರೂ ಆಗಿದ್ದರು.

ಬನ್ನೇರುಘಟ್ಟ ಅರಣ್ಯ ವ್ಯಾಪ್ತಿಯಲ್ಲಿ ಅಕ್ರಮ ಕ್ವಾರಿಗೆ ತಡೆ, ಹುಬ್ಬಳ್ಳಿ–ಅಂಕೋಲ ರೈಲ್ವೆ ಯೋಜನೆಯಿಂದಾಗುವ ಪರಿಣಾಮದ ಅರಿವು, ಹೆಸರಘಟ್ಟವನ್ನು ಮೀಸಲು ಸಂರಕ್ಷಿತ ಪ್ರದೇಶವಾಗಿಸುವ ಹೋರಾಟದಲ್ಲಿ ಮುಂದಿದ್ದಾರೆ ವಿಜಯ್.

ಸಾಕುಪ್ರಾಣಿಗಳ ನಿಗಾಕ್ಕೆ ‘ಸ್ಮಾರ್ಟ್ ಬೆಲ್ಟ್’

ಹೆಸರು : ಬಿ.ಎನ್. ವಿಸ್ಮಯಾ, ಪಲ್ಲವಿ ಗೋಪಿನಾಥ್ ಹಾಗೂ ಪ್ರಾರ್ಥನಾ ಭಟ್
ವೃತ್ತಿ : ವಿದ್ಯಾರ್ಥಿಗಳು
ಸಾಧನೆ : ಫಾಂಡ್ ಹೆಸರಿನಲ್ಲಿ ನವೋದ್ಯಮ ಸ್ಥಾಪನೆ

ಸಾಕುಪ್ರಾಣಿಗಳ ಆರೋಗ್ಯ ಹಾಗೂ ಚಲನವಲನದ ಮೇಲೆ ನಿಗಾ ಇಡಲು ಪಿಇಎಸ್ ವಿಶ್ವವಿದ್ಯಾಲಯದ ಮೂವರು ವಿದ್ಯಾರ್ಥಿನಿಯರು ಸ್ಮಾರ್ಟ್ ಬೆಲ್ಟ್ ಅಭಿವೃದ್ಧಿಪಡಿಸಿದ್ದಾರೆ.

ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ ಆ್ಯಂಡ್ ಕಮ್ಯುನಿಕೇಷನ್ ವಿಭಾಗದ ಬಿ.ಎನ್. ವಿಸ್ಮಯಾ, ಪಲ್ಲವಿ ಗೋಪಿನಾಥ್ ಹಾಗೂ ಪ್ರಾರ್ಥನಾ ಭಟ್ ಅವರು ‘ಫಾಂಡ್ ಫ್ಲೂಪಿಟ್ ಸ್ಮಾರ್ಟ್ ಬೆಲ್ಟ್’ ನಿರ್ಮಾಣದ ರೂವಾರಿಗಳು. ಇವರು ‘ಫಾಂಡ್’ ಹೆಸರಿನಲ್ಲಿ ನವೋದ್ಯಮ ಸ್ಥಾಪಿಸಿದ್ದು, ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಸುರೇಶ್ ಎನ್. ಅವರ ಮಾರ್ಗದರ್ಶನದಲ್ಲಿ ತಮ್ಮ ಯೋಜನೆಯನ್ನು ಕಾರ್ಯಗತ ಮಾಡಿದ್ದಾರೆ.

ಈ ಬೆಲ್ಟ್ ಸ್ಮಾರ್ಟ್ ಬ್ಯಾಂಡ್ ಮಾದರಿ ಕಾರ್ಯನಿರ್ವಹಿಸಲಿದೆ. ನಾಯಿ, ಬೆಕ್ಕು ಸೇರಿದಂತೆ ವಿವಿಧ ಸಾಕು ಪ್ರಾಣಿಗಳಿಗೆ ಈ ಬೆಲ್ಟ್ ಅಳವಡಿಸಬಹುದಾಗಿದೆ. ಬೆಲ್ಟ್‌ನಲ್ಲಿ ಅಳವಡಿಸಿರುವ ಸ್ಮಾರ್ಟ್ ಸಾಧನಕ್ಕೆ ಮೊಬೈಲ್ ಆ್ಯಪ್ ಮೂಲಕ ಸಂಪರ್ಕ ಸಾಧಿಸಬಹುದಾಗಿದೆ.

ಬೆಲ್ಟ್‌ನಲ್ಲಿರುವ ಸಾಧನಕ್ಕೆ ಒಮ್ಮೆ ಚಾರ್ಜ್ ಮಾಡಿದರೆ 57 ಗಂಟೆಗಳು ಕಾರ್ಯನಿರ್ವಹಿಸಲಿದೆ. ಬೆಲ್ಟ್ ಹೊಂದಿದ ಪ್ರಾಣಿಯ ದೇಹದ ತಾಪಮಾನ, ಸೇವಿಸಿದ ಆಹಾರದ ಪ್ರಮಾಣ ಸೇರಿದಂತೆ ವಿವಿಧ ಮಾಹಿತಿಗಳು ಆ್ಯಪ್ ಮೂಲಕ ಲಭ್ಯವಾಗಲಿವೆ. ಆಹಾರ ಒದಗಿಸುವ ಸಮಯ ಬಂದಾಗ ಮೊಬೈಲ್‌ಗೆ ಎಚ್ಚರಿಕೆಯ ಸಂದೇಶ ಬರಲಿದೆ. ಸಾಕು ಪ್ರಾಣಿಗಳ ಆರೋಗ್ಯ ವೃದ್ಧಿಗೆ ಈ ಬೆಲ್ಟ್ ಸಹಕಾರಿಯಾಗಿದೆ.

ಹೊಸ ತಲೆಮಾರಿನ ಭರವಸೆ

ಹೆಸರು : ದಾದಾಪೀರ್ ಜೈಮನ್
ವೃತ್ತಿ : ಗಣಿತ ಶಿಕ್ಷಕ
ಸಾಧನೆ : ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಕಥೆಗಾರ

ತಮ್ಮ ಚೊಚ್ಚಲ ಕಥಾ ಸಂಕಲನ ’ನೀಲಕುರಿಂಜಿ‘ಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರಕ್ಕೆ ಭಾಜನರಾದ ದಾದಾಪೀರ್ ಜೈಮನ್ ಕನ್ನಡದ ಹೊಸ ತಲೆಮಾರಿನ ಭರವಸೆಯ ಕವಿ, ಕಥೆಗಾರ. ಅವರ ಬರಹದ್ದು ಮೃದು ಮತ್ತು ನವಿರು ಧೋರಣೆ. ಆ ಮೂಲಕವೇ ತಮ್ಮ ಕಥೆ, ಕವಿತೆ ಹಾಗೂ ಅನುವಾದಗಳಲ್ಲಿ ಜೈಮನ್ ಸ್ವಂತಿಕೆಯನ್ನು ಕಂಡುಕೊಳ್ಳಲು ಹವಣಿಸುತ್ತಿರುವುದು ಎದ್ದು ಕಾಣುತ್ತದೆ. ಬೆಂಗಳೂರಿನ ಶಾಲೆಯ ಈ ಗಣಿತದ ಮೇಷ್ಟ್ರು, ಸಂಖ್ಯೆಗಳ ಜತೆ ಸರಸವಾಡಿದಷ್ಟೇ ಸಲೀಸಾಗಿ ಪದಗಳಿಗೂ ಜೀವ ತುಂಬಬಲ್ಲವರು. ಅವರು ಅನುವಾದಿಸಿದ ’ಪರ್ದಾ & ಪಾಲಿಗಾಮಿ‘ ಕೃತಿಗೆ ಕುವೆಂಪು ಭಾಷಾ ಭಾರತಿ ಪುರಸ್ಕಾರ ಸಂದಿದೆ.

ಕರ್ತವ್ಯದ ಜೊತೆ ಸಮಾಜಮುಖಿ ಕೆಲಸ

ಹೆಸರು : ಎಲ್.ವೈ. ರಾಜೇಶ್
ವೃತ್ತಿ : ಇನ್‌ಸ್ಪೆಕ್ಟರ್
ಸಾಧನೆ : ಕ್ಯೂಆರ್ ಕೋಡ್ ಆಧರಿತ ದರ್ಪಣ ವ್ಯವಸ್ಥೆಯ ಜಾರಿ

ಬಂಡೆಪಾಳ್ಯ ಠಾಣೆ ಇನ್‌ಸ್ಪೆಕ್ಟರ್ ಎಲ್.ವೈ. ರಾಜೇಶ್, ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲ್ಲೂಕಿನವರು. ವಕೀಲರಾಗಿ ವೃತ್ತಿ ಆರಂಭಿಸಿದ್ದ ಇವರು, 1998ನೇ ಬ್ಯಾಚ್ ಪಿಎಸ್ಐ ಆಗಿ ಪೊಲೀಸ್ ಇಲಾಖೆ ಸೇರಿದ್ದಾರೆ. ತಂದೆ ಲಕ್ಷ್ಮಯ್ಯ ಹಾಗೂ ತಾಯಿ ಯಲ್ಲಮ್ಮ.

ಹೊರ ರಾಜ್ಯದವರನ್ನು ಪ್ರತಿ ಭಾನುವಾರ ಒಂದೆಡೆ ಸೇರಿಸಿ, ಶಿಕ್ಷಕರಿಂದ ಕನ್ನಡದ ಪಾಠ ಮಾಡಿಸುತ್ತಿದ್ದರು. ಠಾಣೆಗೆ ಬರುವ ಹಿಂದಿ–ಇಂಗ್ಲಿಷ್ ಭಾಷಿಕರಿಗೆ, ‘30 ದಿನಗಳಲ್ಲಿ ಕನ್ನಡ ಕಲಿಯಿರಿ’ ಪುಸ್ತಕ ನೀಡುತ್ತಿದ್ದರು. ಎಸ್ಸೆಸ್ಸೆಲ್ಸಿ ಅನುತ್ತೀರ್ಣವಾಗುವ ವಿದ್ಯಾರ್ಥಿಗಳನ್ನು ಗುರುತಿಸಿ, ‘ದಾರಿದೀಪ’ ಹೆಸರಿನಲ್ಲಿ ಶಿಕ್ಷಕರಿದ ಉಚಿತ ಪಾಠ ಮಾಡಿಸುತ್ತಿದ್ದಾರೆ.

ಪೊಲೀಸರ ಕೆಲಸದ ಬಗ್ಗೆ ಜನರ ಅಭಿಪ್ರಾಯ ಸಂಗ್ರಹಿಸಲು ಕ್ಯೂ ಆರ್ ಕೋಡ್ ಆಧರಿತ ದರ್ಪಣ ವ್ಯವಸ್ಥೆ ಜಾರಿಗೊಳಿಸಿದ್ದಾರೆ. ಈ ವ್ಯವಸ್ಥೆ ಆಗ್ನೇಯ ವಿಭಾಗದ ಎಲ್ಲ ಠಾಣೆಗಳಿಗೂ ವಿಸ್ತರಣೆ ಆಗಿದೆ.

ದೇವನಹಳ್ಳಿ ಸಂಚಾರ ಠಾಣೆಯಲ್ಲಿದ್ದಾಗ ‘ಗೋಲ್ಡನ್ ಅವರ್’ ವ್ಯವಸ್ಥೆ ಜಾರಿಗೆ ತಂದು ಗಾಯಾಳುಗಳಿಗೆ ತ್ವರಿತ ಚಿಕಿತ್ಸೆ ಸಿಗುವಂತೆ ಮಾಡಿದ್ದರು. ಸೈಬರ್ ಕ್ರೈಂ ಬಗ್ಗೆ ಜಾಗೃತಿ ಕಿರುಚಿತ್ರ ನಿರ್ಮಿಸಿದ್ದರು.

ಸ್ನೇಹಿತರ ಸಹಕಾರದಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೊಡಿಸುತ್ತಿದ್ದಾರೆ. ಸರ್ಕಾರಿ ಶಾಲೆಯ ಪ್ರತಿಭಾವಂತ ಮಕ್ಕಳನ್ನು ದತ್ತು ಪಡೆದು ಉನ್ನತ ವ್ಯಾಸಂಗದವರಿಗೆ ಶಿಕ್ಷಣದ ಖರ್ಚು ಭರಿಸುತ್ತಿದ್ದಾರೆ. ಕರ್ತವ್ಯದಲ್ಲೂ ಚುರುಕಾಗಿರುವ ಇವರಿಗೆ 2017ರಲ್ಲಿ ಮುಖ್ಯಮಂತ್ರಿ ಚಿನ್ನದ ಪದಕ ಲಭಿಸಿದೆ.

ಆಲ್ ಇಂಡಿಯಾ ಪೊಲೀಸ್ ಡ್ಯೂಟಿ ಮೀಟ್‌ನಲ್ಲೂ ಎರಡು ಪದಕ ಪಡೆದಿದ್ದ ರಾಜೇಶ್, ನಗದು ಬಹುಮಾನವಾಗಿ ಬಂದ ₹ 5 ಲಕ್ಷವನ್ನು ಪ್ರತಿಭಾವಂತ ಮಕ್ಕಳ ಓದಿಗೆ ವ್ಯಯಿಸಿದ್ದರು.

ಎಲೆಕ್ಟ್ರಿಕ್ ವಾಹನ ಕಂಪನಿ ಕಟ್ಟಿದ ಕನ್ನಡಿಗ

ಹೆಸರು : ಮುರಳಿ ಮೋಹನ್
ವೃತ್ತಿ : ಉದ್ಯಮಿ
ಸಾಧನೆ : ಎಲೆಕ್ಟ್ರಿಕ್ ವಾಹನಗಳ ತಯಾರಿಕೆಯಲ್ಲಿ ವಿಕ್ರಮ

ಬಡತನದಲ್ಲೂ ಓದಿ ಎಲೆಕ್ಟ್ರಿಕ್ ವಾಹನ ತಯಾರಿಕೆ ಕಂಪನಿ ಕಟ್ಟಿರುವ ಕನ್ನಡಿಗ ಮುರುಳಿ ಮೋಹನ್, ಕೋಲಾರ ಜಿಲ್ಲೆಯ ಎಸ್. ಅಗ್ರಹಾರದವರು. ತಂದೆ ಮುನಿವೆಂಕಟಪ್ಪ ಹಾಗೂ ತಾಯಿ ಕಮಲಮ್ಮ.

ಹೆತ್ತವರ ಜೊತೆ ಕೂಲಿ ಮಾಡುತ್ತಲೇ ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿದ್ದ ಮುರಳಿ ಮೋಹನ್ ಅವರಿಗೆ ಕಡಿಮೆ ಅಂಕ ಬಂದಿತ್ತು. ಇದೊಂದೇ ಕಾರಣಕ್ಕೆ ಪಿಯು ವಿಜ್ಞಾನ, ವಾಣಿಜ್ಯ ವಿಭಾಗದಲ್ಲಿ ಸೀಟು ನೀಡಲು ಕಾಲೇಜುಗಳು ನಿರಾಕರಿಸಿದವು. ತಮ್ಮಿಷ್ಟದ ವಿಷಯದಲ್ಲಿ ಓದಲು ಆಗಲಿಲ್ಲವೆಂಬ ಕೊರಗಿನಲ್ಲೇ ಹೆತ್ತವರಿಗೆ ಆಸರೆಯಾಗಬೇಕೆಂದು ದುಡಿಯಲು ಬೆಂಗಳೂರಿಗೆ ಬಂದರು.

ಬಿಡುವಿನ ಅವಧಿಯಲ್ಲೇ ತಾಂತ್ರಿಕ ವಿದ್ಯಾಭ್ಯಾಸ ಮುಗಿಸಿ ಟೊಯೊಟಾ ಕಿರ್ಲೋಸ್ಕರ್‌ನ ಐಸಿನ್ ಟೆಕೊಕಾ ಕಂಪನಿಯಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದರು. ಜನರಿಗೆ ತಮ್ಮದೇ ಸ್ವಂತ ಉತ್ಪನ್ನ ನೀಡಬೇಕೆಂಬ ತುಡಿತ ಮಾತ್ರ ಕಡಿಮೆ ಆಗಿರಲಿಲ್ಲ. ಅವಾಗಲೇ, ಎಲೆಕ್ಟ್ರಿಕ್ ವಾಹನ ತಯಾರಿಕೆ ಕ್ಷೇತ್ರಕ್ಕೆ ಲಗ್ಗೆ ಇಟ್ಟರು. ಸಂಬಳಕ್ಕೆ ಕೈಚಾಚಿ ಕುಳಿತರೆ ಸಾಧನೆ ಅಸಾಧ್ಯವೆಂದು ತಿಳಿದು ಸ್ವಂತ ಆಲೋಚನೆಯೊಂದಿಗೆ ಮಾರುತಿಸ್ಯಾನ್ ಇವಿ ಕಂಪನಿ ಹುಟ್ಟು ಹಾಕಿದ್ದಾರೆ. ಎಲೆಕ್ಟ್ರಿಕ್ ಸ್ಕೂಟರ್ ಹಾಗೂ ಮೋಟಾರ್ ಸೈಕಲ್ ತಯಾರಿಕೆಯಲ್ಲಿ ಯಶಸ್ಸು ಸಾಧಿಸಿದ್ದಾರೆ.

2019ರ ಡಿಸೆಂಬರ್‌ನಲ್ಲಿ ಮಾರುತಿಸ್ಯಾನ್ ಇವಿ ಆರಂಭಿಸಿದರು. ಮೊದಲ ಹಂತದಲ್ಲೇ 850 ಎಲೆಕ್ಟ್ರಿಕ್ ವಾಹನಗಳು ಮಾರಾಟವಾದವು. ಈ ಮೂಲಕ ಕಂಪನಿಯು ಎಲೆಕ್ಟ್ರಿಕ್ ಬೈಕ್‌ಗಳ ತಯಾರಿಕೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸಿತು. ಆಟೋಮೇಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾದಿಂದ (ಎಆರ್‌ಐ) ಮಾನ್ಯತೆ ಪಡೆದ ರಾಜ್ಯದ ಮೊದಲ ಕಂಪನಿ ಇದಾಗಿದೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ವಾಹನ ತಯಾರಿಕೆ ಘಟಕವನ್ನು ತೆರೆದಿದ್ದು, ಈ ಭಾಗದ ಯುವಕರಿಗೂ ಉದ್ಯೋಗ ನೀಡುತ್ತಿದ್ದಾರೆ. ರಾಜ್ಯದ 36 ನಗರಗಳಲ್ಲಿ ಇವರ ವಾಹನ ಮಾರಾಟ ಮಳಿಗೆಗಳಿವೆ. ದ್ವಿಚಕ್ರ ವಾಹನಗಳ ಜೊತೆಯಲ್ಲೇ ನಾಲ್ಕು ಚಕ್ರದ ಗೂಡ್ಸ್ ವಾಹನ ಪರಿಚಯಿಸಲು ತಯಾರಿ ನಡೆಸಿದ್ದಾರೆ.

ನವೋದ್ಯಮಿ: ಮಹಿಳಾ ಸಬಲೀಕರಣಕ್ಕೆ ಮಾದರಿ

ಹೆಸರು : ಮೇಘನಾ ಜೈನ್
ವೃತ್ತಿ : ನವೋದ್ಯಮಿ
ಸಾಧನೆ : ಕೇಕ್ ಕಪ್ ತಯಾರಿಯ ಮೂಲಕ ಬ್ರ್ಯಾಂಡ್ ಸೃಷ್ಟಿ

ವಿದ್ಯಾರ್ಥಿದೆಸೆಯಲ್ಲೇ ಬೇಕರಿ ಕ್ಷೇತ್ರದತ್ತ ಮೂಡಿದ ಒಲವು, ಈ ಯುವತಿಗೆ ನವೋದ್ಯಮದ ಮಾರ್ಗ ಕಂಡುಕೊಳ್ಳಲು ಸಾಧ್ಯವಾಯಿತು.

ಕೇಕ್ ಕಪ್‌ಗಳ ತಯಾರಿಸಿ, ಮಾರಾಟ ಮಾಡುವಲ್ಲಿ ತಮ್ಮದೇ ಆದ ’ಬ್ರ್ಯಾಂಡಿಂಗ್’ ಸೃಷ್ಟಿಸಿಕೊಂಡಿರುವ ಬೆಂಗಳೂರಿನ ಮೇಘನಾ ಜೈನ್, ಮಹಿಳಾ ಸಬಲೀಕರಣಕ್ಕೆ ಮಾದರಿಯಾಗಿದ್ದಾರೆ.

ಹೊಸತನ ಮತ್ತು ವಿಭಿನ್ನ ಮಾದರಿಯ ಕೇಕ್‌ಗಳ ವಹಿವಾಟು ನಡೆಸುತ್ತಿರುವ ಮೇಘನಾ ಜೈನ್, ತಮ್ಮ ವ್ಯಾಪಾರ ವಹಿವಾಟಿನ ಜಾಲವನ್ನು ದೇಶದಾದ್ಯಂತ ವಿಸ್ತರಿಸಿಕೊಂಡಿದ್ದಾರೆ. ಇವರಲ್ಲಿನ ಉದ್ಯೋಗಿಗಳು ಸಹ ಬಹುತೇಕರು ಮಹಿಳೆಯರು. ಪ್ರತಿಯೊಂದು ಕಾರ್ಯದಲ್ಲೂ ಮಹಿಳೆಯರಿಗೆ ಆದ್ಯತೆ. ಪದವಿ ಪಡೆದ ಬಳಿಕ ಮೂರು ತಿಂಗಳು ತರಬೇತಿ ಪಡೆದು, ಸ್ವಂತ ನವೋದ್ಯಮ ಆರಂಭಿಸಬೇಕು ಎನ್ನುವ ಯೋಚನೆ ಮೂಡಿದಾಗ ಹತ್ತಾರು ಪ್ರಶ್ನೆಗಳು, ಸವಾಲುಗಳು ಎದುರಿಸಿದರು. ಯುವತಿಗೆ ಏಕೆ ಉದ್ಯಮ ಎನ್ನುವ ಕಟುವಾದ ಟೀಕೆಗಳಿಗೆ ಸೊಪ್ಪು ಹಾಕಲ್ಲ. ಆತ್ಮಸ್ಥೈರ್ಯ, ಆತ್ಮವಿಶ್ವಾಸದಿಂದ ಸಣ್ಣ ಉದ್ಯಮವನ್ನು ಮೊದಲು ಮನೆಯಿಂದಲೇ ಆರಂಭಿಸಿದರು. ನಂತರ ಜೆ.ಪಿ. ನಗರದಲ್ಲಿ ’ಡ್ರೀಮ್ ಎ ಡಜನ್’ ಹೆಸರಿನಲ್ಲಿ ಬೇಕರಿ ತೆರೆದರು.

ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಕೇಕ್ ಕಪ್‌ಗಳ ವಹಿವಾಟು ನಡೆಸುತ್ತಿರುವ ಮೇಘನಾ ಅವರು ವಿಶ್ವದಾದ್ಯಂತ ವಹಿವಾಟು ವಿಸ್ತರಿಸುವ ಉದ್ದೇಶ ಹೊಂದಿದ್ದಾರೆ.

ಕನ್ನಡ ಕೃತಿಗಳಿಗೆ ‘ಇ’ ಬೆಳಕು

ಹೆಸರು : ವಸಂತ ಶೆಟ್ಟಿ
ವೃತ್ತಿ : ಮೈಲ್ಯಾಂಗ್ ಕ್ರಿಯೇಟರ್ಸ್ ಸಹಸ್ಥಾಪಕ
ಸಾಧನೆ : ಕನ್ನಡ ಕೃತಿಗಳ ಇ-ಬುಕ್, ಆಡಿಯೊ ಬುಕ್ ರೂಪಿಸಿರುವುದು

ವಸಂತ ಶೆಟ್ಟಿ ಅವರು ಹುಟ್ಟಿದ್ದು ಉಡುಪಿ ಜಿಲ್ಲೆಯಲ್ಲಿ. ಓದಿದ್ದು, ಬೆಳೆದಿದ್ದು ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನಲ್ಲಿ. ಬಿ.ಇ ಎಲೆಕ್ಟ್ರಾನಿಕ್ಸ್ ಪದವಿ ಪಡೆದಿರುವ ಶೆಟ್ಟಿ, ತಕ್ಷಶಿಲಾ ಸಂಸ್ಥೆಯಲ್ಲಿ ಪಬ್ಲಿಕ್ ಪಾಲಿಸಿ ಅಧ್ಯಯನ ಮಾಡಿದ್ದಾರೆ.

ಮೊಟೊರೊಲಾ, ಟಿ.ಸಿ.ಎಸ್, ಸಿಸ್ಕೋ ಮುಂತಾದ ಕಂಪನಿಗಳಲ್ಲಿ 15 ವರ್ಷ ಕೆಲಸ ಮಾಡಿ, ಈಗ ಮೈಲ್ಯಾಂಗ್ ಕ್ರಿಯೇಟರ್ಸ್ ಸಹಸ್ಥಾಪಕರಾಗಿದ್ದಾರೆ. ಕನ್ನಡವನ್ನು ಆಧುನಿಕ ಕಾಲಘಟ್ಟಕ್ಕೆ ತಕ್ಕಂತೆ ಸಜ್ಜುಗೊಳಿಸುವ ಹಲವು ಲ್ಯಾಂಗ್ವೇಜ್ ಪ್ಲಾನಿಂಗ್ (ನುಡಿಹಮ್ಮುಗೆ) ಯೋಜನೆಗಳಲ್ಲಿ ಹನ್ನೆರಡು ವರ್ಷಗಳಿಂದ ಸಕ್ರೀಯ ಪಾಲ್ಗೊಳ್ಳುತ್ತಿದ್ದಾರೆ. ’ಕರ್ನಾಟಕವೊಂದೇ‘ ಮತ್ತು ’ಕನ್ನಡ ಜಗತ್ತು‘ ಅನ್ನುವ ಎರಡು ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಪುಸ್ತಕಗಳನ್ನು ಜಗತ್ತಿನ ಯಾವುದೇ ಮೂಲೆಯಿಂದ, ತಮ್ಮ ಮೊಬೈಲ್ ಫೋನ್ ಮೂಲಕ ಕೊಂಡು ಇ-ಬುಕ್ ರೂಪದಲ್ಲಿ ಓದುವ, ಆಡಿಯೋ ಪುಸ್ತಕದ ರೂಪದಲ್ಲಿ ಕೇಳುವ ಅವಕಾಶವನ್ನು ಮೈಲ್ಯಾಂಗ್ ಕಲ್ಪಿಸಿದೆ. ಇದಲ್ಲದೇ ಕರ್ನಾಟಕದಾದ್ಯಂತ ನೆಲೆಸಿರುವ ಬರಹಗಾರ/ಬರಹಗಾರ್ತಿಯರ ಕತೆಗಳನ್ನು ಆಸಕ್ತ ದನಿಕಲಾವಿದರ ನೆರವಿನಲ್ಲಿ ಆಡಿಯೋಕತೆಗಳಾಗಿಸಿ ಕೇಳಿಸುವ ವಿನೂತನ ಸಮುದಾಯದ ಕಲ್ಪನೆಯ ವೇದಿಕೆಯೊಂದನ್ನು ಮೈಲ್ಯಾಂಗ್ ಆಡಿಯೋ ಹೆಸರಿನಲ್ಲಿ ಶುರು ಮಾಡಿದ್ದಾರೆ. ಈ ಮೂಲಕ ಹೊಸ ತಲೆಮಾರಿನ ಕನ್ನಡಿಗರನ್ನು ಆಡಿಯೋದ ಮೂಲಕ ಕನ್ನಡ ಓದಿನತ್ತ ಕರೆ ತರುವ ಪ್ರಯತ್ನ ಮೈಲ್ಯಾಂಗ್ ಮೂಲಕ ಮಾಡುತ್ತಿದ್ದಾರೆ.

ಕನ್ನಡವನ್ನು ಸಿನಿಮಾ, ಸಾಹಿತ್ಯಕ್ಕೆ ಸೀಮಿತಗೊಳಿಸದೇ ಹೊಸ ಕಾಲದ ಅಗತ್ಯಗಳನ್ನೂ ಪೂರೈಸುವಂತೆ ವಿಜ್ಞಾನ ಮತ್ತು ತಂತ್ರಜ್ಞಾನದ ನೆಲೆಯಲ್ಲೂ ಗಟ್ಟಿಗೊಳಿಸುವ ಹಲವಾರು ಯೋಜನೆಗಳನ್ನು ಮುನ್ನೋಟ ಅನ್ನುವ ತಂಡದ ಮೂಲಕ ಸಾಧ್ಯವಾಗಿಸುವ ಕೆಲಸದಲ್ಲೂ ವಸಂತ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.

ಅಸ್ಮಿತೆಗಾಗಿ ಹೋರಾಟ

ಹೆಸರು: ರೂಮಿ ಹರೀಶ್
ವೃತ್ತಿ: ಸಂಗೀತಗಾರ್ತಿ
ಸಾಧನೆ: ಲಿಂಗತ್ವ ಅಲ್ಪಸಂಖ್ಯಾತರ ಪರವಾದ ಹೋರಾಟ

ಖ್ಯಾತ ಹಿಂದೂಸ್ತಾನಿ ಸಂಗೀತಗಾರ್ತಿ, ಈಗ ಲಿಂಗ ಪರಿವರ್ತಿತ ಪುರುಷ. ಲಿಂಗತ್ವ ಅಲ್ಪಸಂಖ್ಯಾತರ ಪರವಾಗಿ ಅನೇಕ ವರ್ಷಗಳಿಂದ ಲಿಂಗತ್ವ ಹೋರಾಟ ಮಾಡುತ್ತಿದ್ದಾರೆ ಬೆಂಗಳೂರಿನ ರೂಮಿ ಹರೀಶ್.

ಬಹುಮುಖ ಪ್ರತಿಭೆ ಎಂದೇ ಗುರುತಿಸಬಹುದಾದ ಇವರು, ಲಿಂಗತ್ವ ಅಲ್ಪಸಂಖ್ಯಾತರೆಂದರೆ ಮೂಗು ಮುರಿಯುವ ವ್ಯವಸ್ಥೆಯಲ್ಲಿ ಅವರ ಬೆನ್ನಿಗೆ ನಿಲ್ಲುವ ಇವರು ಕಾನೂನಿನ ನೆರವು ಒದಗಿಸುವ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ನಿರಂತರವಾಗಿ ನಡೆಸುತ್ತಿದ್ದಾರೆ. ಈ ವಿಷಯದಲ್ಲಿ ಪ್ರಾಜೆಕ್ಟ್ ವರ್ಕ್‌ಗಳನ್ನೂ ಅವರು ಮಾಡಿದ್ದಾರೆ. ಅಂಕಣಕಾರರಾಗಿಯೂ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಸಂಗೀತ ಕ್ಷೇತ್ರದಲ್ಲೂ ಅವರದು ದೊಡ್ಡ ಹೆಸರು. ಆ ಕ್ಷೇತ್ರದಲ್ಲಿನ ಲಿಂಗತಾರತಮ್ಯದ ನೆಲೆಗಳನ್ನು ಸೂಕ್ಷ್ಮಸ್ತರದಲ್ಲಿ ವಿರೋಧಿಸುತ್ತಲೇ, ಇದೀಗ ಚಿತ್ರಕಲೆಯ ಮೂಲಕ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ನೋವು–ನಲಿವುಗಳು, ಪ್ರಸಕ್ತ ವಿದ್ಯಮಾನಗಳಿಗೆ ಕನ್ನಡಿ ಹಿಡಿಯುವ ಕೆಲಸ ಮಾಡುತ್ತಿದ್ದಾರೆ. ವಿಚಾರಗೋಷ್ಠಿಗಳಲ್ಲಿ ಸಮುದಾಯದ ಪರವಾಗಿ ಮಾತನಾಡುವ ಗಟ್ಟಿ ಧ್ವನಿ ಇವರು.

ಪ್ರಜಾವಾಣಿ
ಪ್ರಜಾವಾಣಿ ಸಾಧಕರು 2023

ರಾಜ್ಯದ ಪ್ರಥಮ ಕ್ರಿಕೆಟ್ ವಿಡಿಯೊ ವಿಶ್ಲೇಷಕಿ

ಹೆಸರು : ಮಾಲಾ ರಂಗಸ್ವಾಮಿ
ವೃತ್ತಿ : ಬಿಸಿಸಿಐ ವಿಡಿಯೊ ವಿಶ್ಲೇಷಕಿ
ಸಾಧನೆ : ಕರ್ನಾಟಕದಿಂದ ಈ ಹುದ್ದೆಗೆ ಆಯ್ಕೆಯಾದ ಮೊದಲ ಮಹಿಳೆ

ಬೆಂಗಳೂರು ಹೊರವಲಯದ ಆಲೂರಿನ ಕ್ರಿಕೆಟ್ ಕ್ರೀಡಾಂಗಣದಲ್ಲಿ ರಣಜಿ ಪಂದ್ಯ ನಡೆದಿತ್ತು. ಇದ್ದಕ್ಕಿದ್ದಂತೆ ಮಳೆ ಆರಂಭವಾಯಿತು. ಬೌಂಡರಿಲೈನ್ ಬಳಿ ಇದ್ದ ಕಂಬವನ್ನು ಸರಸರನೇ ಹತ್ತಿದ ಆ ಮಹಿಳೆ ಅಲ್ಲಿದ್ದ ಕ್ಯಾಮೆರಾವನ್ನು ಎತ್ತಿಕೊಂಡು ಪ್ಲಾಸ್ಟಿಕ್ ಕವರ್‌ನಲ್ಲಿ ಸುತ್ತಿ ಕೆಳಗಿಳಿದರು. ಅಷ್ಟರಲ್ಲಿ ಅವರು ಪೂರ್ತಿ ನೆನೆದು ಹೋಗಿದ್ದರು. ಆದರೆ ಅದನ್ನು ಲೆಕ್ಕಿಸದೇ ಕ್ಯಾಮೆರಾವನ್ನು ಸುರಕ್ಷಿತ ಜಾಗಕ್ಕೆ ತಲುಪಿಸಿ ನಿಟ್ಟುಸಿರು ಬಿಟ್ಟರು.

ಹೌದು; ಅವರೇ ಮಾಲಾ ರಂಗಸ್ವಾಮಿ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಯ ವಿಡಿಯೋ ವಿಶ್ಲೇಷಕಿ. ಕರ್ನಾಟಕದಿಂದ ಈ ಕಾರ್ಯಕ್ಕೆ ನೇಮಕವಾದ ಪ್ರಪ್ರಥಮ ಮಹಿಳೆ. ಬಿಸಿಸಿಐ ಪ್ರತಿಯೊಂದು ಪಂದ್ಯವನ್ನು ವಿಡಿಯೊ ದಾಖಲೆ ಮಾಡಿಕೊಳ್ಳುತ್ತದೆ. ಆ ಮೂಲಕ ಅಂಪೈರ್ ನಿರ್ಣಯಗಳ ವಿಶ್ಲೇಷಣೆ ಮತ್ತು ಆಟಗಾರರ ತರಬೇತಿ ಕಾರ್ಯಗಳಿಗೆ ಬಳಸುತ್ತದೆ. ಅಂತಹ ಮಹತ್ವದ ಕಾರ್ಯದಲ್ಲಿ ಮಾಲಾ ಪರಿಣತಿ ಗಳಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಬಿ.ಕಾಂ ಪದವೀಧರೆಯಾಗಿರುವ ಮಾಲಾ ಅವರ ವೃತ್ತಿ ಮತ್ತು ಪ್ರವೃತ್ತಿಗಳು ಕ್ರಿಕೆಟ್.

ರಣಜಿ ಪಂದ್ಯಗಳು, ಬಿಸಿಸಿಐ ಟೂರ್ನಿಗಳಲ್ಲಿ ಅವರು ವಿಡಿಯೊ ವಿಶ್ಲೇಷಕಿಯಾಗಿ ಕಾರ್ಯನಿರ್ವಹಿಸಲು ಆರಂಭಿಸಿ ಮೂರು ವರ್ಷಗಳಾಗಿವೆ. 2023ರ ಜನವರಿಯಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಆಯೋಜನೆಗೊಂಡ 19 ವರ್ಷದೊಳಗಿನ ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿಯೂ ಭಾರತ ತಂಡದ ವಿಡಿಯೊ ವಿಶ್ಲೇಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಎನ್‌ಸಿಎ, ಕರ್ನಾಟಕ 19 ವರ್ಷದೊಳಗಿನವರ ಮಹಿಳೆಯರ ಮತ್ತು ಸೀನಿಯರ್ ತಂಡಗಳಿಗೆ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಸೂಕ್ಷ್ಮ ಮತ್ತು ಶ್ರಮದ ಕಾರ್ಯವಾಗಿರುವ ವಿಡಿಯೊ ಅನಾಲಿಸ್ಟ್ ಕಾರ್ಯವನ್ನು ಮಹಿಳೆಯರೂ ಮಾಡಬಹುದು ಎಂದು ತೋರಿಸಿದ್ದಾರೆ.

ಈಜು ಪ್ರತಿಭೆ ದಾಖಲೆಗಳ ಒಡೆಯ

ಹೆಸರು : ಅನೀಶ್ ಗೌಡ
ಕಾನೂನು ವಿದ್ಯಾರ್ಥಿ
ಸಾಧನೆ : ರಾಷ್ಟ್ರೀಯ ಈಜುಕೂಟದಲ್ಲಿ ಪದಕಗಳ ಗೆಲುವು

ರಾಷ್ಟ್ರೀಯ ಸ್ಪರ್ಧೆಗಳಲ್ಲಿ 65 ಚಿನ್ನ, 29 ಬೆಳ್ಳಿ ಮತ್ತು 15 ಕಂಚಿನ ಪದಕಗಳ ಗೆಲುವು. ಜೂನಿಯರ್, ಸೀನಿಯರ್ ವಿಭಾಗಗಳಲ್ಲಿ ರಾಷ್ಟ್ರಮಟ್ಟದಲ್ಲಿ ಎರಡು ಹಾಗೂ ರಾಜ್ಯಮಟ್ಟದಲ್ಲಿ ಆರು ದಾಖಲೆಗಳ ಒಡೆಯ...

ಕರ್ನಾಟಕದ ಭರವಸೆಯ ಈಜು ಪ್ರತಿಭೆ ಅನೀಶ್ ಎಸ್.ಗೌಡ ಅವರ ಸಾಧನೆಯ ಒಂದು ಸಣ್ಣ ಝಲಕ್ ಇದು. ಕರ್ನಾಟಕವು ಹಲವು ಅಂತರರಾಷ್ಟ್ರೀಯ ಈಜುಪಟುಗಳನ್ನು ಈ ದೇಶಕ್ಕೆ ನೀಡಿದೆ. ಇಲ್ಲಿನ ಸಾಕಷ್ಟು ಸ್ಪರ್ಧಿಗಳು ರಾಷ್ಟ್ರಮಟ್ಟದಲ್ಲಿ ಛಾಪು ಮೂಡಿಸಿದ್ದಾರೆ.

ಕ್ರೈಸ್ಟ್ ವಿ.ವಿಯಲ್ಲಿ ಕಾನೂನು ಪದವಿ ಪಡೆಯುತ್ತಿರುವ 18 ವರ್ಷದ ಅನೀಶ್ ಕೂಡ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದಿರುವ ಈಜುಪಟು. ಸಿಂಗಪುರ ಮತ್ತು ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಕೂಟಗಳಲ್ಲಿ ದೇಶವನ್ನು ಪ್ರತಿನಿಧಿಸಿ ಎಂಟು ಪದಕ ಜಯಿಸಿದ್ದಾರೆ. 2022 ರಲ್ಲಿ ಪೆರುವಿನಲ್ಲಿ ನಡೆದಿದ್ದ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲೂ ಪಾಲ್ಗೊಂಡಿದ್ದರು.

ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಇದೇ ಅಕ್ಟೋಬರ್‌ನಲ್ಲಿ ನಡೆದಿದ್ದ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಮಿಂಚಿನ ಪ್ರದರ್ಶನ ನೀಡಿ, ರಾಜ್ಯಕ್ಕೆ ಮೂರು ಚಿನ್ನ ಹಾಗೂ ಎರಡು ಕಂಚಿನ ಪದಕ ಗೆದ್ದುಕೊಟ್ಟಿದ್ದರು. 200ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಹೊಸ ದಾಖಲೆ ಸ್ಥಾಪಿಸಿದ್ದರು. ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಆರು ಚಿನ್ನದ ಪದಕ ಗೆದ್ದು, ‘ಚಿನ್ನದ ಹುಡುಗ’ ಎಂಬ ಗೌರವಕ್ಕೆ ಪಾತ್ರರಾಗಿದ್ದರು.

ಸೈಕ್ಲಿಂಗ್‌ನಲ್ಲಿ ರಾಜ್ಯಕ್ಕೆ ‘ಕೀರ್ತಿ’

ಹೆಸರು : ಕೀರ್ತಿ ರಂಗಸ್ವಾಮಿ ಸಿ.
ಪದವಿ ವಿದ್ಯಾರ್ಥಿ
ಸಾಧನೆ : ರಾಷ್ಟ್ರೀಯ ಸೈಕ್ಲಿಂಗ್‌ನಲ್ಲಿ ಪದಕಗಳ ಗೆಲುವು

ಸೈಕ್ಲಿಂಗ್ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ ಮಿಂಚು ಹರಿಸುತ್ತಿರುವ ಕೀರ್ತಿ ರಂಗಸ್ವಾಮಿ ಸಿ. ಅವರು ಕರ್ನಾಟಕದ ಪ್ರತಿಭಾನ್ವಿತ ಕ್ರೀಡಾಪಟುಗಳಲ್ಲಿ ಒಬ್ಬರು. ಬೆಂಗಳೂರಿನ ಈ ಸೈಕ್ಲಿಸ್ಟ್, ರಸ್ತೆ ಮತ್ತು ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ಹಲವು ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಕಳೆದ ಆರು ವರ್ಷಗಳಲ್ಲಿ 10ಕ್ಕೂ ಅಧಿಕ ರಾಷ್ಟ್ರಮಟ್ಟದ ಚಾಂಪಿಯನ್‌ಷಿಪ್‌ಗಳಲ್ಲಿ ಪಾಲ್ಗೊಂಡು ಐದು ಚಿನ್ನ ಸೇರಿದಂತೆ 19 ಪದಕ ಜಯಿಸಿದ ಹೆಗ್ಗಳಿಕೆ ಅವರದ್ದು. ರಾಷ್ಟ್ರೀಯ ಟ್ರ್ಯಾಕ್ ಮತ್ತು ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್, ರಾಷ್ಟ್ರಮಟ್ಟದ ಸ್ಕೂಲ್ ಗೇಮ್ಸ್ ಚಾಂಪಿಯನ್‌ಷಿಪ್, ಖೇಲೊ ಇಂಡಿಯಾ ಮತ್ತು ಅಖಿಲ ಭಾರತ ಅಂತರ ವಿ.ವಿ ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ಅವರಿಗೆ ಪದಕ ದೊರೆತಿದೆ. ಗುಜರಾತ್‌ನಲ್ಲಿ ನಡೆದ 36ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಟ್ರ್ಯಾಕ್ ಸೈಕ್ಲಿಂಗ್‌ನ 3 ಕಿ.ಮೀ ವೈಯಕ್ತಿಕ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. ಅಸ್ಸಾಂನಲ್ಲಿ ಈಚೆಗೆ ನಡೆದಿದ್ದ ರಾಷ್ಟ್ರೀಯ ಸೀನಿಯರ್ ಟ್ರ್ಯಾಕ್ ಸೈಕ್ಲಿಂಗ್ ಕೂಟದಲ್ಲೂ ಕಂಚಿನ ಪದಕ ಕೊರಳಿಗೇರಿಸಿಕೊಂಡಿದ್ದರು.

2019 ರಲ್ಲಿ ಕೊರಿಯಾದ ಸೋಲ್‌ನಲ್ಲಿ ನಡೆದಿದ್ದ ಏಷ್ಯನ್ ಜೂನಿಯರ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ 4 ಕಿ.ಮೀ. ತಂಡ ವಿಭಾಗದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರಲ್ಲದೆ, ನವದೆಹಲಿಯಲ್ಲಿ ನಡೆದಿದ್ದ ಏಷ್ಯಾ ಕಪ್ ಟ್ರ್ಯಾಕ್ ಕೂಟದ 2 ಕಿ.ಮೀ ವೈಯಕ್ತಿಕ ವಿಭಾಗದಲ್ಲಿ ಸ್ಪರ್ಧಿಸಿದ್ದರು.

ಹೋರಾಟವೇ ಇವರ ಬದುಕು

ಹೆಸರು : ರವಿಕುಮಾರ್ ಕಂಚನಹಳ್ಳಿ
ವೃತ್ತಿ : ಸಾಮಾಜಿಕ ಹೋರಾಟಗಾರ, ಮಾಹಿತಿ ಹಕ್ಕು ಕಾರ್ಯಕರ್ತ
ಸಾಧನೆ : ಮೆಜೆಸ್ಟಿಕ್ ಅಂಡರ್‌ಪಾಸ್ ವ್ಯಾಪಾರಿಗಳ ಒತ್ತುವರಿ ತೆರವಿಗಾಗಿ ಹೋರಾಟ

ಮಾಹಿತಿ ಹಕ್ಕು ಕಾರ್ಯಕರ್ತರಾಗಿ ಗುರುತಿಸಿಕೊಂಡಿರುವ ರವಿಕುಮಾರ್ ತಮ್ಮ ಸಾಮಾಜಿಕ ಹೋರಾಟಗಳ ಮೂಲಕ ಗಮನ ಸೆಳೆಯುತ್ತಿರುವ ಯುವಕ. ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಕಂಚನಹಳ್ಳಿಯವರು.

ಬೆಂಗಳೂರಿನ ಮೆಜೆಸ್ಟಿಕ್ ಅಂಡರ್‌ಪಾಸ್‌ನಲ್ಲಿ ವ್ಯಾಪಾರಿಗಳ ಒತ್ತುವರಿ ವಿರುದ್ಧ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ಅದನ್ನು ತೆರವುಗೊಳಿಸಲು ಕಾರಣರಾಗಿದ್ದು ಇವರೇ. ಇ.ಡಿ. ಅಧಿಕಾರಿಗಳಿಂದ ಡಿ.ಕೆ. ಶಿವಕುಮಾರ್ ಬಂಧನದ ವೇಳೆ ಅವರ ಬೆಂಬಲಿಗರು ನಡೆಸಿದ ದಾಂದಲೆಯಿಂದ ಆದ ನಷ್ಟವನ್ನು ಅವರಿಂದಲೇ ವಸೂಲಿ ಮಾಡುವಂತೆ ಇವರು ಹೈಕೋರ್ಟ್‌ಗೆ ಅರ್ಜಿ ಹಾಕಿದ್ದು, ಹೈಕೋರ್ಟ್ ಸೂಚನೆಯಂತೆ ಸದ್ಯ ನಿವೃತ್ತ ನ್ಯಾಯಾಧೀಶರ ಸಮ್ಮುಖದಲ್ಲಿ ತನಿಖೆ ನಡೆದಿದೆ.

ಜಿಲ್ಲಾ ಮಟ್ಟದಲ್ಲೂ ಸಾಕಷ್ಟು ಅಕ್ರಮಗಳ ವಿರುದ್ಧ ಧ್ವನಿ ಎತ್ತಿದ್ದಾರೆ. ಕನಕಪುರ ಪೇಟೆಕೆರೆ ಉಳಿವಿನ ಹೋರಾಟ ಅದಕ್ಕೊಂದು ಉದಾಹರಣೆ. ಅನೇಕ ಹಗರಣಗಳನ್ನು ದಾಖಲೆ ಸಮೇತ ಬಯಲಿಗೆ ಎಳೆದಿದ್ದು, ಅದಕ್ಕೆ ಕಾನೂನಾತ್ಮಕವಾಗಿಯೂ ಹೋರಾಟ ನಡೆಸುತ್ತಿದ್ದಾರೆ. ತಮ್ಮ ಪ್ರಕರಣಗಳಲ್ಲಿ ತಾವೇ ವಾದ ಮಂಡಿಸುವುದು ಅವರ ವಿಶೇಷ. ಈ ಹೋರಾಟಗಳ ಸಲುವಾಗಿ ಇವರ ಮೇಲೆ ಹಲವು ಬಾರಿ ಹಲ್ಲೆ, ಕೊಲೆ ಯತ್ನಗಳೂ ನಡೆದಿವೆ. ಪೊಲೀಸರಿಂದ ಬಂಧನಕ್ಕೂ ಒಳಗಾಗಿದ್ದಾರೆ. ಆದರೂ, ಛಲ ಬಿಟ್ಟುಕೊಡದೇ ತಮ್ಮ ಕಾರ್ಯ ಮುಂದುವರಿಸಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್‌ನಿಂದ ಬಿಎಫ್‌ಎ ಪದವಿ ಪಡೆದಿರುವ ರವಿಕುಮಾರ್ ಕಲಾವಿದನಾಗಿ ಬದುಕು ರೂಪಿಸಿಕೊಳ್ಳಬೇಕಿತ್ತು. ಆದರೆ, ತಮ್ಮ ಸುತ್ತಲಿನ ಅನ್ಯಾಯದ ವಿರುದ್ಧ ಸಿಡಿದೇಳುವ ಮನೋಭಾವವೇ ಅವರನ್ನು ಸಾಮಾಜಿಕ ಹೋರಾಟಕ್ಕೆ ಪ್ರೇರೇಪಿಸಿತು. 2012ರಿಂದ ಅವರು ಈ ಬಗೆಯ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ನಾದದ ಬೆನ್ನೇರಿ...

ಹೆಸರು : ಅರುಣ್ ಕುಮಾರ್
ವೃತ್ತಿ : ವೀಣೆ ತಯಾರಿಕೆ
ಸಾಧನೆ : ಕಲಾ ಸೇವೆ

ರಾಜ್ಯದಲ್ಲಿ ಹಲಸಿನ ಮರದ ದಿಮ್ಮಿಗಳನ್ನು ಕೊರೆದು ವೀಣೆ ತಯಾರಿಸುವ ಏಕೈಕ ಗ್ರಾಮವೆಂದರೆ ದೊಡ್ಡಬಳ್ಳಾಪುರ ತಾಲ್ಲೂಕಿನ ಸಿಂಪಾಡಿಪುರ. ಈ ಊರಿನ ಹಳೆ ಚಿಗುರು ಮತ್ತು ಹೊಸ ಬೇರಿನ ನಡುವಿನ ಕೊಂಡಿಯಂತಿದ್ದಾರೆ ಅರುಣ್ ಕುಮಾರ್.

ಹುಟ್ಟಿದ ಹಳ್ಳಿಯಲ್ಲೇ ಮಹತ್ತರವಾದುದೇನಾದರೂ ಸಾಧಿಸಿ ದೆಹಲಿಯೇ ಇತ್ತ ತಿರುಗಿ ನೋಡುವಂತೆ ಮಾಡಬೇಕೆನ್ನುವ ಕನಸು ಹೊತ್ತ ಯುವಕ ಅವರು. ಹದವಾಗಿ ಒಣಗಿದ ಹಲಸಿನ ದಿಮ್ಮಿಗಳ ಮೇಲೆ ಅಪ್ಪ ಹಾಕುತ್ತಿದ್ದ ಉಳಿಪೆಟ್ಟುಗಳ ನಾದವೇ ಜೋಗುಳವಾಗಿ ಅವರ ಬಾಲ್ಯ ಕಳೆದಿತ್ತು.

ಬಾಲ್ಯದಲ್ಲಿ ತೊಟ್ಟಿಲಿನಿಂದಾಚೆಗೆ ಕಣ್ಣು ಬಿಟ್ಟ ಅವರಿಗೆ ಕಂಡಿದ್ದು ವೀಣೆಯ ಮೇಲೆ ಅಪ್ಪ ಬಿಡಿಸುತ್ತಿದ್ದ ಚಿತ್ತಾರಗಳು. ಬಿ.ಎ ಪದವಿ ಬಳಿಕ ದೊಡ್ಡಬಳ್ಳಾಪುರದ ಬಾಶೆಟ್ಟಿಹಳ್ಳಿಯ ಕಾರ್ಖಾನೆಯೊಂದರಲ್ಲಿ ಕೆಲ ಸಮಯ ಕಾರ್ಮಿಕರಾಗಿ ದುಡಿದರು. ಮರದ ಪೆಟ್ಟಿನ ಏಟಿಗೆ ಶ್ರುತಿಯಾಗಿದ್ದ ಕಿವಿಗಳಿಗೆ ಕಾರ್ಖಾನೆಯ ಸದ್ದು ಒಗ್ಗಲಿಲ್ಲ. ಮತ್ತೆ ಮನೆಗೆ ಹಿಂದಿರುಗಿ ಅಪ್ಪನೊಂದಿಗೆ ನಿಂತರು. ಈಗ ಸ್ವತಂತ್ರವಾಗಿ ವೀಣೆ ತಯಾರಿಸುವಷ್ಟು ಕುಶಲಮತಿಯಾಗಿದ್ದಾರೆ.

ಸಿಂಪಾಡಿಪುರಕ್ಕೆ ವೀಣೆ ತಯಾರಿಕೆ ವಿದ್ಯೆ ತಂದ ಪೆನ್ನೋಬಳಯ್ಯ ಅವರ ಪ್ರಿಯಶಿಷ್ಯ ನಾಗಯ್ಯ ತಮ್ಮ ವಿದ್ಯೆಯನ್ನು ಅರುಣ್ ಕುಮಾರ್‌ಗೆ ಧಾರೆ ಎರೆದಿದ್ದಾರೆ. ವೀಣೆ ತಯಾರಿಕೆಯು ಸೂಕ್ಷ್ಮ ಕಸುಬು. ಅಪ್ಪನೇ ಗುರುವಾದರೂ ಎಲ್ಲರಿಗೂ ಅದರ ಕಲಿಕೆಯ ಪಟ್ಟುಗಳು ದಕ್ಕುವುದು ಸುಲಭ ಸಾಧ್ಯವಿಲ್ಲ. ಆದರೆ, ಅವರಿಗೆ ಮನೆಯಲ್ಲಿ ವಿದ್ಯೆಯೂ ಇದೆ; ಶ್ರದ್ಧೆಯೂ ಇದೆ. ಹೀಗಾಗಿಯೇ ವೀಣೆ ತಯಾರಿಕೆ ಎಂಬ ಕುಶಲ ಕಲೆಯು ತಲೆಮಾರುಗಳನ್ನು ದಾಟಿ ಮುಂದುವರಿದಿದೆ.

‘ಅಪ್ಪನಷ್ಟು ಚೆನ್ನಾಗಿ ಕಲೆ ಒಲಿಸಿಕೊಂಡರೆ ಸಾಕು’ ಎಂಬುದು ಅವರ ಮನದ ಮಾತು.

‘ವೀಣೆ ತಯಾರಿಸೋದು ಅಂದ್ರೆ ಸುಮ್ಮನೆ ಅಲ್ಲ. ತಾಯಿ ಶಾರದೆಯ ಕೃಪೆ ಬೇಕು ಸರ್...’ ಎನ್ನುವ ಅವರಿಗೆ ಪುರಾಣಿ ವೀಣೆಗಳನ್ನು ಸಂಗ್ರಹಿಸುವ ಹವ್ಯಾಸವೂ ಇದೆ.

ಆಟ, ಪಾಠ, ಹಸಿರು ನೋಟ



ಹೆಸರು : ಎಚ್.ಸಿ. ಚಂದ್ರಶೇಖರ್
ವೃತ್ತಿ : ಸರ್ಕಾರಿ ಶಾಲೆ ಶಿಕ್ಷಕ
ಸಾಧನೆ : ಪರಿಸರ ಸಂರಕ್ಷಣೆ

ಎಚ್.ಸಿ. ಚಂದ್ರಶೇಖರ್ ಚನ್ನಪಟ್ಟಣ ತಾಲ್ಲೂಕಿನ ಇಗ್ಗಲೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಸ್ವಂತ ಖರ್ಚಿನಲ್ಲಿ ಶಾಲಾ ಆವರಣದಲ್ಲಿ ಗಿಡ, ಮರಗಳನ್ನು ಬೆಳೆಸುತ್ತಾ ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುತ್ತಾ ‘ಪರಿಸರ ಪ್ರೇಮಿ ಶಿಕ್ಷಕ’ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ.

ಅವರ ಹುಟ್ಟೂರು ತಾಲ್ಲೂಕಿನ ಹರೂರು. ಶಾಲಾ ಆವರಣದ ಸುಮಾರು 10 ಗುಂಟೆ ಜಮೀನಿನಲ್ಲಿ ಪುಟ್ಟದೊಂದು ಕಾಡು ಹಾಗೂ ಕೈತೋಟ ನಿರ್ಮಿಸಿರುವುದು ಅವರ ಹಿರಿಮೆ. ಅಲ್ಲಿ ನೂರಾರು ಜಾತಿಯ ಮರಗಳನ್ನು ಬೆಳೆಸಿದ್ದಾರೆ. ಔಷಧಿ ಗಿಡಗಳನ್ನು ನೆಟ್ಟಿದ್ದಾರೆ. ನೀರಿನ ಇಂಗು ಗುಂಡಿಗಳನ್ನು ನಿರ್ಮಿಸಿದ್ದಾರೆ. ಮಳೆ ನೀರು ಸಂಗ್ರಹಕ್ಕೂ ಒತ್ತು ನೀಡಿದ್ದಾರೆ. ಹಸಿರೆಲೆ ಹಾಗೂ ಒಣಎಲೆ ಗೊಬ್ಬರ ತಯಾರಿಕೆ ಘಟಕ ನಿರ್ಮಿಸಿದ್ದಾರೆ. ಹೂ ಗಿಡಗಳು, ಸೊಪ್ಪು, ತರಕಾರಿ ಬೆಳೆಸಿ ಇತರರಿಗೆ ಮಾದರಿಯಾಗಿದ್ದಾರೆ. ಶಾಲೆಯ ನರ್ಸರಿಯಲ್ಲಿ ಬೆಳೆಸಿದ್ದ 500ಕ್ಕೂ ಹೆಚ್ಚು ವಿವಿಧ ಜಾತಿಯ ಗಿಡಗಳನ್ನು ತಾಲ್ಲೂಕಿನ ಹಲವು ಶಾಲೆಗಳಿಗೆ ಉಚಿತವಾಗಿ ಹಂಚಿ ಪರಿಸರ ಪ್ರೇಮ ಮೆರೆದಿರುವುದು ಅವರ ಹೆಗ್ಗಳಿಕೆ. ಅವರ ಪರಿಸರ ಪ್ರೇಮವನ್ನು ಮೆಚ್ಚಿ 2019ರಲ್ಲಿ ಶಾಲೆಗೆ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪರಿಸರ ಇಲಾಖೆಯಿಂದ ‘ಹಸಿರು ಶಾಲೆ’ ಪ್ರಶಸ್ತಿ, ವಂಡರ್ ಲಾ ವತಿಯಿಂದ ‘ಗ್ರೀನ್ ಸ್ಕೂಲ್’ ಅವಾರ್ಡ್ ದೊರೆತಿದೆ.

‘ಶಿಕ್ಷಣ ನೀಡುವುದಷ್ಟೇ ಶಿಕ್ಷಕರ ಕೆಲಸವಾಗಬಾರದು. ಅವರಲ್ಲಿ ಪರಿಸರದ ಬಗ್ಗೆ ಕಾಳಜಿ ಬೆಳೆಸಬೇಕಾದುದು ಎಲ್ಲರ ಕರ್ತವ್ಯ’ ಎಂಬುದು ಚಂದ್ರಶೇಖರ್ ನಂಬಿಕೆ.

ಅಂತರ್ಜಾತಿ ಮರುಮದುವೆಯ ಕಾಯಕ

ಹೆಸರು : ರಾಧಾಮಣಿ ಎಂ.ವಿ.
ವೃತ್ತಿ : ಸ್ವಯಂ ಸೇವಾ ಸಂಸ್ಥೆ
ಸಾಧನೆ : ವಿವಾಹ ವಿಚ್ಛೇದನಕ್ಕೆ ಒಳಗಾದವರಿಗೆ ಮರುಮದುವೆ ಮಾಡಿಸುವುದು

ಸರ್ಕಾರಿ ಉದ್ಯೋಗ ಪಡೆಯುವ ಕನಸು ಈಡೇರಲಿಲ್ಲ. ಹೀಗಾಗಿ, ಸಮಾಜಕ್ಕೆ ಏನಾದರೂ ಕೊಡುಗೆ ನೀಡೋಣವೆಂದು ಟೊಂಕಕಟ್ಟಿ ನಿಂತ ರಾಧಾಮಣಿ ಎಂ.ವಿ ಅವರು ವಿಧವೆ, ವಿದುರರಿಗೆ ಹಾಗೂ ವಿಚ್ಛೇದನ ಪಡೆದವರಿಗೆ ಅಂತರ್ಜಾತಿ ಮರುಮದುವೆ ಮಾಡಿಸುತ್ತಿದ್ದಾರೆ. ಈ ಮೂಲಕ ಹಲವರು ಹೊಸದಾಗಿ ಬದುಕು ಕಟ್ಟಿಕೊಳ್ಳಲು ನೆರವಾಗಿದ್ದಾರೆ.

ರಾಧಾಮಣಿ ಅವರದ್ದು ಕೆಜಿಎಫ್ ತಾಲ್ಲೂಕಿನ ತಂಬಾರ್ಲಹಳ್ಳಿ ಎಂಬ ಕುಗ್ರಾಮ. ಒಕ್ಕಲಿಗ ಸಮುದಾಯದ ಅವರಿಗೆ 45 ವರ್ಷ. ಅವರ ಪತಿ ಎನ್.ಅಶ್ವಥ್ ಕೃಷಿಕರು.

ಬಿ.ಇ, ಬಿ.ಇಡಿ ಪೂರೈಸಿರುವ ಅವರಿಗೆ ವಿವಿಧ ಇಲಾಖೆಯಲ್ಲಿ ನಾಲ್ಕು ಬಾರಿ ಸರ್ಕಾರಿ ಉದ್ಯೋಗ ಸಿಕ್ಕರೂ ಮನೆಯಲ್ಲಿನ ವಿರೋಧ ಸೇರಿದಂತೆ ವಿವಿಧ ಕಾರಣಗಳಿಂದ ಆ ಅವಕಾಶ ತಪ್ಪಿ ಹೋದವು. ಸದ್ಯ ಬಾಲನ್ಯಾಯ ಮಂಡಳಿ ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಇದುವರೆಗೆ 28 ಮರುಮದುವೆ ಮಾಡಿಸಿದ್ದಾರೆ. ವಿವಿಧ ಕಾರಣಗಳಿಂದ ಮದುವೆಯಾಗದೆ ಉಳಿದಿದ್ದ ವಯಸ್ಸಾದ 49 ಮಂದಿಗೆ ಮದುವೆ ಮಾಡಿಸಿದ್ದಾರೆ. ವಾಟ್ಸ್‌ಆ್ಯಪ್ ಗುಂಪು ರಚಿಸಿದ್ದು, ಆ ಗುಂಪಿನಲ್ಲಿ ವೈದ್ಯರು, ಎಂಜಿನಿಯರ್, ಉಪನ್ಯಾಸಕರು, ಅಧಿಕಾರಿಗಳು, ರೈತರು, ಹೋರಾಟಗಾರರು ಸೇರಿದಂತೆ 350 ಮಂದಿ ಇದ್ದಾರೆ.

‘ಬೆಳಕು’ ಸ್ವಯಂ ಸೇವಾ ಸಂಸ್ಥೆ ಮೂಲಕ ಮಹಿಳಾ ದೌರ್ಜನ್ಯ, ಬಾಲ್ಯವಿವಾಹದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಕೆರೆಗಳ ಹೂಳೆತ್ತಿಸುವುದು, ಕೃಷಿ ಭೂಮಿಗೆ ರಾಸಾಯನಿಕ ಗೊಬ್ಬರ ಹಾಕದಂತೆ ಅರಿವು ಮೂಡಿಸುವುದು, ಎಚ್‌ಐವಿ ಸೋಂಕಿತರಿಗೆ ಪೌಷ್ಟಿಕ ಆಹಾರ ನೀಡುವ ಕೆಲಸ ಮಾಡುತ್ತಿದ್ದಾರೆ. ಶಾಲಾ, ಕಾಲೇಜುಗಳಲ್ಲಿ ಬಡ ಮಕ್ಕಳಿಗೆ ಪುಸ್ತಕ ಸಾಮಗ್ರಿ ವಿತರಣೆ, ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ.

ಜನರ ಪ್ರೀತಿಯ ಅಧಿಕಾರಿ

ಹೆಸರು : ನಹಿದಾ ಜಮ ಜಮ್
ವೃತ್ತಿ : ತಹಶೀಲ್ದಾರ್
ಸಾಧನೆ : ಆಡಳಿತಾತ್ಮಕ ಕೆಲಸಗಳಲ್ಲಿ ಜನಸ್ನೇಹಿ, ಆತ್ಮೀಯ ವರ್ತನೆ

ವೃದ್ಧರು, ಬಡವರನ್ನು ಕಂಡರೆ ಅದೇನೋ ಪ್ರೀತಿ. ಕಚೇರಿ ಒಳಕ್ಕೆ ಕಾಲಿಡುವ ಮುನ್ನ ಆವರಣದ ಕಡೆಗೆ ಒಮ್ಮೆ ಕಣ್ಣಾಡಿಸುತ್ತಾರೆ. ವಯಸ್ಸಾದವರು ಕಚೇರಿ ಆವರಣದಲ್ಲಿ ಕುಳಿತಿರುವುದು ಕಣ್ಣಿಗೆ ಬಿದ್ದರೆ ತಕ್ಷಣ ಅವರಿದ್ದಲ್ಲಿಗೆ ಹೋಗಿ ಅಕ್ಕರೆಯಿಂದ ಮಾತನಾಡಿಸುತ್ತಾರೆ. ‘ಯಾತಕ್ಕಾಗಿ ಬಂದಿದ್ದೀರಿ, ಏನು ಕೆಲಸವಾಗಬೇಕಿದೆ. ಬನ್ನಿ ನಾನು ಮಾಡಿಕೊಡುತ್ತೇನೆ’ ಎಂದು ಅವರ ಮನವಿ ಹಿಡಿದು ತಾವೇ ಸಂಬಂಧಪಟ್ಟ ವಿಭಾಗಕ್ಕೆ ಹೋಗಿ ವಿಚಾರಣೆ ಮಾಡಿ, ಕೆಲಸ ಮಾಡಿಸುವುದನ್ನು ಕಂಡವರಿಗೆ ಅಚ್ಚರಿ.

ದಿನನಿತ್ಯ ತಮ್ಮ ಸಮಸ್ಯೆಗಳನ್ನು ಹೊತ್ತು ಬರುವ ಸಾರ್ವಜನಿಕರಿಗೆ ಒಬ್ಬ ಅಧಿಕಾರಿಯಾಗಿ ಹೀಗೂ ಕೆಲಸ ಮಾಡಬಹುದು ಎಂದು ತೋರಿಸಿ ಮನೆ ಮಾತಾದವರು ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತಹಶೀಲ್ದಾರ್ ನಹಿದಾ ಜಮ ಜಮ್.

ಇವರ ಕಾರ್ಯವೈಖರಿ ಕಂಡ ಅದೆಷ್ಟೋ ಜನರು ಬೆರಗಾಗಿದ್ದಾರೆ. ಜನಸಾಮಾನ್ಯರ ಕೆಲಸ, ಕಾರ್ಯಗಳನ್ನು ಮುಂದೆ ನಿಂತು ಮಾಡಿಸಿಕೊಡುತ್ತಾರೆ. ಸ್ವಂತದವರಂತೆ ಆತ್ಮೀಯವಾಗಿ ಮಾತನಾಡಿಸುತ್ತಾರೆ. ತಾವೇ ಕಡತ ಹಿಡಿದು ಕಚೇರಿ ತುಂಬೆಲ್ಲಾ ಓಡಾಡುತ್ತಾರೆ. ಯಾರಾದರೂ ತಮ್ಮ ಊರಿನಲ್ಲಿ ಸಮಸ್ಯೆ ಇದೆ ಎಂದರೆ ಸಾಕು, ಆಗಲೇ 'ನಡೆಯಿರಿ ಹೋಗೋಣ' ಎಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅಲ್ಲೇ ಬಗೆಹರಿಸುವ ಪ್ರಯತ್ನ ಮಾಡುವುದು ಜನರಿಗೆ ಖುಷಿಯ ಸಂಗತಿ.

ತಹಶೀಲ್ದಾರ್ ನಹಿದಾ ಜಮ್ ಜಮ್ ಸೇವೆಗೆ ಸೇರಿದ ನಂತರ ಮೊದಲ ಬಾರಿಗೆ 2019ರಲ್ಲಿ ಶಿರಾ ತಹಶೀಲ್ದಾರ್ ಆಗಿ ಕೆಲಸ ನಿರ್ವಹಿಸಿದ್ದರು. ಈ ವೇಳೆ 2020ರಲ್ಲಿ ಕೋವಿಡ್ ಆವರಿಸಿದ ಸಂದರ್ಭದಲ್ಲಿ ಗರ್ಭಿಣಿ ಎಂಬುದನ್ನು ಮರೆತು ಶಿರಾದಲ್ಲಿ ಸಾಮಾನ್ಯ ಜನರ ಸಂಕಷ್ಟಗಳಿಗೆ ಸ್ಪಂದಿಸುವ ಮೂಲಕ ಗಮನ ಸೆಳೆದಿದ್ದರು. ಕೋವಿಡ್ ತೀವ್ರ ಸ್ವರೂಪದಲ್ಲಿ ಹರಡುವ ವೇಳೆ ಗರ್ಭಿಣಿಯಾಗಿದ್ದರೂ ಮನೆಯಲ್ಲಿ ಕೂರದೇ ಇಡೀ ತಾಲ್ಲೂಕನ್ನು ಸುತ್ತುವ ಮೂಲಕ ಕರ್ತವ್ಯ ನಿಷ್ಠೆ ಮೆರೆದಿದ್ದರು. ಇದರಿಂದಾಗಿ ಜನ ಹಾಗೂ ಇಲಾಖೆ ಮೆಚ್ಚುಗೆಗೂ ಪಾತ್ರರಾಗಿದ್ದರು.

2021ರ ಆಗಸ್ಟ್ ತಿಂಗಳಲ್ಲಿ ಕೊರಟಗೆರೆ ವರ್ಗಾವಣೆಯಾಗಿ ಬಂದ ನಂತರ ಜನರ ನಾಡಿಮಿಡಿತ ಅರಿತು ಸಮಸ್ಯೆಗಳನ್ನು ಪರಿಹರಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ತಾಲ್ಲೂಕಿನಲ್ಲಿ ಬಹಳ ವರ್ಷಗಳಿಂದ ಜಟಿಲ ಸಮಸ್ಯೆಯಾಗಿದ್ದ ಬಗರ್‌ಹುಕುಂ ಸಾಗುವಳಿ ಹಕ್ಕುಪತ್ರ ನೀಡುವಲ್ಲಿ ಕಠಿಣ ಕ್ರಮ ಕೈಗೊಂಡು ರೈತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

‘ಹಳ್ಳಿ ಸಿರಿ’ಯ ಯಶೋಗಾಥೆ

ಹೆಸರು : ಮಂಜಮ್ಮ ಎಸ್. ಬಾಲಯ್ಯ
ವೃತ್ತಿ : ಹಳ್ಳಿ ಸಿರಿ ಸಂಘದ ರೂವಾರಿ
ಸಾಧನೆ : ಮಹಿಳಾ ಸಬಲೀಕರಣ

ಗೊಲ್ಲರಹಟ್ಟಿಗಳಲ್ಲಿ ಮಹಿಳೆಯರು ಋತುಮತಿಯಾದ ಸಮಯದಲ್ಲಿ ಮನೆಯಿಂದ ಹೊರಗೆ ಗುಡಿಸಲಿನಲ್ಲಿ ಕೆಲ ದಿನಗಳ ಕಾಲ ನೆಲೆಸುವಂತಹ ಸಂಪ್ರದಾಯ ನಡೆದುಕೊಂಡು ಬಂದಿದೆ. ಬಾಣಂತಿಯರಿಗೂ ಈ ಶಿಕ್ಷೆ ತಪ್ಪಿದ್ದಲ್ಲ. ಈ ಬಗ್ಗೆ ಗೊಲ್ಲ ಸಮುದಾಯದಲ್ಲಿ ಜಾಗೃತಿ ಮೂಡಿಸಿ, ಮಹಿಳೆಯರನ್ನು ಮನೆಯಿಂದ ಹೊರಗೆ ಕಳುಹಿಸದಂತೆ ಮನವೊಲಿಸಿ, ಕುಟುಂಬದವರ ಜತೆಗೆ ನೆಲೆಸುವಂತೆ ಮಾಡುವಲ್ಲಿ ಸಾಕಷ್ಟು ಯಶಸ್ಸು ಕಂಡಿದ್ದಾರೆ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ತೋವಿನಕೆರೆ ಗ್ರಾಮದ ಮಂಜಮ್ಮ ಎಸ್. ಬಾಲಯ್ಯ.

ಗೊಲ್ಲರಹಟ್ಟಿಗಳಲ್ಲಿ ಸುತ್ತಾಡಿ, ನೂರಾರು ಮಹಿಳೆಯರನ್ನು ಗುಡಿಸಲು ವಾಸದಿಂದ ಮುಕ್ತಗೊಳಿಸಿ, ಮನೆಗಳಿಗೆ ಸೇರಿಸಿದ್ದಾರೆ. ಇಂತಹ ಸಂಪ್ರದಾಯ ಆಚರಿಸದಂತೆ ನಿರಂತರವಾಗಿ ಜಾಗೃತಿ ಮೂಡಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.

‘ಹಳ್ಳಿ ಸಿರಿ ಸಂಘ’ ಸ್ಥಾಪಿಸಿ ಆ ಮೂಲಕ ಮಹಿಳೆಯರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಜತೆಗೆ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತಿದ್ದಾರೆ. ಸಂಘದ ಮೂಲಕ ಬಯಲು ಸೀಮೆಯಲ್ಲಿ ಹಲಸಿನ ಹತ್ತಾರು ಖಾದ್ಯಗಳನ್ನು ತಯಾರಿಸಿ, ಹಲಸಿನ ಮೌಲ್ಯವರ್ಧನೆ ಮಾಡಿಸಿದ್ದಾರೆ. ಇಲ್ಲಿ ತರಬೇತಿ ಪಡೆದವರು ವಿವಿಧ ಬಗೆಯ ಖಾದ್ಯಗಳನ್ನು ತಯಾರಿಸಿ ಮಾರುಕಟ್ಟೆಗೆ ಕಳುಹಿಸಿ ಆರ್ಥಿಕವಾಗಿ ತಮ್ಮ ಕಾಲ ಮೇಲೆ ನಿಂತಿದ್ದಾರೆ. ಒಟ್ಟಾರೆಯಾಗಿ ಮಹಿಳೆಯರ ಪಡೆಯೊಂದನ್ನು ಕಟ್ಟಿಕೊಂಡು ಸ್ತ್ರೀಯರ ಸಬಲೀಕರಣದಲ್ಲಿ ನಿರತರಾಗಿದ್ದಾರೆ.

ಜನಮನ ಸೆಳೆದ ತಹಶೀಲ್ದಾರ್

ಹೆಸರು : ಗಣಪತಿ ಶಾಸ್ತ್ರಿ, ವೃತ್ತಿ : ತಹಶೀಲ್ದಾರ್ ಸಾಧನೆ : ಸಾರ್ವಜನಿಕ ಸೇವೆ

ಗಣಪತಿ ಶಾಸ್ತ್ರಿ ತಾವು ಹೋದಲ್ಲೆಲ್ಲ ತಮ್ಮದೇ ಆದ ಛಾಪು ಮೂಡಿಸುತ್ತಿರುವ ಅಧಿಕಾರಿ. ಸದ್ಯ ಚಿಕ್ಕಬಳ್ಳಾಪುರ ತಹಶೀಲ್ದಾರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಅವರು ಈ ಹಿಂದೆ ಯಲ್ಲಾಪುರ, ಹೊನ್ನಾವರ, ಬೆಳ್ತಂಗಡಿ ಸೇರಿದಂತೆ ವಿವಿಧ ಕಡೆಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ.

ಗಣಪತಿ ಶಾಸ್ತ್ರಿ ಅವರು 15 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಯೋಧರಾಗಿ ಕೆಲಸ ಮಾಡಿದ್ದಾರೆ. ಸೇನೆಯಿಂದ ನಿವೃತ್ತರಾಗಿ ಬಳಿಕ ಆರೂವರೆ ವರ್ಷಗಳ ಕಾಲ ಅಂಚೆ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ನಂತರ ತಹಶೀಲ್ದಾರ್ ಆದರು.

ದಕ್ಷಿಣ ಕನ್ನಡ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಅಂಚೆ ಮತಪೆಟ್ಟಿಗೆಯನ್ನು ತಲೆಯಲ್ಲಿ ಹೊತ್ತು ಸಾಗಿದ್ದು ಮತ್ತು ನೆರೆಯಿಂದ ಹಾನಿಗೀಡಾದ ಚಾರ್ಮಾಡಿ ಅರಣ್ಯ ಪ್ರದೇಶದೊಳಗಿನ ಬಾಂಜಾರು ಮಲೆಗೆ ಸಂಪರ್ಕ ಕಲ್ಪಿಸಲಾದ ಕೃತಕ ಮರದ ಸೇತುವೆಯಲ್ಲಿ ಅಕ್ಕಿಮೂಟೆಯನ್ನು ಹೊತ್ತೊಯ್ದು ಸಂತ್ರಸ್ತರಿಗೆ ನೀಡಿದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಅವರ ಬಗ್ಗೆ ಮೆಚ್ಚುಗೆಯ ಮಹಾಪೂರ ಹರಿದು ಬಂದಿತ್ತು.

ತಮ್ಮ ಕೆಲಸ ಕಾರ್ಯಗಳಿಂದ ಚಿಕ್ಕಬಳ್ಳಾಪುರ ತಾಲ್ಲೂಕಿನ ಜನರಷ್ಟೇ ಅಲ್ಲ ಜಿಲ್ಲೆಯ ಜನರಿಂದಲೂ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಸರಳ ಮತ್ತು ಪ್ರಾಮಾಣಿಕ ಅಧಿಕಾರಿ ಎನ್ನುವ ಪ್ರಶಂಸೆ ಜನರಿಂದ ದೊರೆಯುತ್ತಿದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಅಕ್ರಮ ಭೂ ಒತ್ತುವರಿಗಳ ವಿರುದ್ಧ ಕ್ರಮ, ನಕಾಶೆಗಳಲ್ಲಿ ರಸ್ತೆಗಳಿದ್ದರೂ ಅವುಗಳನ್ನು ಒತ್ತುವರಿ ಮಾಡಿಕೊಂಡಿದ್ದವರಿಂದ ಒತ್ತುವರಿ ತೆರವು, ಚಿಕ್ಕಬಳ್ಳಾಪುರ ನಗರದಲ್ಲಿ ಒತ್ತುವರಿ ಆಗಿರುವ ಪ್ರಮುಖ ಸ್ಥಳಗಳನ್ನು ಗುರುತಿಸಿ ನಗರಸಭೆಗೆ ವರದಿ ನೀಡಿರುವುದು, ತಾಲ್ಲೂಕು ಆಡಳಿತವನ್ನು ಜನಸ್ನೇಹಿಯಾಗಿ ರೂಪಿಸುತ್ತಿರುವುದು ಅವರ ಕೆಲಸಕ್ಕೆ ಕೆಲವು ನಿದರ್ಶನ. ರೈತರಿಂದ ಯಾವುದೇ ದೂರು ಬಂದರೂ ಅವುಗಳ ಪರಿಹಾರದ ವಿಚಾರದಲ್ಲಿ ಖುದ್ದಾಗಿ ಕ್ರಮವಹಿಸುತ್ತಿದ್ದಾರೆ.



ಕಪ್ಪೆಗಳ ಅಧ್ಯಯನದ ‘ಫ್ರಾಗ್ ವಾಚರ್’

ಹೆಸರು : ಡಾ.ಕೆ.ವಿ.ಗುರುರಾಜ್
ವೃತ್ತಿ : ವಿಜ್ಞಾನಿ
ಸಾಧನೆ : ಕಪ್ಪೆಗಳ ಅಧ್ಯಯನ ಹಾಗೂ ಸಂಶೋಧನೆ



ವಿಜ್ಞಾನಿಗಳು ಜನಸಾಮಾನ್ಯರಿಂದ ದೂರವಿದ್ದು, ಅಧ್ಯಯನ, ಸಂಶೋಧನೆಗಳಲ್ಲಿ ತೊಡಗಿಕೊಳ್ಳುವುದೇ ಹೆಚ್ಚು. ಜನರ ಅದರಲ್ಲೂ ವಿಜ್ಞಾನದ ಆಸಕ್ತರ ಜತೆಗೆ ಇದ್ದು ಅಧ್ಯಯನಗಳಲ್ಲಿ ತೊಡಗಿಕೊಳ್ಳುವವರು ಮತ್ತು ಜನರನ್ನು ತೊಡಗಿಸಿಕೊಳ್ಳುವವರು ಅತಿ ವಿರಳ. ಡಾ.ಕೆ.ವಿ.ಗುರುರಾಜ ಅಂತಹ ಅಪರೂಪದ ವಿಜ್ಞಾನಿಗಳಲ್ಲಿ ಒಬ್ಬರು.

ಇವರು ಉಭಯಚರ ಪರಿಸರ ವಿಜ್ಞಾನ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ವಿಶೇಷವಾಗಿ ಕಪ್ಪೆಗಳ ಅಧ್ಯಯನದಲ್ಲಿ ವಿದ್ಯಾರ್ಥಿಗಳು ಮತ್ತು ವಿವಿಧ ಕ್ಷೇತ್ರಗಳಲ್ಲಿರುವ ಆಸಕ್ತರನ್ನು ತೊಡಗಿಸಿಕೊಳ್ಳುತ್ತಿರುವುದು ವಿಶೇಷ. ಕಪ್ಪೆಗಳ ವರ್ತನೆ ಅವುಗಳು ವಾಸವಿರುವ ಪ್ರದೇಶದ ಪರಿಸರ, ಅವುಗಳ ವೈವಿಧ್ಯವನ್ನು ಪತ್ತೆಹಚ್ಚುವ ಕಾರ್ಯದಲ್ಲಿ ಪ್ರತಿ ವರ್ಷವೂ ಪಶ್ಚಿಮ ಘಟ್ಟದ ಪ್ರದೇಶದಲ್ಲಿ ‘ಫ್ರಾಗ್ ವಾಚ್’ ಅಥವಾ ಕಪ್ಪೆಗಳ ವೀಕ್ಷಣೆ ಕ್ಯಾಂಪ್‌ಗಳನ್ನು ಹಮ್ಮಿಕೊಳ್ಳುತ್ತಾರೆ. ಇದು ಕೇವಲ ವೀಕ್ಷಣೆಯ ಕಾರ್ಯಕ್ಕೆ ಸೀಮಿತವಲ್ಲ ಅತ್ಯಂತ ಪ್ರಾಚೀನ ಪ್ರಭೇದಗಳನ್ನು ಗುರುತಿಸುವುದು, ಅದರ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಮತ್ತು ಸಂರಕ್ಷಿಸುವುದಕ್ಕೆ ಒತ್ತು ನೀಡುವುದು ಕ್ಯಾಂಪ್‌ನ ಮುಖ್ಯ ಉದ್ದೇಶ.

ಕಪ್ಪೆಗಳಲ್ಲಿ ಮೂರು ಪ್ರಧಾನ ಸಂತಾನೋತ್ಪತ್ತಿ ವರ್ತನೆಗಳು, ಪಶ್ಚಿಮಘಟ್ಟಗಳಲ್ಲಿ 22 ಹೊಸ ಪ್ರಭೇದದ ಕಪ್ಪೆಗಳು ಮತ್ತು 2 ಹೊಸ ಪ್ರಭೇದದ ಮೀನುಗಳನ್ನು ಪತ್ತೆ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವಿಜ್ಞಾನ ಜರ್ನಲ್‌ಗಳಲ್ಲಿ ಸುಮಾರು 50 ಪ್ರಬಂಧಗಳು ಪ್ರಕಟವಾಗಿವೆ. 2014 ರಲ್ಲಿ ಕಪ್ಪೆಗಳನ್ನು ಗುರುತಿಸುವ ‘ಫ್ರಾಗ್ ಫೈಂಡ್ ಆಂಡ್ರಾಯ್ಡ್ ಆ್ಯಪ್’ ಕೂಡ ಅಭಿವೃದ್ಧಿಪಡಿಸಿದ್ದು, ಇದಕ್ಕೆ ಜಿಯೋಸ್ಪಾಷಿಯಲ್ ಎಕ್ಸಲೆನ್ಸ್ ಪ್ರಶಸ್ತಿಯೂ ಲಭಿಸಿದೆ. ಇವರು ಬೆಂಗಳೂರಿನ ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಅಂಡ್ ಟೆಕ್ನಾಲಜಿ ಸಂಸ್ಥೆಯಲ್ಲಿ ಡೀನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಾಣಿಪ್ರೀತಿಯಿಂದ ಪಿಕಪ್ ಡ್ಯಾಂ ಕಟ್ಟಿಸಿದ ಜೀವನ್ಮುಖಿ

ಹೆಸರು : ಶಿವಲಿಂಗ ಶೆಟ್ಟಿ
ವೃತ್ತಿ : ಸಣ್ಣ ವ್ಯಾಪಾರಿ
ಸಾಧನೆ : ಸ್ವಂತ ಖರ್ಚಿನಲ್ಲಿ ಪಿಕಪ್ ಡ್ಯಾಂ ನಿರ್ಮಾಣ

ಚನ್ನಪಟ್ಟಣ ತಾಲ್ಲೂಕಿನ ಕೋಡಂಬಹಳ್ಳಿಯ ಈ ವ್ಯಕ್ತಿ ಪ್ರಾಣಿ, ಪಕ್ಷಿಗಳಿಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಗ್ರಾಮದ ಚನ್ನಪ್ಪಾಜಿ ಬೆಟ್ಟದಲ್ಲಿ ಸ್ವಂತ ಖರ್ಚಿನಲ್ಲಿ ಎರಡು ಸಣ್ಣ ಪಿಕಪ್ ಡ್ಯಾಂಗಳನ್ನು ನಿರ್ಮಿಸಿದ್ದಾರೆ. ಕೋಡಂಬಹಳ್ಳಿ, ಸಿಂಗರಾಜಪುರ ಗ್ರಾಮಗಳ ಸಂಪರ್ಕ ರಸ್ತೆ ಬಳಿ ಜಲಪಾತದ ರೀತಿ ಹರಿಯುತ್ತಿದ್ದ ನೀರಿಗೆ ಅಡ್ಡಲಾಗಿ ಈ ಕಿರು ಅಣೆಕಟ್ಟೆಗಳು ನಿರ್ಮಾಣ ಆಗಿವೆ.

ವೃತ್ತಿಯಲ್ಲಿ ಸಣ್ಣ ವ್ಯಾಪಾರಿ ಆಗಿರುವ ಅವರು ಚಾಕೊಲೇಟ್, ಬ್ರೆಡ್, ಚಕ್ಲಿ ಸೇರಿದಂತೆ ಸಣ್ಣಪುಟ್ಟ ತಿಂಡಿಗಳನ್ನು ಹಳ್ಳಿಗಳ ಪೆಟ್ಟಿಗೆ ಅಂಗಡಿಗಳಿಗೆ ಹೋಲ್‌ಸೇಲ್ ದರದಲ್ಲಿ ನೀಡುವ ವ್ಯಾಪಾರ ಮಾಡುತ್ತಾರೆ. ಸ್ಕೂಟರಿನಲ್ಲಿ ತಿಂಡಿತಿನಿಸು ಹೇರಿಕೊಂಡು ಊರೂರು ಸುತ್ತುತ್ತ, ಈ ವ್ಯಾಪಾರದಿಂದ ಬಂದ ಸಣ್ಣ ಲಾಭದಿಂದಲೇ ಈ ಕಾರ್ಯ ಮಾಡಿದ್ದಾರೆ.

ಕೋಡಂಬಹಳ್ಳಿ ವ್ಯಾಪ್ತಿಯಲ್ಲಿ ಹಲವು ಬೆಟ್ಟ, ಗುಡ್ಡಗಳಿವೆ. ಇಲ್ಲಿನ ವನ್ಯಜೀವಿಗಳಿಗೆ ಬೇಸಿಗೆ ಕಾಲದಲ್ಲಿ ನೀರಿನ ಸಮಸ್ಯೆ ಎದುರಾಗಬಾರದು ಎನ್ನುವ ಉದ್ದೇಶದಿಂದ ಈ ಕಾರ್ಯ ಮಾಡಿರುವುದಾಗಿ ಶಿವಲಿಂಗ ಶೆಟ್ಟಿ ವಿವರಿಸುತ್ತಾರೆ.

ಪಿಕಪ್ ಡ್ಯಾಂಗಳನ್ನು ಕಟ್ಟಲು ಯಾವುದೇ ಕೆಲಸಗಾರರನ್ನು ಕರೆದುಕೊಂಡಿಲ್ಲ. ತಮ್ಮ ಮೊಪೆಡ್‌ನಲ್ಲಿ ಸಿಮೆಂಟ್, ಇಟ್ಟಿಗೆಗಳನ್ನು ತೆಗೆದುಕೊಂಡು ಹೋಗಿ, ಅಲ್ಲಿಯೇ ಸಿಗುವ ಮರಳು, ಜಲ್ಲಿ ಕಲ್ಲುಗಳನ್ನು ಬಳಸಿಕೊಂಡು ತಾವೇ ತಮ್ಮ ಕೈಯಾರೆ ನಿರ್ಮಿಸಿರುವುದು ವಿಶೇಷ. ನೀರಿಗೆ ಅಡ್ಡವಾಗಿ ಮರಳು ತುಂಬಿದ ಚೀಲ ಇಟ್ಟು ನೀರು ಒಂದೆಡೆ ಹರಿಯುವಂತೆ ಮಾಡಿ ಡ್ಯಾಂಗಳನ್ನು ನಿರ್ಮಿಸಿದ್ದಾರೆ.

ಎರಡು ಪಿಕಪ್ ಡ್ಯಾಂ ನಿರ್ಮಿಸಲು ಸುಮಾರು ₹ 1 ಲಕ್ಷಕ್ಕೂ ಹೆಚ್ಚು ಖರ್ಚು ಮಾಡಿದ್ದಾರೆ. ಯಾರ ಬಳಿಯೂ ಆರ್ಥಿಕ ನೆರವು ಪಡೆದಿಲ್ಲ.

ಕೋಡಂಬಹಳ್ಳಿಯ ಕುಂಬಾರ ಗೇರಿಯಲ್ಲಿ ಸಣ್ಣ ಗುಡಿಸಲೊಂದರಲ್ಲಿ ವಾಸಿಸುವ ಅವರು ಸ್ವಂತ ಮನೆಯನ್ನೂ ಕಟ್ಟಿಸಿಕೊಂಡಿಲ್ಲ. ಪತ್ನಿ ಸಾವನ್ನಪ್ಪಿದ್ದಾರೆ. ಅವರಿಗೆ ಒಬ್ಬ ಮಗಳು, ಒಬ್ಬ ಮಗ ಇದ್ದಾರೆ. ಮಗಳಿಗೆ ಮದುವೆ ಮಾಡಿದ್ದಾರೆ. ಮಗ ಕಳೆದ ಮೂರು ವರ್ಷಗಳ ಹಿಂದೆ ಮನೆಯಿಂದ ಹೊರಹೋದವನು ಮತ್ತೆ ವಾಪಸ್ ಬಂದಿಲ್ಲ. ಸದ್ಯ ಅವರದು ಒಂಟಿ ಜೀವನ.

ರಸಗೊಬ್ಬರ: ತಪ್ಪದ ಪರದಾಟ

ಒಂದನೇ ಪುಟದಿಂದ

ಆದರೆ, ಚೀಲಕ್ಕೆ ₹285–290 ತೆಗೆದುಕೊಳ್ಳುತ್ತಾರೆ' ಎಂದು ಮತ್ತೊಬ್ಬ ರೈತ ಮಹದೇವಪ್ಪ ಅಳಲು ತೋಡಿಕೊಂಡರು.

'ಡಿಎಪಿ ಕೇಳಿದರೆ ಪೊಟ್ಯಾಷ್ ಕೊಡುತ್ತಾರೆ. ನಾವು ಕೇಳಿದ ಗೊಬ್ಬರ ದಾಸ್ತಾನು ಇಲ್ಲ ಎನ್ನುತ್ತಾರೆ. ಖಾಸಗಿಯವರ ಬಳಿ ಹೋದರೆ ಒಂದು ಚೀಲಕ್ಕೆ ₹50, ₹100 ಜಾಸ್ತಿ ತೆಗೆದುಕೊಳ್ಳುತ್ತಾರೆ' ಎಂಬುದು ದೊಡ್ಡ ತುಮಕೂರಿನ ರೈತ ವಸಂತ್ ಅವರ ಅಳಲು.

ಕಾಳಸಂತೆಯಲ್ಲಿ ಮಾರಾಟ

'ಸೊಸೈಟಿಯಲ್ಲಿ ಸ್ಟಾಕ್ ಇಲ್ಲ ಎನ್ನುತ್ತಾರೆ. ಆದರೆ, ಕಾಳಸಂತೆಯಲ್ಲಿ ರಸಗೊಬ್ಬರ ಸಿಗುತ್ತದೆ. ಸೊಸೈಟಿಗಳಿಗೆ ಪೂರೈಕೆಯಾಗಬೇಕಿದ್ದ ಗೊಬ್ಬರವನ್ನು ಅಕ್ರಮವಾಗಿ ದಾಸ್ತಾನು ಮಾಡಿ, ಕೇರಳ, ತಮಿಳುನಾಡಿಗೆ ಕಳುಹಿಸಲಾಗುತ್ತಿದೆ. ಅಲ್ಲದೆ ವಾಮ ಮಾರ್ಗದ ಮೂಲಕ ಅಧಿಕ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಇಷ್ಟಾದರೂ ಯಾರಿಗೂ ಶಿಕ್ಷೆಯಾಗಿಲ್ಲ' ಎನ್ನುತ್ತಾರೆ ರೈತ ಮುಖಂಡ ಶ್ರೀನಿವಾಸ್.

ಗುಂಡ್ಲುಪೇಟೆ ತಾಲ್ಲೂಕಿನ ಶಿವಪುರದಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 510 ಚೀಲ, ಶಿರಹಟ್ಟಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ 100 ಟನ್ ಗೊಬ್ಬರ, ಹಾವೇರಿಯಲ್ಲಿ 696 ಚೀಲಗಳ ಯೂರಿಯಾ, ಅರಸೀಕೆರೆ ತಾಲ್ಲೂಕಿನ ಗ್ರಾಮವೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿ ಇಟ್ಟಿದ್ದ 97 ಚೀಲಗಳ ರಸಗೊಬ್ಬರ ಹಾಗೂ ಕಾಳಗಿ ತಾಲ್ಲೂಕಿನ ಕೋರವಾರ ಗ್ರಾಮದ ಮನೆಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ರಸಗೊಬ್ಬರವನ್ನು ಅಧಿಕಾರಿಗಳು ದಾಳಿ ಮಾಡಿ ವಶಪಡಿಸಿಕೊಂಡಿದ್ದರು.

ಖಾಸಗಿಯವರಿಗೆ ಆದ್ಯತೆ

'ಸೊಸೈಟಿಗಳ ಬಗ್ಗೆ ಡೀಲರ್‌ಗಳು ಮಲತಾಯಿ ಧೋರಣೆ ಅನುಸರಿಸುತ್ತಾರೆ. ಯಾವ ರೂಪದಲ್ಲಾದರೂ ಹಣದ ವ್ಯವಸ್ಥೆ ಮಾಡಿಕೊಂಡು ಮೊದಲೇ ಪಾವತಿಸಿದರೂ, ಕೆಲವೊಮ್ಮೆ ಮೂರು ತಿಂಗಳಾದರೂ ಸೊಸೈಟಿಗಳಿಗೆ ರಸಗೊಬ್ಬರ ಪೂರೈಕೆ ಆಗುವುದಿಲ್ಲ' ಎನ್ನುತ್ತಾರೆ ಸೊಸೈಟಿಯೊಂದರ ಕಾರ್ಯದರ್ಶಿ ರಾಮಕೃಷ್ಣ. 'ರೈತರು ಡೀಲರ್‌ಗಳಿಗೆ ಸಾಗಣೆ ವೆಚ್ಚ ನೀಡುವುದಿಲ್ಲ. ಆದರೆ, ಖಾಸಗಿಯವರು ನೀಡುತ್ತಾರೆ. ಹೀಗಾಗಿ ಅವರಿಗೆ ಮೊದಲು ಗೊಬ್ಬರ ನೀಡುತ್ತಾರೆ. ನಾವು ಎಂಆರ್‌ಪಿ ದರದಲ್ಲೇ ಮಾರಾಟ ಮಾಡಬೇಕಾಗಿರುವ ಕಾರಣ ಸಾಗಣೆ ವೆಚ್ಚವನ್ನು ರೈತರಿಗೆ ವರ್ಗಾಯಿಸಲು ಆಗುವುದಿಲ್ಲ. ಆದರೆ, ಖಾಸಗಿಯವರು ರೈತರಿಂದ ಸಾಗಣೆ ವೆಚ್ಚ ಎಂದು ಹೆಚ್ಚುವರಿಯಾಗಿ ₹30 ವಸೂಲಿ ಮಾಡುತ್ತಾರೆ' ಎನ್ನುತ್ತಾರೆ ಅವರು.

'ಸರ್ಕಾರ ನಿಗದಿಪಡಿಸಿದ ದರದಲ್ಲೇ ನಾವು ಬಿಲ್ ಮಾಡಬೇಕಾಗಿರುವುದರಿಂದ ನಿಗದಿಗಿಂತ ಹೆಚ್ಚಿನ ಹಣವನ್ನು ಡೀಲರ್‌ಗಳಿಗೆ ನೀಡಲು ಸಾಧ್ಯವಿಲ್ಲ. ಆದರೆ, ಖಾಸಗಿಯವರು ಸಗಟು ಡೀಲರ್‌ಗಳ 'ಕೈಬಿಸಿ' ಮಾಡುತ್ತಾರೆ. ಹೀಗಾಗಿ ಅವರಿಗೇ ಮೊದಲು ಸರಬರಾಜು ಮಾಡಲಾಗುತ್ತಿದೆ' ಎಂದು ದೂರುತ್ತಾರೆ ಕೋಲಾರ ಜಿಲ್ಲೆಯ ಸೊಸೈಟಿಯೊಂದರ ಕಾರ್ಯದರ್ಶಿ ಅನಿಲ್‌ಕುಮಾರ್.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದವರು ಗೋದಾಮುಗಳಲ್ಲಿ ರಸಗೊಬ್ಬರ ಸಂಗ್ರಹ ಮಾಡಿ, ಅಲ್ಲಿಂದ ಸೊಸೈಟಿಗಳಿಗೆ ಕಳುಹಿಸಿಕೊಡುವ ವ್ಯವಸ್ಥೆ ಮುಂಚೆ ಇತ್ತು. ಆದರೆ, ಎರಡು ವರ್ಷಗಳಿಂದ ಈ ವ್ಯವಸ್ಥೆ ಬದಲಾಗಿದೆ. ಸೊಸೈಟಿಯವರು ಅಗತ್ಯವಿರುವ ರಸಗೊಬ್ಬರದ ಹಣವನ್ನು ಮೊದಲೇ ಡಿಡಿ ಅಥವಾ ಆರ್‌ಟಿಜಿಎಸ್ ಮೂಲಕ ಪಾವತಿಸಿ, ಬೇಡಿಕೆ ಸಲ್ಲಿಸಬೇಕು. ಅದಾದ ಬಳಿಕ ದಾಸ್ತಾನು ನೋಡಿಕೊಂಡು ಸರಬರಾಜು ಮಾಡಲಾಗುತ್ತಿದೆ.

ಪರಿಹಾರ ಏನು?

'ಮೊದಲಿನ ಹಾಗೆ ಏಪ್ರಿಲ್ ವೇಳೆಗೆ ಗೋದಾಮುಗಳಲ್ಲಿ ಬೇಡಿಕೆಗೆ ತಕ್ಕಂತೆ ದಾಸ್ತಾನು ಮಾಡಬೇಕು. ಸೊಸೈಟಿಯವರು ಮೊದಲೇ ಹಣ ಕೊಟ್ಟು ತರಿಸುವ ವ್ಯವಸ್ಥೆ ರದ್ದಾಗಬೇಕು. ಅಲ್ಲದೆ ಸೊಸೈಟಿಗಳ ಸಂಖ್ಯೆಯನ್ನು ಹೆಚ್ಚಿಸಿ, ಅವುಗಳ ಮೂಲಕವೇ ಗೊಬ್ಬರ ಪೂರೈಸಬೇಕು. ಇದು ಸಾಧ್ಯವಿಲ್ಲ ಎನ್ನುವುದಾದರೆ, ಖಾಸಗಿಯವರ ಮೇಲೆ ನಿಗಾ ವಹಿಸಿ ನಿಗದಿತ ಬೆಲೆಗೆ ಮಾರಾಟ ಮಾಡುವಂತೆ ಕೃಷಿ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಬೇಕು' ಎನ್ನುತ್ತಾರೆ ಸೊಸೈಟಿಯೊಂದರ ಕಾರ್ಯದರ್ಶಿ ನಾರಾಯಣಸ್ವಾಮಿ

'ಕೆಲವು ಸೊಸೈಟಿಗಳಲ್ಲಿ ಆಡಳಿತ ಮಂಡಳಿಯವರು ತಮ್ಮದೇ ಆದ ಸಿಂಡಿಕೇಟ್ ಮಾಡಿಕೊಂಡು, ತಮಗೆ ಬೇಕಾದವರಿಗೆ ಮೊದಲು ಗೊಬ್ಬರ ಸಿಗುವಂತೆ ನೋಡಿಕೊಳ್ಳುತ್ತಾರೆ. ಇದನ್ನು ತಪ್ಪಿಸಬೇಕು. ಸೊಸೈಟಿಗಳನ್ನು ಇನ್ನಷ್ಟು ಬಲಪಡಿಸಿ, ಅವುಗಳ ಮೂಲಕವೇ ಸಕಾಲಕ್ಕೆ ರಸಗೊಬ್ಬರ ನೀಡುವ ಕೆಲಸ ಆಗಬೇಕು. ಇದರಿಂದ ಖಾಸಗಿಯವರ ಪ್ರಾಬಲ್ಯ ತಡೆಯಬಹುದು' ಎಂಬುದು ಅವರ ಸಲಹೆ.

ರೈತರು ಎದುರಿಸುತ್ತಿರುವ ಮತ್ತೊಂದು ಸಮಸ್ಯೆಯೆಂದರೆ ತಮಗೆ ಬೇಕಾದ ಗೊಬ್ಬರದ ಜೊತೆ ಬೇಡದ ಗೊಬ್ಬರವನ್ನೂ ತೆಗೆದುಕೊಳ್ಳಬೇಕು ಎನ್ನುವ ಖಾಸಗಿಯವರು ಸೃಷ್ಟಿಸಿರುವ ಲಿಂಕ್ ವ್ಯವಸ್ಥೆ. ಬಹುತೇಕ ಕಡೆ ಲಿಂಕ್ ವ್ಯವಸ್ಥೆ ಇದೆ. ಡಿಎಪಿ ಕೇಳಿದರೆ ಅದರೊಂದಿಗೆ ಕಡ್ಡಾಯವಾಗಿ ಯೂರಿಯಾ ತೆಗೆದುಕೊಳ್ಳಬೇಕು ಎನ್ನುತ್ತಾರೆ. ಕೆಲವು ಕಡೆ ಯೂರಿಯಾ ಕೇಳಿದರೆ ಡಿಎಪಿ ತೆಗೆದುಕೊಳ್ಳಿ ಎಂಬ ಉತ್ತರ ಬರುತ್ತದೆ. ಅಲ್ಲದೆ ರಸಗೊಬ್ಬರದ ಜೊತೆ ಬಿತ್ತನೆ ಬೀಜ, ಔಷಧಿಗಳನ್ನು ಖರೀದಿಸಿ ಎನ್ನುತ್ತಾರೆ. ಈ ರೀತಿ ಒಂದಕ್ಕೊಂದು ಲಿಂಕ್ ಮಾಡಿರುವುದರಿಂದ ರೈತರಿಗೆ ತೊಂದರೆ ಆಗುತ್ತಿದೆ.

ಒಂದು ಗೊಬ್ಬರ ಖರೀದಿಗೆ ರೈತರ ಬಳಿ ಹಣ ಇರುವುದಿಲ್ಲ. ಮತ್ತೊಂದು ತೆಗೆದುಕೊಳ್ಳಿ ಎಂದರೆ, ಅವರು ಎಲ್ಲಿಂದ ಹಣ ತರುವುದು? ಈ ರೀತಿಯ ಲಿಂಕ್ ವ್ಯವಸ್ಥೆಯಿಂದ ರೈತರಿಗೆ ತೊಂದರೆ ಆಗುತ್ತಿದ್ದರೂ, ಇದಕ್ಕೆ ಕಡಿವಾಣ ಹಾಕುವ ಕೆಲಸ ಆಗಿಲ್ಲ. ಮಾರಾಟವಾಗದೇ ಉಳಿದಿರುವ ರಸಗೊಬ್ಬರ ಖಾಲಿಯಾಗಲಿ ಎಂಬ ಉದ್ದೇಶದಿಂದ ಈ ರೀತಿಯ ಲಿಂಕ್ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅಧಿಕಾರಿಗಳು ಈ ವಿಷಯದಲ್ಲಿ ಮೌನವಾಗಿರುವುದು ನೋಡಿದರೆ, ಪರೋಕ್ಷವಾಗಿ ಅವರೂ ಇದಕ್ಕೆ ಕುಮ್ಮಕ್ಕು ನೀಡುತ್ತಿರಬಹುದು ಎಂಬ ಅನುಮಾನ ಬರುತ್ತದೆ.

ಲಿಂಕ್ ವ್ಯವಸ್ಥೆ ಮೂಲಕ ರಸಗೊಬ್ಬರ ಮಾರಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ ಕ್ರಮಕೈಗೊಂಡಿರುವ ಉದಾಹರಣೆ ಇಲ್ಲ. ಅಂತಹ ಮಳಿಗೆಗಳ ಮೇಲೆ ದಾಳಿ ಮಾಡಿ ಪರವಾನಗಿ ರದ್ದುಪಡಿಸಲು ಅವಕಾಶ ಇದ್ದರೂ, ಆ ಕೆಲಸವನ್ನು ಅಧಿಕಾರಿಗಳು ಮಾಡುತ್ತಿಲ್ಲ ಎನ್ನುತ್ತಾರೆ ರೈತರು.

ದಾಳಿ ಮಾಡಲು ಸೂಚನೆ

'ಲಿಂಕ್ ವ್ಯವಸ್ಥೆಯಿಂದ ರೈತರಿಗೆ ತೊಂದರೆ ಆಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಇದಕ್ಕೆ ಕಡಿವಾಣ ಹಾಕಲು ಅನಿರೀಕ್ಷಿತವಾಗಿ ದಾಳಿ ಮಾಡಿ ಪ್ರಕರಣ ದಾಖಲಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಇದಲ್ಲದೆ ಖಾಸಗಿ ಮಳಿಗೆಗಳ ಮಾಲೀಕರಿಗೆ ಈ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದೇವೆ' ಎನ್ನುತ್ತಾರೆ ಕೃಷಿ ಇಲಾಖೆಯ ಕಾರ್ಯದರ್ಶಿ ಶಿವಯೋಗಿ ಕಳಸದ.

ಸೊಸೈಟಿಗಳ ಆಧುನೀಕರಣ, ಗಣಕೀಕರಣ ಕಾರ್ಯ ನಡೆಯುತ್ತಿದೆ. ಇದಲ್ಲದೆ ಪಾರದರ್ಶಕವಾಗಿ, ವೈಜ್ಞಾನಿಕವಾಗಿ ಮಾರಾಟ ವ್ಯವಸ್ಥೆ ಇರಬೇಕು ಎಂಬ ಉದ್ದೇಶದಿಂದ ಆಧಾರ್‌ಗೆ ಲಿಂಕ್ ಮಾಡಿ ರೈತರು ಹೊಂದಿರುವ ಜಮೀನಿಗೆ ಅನುಗುಣವಾಗಿ ಅಗತ್ಯವಿರುವ ಪ್ರಮಾಣದಲ್ಲಿ ರಸಗೊಬ್ಬರ ನೀಡುವ ವ್ಯವಸ್ಥೆ ಪ್ರಾಯೋಗಿಕವಾಗಿ ಸದ್ಯದಲ್ಲೇ ಆರಂಭವಾಗಲಿದೆ. ಸೊಸೈಟಿಗಳು ದುರ್ಬಲವಾಗಿರುವ ಕಡೆ ಸಮಸ್ಯೆಗಳು ಇರುವುದು ನಿಜ. ಹೀಗಾಗಿ ಅವುಗಳಿಗೆ ಸಾಲ ಪಡೆಯಲು ಅನುಕೂಲವಾಗುವಂತೆ ಸರ್ಕಾರವೇ ಖಾತರಿ ನೀಡುವುದು, ಸಹಾಯಧನ ನೀಡುವುದು ಮೊದಲಾದ ಕ್ರಮ ಕೈಗೊಳ್ಳಲಾಗುವುದು ಎನ್ನುತ್ತಾರೆ ಅವರು.

ಒಟ್ಟಾರೆ ರಸಗೊಬ್ಬರ ವಿತರಿಸುವಲ್ಲಿ ಸಹಕಾರ ಸಂಘಗಳ ವೈಫಲ್ಯ, ಲಿಂಕ್ ವ್ಯವಸ್ಥೆ ಮೇಲೆ ಕಡಿವಾಣ ಬೀಳದಿರುವುದು, ಕಾಳಸಂತೆಯಲ್ಲಿ ಗೊಬ್ಬರದ ಮಾರಾಟವು ಕೃಷಿ ವ್ಯವಸ್ಥೆ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ.



ಚಿತ್ರ: ಕಣಕಾಲಮಠ

2022ರಲ್ಲಿ ಆಗಿರುವ ಬಿತ್ತನೆ ಮಾಹಿತಿ
(ಲಕ್ಷ ಹೆಕ್ಟೇರ್‌ಗಳಲ್ಲಿ)

ಹಂಗಾಮು	ಗುರಿ	ಸಾಧನೆ
ಮುಂಗಾರು	83.67	80.40
ಹಿಂಗಾರು	26.68	25.67
ಬೇಸಿಗೆ	05.20	-
ಒಟ್ಟು	114.54	106.07

ರಿಯಾಯಿತಿ ದರದಲ್ಲಿ ಸಕಾಲಕ್ಕೆ ರಸಗೊಬ್ಬರ ಸಿಗಬೇಕು. ಕಳೆದ ಎರಡು ವರ್ಷಕ್ಕೆ ಹೋಲಿಸಿದರೆ ಬೆಲೆಗಳು ದ್ವಿಗುಣಗೊಂಡಿವೆ. ಉತ್ಪಾದನಾ ವೆಚ್ಚ ಹೆಚ್ಚಾಗಿದೆ. ರೈತರ ಸಮಸ್ಯೆ ಕೇಳುವವರೇ ಇಲ್ಲ.
ಜಗದೀಶ್ ಪಟೇಲ್, ರೈತ, ದೊಡ್ಡಮಗ್ಗೆ,ಅರಕಲಗೂಡು

ರಸಗೊಬ್ಬರದ ಗರಿಷ್ಠ ಮಾರಾಟ ಮತ್ತು ಸಹಾಯಧನ (* ಜಿಎಸ್‌ಟಿ ಸೇರಿ)

ರಸಗೊಬ್ಬರದ ಹೆಸರು	ಮಾರಾಟ ಬೆಲೆ (50ಕೆ.ಜಿ.ಚೀಲಕ್ಕೆ)	ಸಹಾಯಧನ	ಒಟ್ಟು ಮೊತ್ತ
ಡಿಎಪಿ	1,350	2,422	3,772
ಎಂಒಪಿ	1,700	709	2,409
ಎಸ್‌ಎಸ್‌ಪಿ	450	376	826
ಎನ್‌ಪಿಎಸ್ 20:20:0:13	1,490	1,689	3,179
ಎನ್‌ಪಿಕೆ 10:26:26	1,470	1,668	3,138
ಎನ್‌ಪಿಕೆ 15:15:15	1,500	1,415	2,915
ಎನ್‌ಪಿಎಸ್ 16:20:0:13	1,400	1,493	2,893
ಎನ್‌ಪಿಕೆ 12:32:16	1,470	1,848	3,318
ಯೂರಿಯಾ (45 ಕೆ.ಜಿ*)	266	2,029	2,295

ಇನ್ನೂ ಜಾರಿಯಾಗದ ನೇರ ಸಬ್ಸಿಡಿ ಯೋಜನೆ

ರಸಗೊಬ್ಬರ ಖರೀದಿಸುವ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಸಬ್ಸಿಡಿ ಜಮಾ ಮಾಡುವ ಯೋಜನೆಗೆ 2018ರ ಜನವರಿ 1ರಂದು ಚಾಲನೆ ನೀಡಲಾಗಿತ್ತು. ಆದರೆ, ಇದುವರೆಗೂ ಇದು ಅನುಷ್ಠಾನಕ್ಕೆ ಬಂದಿಲ್ಲ.

ರೈತರು ಖರೀದಿಸುವ ರಸಗೊಬ್ಬರಕ್ಕೆ ಅನುಗುಣವಾಗಿ ಕಂಪನಿಗಳಿಗೆ ನೇರವಾಗಿ ಸಬ್ಸಿಡಿ ನೀಡುವ ವ್ಯವಸ್ಥೆ ಸದ್ಯ ಜಾರಿಯಲ್ಲಿದೆ. ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಸಬ್ಸಿಡಿ ನೀಡುವ ವ್ಯವಸ್ಥೆ ಜಾರಿಯಾದರೆ, ಜಮೀನಿನ ಖಾತಾ ಕೇಳುತ್ತಾರೆ. ಹಲವರ ಬಳಿ ಖಾತಾ ಇಲ್ಲ. ಅಲ್ಲದೆ ಸ್ವಂತ ಜಮೀನು ಇಲ್ಲದವರು ಜಮೀನು ಗುತ್ತಿಗೆ ಪಡೆದು ಕೃಷಿ ಮಾಡುತ್ತಾರೆ. ಖಾತಾ ಕಡ್ಡಾಯ ಮಾಡಿದರೆ ಅಂತಹ ರೈತರಿಗೆ ರಸಗೊಬ್ಬರವೇ ಸಿಗುವುದಿಲ್ಲ. ಖಾತಾ ಇಲ್ಲ ಎಂದಾಗ ವಾಮಮಾರ್ಗದ ಮೂಲಕ ಅಧಿಕ ಹಣಕ್ಕೆ ಮಾರಾಟ ಮಾಡುವ ಸಾಧ್ಯತೆ ಇರುವುದರಿಂದ ಇದು ಭ್ರಷ್ಟಾಚಾರಕ್ಕೆ ಆಸ್ಪದವಾಗಬಹುದು ಎಂಬ ಆತಂಕವಿದೆ. ಅಡುಗೆ ಅನಿಲ ಸಿಲಿಂಡರ್‌ಗಳನ್ನು ಮೊದಲು ಸಬ್ಸಿಡಿ ದರದಲ್ಲಿ ನೀಡಲಾಗುತ್ತಿತ್ತು. ಬಳಿಕ ಗ್ರಾಹಕರ ಬ್ಯಾಂಕ್ ಖಾತೆಗೆ ಸಬ್ಸಿಡಿ ಹಣ ವರ್ಗಾಯಿಸಲು ಶುರು ಮಾಡಿದರು. ಇದಾದ ಕೆಲವೇ ವರ್ಷಗಳಲ್ಲಿ ಸಬ್ಸಿಡಿ ನಿಲ್ಲಿಸಿದರು. ರಸಗೊಬ್ಬರಕ್ಕೆ ನೀಡುವ ಸಬ್ಸಿಡಿಗೂ ಆ ಸ್ಥಿತಿ ಬರಬಾರದು. ಹಾಗಾಗಿ ಈಗಿರುವ ಪದ್ಧತಿಯನ್ನೇ ಮುಂದುವರಿಸಬೇಕು ಎಂಬ ಆಗ್ರಹ ಕೇಳಿಬರುತ್ತಿದೆ.

ಗೊಬ್ಬರಕ್ಕೆ ಆಗ್ರಹಿಸಿ ಹಾವೇರಿ ಜಿಲ್ಲೆಯ ಗುತ್ತಲ ರೈತ ಸಂಪರ್ಕ ಕೇಂದ್ರದಲ್ಲಿ ಪ್ರತಿಭಟನೆ ನಡೆಸಿದ್ದ ರೈತರು (ಸಂಗ್ರಹ ಚಿತ್ರ)

ಕೇಂದ್ರ ಸಚಿವರ ಪ್ರಸ್ತಾಪಕ್ಕೆ ಸಾರ್ವಜನಿಕರ ವಿರೋಧ

'ಅಮುಲ್', 'ನಂದಿನಿ' ವಿಲೀನ ಶಾ ಹೇಳಿಕೆಗೆ ವ್ಯಾಪಕ ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಡ್ಯ/ಬೆಂಗಳೂರು: ಗುಜರಾತ್‌ನ 'ಅಮುಲ್' ಜತೆಗೆ ಕರ್ನಾಟಕ ಹಾಲು ಮಹಾಮಂಡಳವನ್ನು (ಕೆಎಂಎಫ್ – ನಂದಿನಿ) ಒಂದುಗೂಡಿಸುವ ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಹೇಳಿಕೆಗೆ ರಾಜ್ಯದಾದ್ಯಂತ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಅಮಿತ್ ಶಾ

ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದ್ದು, 'ವಿಲೀನ' ಪ್ರಸ್ತಾವವನ್ನು ಬಹುತೇಕ ಮಂದಿ ಖಂಡಿಸಿದ್ದು, ತೀವ್ರವಾಗಿ ಆಕ್ಷೇಪಿಸಿದ್ದಾರೆ.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಗೆಜ್ಜಲಗೆರೆಯಲ್ಲಿರುವ ಜಿಲ್ಲಾ ಹಾಲು ಒಕ್ಕೂಟದ (ಮನ್‌ಮುಲ್) ಆವರಣದಲ್ಲಿ ಮೆಗಾ ಡೇರಿ ಉದ್ಘಾಟಿಸಿ ಶುಕ್ರವಾರ ಮಾತನಾಡಿದ್ದ ಶಾ, '1975ರಿಂದಲೂ ಕೆಎಂಎಫ್ ಅಭಿವೃದ್ಧಿ ಹೊಂದುತ್ತಿದೆ. ಅಂತೆಯೇ ಗುಜರಾತ್ ಸಹಕಾರ ಒಕ್ಕೂಟವೂ ಪ್ರಗತಿಯ ಹಾದಿಯಲ್ಲಿದೆ. 'ಅಮುಲ್' ಹಾಗೂ 'ನಂದಿನಿ' ಒಂದಾದರೆ ಹಾಲು ಉತ್ಪಾದಕರಿಗೆ ಇನ್ನಷ್ಟು ಅನುಕೂಲವಾಗುತ್ತದೆ' ಎಂದಿದ್ದರು.

ಅಮಿತ್ ಶಾ ಅವರ ಹೇಳಿಕೆಯನ್ನು ವಿರೋಧಿಸಿ ಜಾಲತಾಣಗಳಲ್ಲಿ ಸಂದೇಶ ಹಾಕಿರುವ ಹಲವರು, 'ಕರ್ನಾಟಕದ ಅಸ್ಮಿತೆಯಾಗಿರುವ 'ನಂದಿನಿ' ಬ್ರ್ಯಾಂಡ್ ಮೇಲೆ ಅಮಿತ್ ಶಾ ಕಣ್ಣು ಬಿದ್ದಿದೆ ಎಂದು ವ್ಯಾಖ್ಯಾನಿಸಿದ್ದಾರೆ.

'ರಾಜ್ಯದಲ್ಲಿ ಜೀವಂತವಾಗಿರುವ ಸಹಕಾರ ವ್ಯವಸ್ಥೆಯ ಖಾಸಗೀಕರಣ ಹುನ್ನಾರದಿಂದಲೇ ಶಾ ಈ ಮಾತು ಹೇಳಿದ್ದಾರೆ. ಈಗಾಗಲೇ ಕರ್ನಾಟಕ ಮೂಲದ ಬ್ಯಾಂಕ್‌ಗಳನ್ನು ಇತರ ಬ್ಯಾಂಕ್‌ಗಳೊಂದಿಗೆ ವಿಲೀನ ಮಾಡಿದ್ದಾಗಿದೆ. ಈಗ ಕೆಎಂಎಫ್ ಅನ್ನೂ ಕಾರ್ಪೊರೇಟ್ ಕಂಪನಿಗೆ ನೀಡಲು ಷಡ್ಯಂತ್ರ ರೂಪಿಸಿದ್ದಾರೆ' ಎಂದಿದ್ದಾರೆ.

'ಅಮುಲ್ ಅನ್ನು ಇಲ್ಲಿಗೆ ತಂದರೆ ಅದ್ಯಾವ ಉದ್ದೇಶಗಳನ್ನು ಈಡೇರಿಸಿದಂತೆ ಆಗುತ್ತದೆ? ಕೆಎಂಎಫ್‌ನ ಸ್ವಾಯತ್ತತೆಗೆ ಧಕ್ಕೆಯಾಗಬಾರದು. ನಂದಿನಿ, ಕೆಎಂಎಫ್ ಕರ್ನಾಟಕದ ಲಕ್ಷಾಂತರ ರೈತರಿಗೆ ನೆರವಾಗಿದೆ. ಈಗ ಅದನ್ನು ಅಮುಲ್ ಜೊತೆ ವಿಲೀನ ಮಾಡಿದರೆ ಏನಾಗುತ್ತದೆ? ಬ್ಯಾಂಕ್ ಆಫ್ ಬರೋಡಾದ ಜೊತೆ ವಿಜಯ ಬ್ಯಾಂಕ್ ವಿಲೀನ. ಎಸ್‌ಬಿಐ ಜೊತೆ ನೂರು ವರ್ಷಗಳ ಇತಿಹಾಸ ಹೊಂದಿರುವ ಎಸ್‌ಬಿಎಂ ಮೂಲೆಗೆ ಸೇರಿದಂತೆ ಇಲ್ಲೂ ಆಗುತ್ತೆ. ಒಟ್ಟಿನಲ್ಲಿ ಅದರ ಆಡಳಿತದ ಚುಕ್ಕಾಣಿ ಕನ್ನಡಿಗರ ಕೈಯಲ್ಲಿ ಇರೋದು ಕೈತಪ್ಪುತ್ತದೆ ಅಷ್ಟೆ' ಎಂದು ಬರಹಗಾರ, ಕನ್ನಡಪರ ಚಿಂತಕ ವಸಂತ ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ.

'ನಂದಿನಿ ಎಂಬುದು ಕೇವಲ ಬ್ರಾಂಡ್ ಅಲ್ಲ. ಅದು ಕರ್ನಾಟಕದ ಹೆಗ್ಗುರುತು. ಹಾಲು ಉತ್ಪಾದಕರ ಹೆಮ್ಮೆಯ ಸಂಸ್ಥೆ. ಅಮುಲ್ ಅನ್ನು ನಂದಿನಿಯೊಂದಿಗೆ ವಿಲೀನಗೊಳಿಸಿದರೆ ಬೆಳವಣಿಗೆಯಾಗುವುದಿಲ್ಲ. ಆದರೆ, ನಮ್ಮದೇ ಹೆಗ್ಗುರುತಿಗೆ ತೀವ್ರ ಧಕ್ಕೆಯಾಗಲಿದೆ. ನಮಗೀ ಪ್ರಸ್ತಾವ ಬೇಡ. ನಂದಿನಿಯಿಂದ ದೂರವಿರಿ' ಎಂದು ಗುರುಪ್ರಸಾದ್ ಎಂಬುವವರು ಹೇಳಿದ್ದಾರೆ.

'ಕರ್ನಾಟಕ ಮೂಲದ ಬ್ಯಾಂಕುಗಳನ್ನು ನಾಶಪಡಿಸಿದ್ದಾಯ್ತು. ಈಗ ಕೆಎಂಎಫ್ ಮೇಲೆ ಕೇಂದ್ರ ಸರ್ಕಾರದ ವಕ್ರದೃಷ್ಟಿ ಬಿದ್ದಿದೆ. ಕರ್ನಾಟಕದ ರೈತರ ಪಾಲಿನ ಕಾಮಧೇನುವಂತಿರುವ ಕೆಎಂಎಫ್ ವಿಲೀನದ ಹೆಸರಲ್ಲಿ ಮುಳುಗಿಸುವ ಬಿಜೆಪಿ ಹುನ್ನಾರವನ್ನು ತಡೆಯಲು ಕನ್ನಡಿಗರು ಸಜ್ಜಾಗಬೇಕಿದೆ. ಕರ್ನಾಟಕದ ಅಸ್ಮಿತೆ, ಅರ್ಥಿಕತೆಗಳೆಲ್ಲವನ್ನೂ ಅಪೋಶನ ಪಡೆಯುವುದೇ ಬಿಜೆಪಿ ಅಜೆಂಡಾ' ಎಂದು ಕರ್ನಾಟಕ ಕಾಂಗ್ರೆಸ್ ಟ್ವೀಟ್ ಮಾಡಿದೆ.

'ಅಮಿತ್ ಶಾ ಅವರೇ ನಿಮ್ಮ ಪ್ರಸ್ತಾವಕ್ಕೆ ಬದಲಾಗಿ ಹೀಗೆ ಮಾಡೋಣ. ಗುಜರಾತ್‌ನಲ್ಲಿ ನಂದಿನಿ ಬ್ರ್ಯಾಂಡ್ ಡೇರಿಗಳನ್ನು ಸ್ಥಾಪಿಸೋಣ. ನಿಮ್ಮ ಅಮುಲ್ ಅನ್ನು ನಂದಿನಿಯೊಂದಿಗೆ ವಿಲೀನಗೊಳಿಸಿ. ನಂದಿನಿ ಕರ್ನಾಟಕದ ಹೆಮ್ಮೆಯ ಬ್ರ್ಯಾಂಡ್. ಅದರ ತಂಟೆಗೆ ಬರಬೇಡಿ ದಯವಿಟ್ಟು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕಥೆ ನಮಗೆಲ್ಲ ಚೆನ್ನಾಗಿ ಗೊತ್ತಿದೆ' ಎಂದು 'ಚಂದನವನ' ಎಂಬ ಟ್ವಿಟರ್ ಖಾತೆಯಿಂದ ಪೋಸ್ಟ್ ಮಾಡಲಾಗಿದೆ.

'ಕರ್ನಾಟಕದ ರೈತರಿಗೆ ನಂದಿನಿ ಎನ್ನುವುದು ಮರಳುಗಾಡಿನಲ್ಲಿ ಓಯಸಿಸ್ ಇರುವಂತೆ. ಇದನ್ನು ಅಮುಲ್ ಜೊತೆಗೆ ಸೇರಿಸುವುದು ಬೇಡ. ಹಾಗೆ ಮಾಡಿದರೆ ಮೈಸೂರು ಮಹಾರಾಜರು ಕಟ್ಟಿ ಬೆಳೆಸಿದ ಮೈಸೂರು ರೈಲ್ವೆಯನ್ನು ಇಂಡಿಯನ್ ರೈಲ್ವೆಗೆ ಸೇರಿಸಿ ಈಗ ಸಣ್ಣಪುಟ್ಟದಕ್ಕೂ ಪರದಾಡುವಂತೆ ಆಗಿರುವ ಹಾಗಾಗುತ್ತದೆ' ಎಂದು ಶಿಕ್ಷಕ ಸಿ.ಎಸ್.ಲಕ್ಷ್ಮೀಶ ಹೇಳಿದ್ದಾರೆ.

'ದುಷ್ಟ ಭಸ್ಮಾಸುರನ ಕೈಗೆ ಈಗಲೇ ಬರೆ ಹಾಕಬೇಕು'

ಸಿದ್ದರಾಮಯ್ಯ

'ನಮ್ಮ ಬ್ಯಾಂಕುಗಳನ್ನು ಕಸಿದು ಆರ್ಥಿಕತೆ ನಾಶಕ್ಕೆ ಯತ್ನಿಸಿದ ಬಿಜೆಪಿಯವರು ಈಗ ನಮ್ಮ ಹಾಲಿನ ಮೂಲಕ್ಕೆ ಕೈ ಹಾಕುತ್ತಿದ್ದಾರೆ. ಈ ದುಷ್ಟ ಭಸ್ಮಾಸುರನ ಕೈಗೆ ಈಗಲೇ ಬರೆ ಹಾಕದಿದ್ದರೆ, 25 ಲಕ್ಷ ರೈತ ಕುಟುಂಬಗಳನ್ನು ಬೀದಿಪಾಲು ಮಾಡಿಬಿಡುತ್ತಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

'ರಾಜ್ಯದ ಹಾಲು ಉತ್ಪಾದಕ ರೈತರು ಸುಮಾರು ₹ 20 ಸಾವಿರ ಕೋಟಿವರೆಗೆ ಹಾಲಿನ ವಹಿವಾಟು ಮಾಡುತ್ತಾರೆ. ಈ ಕುಟುಂಬಗಳ ಮನೆಯಲ್ಲಿ ದೀಪ ಬೆಳಗುವುದೇ ಹಾಲಿನಿಂದ. ಮಕ್ಕಳ ಶಿಕ್ಷಣ, ಆಸ್ಪತ್ರೆ ಖರ್ಚಿನಿಂದ ಹಿಡಿದು, ಅಕ್ಕಿ, ಬೇಳೆ, ಬಟ್ಟೆ- ಬರೆ ಮುಂತಾದವುಗಳೆಲ್ಲ ಹಾಲಿನಿಂದಲೆ ಬರಬೇಕು. ಇಂಥ ಚಿನ್ನದ ಮೊಟ್ಟೆ ಇಡುವ ಕೋಳಿಯ ಮೇಲೆ ಈಗ ಗುಜರಾತ್ ಕಾರ್ಪೊರೇಟ್ ಕುಳಗಳ ಕಣ್ಣುಬಿದ್ದಿದೆ. ಅವರ ಕಣ್ಣು ಬಿದ್ದ ಕಡೆ, ಎಲ್ಲವೂ ಸರ್ವನಾಶವಾಗುತ್ತದೆ' ಎಂದಿದ್ದಾರೆ.

ಜಾಲತಾಣದಲ್ಲಿ ಆಕ್ರೋಶ

ಅಮುಲ್ 'ಟೇಸ್ಟ್ ಆಫ್ ಇಂಡಿಯಾ' ಇರಬಹುದು. ಆದರೆ 'ನಂದಿನಿ' ನಮ್ಮ ಕರ್ನಾಟಕದ ಜೀವನಾಡಿ. ವಾರ್ಷಿಕ ₹ 1.50 ಲಕ್ಷ ಕೋಟಿ ವಹಿವಾಟು ಇರುವ ನಂದಿನಿಯನ್ನು 'ಎಲ್ಲ ಒಂದು' ಅನ್ನುವ ಹೆಸರಲ್ಲಿ ಕನ್ನಡ, ಕರ್ನಾಟಕದ ಗುರುತು ಮುಚ್ಚಿಹಾಕೋದು. ಈ ಸರ್ಕಾರ ಮುಂದುವರೆದರೆ ನಮ್ಮ ಬ್ರ್ಯಾಂಡ್ ಇತಿಹಾಸ ಪುಟ ಸೇರುವ ಎಲ್ಲ ಲಕ್ಷಣ ಕಾಣುತ್ತಿದೆ.
ಜಿ.ಸಿ. ಚಂದ್ರಶೇಖರ್, ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ

ದಯವಿಟ್ಟು 'ನಂದಿನಿ'/ ಕೆಎಂಎಫ್ ತಂಟೆಗೆ ಬರಬೇಡಿ. ಕೆಎಂಎಫ್ ಪ್ರತಿ ಹಳ್ಳಿಯಲ್ಲೂ ಇರುವುದು ನಿಮಗೆ ತಿಳಿದಿಲ್ಲವೆ. ಮತ್ತಿನ್ನೇನು ತಿಳಿದಿದೆ ನಿಮಗೆ. ನಂದಿನಿ ಮತ್ತು ಅಮುಲ್ ಅನ್ನು ರಿಲಯನ್ಸ್ ಅದಾನಿಗೆ ಮಾರಾಟ ಮಾಡುವ ಹುನ್ನಾರವೇ?
ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ

ಕೋಟ್ಯಂತರ ರೈತ ಮಹಿಳೆಯರಿಗೆ ಕೆಎಂಎಫ್ ಬದುಕು ನೀಡಿದೆ. ಮನ್‌ಮುಲ್ ಎಂದರೆ ಮನೆಯ ಮುಂದಿನ ಮಾರುಕಟ್ಟೆ. ವಿಲೀನದ ಹೆಸರಿನಲ್ಲಿ ಏಕಸ್ವಾಮ್ಯ ಮಾರುಕಟ್ಟೆ ರೂಪುಗೊಳ್ಳುವ ಅಪಾಯವಿದೆ. ಅಮಿತ್ ಶಾ ಹೇಳಿಕೆಯಿಂದ ರೈತರಿಗೆ ಆತಂಕ ಆರಂಭವಾಗಿದೆ.
ನಂದಿನಿ ಜಯರಾಂ, ರೈತ ನಾಯಕಿ

ಅಮುಲ್ ಅನ್ನು ಸ್ಥಾಪಿಸಿದ ಡಾ. ಕುರಿಯನ್ ಅವರನ್ನು ಹೊರದಬ್ಬಿದ ಗುಜರಾತಿಗಳು ಈಗ 'ನಂದಿನಿ'ಯನ್ನು ಮಾರಾಟ ಮಾಡಲು ಬಂದಿದ್ದಾರೆ.
ಲಾವಣ್ಯ ಬಲ್ಲಾಳ್, ಕಾಂಗ್ರೆಸ್ ಯುವ ನಾಯಕಿ

ವಿಜಯ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮುಳುಗಿಸಿ ಆಯ್ತು. ಈಗ 'ನಂದಿನಿ'ಯನ್ನು ಮುಳುಗಿಸಲು ನೋಡುತ್ತಿದ್ದಾರೆ.
ರವಿಕುಮಾರ್, ಜಾಲತಾಣ ಬಳಕೆದಾರ

ಅಮುಲ್ ಇಲ್ಲದೆಯೂ ಕರ್ನಾಟಕ ಮತ್ತು ನಂದಿನಿ/ಕೆಎಂಎಫ್ ಉತ್ತಮವಾಗಿ ನಡೆಯಬಲ್ಲವು. ಅಮುಲ್‌ಗೆ ನಂದಿನಿ ಉತ್ತಮ ಪ್ರತಿಸ್ಪರ್ಧಿ ಆಗಬಹುದೇ ವಿನಾ ಅಂಗಸಂಸ್ಥೆಯಲ್ಲ.
ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಗುಂಡಣ್ಣ

25 ವರ್ಷಗಳ ಹಿಂದೆ
ಗುರುವಾರ, 1-1-1998

● **ಬೃಹತ್ ಲಡ್ಡು**

ತಿರುಪತಿ, ಡಿಸೆಂಬರ್ 31– ಹೊಸ ವರ್ಷದ ಸಂದರ್ಭದಲ್ಲಿ ನಾಳೆ ತಿರುಪತಿ ವೆಂಕಟೇಶ್ವರ ದೇವಾಲಯದಲ್ಲಿ 50 ಕಿಲೊ ಗಾತ್ರದ ಬೃಹತ್ ಲಡ್ಡುವನ್ನು ಪ್ರದರ್ಶನಕ್ಕೆ ಇಡಲು ನಿರ್ಧರಿಸಲಾಗಿದೆ. ನಂತರ ಈ ಲಡ್ಡುವನ್ನು ಭಕ್ತಾದಿಗಳಿಗೆ ಹಂಚಲಾಗುವುದು ಎಂದು ದೇವಸ್ಥಾನದ ಮೂಲಗಳು ತಿಳಿಸಿವೆ.

● **ಬೆಂಕಿ ದುರಂತ: 4 ಸಾವು**

ಮಾಸ್ಕೊ, ಡಿಸೆಂಬರ್ 31 (ಎಪಿ): ರಷ್ಯಾದ ಆಗ್ನೇಯ ಕಿಂಗ್‌ಶಿಪ್ ನಗರದ ಕೈಗಾರಿಕಾ ಪ್ರದೇಶದಲ್ಲಿ ಸಂಭವಿಸಿದ ಬೆಂಕಿ ದುರಂತದಲ್ಲಿ ನಾಲ್ಕು ಮಂದಿ ಸಾವಿಗೀಡಾಗಿದ್ದಾರೆ.

50 ವರ್ಷಗಳ ಹಿಂದೆ
ಸೋಮವಾರ, 1-1-1973

● **'ಫೀಲ್ಡ್ ಮಾರ್ಷಲ್' ಮಾಣೆಕ್ ಷಾ**

ನವದೆಹಲಿ, ಡಿಸೆಂಬರ್ 31– ಭಾರತ ಸೇನೆಯ ಪ್ರಧಾನ ದಂಡನಾಯಕ ಜನರಲ್ ಎಸ್. ಎಚ್.ಎಫ್.ಜೆ. ಮಾಣೆಕ್ ಷಾ ಅವರನ್ನು, ಅವರು ಸಲ್ಲಿಸಿದ ಅಮೋಘ ಸೇವೆಗಾಗಿ ಭಾರತೀಯ ಸೇನೆಯು 'ಫೀಲ್ಡ್ ಮಾರ್ಷಲ್' ಹುದ್ದೆಗೆ ನೇಮಕ ಮಾಡಿ ಬಡ್ತಿ ನೀಡಲಾಗಿದೆ ಎಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.

ಅವರು ಜೀವಾವಧಿಕಾಲ ಫೀಲ್ಡ್ ಮಾರ್ಷಲ್ ಪದವಿಯಲ್ಲಿರುತ್ತಾರೆ ಎಂದು ರಕ್ಷಣಾ ಖಾತೆಯ ಪತ್ರಿಕಾ ಪ್ರಕಟಣೆಯೊಂದು ತಿಳಿಸಿದೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಜನವರಿ 1, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದಶಮಿ ಗಂ. 19-12, ನಕ್ಷತ್ರ: ಅಶ್ವಿನಿ ಗಂ. 12-49 ಯೋಗ: ಶಿವ ಗಂ. 07-24, ಕರಣ: ತೈತಿಲ ಗಂ. 06-48, ಧನುರ್ ಮಾಸದ 16 ನೇ ದಿನ. ರಾಹುಕಾಲ : ಸಾಯಂಕಾಲ 04-30–06-00
ಸೂರ್ಯೋದಯ : 06-57 ಸೂರ್ಯಾಸ್ತ : 06-11
ಮುಸ್ಲಿಂ ದಿನಾಂಕ : 08 ಜುಮಾದುಸ್ಸಾನಿ ದಿನ ವಿಶೇಷ : ಸಾಂಬ ದಶಮಿ (ಒಡಿಶಾ), ಹೊಸ ವರ್ಷ ದಿನ (ಕ್ರಿಶ್ಚಿಯನ್) (ಇಂಗ್ಲೀಷ್)
ಅದೃಷ್ಟ ಸಂಖ್ಯೆ : 7, 10

ಮೇಷ: ಮಹತ್ವದ ಕಾರ್ಯಾಚರಣೆಗಾಗಿ ಅಥವಾ ದೇವರ ದರ್ಶನಕ್ಕಾಗಿ ದೂರ ಪ್ರಯಾಣ ಕಂಡುಬರುವುದು. ದುಡಿಮೆ ಸಾರ್ಥಕವಾಗುವ ಕೆಲಸವನ್ನು ಮಾಡಿ. ರಕ್ಷಣೆ ಕೆಲಸ ಮಾಡುವವರು ಹೆಚ್ಚಿನ ಶ್ರಮವಹಿಸಬೇಕಾಗುತ್ತದೆ.

ವೃಷಭ: ಗೃಹ ನಿರ್ಮಾಣದ ಜವಾಬ್ದಾರಿಯು ನಿಮ್ಮ ಜೀವನದಲ್ಲಿ ಸವಾಲಾಗಿ ಬಂದು ಜಯವನ್ನು ತರಲಿದೆ. ಎಂಜಿನಿಯರ್‌ಗಳಿಗೆ ಉದ್ಯೋಗದಲ್ಲಿ ಉತ್ತಮ ಬದಲಾವಣೆಯ ಅವಕಾಶವಿದೆ. ನವಗ್ರಹ ಆರಾಧನೆಯಿಂದ ಶುಭ.

ಮಿಥುನ: ಕಲಾವಿದರಿಗೆ ಅತ್ಯುತ್ತಮ ದಿನ. ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವ ನಿಮ್ಮ ಪ್ರಯತ್ನ ಸಾರ್ಥಕವಾಗುತ್ತದೆ. ಪ್ರವೃತ್ತಿಯಿಂದ ಹಣ ಸಂಪಾದನೆ. ನಿಮ್ಮ ಸಲಹೆಗಳಿಗಾಗಿ ಜನರು ನಿಮ್ಮನ್ನು ಸಂದರ್ಶಿಸುವಂತಾಗಲಿದೆ.

ಕರ್ಕಾಟಕ: ಮಕ್ಕಳ ವಿದ್ಯಾಭ್ಯಾಸ ಅಥವಾ ವಿವಾಹದ ವಿಚಾರವಾಗಿ ಅನಾವಶ್ಯಕ, ಅತಿಯಾದ ಯೋಚನೆ ಮಾಡಬೇಕಾಗುತ್ತದೆ. ಶುಭ ಸಮಾರಂಭಗಳಿಗೆ ಅಥವಾ ಬಂಧು-ಮಿತ್ರರ ಮನೆಗೆ ಬೇಟಿ ಕೊಡುವ ಮನಸ್ಸಾಗಲಿದೆ.

ಸಿಂಹ: ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಬಹಳ ದಿನಗಳಿಂದ ಹಿಂದಿರುಗಬೇಕಿದ್ದ ಹಣ ಈ ದಿನ ಸಂಜೆಯ ವೇಳೆಗೆ ಕೈ ಸೇರುವುದು. ತಂದೆ ಮಾನಸಿಕ ಪೀಡೆಗೆ ಒಳಗಾಗದಂತೆ ಕಾಳಜಿವಹಿಸಿ.

ಕನ್ಯಾ: ಧರ್ಮ ವಿಚಾರದ ಬರವಣಿಗೆಗಾರರಿಗೆ, ಅಂಕಣಕಾರರಿಗೆ ಕೀರ್ತಿ ಲಭ್ಯ. ನೀವು ಬಹಳ ಶಾಂತ ರೀತಿಯಿಂದ ವರ್ತಿಸುವುದು ಅನಿವಾರ್ಯವಾಗುವುದು. ಅದರಿಂದಾಗಿ ಮನೆಯಲ್ಲಿ ಸಂತಸದ ವಾತಾವರಣ ಸೃಷ್ಟಿಯಾಗಲಿದೆ.

ತುಲಾ: ನಿಮ್ಮ ಜೀವನ ಶೈಲಿಗೆ ಸಂಬಂಧಿಸಿದಂತೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸುಸಮಯ. ವಿದ್ಯಾರ್ಥಿಗಳು ಸ್ವಲ್ಪ ಶ್ರಮವಹಿಸಿ ಓದಿದರೆ, ಅಭ್ಯಾಸಿಸಿದರೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಲಭ್ಯವಾಗುವುದು.

ವೃಶ್ಚಿಕ: ಕೆಲವು ದಿನಗಳಿಂದ ಮುಂದೂಡಿದ್ದ ವಿದೇಶ ಪ್ರಯಾಣವನ್ನು ಮತ್ತೆ ಕೈಗೊಳ್ಳುವ ಬಗ್ಗೆ ಯೋಚಿಸಿ. ಹೊಸದನ್ನು ಕಲಿಯುವ ಉತ್ಸಾಹ ನಿಮ್ಮಲ್ಲಿದೆ, ಅದರ ಜೊತೆಗೆ ಬದುಕಿನ ಅನುಭವಗಳು ಯಶಸ್ಸಿನತ್ತ ಕರೆದೊಯ್ಯಬಹುದು.

ಧನು: ಸಾಕು ಪ್ರಾಣಿಗಳಿಂದ ತೊಂದರೆಗಳು ಸಂಭವಿಸಬಹುದು, ಮಾವುತರು ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕು. ಕೌಟುಂಬಿಕ ಸಮಸ್ಯೆಗಳು ಹೊಸ ಆಯಾಮ ಪಡೆಯಲಿವೆ. ದೇವತಾನುಗ್ರಹವನ್ನು ಸಂಪಾದಿಸಬೇಕು.

ಮಕರ: ಉತ್ಸಾಹಭರಿತವಾದ ಕಾರ್ಯಾಸಕ್ತಿಯನ್ನು ಹೊಂದಿರುವ ನಿಮಗೆ ಇಂದು ವಿಘ್ನಗಳು ಎದುರಾದರೂ, ಮುಂದಿನ ದಿನಗಳಲ್ಲಿ ಕಾರ್ಯ ಸಂಪೂರ್ಣವಾಗುವುದು. ನಿಮ್ಮಲ್ಲಿರುವ ದಾಕ್ಷಿಣ್ಯ ಸ್ವಭಾವದಿಂದ ನಷ್ಟ.

ಕುಂಭ: ನಿಮ್ಮ ಅತಿಯಾದ ಮಾತಿನಿಂದ ಸಮಾಜದಲ್ಲಿ ಅವಮಾನಕ್ಕೆ ಒಳಗಾಗುವ ಪರಿಸ್ಥಿತಿ ಎದುರಾಗಬಹುದು ಅಥವಾ ಕುಟುಂಬದಲ್ಲಿ ಭಿನ್ನಾಭಿಪ್ರಾಯ ಕಂಡುಬರಬಹುದು. ಎಲ್ಲಾ ಕಾರ್ಯದಲ್ಲೂ ಅಧಿಕ ಪ್ರಯತ್ನವಿರಲಿ.

ಮೀನ: ದಾಂಪತ್ಯದಲ್ಲಿನ ಕಿರಿಕಿರಿಯಿಂದಾಗಿ ಮನೆಯಲ್ಲಿ ಅಶಾಂತಿಯ ವಾತಾವರಣ. ಎಲ್ಲರೂ ನನ್ನಂತೆಯೇ ಇರಬೇಕೆಂಬ ಮನೋಭಾವ, ನಿಮ್ಮ ಮನಸ್ಥಿತಿಯನ್ನು ಹಾಳುಮಾಡಲಿದೆ. ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಕಾಣುವಿರಿ.

ಪದಬಂಧ 5186
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗನ ಅರ್ಜೆಂಟ್ (3)
5.ಗಡಿಯ ಕೊನೆಯಲ್ಲಿ ಹೂಡಿದ ವಂಚನೆ (5)
7.ಯಾವ ಚಿಂತೆಯೂ ಇಲ್ಲದ ಭಾವ (3)
9.ಕರದೊಳಗೆ ಉದ್ಯೋಗಸ್ಥನಿದ್ದಾನಲ್ಲಾ! (5)
13.ತಲೆಕೂದಲ ಬುಡದಲ್ಲಿ ಉಂಟಾಗುವ ಹೊಟ್ಟು (3)
15.ಹೆಸರಿಡುವ ಶಾಸ್ತ್ರ (5)
16.ನರನ ಜಿಹ್ವೆ ಇಲ್ಲಿದೆ (3))

ಮೇಲಿಂದ ಕೆಳಕ್ಕೆ
1.ಭರದಿಂದ ಖರೀದಿಸಿದ ನಗ (4)
2.ಕೋರೆಗಳನ್ನುಳ್ಳದ್ದು (3)
3.ಏಳು ಲೋಕಗಳಲ್ಲಿ ಇದೊಂದು (3)
4.ಕಡಿಮೆ ಮಾಡಿದ್ದು ಅಥವಾ ಖೋತಾ (3)
6.ನಮಸ್ಕಾರ ಎನ್ನುತ್ತಲೇ ತೋರಿದ ತಾತ್ಸರ! (4)
8.ರಾಯರಿಂದ ಬಂದಿರುವ ನಿರೂಪ (3)
9.ಕನ್ನಡಿಗರ ಹೆಮ್ಮೆಯ ನಾಡು (4)
10.ಎಣ್ಣೆ ತೆಗೆದು ಮಾರಿ ಜೀವಿಸುವವನು (3)
11.ಮನದೊಳಗಿರುವ ಕುಲ (4)
12.ನಾದಿನಿ ಹಾಕಿದ ತಳಪಾಯ (3)
13.ಹಣ ಕೊಟ್ಟು ಖರೀದಿಸಿದ ಸೊಡರು (3)
14.ರಕ್ತವನ್ನು ಹೀಗೂ ಹೇಳುವರು (3)



5185ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಲ್ಲ 3.ಜ್ಞಾನಿ
5.ಹಣೆಬರಹ 6.ಗಡವ
7.ಜಳಕ 8.ದಳ್ಳಾಳಿತನ
9.ವಿಧಾನ 10.ನಾಸ್ತಿಕ
13.ಪಾರಿತೋಷಕ
14.ನೆಪ 15.ಮಚ್ಚು

ಮೇಲಿಂದ ಕೆಳಕ್ಕೆ:
1.ಮಲರೋಗ 2.ಸಿಂಬಳ
4.ನಿರರ್ಥಕ 5.ಹಯವದನ
7.ಜನನಾಯಕ 9.ವಿಜ್ಞಾಪನೆ
11.ಕಲಗಚ್ಚು 12.ಸಂತೋಷ

2		9			7	1		4
				3				
5		7	4		6	2		3
					5		3	1
	5	1		8			2	
3			9					8
		2		1		8		5
9			7		8			
	8			2		4		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಾವೇರಿ ಕನ್ನಡ ಸಾಹಿತ್ಯ ಸಮ್ಮೇಳನ • ಅರಮನೆ ದರ್ಬಾರ್ ಮಾದರಿಯಲ್ಲಿ ವಿನ್ಯಾಸ

ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ವಿಶೇಷ ರಥ

• ಸಿದ್ದು ಆರ್.ಜಿ.ಹಳ್ಳಿ

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಮೆರವಣಿಗೆ ರಥದ ನೀಲನಕ್ಷೆ

ಹಾವೇರಿ: 'ಏಲಕ್ಕಿ ಕಂಪಿನ ನಾಡಿ'ನಲ್ಲಿ ಜನವರಿ 6ರಿಂದ 8ರವರೆಗೆ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ 'ಅರಮನೆ ದರ್ಬಾರ್ ಮಾದರಿ'ಯಲ್ಲಿ ಭವ್ಯ ರಥವನ್ನು ಸಿದ್ಧಗೊಳಿಸಲಾಗುತ್ತಿದೆ.

ಸಮ್ಮೇಳನಾಧ್ಯಕ್ಷ ಡಾ.ದೊಡ್ಡರಂಗೇಗೌಡ ಅವರು ಮೆರವಣಿಗೆಯ ಕೇಂದ್ರಬಿಂದುವಾಗಿರುತ್ತಾರೆ. ಭಾಗವಹಿಸುವ ಕನ್ನಡಾಭಿಮಾನಿಗಳಿಗೆ ಸಮ್ಮೇಳನಾಧ್ಯಕ್ಷರು ಕಾಣುವಂತೆ ಎತ್ತರದ ಸಿಂಹಾಸನವನ್ನು ವಿನ್ಯಾಸ ಮಾಡಿದ್ದು, ಮೇಲೆ ಕೆಂಪು ಬಣ್ಣದ ಛತ್ರಿ ಅಳವಡಿಸಲಾಗುತ್ತದೆ.

ಲಾರಿ ಚಾಸಿ ಬಳಕೆ: 'ಮೈಸೂರಿನಿಂದ ಲಾರಿ ಚಾಸಿ ತರಿಸಿ, ಅದಕ್ಕೆ 'ಮೆಟಲ್ ಫ್ರೇಮ್' ಅಳವಡಿಸಿ, ಫೈಬರ್, ಪ್ಲೈವುಡ್‌ಗಳನ್ನು ಜೋಡಿಸಿ ರಥ ನಿರ್ಮಿಸಲಾಗುತ್ತಿದೆ. ಕೆಂಪು, ಹಳದಿ ಮತ್ತು ಬಂಗಾರದ ವರ್ಣಗಳಿಂದ ರಥವನ್ನು ಅಲಂಕರಿಸುತ್ತೇವೆ. ಭುವನೇಶ್ವರಿ, ಸಮ್ಮೇಳನದ ಲಾಂಛನ, ಕನ್ನಡ ಧ್ವಜಗಳಿಂದ ಈ ವಿಶೇಷ ರಥವು ಕಂಗೊಳಿಸಲಿದೆ' ಎನ್ನುತ್ತಾರೆ ಕಲಾವಿದ ಫಕ್ಕಿರೇಶ ಕುಳಗೇರಿ.

'ಇದುವರೆಗೆ ಸಮ್ಮೇಳನಗಳ ಮೆರವಣಿಗೆಯಲ್ಲಿ ಎತ್ತಿನಗಾಡಿ, ಸಾರೋಟು ಮತ್ತು ಅಲಂಕೃತ ವಾಹನ ಬಳಸಲಾಗಿದೆ. ಭವ್ಯ ರಥದ ನಿರ್ಮಾಣ 86ನೇ ನುಡಿಜಾತ್ರೆಯ ವಿಶೇಷ. 50 ಕಲಾವಿದರ ತಂಡ ಸುಮಾರು ₹4 ಲಕ್ಷ ವೆಚ್ಚದಲ್ಲಿ ರಥವನ್ನು ನಿರ್ಮಿಸುತ್ತಿದೆ' ಎನ್ನುತ್ತಾರೆ ರಥದ ಪರಿಕಲ್ಪನೆ ಮತ್ತು ವಿನ್ಯಾಸದ ಹೊಣೆ ಹೊತ್ತಿರುವ ಕಲಾವಿದ ಷಹಜಹಾನ್ ಮುದಕವಿ.

'80 ಕಲಾ ತಂಡಗಳು ಭಾಗಿ': 'ಚಂಡೆಮದ್ದಳೆ, ನಂದಿಕೋಲು, ಪೂಜಾ ಕುಣಿತ, ಕಂಸಾಳೆ, ಪುರವಂತಿಕೆ, ಜಗ್ಗಲಿಗೆ, ಲಂಬಾಣಿ ನೃತ್ಯ, ಮಹಿಳಾ ವೀರಗಾಸೆ, ಜಗ್ಗಲಿಗೆ ಸೇರಿ 80ಕ್ಕೂ ಅಧಿಕ ಕಲಾತಂಡಗಳು ಹಾಗೂ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಜ.6ರಂದು ಬೆಳಿಗ್ಗೆ 8 ಗಂಟೆಗೆ ಮೆರವಣಿಗೆ ಆರಂಭ ಆಗಲಿದ್ದು, 3 ಗಂಟೆ ಅವಧಿಯಲ್ಲಿ ಪೂರ್ಣಗೊಳ್ಳುವಂತೆ ಯೋಜನೆ ರೂಪಿಸಿದ್ದೇವೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

15 ಸಾವಿರ ಕನ್ನಡ ಧ್ವಜ: '15 ಸಾವಿರ ಕನ್ನಡ ಧ್ವಜ, 10 ಸಾವಿರ ಶಲ್ಯ ಮಾಡಿಸಲಾಗುತ್ತಿದೆ. ಸ್ವಯಂಸೇವಕರಿಗೆ ಬ್ಯಾಡ್ಜ್ ಹಾಗೂ ಐಡಿ ಕಾರ್ಡ್ ನೀಡಲಾಗುವುದು. ಮೆರವಣಿಗೆ ಸಾಗುವ ದಾರಿಯಲ್ಲಿ ತಳಿರುತೋರಣ, ರಂಗೋಲಿ ಹಾಕಲು ಸೂಚಿಸಲಾಗಿದೆ. ಮೆರವಣಿಗೆಯಲ್ಲಿ 25 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇದೆ. ನಗರದಲ್ಲಿ ಹಬ್ಬದ ವಾತಾವರಣ ನಿರ್ಮಿಸಲು ಸಿದ್ಧತೆ ನಡೆಸಿದ್ದೇವೆ' ಎಂದು ಮೆರವಣಿಗೆ ಸಮಿತಿ ಗೌರವಾಧ್ಯಕ್ಷ ಹಾಗೂ ಮಾಜಿ ಸಚಿವ ಬಸವರಾಜ ಶಿವಣ್ಣನವರ ತಿಳಿಸಿದರು.

ಜಿಲ್ಲಾ ಅಧ್ಯಕ್ಷರಿಗಾಗಿ 11 ಸಾರೋಟುಗಳು

'ರಾಜ್ಯದ 31 ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರನ್ನು ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಕರೆತರಲು 11 ಸಾರೋಟಗಳನ್ನು ಸಿದ್ಧಪಡಿಸಲಾಗುತ್ತಿದೆ. ಒಂದು ಸಾರೋಟಿನಲ್ಲಿ ಮೂವರು ಅಧ್ಯಕ್ಷರು ಆಸೀನರಾಗಲಿದ್ದಾರೆ. ಇದು ಈ ಬಾರಿಯ ವಿಶೇಷ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಪ್ರಜಾವಾಣಿ ವಿಶೇಷ

'ಪುಸ್ತಕೋದ್ಯಮದ ಅಹವಾಲು ಅಧ್ಯಕ್ಷ ಭಾಷಣದಲ್ಲಿ ಪ್ರಸ್ತಾಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕೋದ್ಯಮ ಮತ್ತು ಪ್ರಕಾಶಕರಿಗೆ ಸಂಬಂಧಿಸಿದ ಅಹವಾಲುಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಧನ ನೀಡುವ ವಿಚಾರದಲ್ಲಿ ಅನುಸರಿಸುತ್ತಿರುವ ತಾರತಮ್ಯ ನೀತಿಯ ಬಗ್ಗೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಪ್ರಸ್ತಾಪಿಸುತ್ತೇನೆ' ಎಂದು ನಿಯೋಜಿತ ಅಧ್ಯಕ್ಷ ದೊಡ್ಡರಂಗೇಗೌಡ ಭರವಸೆ ನೀಡಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಶನಿವಾರ ಬಿಎಂಶ್ರೀ ಪ್ರತಿಷ್ಠಾನದಲ್ಲಿ ಆಯೋಜಿಸಿದ್ದ 11 ಕೃತಿಗಳ ಬಿಡುಗಡೆ ಮತ್ತು 2023ನೇ ಸಾಲಿನ ಕ್ಯಾಲೆಂಡರ್ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಾಹಿತ್ಯ ಜಾತ್ರೆಯ ಬಗ್ಗೆ ಕೆಲವರು ಟೀಕೆ ಮಾಡುತ್ತಾರೆ. ಆದರೆ, ಇದರ ಉದ್ದೇಶ ವ್ಯಕ್ತಿ-ವ್ಯಕ್ತಿಗಳ ಮಿಲನ, ಅನಿವಾರ್ಯವಾದ ಸಂಗತಿಗಳ ಕೊಡು-ಕೊಳ್ಳುವಿಕೆಯಾಗಿದೆ. ಸಾಹಿತ್ಯ ಜಾತ್ರೆಗೆ ಒಬ್ಬ ಓದುಗ ಹೋಗುವುದರಿಂದ ಒಬ್ಬ ಸಾಹಿತಿಯ ಪರಿಚಯ ಮಾಡಿಕೊಳ್ಳಬಹುದು ಮತ್ತು ಅವರ ಸಂಪರ್ಕವನ್ನು ಸಾಧಿಸಬಹುದು' ಎಂದರು.

'ಸಾಹಿತ್ಯ ಸಮ್ಮೇಳನದಲ್ಲಿ ಎರಡು-ಮೂರು ದಿನ ಇರಬಹುದು. ಇದರಿಂದ ವ್ಯಕ್ತಿತ್ವ, ಅಭಿರುಚಿ ಬದಲಾವ ವ್ಯಕ್ತಿತ್ವ ಪೂರಕವಾಗಿ ಕೆಲ ಅಂಶಗಳಿಗೆ ನಾಂದಿ ಹಾಡಬಹುದು. ಸಾಹಿತ್ಯ ಸಮಾವೇಶಕ್ಕೆ ಹೋಗುವುದು ಒಳ್ಳೆಯದು, ಅದು ಮಾನವನ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗಿದೆ. ಹಾವೇರಿಯಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದಲ್ಲಿ ಎಲ್ಲರೂ ಭಾಗವಹಿಸಬೇಕು' ಎಂದು ಸಲಹೆ ನೀಡಿದರು.

ಸಾಹಿತ್ಯ ಸಮ್ಮೇಳನ: ಹಿಂದೆ ಸರಿದ ಕವಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ನಡೆಗೆ ಅಸಮಾಧಾನ • ಹೊರಗುಳಿಯುವುದಾಗಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾವೇರಿಯಲ್ಲಿ ನಡೆಯುತ್ತಿರುವ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಾರತಮ್ಯ ಮಾಡಲಾಗಿದೆ' ಎಂದು ಅಸಮಾಧಾನ ಹೊರಹಾಕಿರುವ ಲೇಖಕಿ ಎಚ್.ಆರ್. ಸುಜಾತಾ ಹಾಗೂ ಕವಿಗಳಾದ ಚಾಂದ್ ಪಾಷಾ, ರಮೇಶ ಅರೋಲಿ, ಸಮ್ಮೇಳನದಿಂದ ಹೊರಗುಳಿಯುವುದಾಗಿ ಘೋಷಿಸಿದ್ದಾರೆ.

ಮುಸ್ಲಿಂ ಸಮುದಾಯದ ಲೇಖಕರಿಗೆ ಅವಕಾಶ ದೊರೆತಿಲ್ಲ ಎಂಬ ಕಾರಣಕ್ಕೆ, ಸಮ್ಮೇಳನದ ಕವಿಗೋಷ್ಠಿಯೊಂದರ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಸುಜಾತಾ ಹಾಗೂ ಕವಿತೆ ವಾಚನಕ್ಕೆ ಅವಕಾಶ ಪಡೆದಿದ್ದ ಚಾಂದ್ ಪಾಷಾ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲ ಎಂದು ತಿಳಿಸಿದ್ದಾರೆ. ಕವಿತೆಯನ್ನು ಹಾಡಲು ಅವಕಾಶ ನಿರಾಕರಿಸಿರುವುದಕ್ಕೆ ಬೇಸರ ವ್ಯಕ್ತಪಡಿಸಿರುವ ರಮೇಶ ಅರೋಲಿ, ಸಮ್ಮೇಳನದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

'ವಿವಿಧ ಗೋಷ್ಠಿಗಳಲ್ಲಿ ಕನ್ನಡದ ಸಮಕಾಲೀನ ಮಹತ್ವದ ಲೇಖಕ-ಲೇಖಕಿಯರ ಹೆಸರುಗಳಿಲ್ಲ. ಕನ್ನಡಿಗರೇ ಆಗಿರುವ ಮುಸ್ಲಿಂ ಸಮುದಾಯದ ಲೇಖಕರ ಪ್ರಾತಿನಿಧ್ಯವೂ ಇಲ್ಲ. ನೂರಾರು ಸಂಖ್ಯೆಯಲ್ಲಿರುವ ಬ್ಯಾರಿ ಸಮುದಾಯದ ಮಹತ್ವದ ಲೇಖಕರನ್ನು ಸಮ್ಮೇಳನದಲ್ಲಿ ಸಂಯೋಜಿಸಿಕೊಂಡಿಲ್ಲ. ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಈ ರೀತಿಯ ತಾರತಮ್ಯ ಮಾಡಬಾರದು. ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ, ಮಾತನಾಡುವುದಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ. ಆದ್ದರಿಂದ ಸಮ್ಮೇಳನದಲ್ಲಿ ಭಾಗವಹಿಸುತ್ತಿಲ್ಲ' ಎಂದು ಎಚ್.ಆರ್. ಸುಜಾತಾ ಹೇಳಿದ್ದಾರೆ.

'ಮೂರನೇ ಕವಿಗೋಷ್ಠಿಯಲ್ಲಿ ಕವನ ವಾಚಿಸಲು ನನ್ನನ್ನು ಆಯ್ಕೆ ಮಾಡಲಾಗಿತ್ತು. ಆದರೆ, ಸಮ್ಮೇಳನದ ರೀತಿ ನೀತಿ, ಸಮ್ಮೇಳನಾಧ್ಯಕ್ಷರ 'ಹಿಂದಿ ರಾಷ್ಟ್ರೀಯ ಭಾಷೆ' ಎಂಬ ಹೇಳಿಕೆಗಳು ಖಂಡನೀಯವಾದದ್ದು. ಸಮ್ಮೇಳನವು ರಾಜಕೀಯ, ಧಾರ್ಮಿಕ ನೆಲೆಗಟ್ಟನ್ನು ಒಳಗೊಂಡಿರುವ ಕಾರಣ ಕವಿಗೋಷ್ಠಿಯಿಂದ ಹಿಂದೆ ಸರಿಯುತ್ತೇನೆ. ಜ.8ರಂದು ನಡೆಯುವ ಜನಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಮೂಲಕ ಪ್ರತಿರೋಧ ವ್ಯಕ್ತಪಡಿಸುತ್ತೇನೆ' ಎಂದು ಚಾಂದ್ ಪಾಷಾ ತಿಳಿಸಿದ್ದಾರೆ.

'2016ರಲ್ಲಿ ರಾಯಚೂರಿನಲ್ಲಿ ನಡೆದ 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ಕವಿಗೋಷ್ಠಿಯಲ್ಲಿ ಭಾಗವಹಿಸಿ, ನಾನು ಕವಿತೆಯನ್ನು ಹಾಡಿದ್ದು ಜನ ಮೆಚ್ಚುಗೆ ಪಡೆದಿತ್ತು. ಅನೇಕ ಹಿರಿಯರು ಕಾವ್ಯವನ್ನು ಕಟ್ಟಿದ್ದು ಹಾಡಿನ ರೂಪದಲ್ಲಿ. ಈಗ ಕವಿತೆಯನ್ನು ಕೇವಲ ವಾಚನಕ್ಕೆ ಮಿತಿಗೊಳಿಸಿದ್ದು ಸರಿಯಲ್ಲ. ನನ್ನ ಭಾಗವಹಿಸುವಿಕೆಯನ್ನು ಹಿಂಪಡೆಯುತ್ತಿದ್ದೇನೆ. ಯಾರ ಮನಸ್ಸನ್ನೂ ನೋಯಿಸುವ ಉದ್ದೇಶ ಇಲ್ಲ' ಎಂದು ರಮೇಶ ಅರೋಲಿ ಹೇಳಿದ್ದಾರೆ.

'ಲೇಖಕಿಯರಿಗೆ ಅವಮಾನ'

'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬೆರಳಣಿಕೆಯಷ್ಟು ಲೇಖಕಿಯರಿಗೆ ಅವಕಾಶ ನೀಡಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಎಷ್ಟೊಂದು ಪ್ರತಿಭಾವಂತ ಲೇಖಕಿಯರು ಇದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ದೊಡ್ಡ ಸಂಖ್ಯೆಯಲ್ಲಿ ಬರೆಯುತ್ತಿರುವ ಲೇಖಕಿಯರನ್ನು ಒಳಗೊಳ್ಳಬೇಕೆಂಬ ವಿವೇಚನೆಯನ್ನು ಮರೆಯಿತೆ' ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಪ್ರಶ್ನಿಸಿದ್ದಾರೆ.

'ಮಹಿಳೆಯರನ್ನು ಸಮ್ಮೇಳನದ ಮೆರವಣಿಗೆಯಲ್ಲಿ ಕೇವಲ ಕುಂಭಗಳನ್ನು ಹೊರುವ ಕೆಲಸಕ್ಕಾಗಿ ಬಳಸಿಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ? ಕೇವಲ ಅಲಂಕಾರಿಕ ನಿರ್ವಹಣೆಗೆ ಮಾತ್ರ ಅವರನ್ನು ಬಳಸಿಕೊಳ್ಳಲಾಗುತ್ತಿದೆಯೆ? ಮಹಿಳಾ ಗೋಷ್ಠಿ ವಿಷಯದಲ್ಲಾದರೂ ಹೊಸತನವಿದೆಯೆ? ಅದೇ ಹಳೆಯ ವಿಷಯಗಳು ಪುನರಾವರ್ತನೆಯಾಗುತ್ತಿವೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಮಹದಾಯಿ 2 ತಿಂಗಳಲ್ಲಿ ಶಂಕುಸ್ಥಾಪನೆ'

ಹುಬ್ಬಳ್ಳಿ: 'ಮಹದಾಯಿ ಯೋಜನೆ ಅನುಷ್ಠಾನಕ್ಕೆ ರಾಜ್ಯದ ಅರಣ್ಯ ಇಲಾಖೆಯ ಒಪ್ಪಿಗೆ ಪಡೆದು, ಎರಡು ತಿಂಗಳಲ್ಲಿ ಕಾಮಗಾರಿಗೆ ಶಂಕುಸ್ಥಾಪನೆ ಮಾಡಲಾಗುವುದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶನಿವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪರಿಷ್ಕೃತ ಡಿಪಿಆರ್‌ಗೆ ಈಗ ಒಪ್ಪಿಗೆ ಸಿಕ್ಕಿದೆ. ಕುಡಿಯುವ ನೀರಿನ ಯೋಜನೆ ಆದ್ದರಿಂದ ಪರಿಸರ ಇಲಾಖೆ ಅನುಮತಿ ಅಗತ್ಯವಿಲ್ಲ. 60 ಎಕರೆ ಭೂಮಿ ಅಗತ್ಯವಿದ್ದು, ಅರಣ್ಯ ಇಲಾಖೆ ಒಪ್ಪಿಗೆ ಬಾಕಿಯಿದೆ' ಎಂದರು.

ರಾಜೀನಾಮೆ- ಗೋವಾ ಸಚಿವ ಎಚ್ಚರಿಕೆ (ಪಣಜಿ ವರದಿ): ಕಳಸಾ-ಬಂಡೂರಿ ಯೋಜನೆಗೆ ಸಂಬಂಧಿಸಿ ಕರ್ನಾಟಕದ ವಿಸ್ತೃತ ಯೋಜನಾ ವರದಿಗೆ(ಡಿಪಿಆರ್) ಅನುಮೋದನೆ ನೀಡಿರುವ ಕೇಂದ್ರ ಜಲ ಆಯೋಗದ (ಸಿಡಬ್ಲ್ಯುಸಿ) ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಕೇಂದ್ರ ಪ್ರವಾಸೋದ್ಯಮ ರಾಜ್ಯ ಸಚಿವರಾದ, ಉತ್ತರ ಗೋವಾದ ಸಂಸದ ಶ್ರೀಪಾದ್ ನಾಯಕ್ ರಾಜೀನಾಮೆ ನೀಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಏಕಾಂಗಿಯಾಗಿ ಸ್ಪರ್ಧೆ: ಅಮಿತ್ ಶಾ

ಒಂದನೇ ಪುಟದಿಂದ...

'ಚುನಾವಣೆಯಲ್ಲಿ ಪೂರ್ಣ ಬಹುಮತ ನೀಡದಿರುವುದೇ ಕರ್ನಾಟಕದಲ್ಲಿ ರಾಜಕೀಯ ಅಸ್ಥಿರತೆಗೆ ಕಾರಣ. ಜಾತಿವಾದ ಮತ್ತು ಕುಟುಂಬ ರಾಜಕಾರಣ ಪೋಷಿಸುತ್ತಿರುವ ಕಾಂಗ್ರೆಸ್- ಜೆಡಿಎಸ್‌ಗೆ ಅವಕಾಶ ನೀಡಬೇಡಿ. ಬಿಜೆಪಿಗೆ ಪೂರ್ಣ ಬಹುಮತ ನೀಡಿ. ಬೆಂಗಳೂರು ನಗರದಲ್ಲಿ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಿಸಿ ಕೊಟ್ಟರೆ ಸುಲಭವಾಗಿ ಬಹುಮತ ಪಡೆಯಬಹುದು' ಎಂದರು.

'ತ್ರಿವಳಿ ತಲಾಖ್, ಕಾಶ್ಮೀರಕ್ಕಿದ್ದ 370 ನೇ ವಿಧಿಯನ್ನು ರದ್ದುಪಡಿಸಿದ್ದಕ್ಕೆ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ವಿರೋಧ ವ್ಯಕ್ತಪಡಿಸಿದ್ದರು. ಅಷ್ಟೇ ಅಲ್ಲ, ದೇಶದಲ್ಲಿ ರಕ್ತದ ಹೊಳೆ ಹರಿಯುತ್ತದೆ. ಕಾಶ್ಮೀರ ಹೊತ್ತಿ ಉರಿಯುತ್ತದೆ ಎಂದು ಹುಯಿಲೆಬ್ಬಿಸಿದರು. ಆದರೆ, ಕಾಶ್ಮೀರ ಶಾಂತವಾಗಿದೆ' ಎಂದರು.

'ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಬೆಂಕಿ- ಬಿರುಗಾಳಿ ಇದ್ದಂತೆ. ಇವರನ್ನು ತಡೆಯುವ ಶಕ್ತಿ ರಾಹುಲ್, ಸೋನಿಯಾ ಅವರಿಗೂ ಇಲ್ಲ' ಎಂದು ಸಚಿವ ಆರ್. ಅಶೋಕ ಹೇಳಿದರು. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಮುನಿರತ್ನ, ಕೆ. ಗೋಪಾಲಯ್ಯ, ಸಂಸದ ಡಿ.ವಿ. ಸದಾನಂದಗೌಡ ಇದ್ದರು.

> ಮಂಡ್ಯದ ಬಿಜೆಪಿ ರ್‍ಯಾಲಿ ನೋಡಿದ ಮೇಲೆ ಸಿಎಂ ಆಗಲೆಂದು ಶರ್ಟು- ಪ್ಯಾಂಟ್ ಹೊಲಿಸಿ ಕೊಂಡಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರಿಗೆ ನಡುಕ ಉಂಟಾಗಿದೆ
> **ನಳಿನ್‌ಕುಮಾರ್ ಕಟೀಲ್**
> ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

> ಸಿದ್ದರಾಮಯ್ಯ ಅವಧಿಯಲ್ಲಿ ನಡೆದ 50ಕ್ಕೂ ಹೆಚ್ಚು ಹಗರಣಗಳನ್ನು ಲೋಕಾಯುಕ್ತಕ್ಕೆ ಒಪ್ಪಿಸಿ ಮರು ತನಿಖೆ ನಡೆಸಲಾಗುವುದು
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ಮುಂದಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಕುಟುಂಬ ರಾಜಕಾರಣಕ್ಕೆ ಅಂತ್ಯ ಹಾಡಲಾಗುವುದು
> **ಪ್ರಲ್ಹಾದ ಜೋಶಿ,**
> ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ
ನಂಜನಗೂಡು, ಮೈಸೂರು ಜಿಲ್ಲೆ
Telephone Nos : E.O. Office : 08221 : 226245, 226275
E-Mail ID : sstnanjangud@gmail.com

ಸಂ.:ಎಸ್‌ಎಸ್‌ಟಿ/ಇ–ಟಿ–08/ಪೆ.ಜಾ/2022–23 ದಿನಾಂಕ : 29–12–2022

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಈ ಕೆಳಕಂಡ ಗೂಡ್ಸ್ ಕ್ಯಾಟಗರಿಯ ಸರಬರಾಜು ಟೆಂಡರ್‌ನ್ನು 2022–23ನೇ ಸಾಲಿಗೆ 1 ವರ್ಷದ ಅವಧಿಗೆ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಶೆಡ್ಯೂಲ್ ಈ ಕೆಳಕಂಡಂತಿದೆ. ಇದು ರೀ–ಟೆಂಡರ್ ಆಗಿರುತ್ತದೆ.

ಕ್ರ.ಸಂ.	ಟೆಂಡರ್‌ಗಳ ವಿವರ	ಎಲ್ಲಾ ಟೆಂಡರ್‌ಗಳು ಇ–ಪೋರ್ಟಲ್‌ನಲ್ಲಿ ಚಾಲ್ತಿಗೆ ಬರುವ ದಿನಾಂಕ	ಇ–ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	ಇ–ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ಎಲ್ಲಾ ಟೆಂಡರ್‌ಗಳಿಗೆ ನಿಗಧಿಪಡಿಸಿರುವ ಇ.ಎಂ.ಡಿ. ಮೊತ್ತ
1.	250 ಎಂ.ಎಲ್. ಫುಡ್ ಕಂಟೈನರ್ ಮತ್ತು 750 ಎಂ.ಎಲ್. ಫುಡ್ ಕಂಟೈನರ್ (1 ವರ್ಷದ ಅವಧಿಗೆ ಮಾತ್ರ)	ದಿನಾಂಕ : 30–12–2022 ರ ನಂತರ	ದಿನಾಂಕ : 13–01–2023 ಸಂಜೆ 5.00 ಗಂಟೆಯವರೆಗೆ	ದಿನಾಂಕ : 16–02–2023 ಬೆಳಗ್ಗೆ 11.00 ರ ನಂತರ	ರೂ. 25,000/–
2.	100 ಎಂ.ಎಲ್. ತೀರ್ಥ ಬಾಟೆಲ್ಸ್ ಮುಚ್ಚುಳ ಸಹಿತ (ಕೋನಿಕಲ್) (1 ವರ್ಷದ ಅವಧಿಗೆ ಮಾತ್ರ)				ರೂ. 25,000/–
ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆ ಸಂಪರ್ಕಿಸಿ					

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

'ಗ್ರಾ.ಪಂ.ಗೊಂದು ಸಹಕಾರಿ ಸಂಸ್ಥೆ'

ಪ್ರಜಾವಾಣಿ ವಾರ್ತೆ

ಅಮಿತ್ ಶಾ ಅವರು ವಿಜಯನಗರದಲ್ಲಿರುವ ಆದಿಚುಂಚನಗಿರಿ ಮಹಾಸಂಸ್ಥಾನ ಮಠಕ್ಕೆ ಭೇಟಿ ನೀಡಿ ನಿರ್ಮಲಾನಂದನಾಥ ಸ್ವಾಮೀಜಿ ಅವರ ಆಶೀರ್ವಾದ ಪಡೆದರು

ಬೆಂಗಳೂರು: ದೇಶದ ಪ್ರತಿ ಗ್ರಾಮ ಪಂಚಾಯಿತಿಗಳ ಮಟ್ಟದಲ್ಲೂ ತಲಾ ಒಂದು ಸಶಕ್ತವಾದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಆರಂಭಿಸುವ ನಿಟ್ಟಿನಲ್ಲಿ ಕೇಂದ್ರ ಸಹಕಾರ ಸಚಿವಾಲಯವು ಯೋಜನೆ ರೂಪಿಸುತ್ತಿದೆ ಎಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ತಿಳಿಸಿದರು.

ಮಲ್ಲೇಶ್ವರದಲ್ಲಿರುವ ಸೌಹಾರ್ದ ಸಹಕಾರ ಫೆಡರೇಷನ್‌ನಲ್ಲಿ ಶನಿವಾರ ಸಹಕಾರ ಕ್ಷೇತ್ರದ ಪ್ರತಿನಿಧಿಗಳ ಜತೆಗಿನ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪಂಚಾಯಿತಿ ಮಟ್ಟದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರ ಎಲ್ಲ ಅಗತ್ಯಗಳನ್ನು ಪೂರೈಸುವಂತಿರಬೇಕು. ರೈತರಿಗೆ ಬೇಕಾದ ರಸಗೊಬ್ಬರ, ಸಲಕರಣೆ ಎಲ್ಲವನ್ನೂ ಪೂರೈಸಬೇಕು. ರೈತರ ಉತ್ಪನ್ನಗಳನ್ನು ಖರೀದಿಸಬೇಕು. ಸಾಲ ಸೌಲಭ್ಯ ಒದಗಿಸುವಂತಿರಬೇಕು. ಅಂತಹ ಸಶಕ್ತವಾದ ವ್ಯವಸ್ಥೆಯೊಂದನ್ನು ರೂಪಿಸುವ ಯೋಜನೆ ನಮ್ಮ ಸಚಿವಾಲಯದ ಮುಂದಿದೆ' ಎಂದರು.

ಸಹಕಾರ ಸಂಘಗಳಿಗೆ ಸಾಮಾನ್ಯ ಬೈಲಾ, ಸಾಮಾನ್ಯ ತಂತ್ರಾಂಶ ರೂಪಿಸಲಾಗುವುದು. ಎಲ್‌ಪಿಜಿ ಸಿಲಿಂಡರ್ ಪೂರೈಕೆ, ನೀರು ಪೂರೈಕೆ, ಪಡಿತರ ವಿತರಣೆಯಂತಹ ಕೆಲಸಗಳನ್ನೂ ಸಹಕಾರ ಸಂಸ್ಥೆಗಳ ಮೂಲಕ ನಿರ್ವಹಿಸುವ ವ್ಯವಸ್ಥೆ ಜಾರಿಗೊಳಿಸುವ ಉದ್ದೇಶವಿದೆ. ಸಹಕಾರಿಗಳು ಈ ಕ್ಷೇತ್ರದ ಪ್ರಗತಿಗಾಗಿ ಹೆಚ್ಚು ಶ್ರಮಿಸಬೇಕು ಎಂದು ಕರೆ ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಸಚಿವರಾದ ಆರ್. ಅಶೋಕ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಆರಗ ಜ್ಞಾನೇಂದ್ರ, ಮುರುಗೇಶ ನಿರಾಣಿ ಇತರರು ಇದ್ದರು.

ಅಮಿತ್ ಶಾ ಗೊಬೆಲ್ಸ್‌ನ ಹೊಸ ಅವತಾರ: ಎಚ್‌ಡಿಕೆ

ಬೆಂಗಳೂರು: 'ಬಿಜೆಪಿ ಬೂಟಾಟಿಕೆ ಪಕ್ಷ ಹಾಗೂ ಸುಳ್ಳುಕೋರರ ಸಂತೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಸರ್ವಾಧಿಕಾರಿ ಹಿಟ್ಲರ್‌ನ ಸಂಪುಟದ ಗೊಬೆಲ್ಸ್‌ನ ಹೊಸ ಅವತಾರ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಮಂಡ್ಯದಲ್ಲಿ ಶುಕ್ರವಾರ ನಡೆದ ಸಾರ್ವಜನಿಕ ಸಭೆಯಲ್ಲಿ ಜೆಡಿಎಸ್ ವಿರುದ್ಧ ಅಮಿತ್ ಶಾ ನಡೆಸಿದ್ದ ವಾಗ್ದಾಳಿಗೆ ಶನಿವಾರ ಟ್ವಿಟರ್‌ನಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, 'ಸ್ಥಳಕ್ಕೊಂದು ವೇಷ, ಕ್ಷಣಕ್ಕೊಂದು ಸುಳ್ಳು ಇದು ನಿಮ್ಮ ಪಕ್ಷದ ನಿಜ ಸ್ವರೂಪ. ಸುಳ್ಳು ಹೇಳಿ ಪ್ರಚಾರ ಗಿಟ್ಟಿಸಿಕೊಳ್ಳಬೇಕಾದ ಕರ್ಮ ನಿಮಗೇಕೆ ಬಂತು' ಎಂದು ಪ್ರಶ್ನಿಸಿದ್ದಾರೆ.

'ಜೆಡಿಎಸ್ ಗೆದ್ದರೆ ಕರ್ನಾಟಕ ಒಂದು ಕುಟುಂಬದ ಎಟಿಎಂ ಆಗುತ್ತದೆಂದು ಜಾಗಟೆ ಹೊಡೆದಿದ್ದೀರಿ. ಜೆಡಿಎಸ್ ಸರ್ಕಾರ ಬಂದರೆ, ಅದು ಆರೂವರೆ ಕೋಟಿ ಕನ್ನಡಿಗರ ಎಟಿಎಂ ಆಗುತ್ತದೆ. ನಮ್ಮ ಪಾಲಿಗೆ ಎಟಿಎಂ ಎಂದರೆ 'ಎನಿ ಟೈಮ್ ಮನುಷ್ಯತ್ವ' ಎಂದು. ನಿಮ್ಮ ಪಾಲಿಗೆ ಅದು 'ಎನಿ ಟೈಮ್ ಮೋಸ'. ಸುಳ್ಳಿನ ಜಾಗಟೆ ಹೊಡೆದೇ ದೇಶವನ್ನು ಅಧೋಗತಿಗೆ ತಳ್ಳಿದ್ದೀರಿ. ಶಾ ಅವರೇ, ದೇಶದ ಮಾತು ಹಾಗಿರಲಿ; ಕರ್ನಾಟದಲ್ಲಿ ನಿಮ್ಮ ಪಕ್ಷದ ಎಟಿಎಂಗಳ ಪಟ್ಟಿ ಇದೆ ನೋಡಿ' ಎಂದು ತಿರುಗೇಟು ನೀಡಿದ್ದಾರೆ.

'ಶೇಕಡ 40ರಷ್ಟು ಕಮಿಷನ್, ಪಿಎಸ್‌ಐ ಹಗರಣ, ಪ್ರಶ್ನೆಪತ್ರಿಕೆ ಸೋರಿಕೆ, ಸಹ ಪ್ರಾಧ್ಯಾಪಕರ ನೇಮಕ ಹಗರಣ, ವೈದ್ಯಕೀಯ ಪ್ರಾಧ್ಯಾಪಕರ ನೇಮಕ ಹಗರಣ, ಕೋವಿಡ್ ಹೆಸರಿನಲ್ಲಿ ಕೊಳ್ಳೆ, ಗಂಗಾಕಲ್ಯಾಣ ಕರ್ಮಕಾಂಡ , ಚಿಲುಮೆ ಹಗರಣ ಸೇರಿದಂತೆ ಹಲವು ಉದಾಹರಣೆಗಳಿವೆ. ಕರ್ನಾಟಕದಲ್ಲಿರುವ ಬಿಜೆಪಿ ಸರ್ಕಾರ ಶೇ 50ರಿಂದ ಶೇ 60ರಷ್ಟು ಕಮಿಷನ್ ಪಡೆಯುತ್ತಿದೆ. ಕರ್ನಾಟಕವು ನಿಮ್ಮ ಪಕ್ಷಕ್ಕೂ ಎಟಿಎಂ ಅಲ್ಲವೆ' ಎಂದು ಕೇಳಿದ್ದಾರೆ.

ಜೆಡಿಎಸ್‌ನ ಕುಟುಂಬ ರಾಜಕಾರಣದ ಕುರಿತು ಶಾ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, ಕರ್ನಾಟಕದ ಬಿಜೆಪಿಯಲ್ಲಿರುವ ಕುಟುಂಬ ರಾಜಕಾರಣದ ಪಟ್ಟಿಯನ್ನೇ ನೀಡಿದ್ದಾರೆ. 'ನಿಮ್ಮ ಮಗ ಜಯ್ ಶಾ ಯಾವ ಸೀಮೆ ಕ್ರಿಕೆಟ್ ಪಂಡಿತರು? ಬಿಸಿಸಿಐ ಯಾರ ಪಾಲಿನ ಎಟಿಎಂ' ಎಂದು ಪ್ರಶ್ನಿಸಿದ್ದಾರೆ.

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
#16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ,
ವಸಂತನಗರ, ಬೆಂಗಳೂರು–560052 ಇವರ ಮುಂದೆ

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003 ರ ಪ್ರಕರಣ 62 ಮತ್ತು 64ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಆರ್ಥಿಕ ವರ್ಷ 2021–22ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯ(ಎ.ಪಿ.ಆರ್) ಅನುಮೋದನೆಗಾಗಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು–560009. .... **ಅರ್ಜಿದಾರರು**

ಅಧಿಸೂಚನೆ

ಕವಿಪ್ರನಿನಿಯ ಆರ್ಥಿಕ ವರ್ಷ 2021–22ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ(ಎ.ಪಿ.ಆರ್) ಬಗ್ಗೆ.

1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006ರ ಪ್ರಕಾರ ಆರ್ಥಿಕ ವರ್ಷ 2021–22ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಹಾಗೂ ತತ್ಸಂಬಂಧಿ ವಿದ್ಯುತ್ ಪ್ರಸರಣ ದರದ ಪರಿಷ್ಕರಣೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಗೌರವಾನ್ವಿತ ಆಯೋಗವು ಇವುಗಳ ಪರಿಷ್ಕರಣೆಯ ಬಗ್ಗೆ ಪರಿಶೀಲಿಸುತ್ತಿದೆ.

2.0 ಆರ್ಥಿಕ ವರ್ಷ 2021–22ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯಲ್ಲಿ ವಾರ್ಷಿಕ ಆದಾಯದ ಅಗತ್ಯತೆಯು (ವೆಚ್ಚ) **₹4171.01** ಕೋಟಿಯಾಗಿರುತ್ತದೆ. ಹಾಗೂ ಒಟ್ಟು **₹2803.46** ಕೋಟಿ ಕಂದಾಯ ಕೊರತೆ ಬಂದಿರುತ್ತದೆ. ಸದರಿ ಕೊರತೆಯನ್ನು ಆರ್ಥಿಕ ವರ್ಷ 2023–24 ರಲ್ಲಿ ವಸೂಲಿ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.

3.0 ವಿದ್ಯುಚ್ಛಕ್ತಿ ಅಧಿನಿಯಮ 2003ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಮೇಲಿನ ಪ್ರಸ್ತಾವನೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವವರು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ (ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಥಮವಾಗಿ ಪ್ರಕಟವಾದ ದಿನಾಂಕದಿಂದ **ಮೂವತ್ತು ದಿನಗಳ ಒಳಗಾಗಿ ಸ್ವೀಕರಣಾಧಿಕಾರಿ, ಕಾರ್ಯದರ್ಶಿಗಳ ಕಛೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052** ಅವರಿಗೆ ಸಲ್ಲಿಸಬಹುದು.

4.0 ಆಸಕ್ತಿ ಇರುವವರು ಪರಾಮರ್ಶೆಗಾಗಿ ಅಥವಾ ಕೊಳ್ಳಲು ಇಚ್ಛಿಸಿದಲ್ಲಿ ಎಪಿಆರ್ ಪ್ರಸ್ತಾವನೆಯ ಪ್ರತಿಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮತ್ತು ವಿಸಕಂಗಳ ಈ ಕೆಳಕಂಡ ಕಚೇರಿಗಳಲ್ಲಿ ಲಭ್ಯವಿರುತ್ತದೆ.
1. **ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.**
3. **ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯ ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**

5.0 ಎಪಿಆರ್ ಪ್ರತಿಗಳನ್ನು ಕೊಳ್ಳಲು ಇಚ್ಛಿಸುವವರು ಎಪಿಆರ್ ನ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ ₹ 125/– ರಂತೆ ನಗದು / ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ **₹1/–** ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ನಲ್ಲಿ ಸಹ ಲಭ್ಯವಿರುತ್ತದೆ.

6.0 ಆಕ್ಷೇಪಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮಾತ್ರ ಸಲ್ಲಿಸಬೇಕು. ಆದರೆ ಕವಿನಿ ಆಯೋಗದ ನಿರ್ದೇಶನದಂತೆ, ಆಕ್ಷೇಪಣೆ ಸಲ್ಲಿಕೆ ಮತ್ತು ಅದಕ್ಕೆ ಪ್ರತ್ಯುತ್ತರ ಸಲ್ಲಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು, ಆಕ್ಷೇಪಣೆದಾರರು ಏಕಕಾಲದಲ್ಲಿ ತಮ್ಮ ಆಕ್ಷೇಪಣೆಯ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560009** ಇವರಿಗೂ ಕಳುಹಿಸಲು ಕೋರಲಾಗಿದೆ. ಸಾರ್ವಜನಿಕ ಆಕ್ಷೇಪಣೆಗಳನ್ನು ಮೊದಲ ಪ್ರಕಟಣೆಯನ್ನು ಹೊರಡಿಸಿದ ದಿನಾಂಕದಿಂದ **30 ದಿನಗಳೊಳಗೆ** ಸ್ವೀಕರಿಸಲಾಗುವುದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

ಸಂಕ್ಷಿಪ್ತ ಸುದ್ದಿ

ಗುಡಿಸಲಿಗೆ ಬೆಂಕಿ; ರೈತ ಸಜೀವ ದಹನ

ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನ ಹರನಾಳ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಹೊಲದಲ್ಲಿನ ಗುಡಿಸಲಿಗೆ ಬೆಂಕಿ ತಗುಲಿ ರೈತ ಜಗನ್ನಾಥ ರೇವಣಪ್ಪ ಹಲಗೆ (62) ಸಜೀವ ದಹನವಾಗಿದ್ದಾರೆ. ಅವರ ಜೊತೆಗಿದ್ದ ಮಾರುತಿ ಲಕ್ಷ್ಮಣ ಕುರಣೆ (65) ಅವರಿಗೆ ಗಾಯಗಳಾಗಿವೆ.

'ಕಾಡುಹಂದಿಗಳಿಂದ ಜೋಳ ರಕ್ಷಿಸಲು ಜಮೀನಿನಲ್ಲಿ ಗುಡಿಸಲು ನಿರ್ಮಿಸಿದ್ದರು. ರಾತ್ರಿ ಇಬ್ಬರು ಅಡುಗೆ ಮಾಡಿದ್ದು, ಊಟ ಮಾಡಿ ನಿದ್ರೆಗೆ ಜಾರಿದ್ದಾರೆ. ಒಲೆಯಲ್ಲಿದ್ದ ಬೆಂಕಿ ಕಿಡಿ ರಾತ್ರಿ ಗುಡಿಸಲಿಗೆ ತಗುಲಿದೆ. ಮಾರುತಿ ಕುರಣೆ ಎಚ್ಚರಗೊಂಡಿದ್ದು, ಜಗನ್ನಾಥ ಅವರಿಗೆ ಎಚ್ಚರಗೊಳಿಸಲು ಯತ್ನಿಸಿದ್ದಾರೆ. ಆದರೆ, ಪ್ರಯೋಜನವಾಗಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

'ಮುತ್ತು' ಕಟ್ಟಿಸಿದ್ದ ಆರೋಪಿ ಬಂಧನ

ಕೊಪ್ಪಳ: ಅನಾರೋಗ್ಯದಿಂದ ಬಳಲುತ್ತಿದ್ದ ಕೊಪ್ಪಳ ತಾಲ್ಲೂಕಿನ 21 ವರ್ಷದ ಯುವತಿಗೆ ಚಿಕಿತ್ಸೆ ಕೊಡಿಸದೇ ದೇವದಾಸಿ ಪಟ್ಟ ಕಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿ ನಾಲ್ಕನೇ ಆರೋಪಿ ಹನುಮಪ್ಪ ಹರಿಜನ ಎಂಬವನನ್ನು ಪೊಲೀಸರು ಬಂಧಿಸಿದ್ದಾರೆ.

ಈತ ಯುವತಿಯ ಸಹೋದರಿ ಮೂಕವ್ವ ಪತಿ. ಕೆಲ ದಿನಗಳಿಂದ ನಾಪತ್ತೆಯಾಗಿದ್ದ. ಯುವತಿಯ ತಂದೆ ಯಮನೂರಪ್ಪ, ತಾಯಿ ಹುಲಿಗೆವ್ವ ಮತ್ತು ಸಹೋದರಿ ಮೂಕವ್ವ ಅವರನ್ನು ಘಟನೆ ಬಯಲಾದ ದಿನವೇ ಬಂಧಿಸಲಾಗಿತ್ತು.

ಜೆಡಿಎಸ್ ಜತೆ ಮೈತ್ರಿ ಸಿಪಿಎಂ ಮಾತುಕತೆ

ಚಿಕ್ಕಬಳ್ಳಾಪುರ: ವಿಧಾನಸಭೆ ಚುನಾವಣೆಯಲ್ಲಿ ಏಳರಿಂದ–ಎಂಟು ಕ್ಷೇತ್ರಗಳಲ್ಲಿ ಪಕ್ಷ ಸ್ಪರ್ಧಿಸಲಿದೆ. ಜೆಡಿಎಸ್ ಜತೆ ಹೊಂದಾಣಿಕೆ ಸಂಬಂಧ ಮಾತುಕತೆ ನಡೆಯುತ್ತಿದೆ ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಯು.ಬಸವರಾಜು ಶನಿವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, 2018ರಲ್ಲಿ 19 ಕ್ಷೇತ್ರಗಳಲ್ಲಿ ಪಕ್ಷ ಸ್ಪರ್ಧಿಸಿತ್ತು. ಈ ಬಾರಿ ಅಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಿಲ್ಲ ಎಂದು ಅವರು ತಿಳಿಸಿದರು.

ಬಾಗೇಪಲ್ಲಿ ಕ್ಷೇತ್ರದಿಂದ ಡಾ.ಅನಿಲ್ ಕುಮಾರ್ ಆವುಲಪ್ಪ ಪಕ್ಷದಿಂದ ಸ್ಪರ್ಧಿಸಲಿದ್ದಾರೆ ಎಂದು ಹೇಳಿದರು.

'3 ಕರಾಳ ಕೃಷಿ ಕಾಯ್ದೆ ವಾಪಸ್‌ಗೆ ಆಗ್ರಹ'

ಹುಬ್ಬಳ್ಳಿ: 'ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳ ಹಿಂಪಡೆಯುವುದು, ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವುದು ಹಾಗೂ ಕೃಷಿ ಉತ್ಪನ್ನಗಳ ಖರೀದಿ ಕಾಯ್ದೆ ಜಾರಿಗೆ ಸಮಾಜ ಪರಿವರ್ತನಾ ಸತ್ಯಾಗ್ರಹ ಯಾತ್ರೆಯ (ಎಸ್‌ಪಿಎಸ್‌ವೈ) ಮುಖಂಡರು ಒತ್ತಾಯಿಸಿದ್ದಾರೆ.

ಐಎಎಸ್, ಐಪಿಎಸ್, ಐಎಫ್‌ಎಸ್ 116 ಅಧಿಕಾರಿಗಳಿಗೆ ಬಡ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷಾಂತ್ಯದ ದಿನವಾದ ಶನಿವಾರ 116 ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿದೆ. ಬಹುತೇಕ ಅಧಿಕಾರಿಗಳನ್ನು ಹಿಂದೆ ಇದ್ದ ಸ್ಥಾನದಲ್ಲೇ ಮುಂದುವರಿಸಿದ್ದು, ಕೆಲವರನ್ನು ಮಾತ್ರ ವರ್ಗಾವಣೆ ಮಾಡಲಾಗಿದೆ.

ಒಟ್ಟು 42 ಐಎಎಸ್ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿದೆ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮತ್ತು ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಎಸ್.ಆರ್. ಉಮಾಶಂಕರ್ ಅವರಿಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೇಣಿಗೆ ಬಡ್ತಿ ನೀಡಿ, ಹಾಲಿ ಇರುವ ಸ್ಥಾನಗಳಲ್ಲೇ ಮುಂದುವರಿಸಲಾಗಿದೆ. ಸ್ಥಳ ನಿರೀಕ್ಷೆಯಲ್ಲಿದ್ದ ಅಶ್ವಿಜಾ ಬಿ.ವಿ. ಅವರಿಗೆ ಸೀನಿಯರ್ ಟೈಂ ವೇತನ ಶ್ರೇಣಿಗೆ ಬಡ್ತಿ ನೀಡಿ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

52 ಐಪಿಎಸ್ ಅಧಿಕಾರಿಗಳಿಗೆ ಬಡ್ತಿ: ವಿವಿಧ ಶ್ರೇಣಿಯ 52 ಐಪಿಎಸ್ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿದೆ. ಅಮರ್ ಕುಮಾರ್ ಪಾಂಡೆ ಅವರ ವಯೋನಿವೃತ್ತಿಯಿಂದ ತೆರವಾದ ಗೃಹ ರಕ್ಷಕ ದಳ, ನಾಗರಿಕ ರಕ್ಷಣೆ ಮತ್ತು ಅಗ್ನಿಶಾಮಕ ಇಲಾಖೆಯ ಪೊಲೀಸ್ ಮಹಾನಿರ್ದೇಶಕರ ಹುದ್ದೆಗೆ ಬಂದಿಖಾನೆ ಡಿಜಿಪಿ ಅಲೋಕ್ ಮೋಹನ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಬಡ್ತಿಯೊಂದಿಗೆ ಹಲವು ಐಪಿಎಸ್ ಅಧಿ ಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

ವರ್ಗಾವಣೆ ವಿವರ: ಮನೀಷ್ ಖರ್ಬೀಕರ್- ಬಂದಿಖಾನೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ; ಸೌಮೇಂದು ಮುಖರ್ಜಿ- ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ, ಸಂವಹನ, ಸಾರಿಗೆ ಮತ್ತು ಆಧುನೀಕರಣ; ಎಂ.ಚಂದ್ರಶೇಖರ್- ಹೆಚ್ಚುವರಿ ಪೊಲೀಸ್ ಕಮಿಷನರ್, ಬೆಂಗಳೂರು ನಗರ ಪೂರ್ವ; ಎನ್. ಸತೀಶ್ ಕುಮಾರ್- ಐಜಿಪಿ ಉತ್ತರ ವಲಯ; ರಮಣ ಗುಪ್ತ- ಐಜಿಪಿ, ಉತ್ತರ ವಲಯ, ಬೆಳಗಾವಿ; ಬಿ.ಆರ್. ರವಿಕಾಂತೇಗೌಡ- ಐಜಿಪಿ, ಕೇಂದ್ರ ವಲಯ, ಬೆಂಗಳೂರು; ಇಡಾ ಮಾರ್ಟಿನ್ ಮಾರ್ಬನ್ಯಾಂಗ್- ಡಿಐಜಿ, ನೇಮಕಾತಿ; ವಿಕ್ರಮ್ ಅಮಟೆ- ಎಸ್‌ಪಿ, ಗುಪ್ತಚರ ವಿಭಾಗ; ಮಹಾನಿಂಗ್ ನಂದಗಾವಿ- ಎಸ್‌ಪಿ, ಗುಪ್ತಚರ ವಿಭಾಗ.

ವನ್ಯಜೀವಿ ವಿಭಾಗದ ಮುಖ್ಯಸ್ಥರಾಗಿ ರಾಜೀವ್ ರಂಜನ್

ವಿವಿಧ ಶ್ರೇಣಿಯ 22 ಐಎಫ್‌ಎಸ್ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿದೆ. ಬಡ್ತಿ ಪಡೆದವರಲ್ಲಿ ಕೆಲವರು ಮತ್ತು ಬಡ್ತಿಯಿಂದ ತೆರವಾದ ಹುದ್ದೆಗಳಿಗೆ ಕೆಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. 1987ರ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ ರಾಜೀವ್ ರಂಜನ್ ಅವರನ್ನು ವನ್ಯಜೀವಿ ವಿಭಾಗದ ಮುಖ್ಯಸ್ಥ ಮತ್ತು ಮುಖ್ಯ ವೈಲ್ಡ್‌ಲೈಫ್ ವಾರ್ಡನ್ ಹುದ್ದೆಗೆ ನೇಮಿಸಲಾಗಿದೆ.

ಬ್ರಜೇಶ್ ಕುಮಾರ್ ದೀಕ್ಷಿತ್ ಅವರನ್ನು ಅರಣ್ಯ ಅಭಿವೃದ್ಧಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಸ್ಮಿತಾ ಬಿಜ್ಜೂರ್ ಅವರನ್ನು ಕರ್ನಾಟಕ ಔಷಧೀಯ ಸಸ್ಯಗಳ ಪ್ರಾಧಿಕಾರದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಬಡ್ತಿಯೊಂದಿಗೆ ವರ್ಗಾವಣೆ ವಿವರ: ಮೀನಾಕ್ಷಿ ನೇಗಿ- ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ, ತರಬೇತಿ ಮತ್ತು ಹವಾಮಾನ ಬದಲಾವಣೆ; ಕಮಲಾ ಕೆ.- ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನಾ ವಿಭಾಗ, ಧಾರವಾಡ; ಕರಿಕಾಳನ್ ವಿ.- ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಎಸ್. ರಮೇಶ್- ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನಾ ವಿಭಾಗ, ಮಡಿಕೇರಿ; ಚಂದ್ರಶೇಖರನಾಯಕ ಕೆ.- ಅರಣ್ಯ ಸಂರಕ್ಷಣಾಧಿಕಾರಿ ಬಜೆಟ್ ಮತ್ತು ಲೆಕ್ಕಪರಿಶೋಧನೆ, ಬೆಂಗಳೂರು; ಧಾರವಾಡ; ಕಾವ್ಯಾ ಚತುರ್ವೇದಿ- ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪಳ; ಸೌರಭ್ ಕುಮಾರ್- ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವನ್ಯಜೀವಿ ವಿಭಾಗ; ಕಾಜೋಲ್ ಅಜಿತ್ ಪಾಟೀಲ್- ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಾದಗಿರಿ;

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹56,650
ಒಡವೆ ಚಿನ್ನ 1ಗ್ರಾಂ	₹5,207
ಬೆಳ್ಳಿ ಕೆ.ಜಿಗೆ	₹70,100

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	--- (1610)
ಸೋಯಾ (ರಿಫೈಂಡ್)	₹1290 (1300)
ಸೂರ್ಯಕಾಂತಿ (ರಿಫೈಂಡ್)	₹1335 (1325)
ಪಾಮೋಲಿನ್	₹955 (960)

ತಿಪಟೂರು ಧಾರಣೆ (ಕ್ವಿಂಟಲ್‌ಗೆ)

ಕನಿಷ್ಠ–ಗರಿಷ್ಠ	₹11000-12000
ಮಾದರಿ	₹12000

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಐದನೇ ವರ್ಷದ ಪುಣ್ಯಸ್ಮರಣೆ

ಹೇಮಾವತಿ ಎಂ.ವಿ

ನಿಮ್ಮ ನೆನಪು, ನಮ್ಮ ಮನದಲ್ಲಿ ಸದಾ ಹಚ್ಚ ಹಸಿರು ನಿಮ್ಮ ನಡೆ, ನುಡಿ ಮತ್ತು ತತ್ವಗಳು ನಮಗೆಲ್ಲಾ ದಾರಿದೀಪ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವ
ಶ್ರೀರಾಮ ಹಾಗೂ ಕುಟುಂಬ ವರ್ಗದವರು
ಶ್ರೀರಾಂಪುರಂ, ಬೆಂಗಳೂರು

11ನೇ ವರ್ಷದ ಪುಣ್ಯಸ್ಮರಣೆ

ಎಸ್.ಆರ್.ವೆಂಕಟಸ್ವಾಮಪ್ಪ
ನಿಧನ: 1-1-2012
ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗಿದೆ. ನಮ್ಮ ಏಳಿಗೆಯ ಪ್ರತಿಕ್ಷಣದಲ್ಲೂ ನಮ್ಮನ್ನು ಆಶೀರ್ವದಿಸುತ್ತಿರುವ ನಿಮ್ಮನ್ನು ಕೃತಜ್ಞತೆಯಿಂದ ಸ್ಮರಿಸುತ್ತಾ ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಇಂತಿ: ಪತ್ನಿ, ಮಕ್ಕಳು ಮತ್ತು ಕುಟುಂಬದವರು

ಪಿಂಚಣಿ: ಎಂಟು ವಾರದೊಳಗೆ ‘ಸುಪ್ರೀಂ’ ಆದೇಶ ಜಾರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗಿಗಳ ಪಿಂಚಣಿ ನಿಧಿಗೆ (ಇಪಿಎಸ್) ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶವನ್ನು ಎಂಟು ವಾರಗಳ ಒಳಗಾಗಿ ಜಾರಿಗೊಳಿಸುವಂತೆ ಉದ್ಯೋಗಿಗಳ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಅಧಿಕಾರಿಗಳಿಗೆ ಸೂಚನೆ ನೀಡಿದೆ.

ಉದ್ಯೋಗಿಗಳು ಪಿಂಚಣಿ ನಿಧಿಗೆ ತಮ್ಮ ಪೂರ್ಣ ವೇತನದ ಶೇ 8.33ರಷ್ಟನ್ನು ವಂತಿಗೆಯಾಗಿ ಪಾವತಿಸಬಹುದು ಎಂದು ಸುಪ್ರೀಂ ಕೋರ್ಟ್ ನವೆಂಬರ್ 4ರಂದು ಆದೇಶ ನೀಡಿದೆ. ಅದನ್ನು ಜಾರಿಗೊಳಿಸುವಂತೆ ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ ಎಂದು ಇಪಿಎಫ್‌ಒ ಅಧಿಸೂಚನೆಯಲ್ಲಿ ತಿಳಿಸಿದೆ.

ಹೆಚ್ಚಿನ ಪಿಂಚಣಿ ಪಡೆಯಲು ಬೇಕಾದ ಅರ್ಹತೆ, ಯಾವೆಲ್ಲಾ ದಾಖಲೆಗಳು ಅಗತ್ಯ ಎನ್ನುವ ವಿವರಗಳನ್ನು ಮಾರ್ಗಸೂಚಿಯಲ್ಲಿ ನೀಡಲಾಗಿದೆ. ಅರ್ಹ ಸದಸ್ಯರು ಅಗತ್ಯ ದಾಖಲೆಗಳೊಂದಿಗೆ ತಮ್ಮ ಉದ್ಯೋಗದಾ-

ತರೊಂದಿಗೆ ಜಂಟಿಯಾಗಿ ಅರ್ಜಿ ಸಲ್ಲಿಸಬೇಕು.

ಯಾರೆಲ್ಲಾ ಅರ್ಹರು: ಇಪಿಎಫ್‌ಒದ ಹಿಂದಿನ ವೇತನ ಮಿತಿ ₹5000/6500ಕ್ಕಿಂತಲೂ ಹೆಚ್ಚಿನ ಕೊಡುಗೆ ನೀಡಿರುವ ಇಪಿಎಸ್ ಸದಸ್ಯರು ಹೆಚ್ಚಿನ ಪಿಂಚಣಿ ಪಡೆಯಲು ಅರ್ಹರಾಗಿರುತ್ತಾರೆ.

ಇಪಿಎಸ್–95ಗೆ 2014ರಲ್ಲಿ ತಿದ್ದುಪಡಿ ತರುವುದಕ್ಕೂ ಮುನ್ನ ಉದ್ಯೋಗದಾತರೊಂದಿಗೆ ಜಂಟಿ ಆಯ್ಕೆ ಹೊಂದಿರುವವರು ಈ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

ಇಪಿಎಫ್‌ಒ ಸದಸ್ಯರು ನಿವೃತ್ತಿಗೂ ಮೊದಲು ಹೆಚ್ಚಿನ ಪಿಂಚಣಿಯನ್ನು ಆಯ್ಕೆ ಮಾಡಿಕೊಂಡಿದ್ದರೂ, ಅವರ ಮನವಿಯನ್ನು ಇಪಿಎಫ್‌ಒ ನಿರಾಕರಿಸಿದ್ದರೆ ಅಂತಹ ಸದಸ್ಯರು ಸಹ ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.

ಮುಂಬೈ ಧಾರಣೆ

ಶೇಂಗಾ

31–12–2022

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	--- (1615)
ಸೋಯಾ ಕಚ್ಚಾ	--- (---)
ಪಾಮ್ ವಾರದ ಡೆಲಿವರಿ	--- (960)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (1230)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
54,850 (54,650)
ಬೆಳ್ಳಿ ಕೆ.ಜಿ 68,300 (68,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ಹೊಸ ವರ್ಷದಲ್ಲಿಯೂ ದೇಶಿ ಷೇರುಪೇಟೆಗಳ ಉತ್ತಮ ಪ್ರದರ್ಶನ ನಿರೀಕ್ಷೆ

2023ರಲ್ಲಿ ಹೂಡಿಕೆ: ಹೇಗಿದ್ದರೆ ಚೆನ್ನ?

• ವಿ.ಕೆ. ವಿಜಯಕುಮಾರ್

ಪ್ರಜಾವಾಣಿ ವಿಶೇಷ

ಭಾರತದ ಷೇರುಪೇಟೆಗಳು ಇತರ ಷೇರುಪೇಟೆಗಳಿಗಿಂತ ಹೆಚ್ಚಿನ ಸಾಧನೆ ತೋರಿದ್ದು 2022ರ ಷೇರು ಮಾರುಕಟ್ಟೆಗಳ ಏರಿಳಿತಗಳಲ್ಲಿ ಅತ್ಯಂತ ಮುಖ್ಯವಾದುದು. 2022ರಲ್ಲಿ ಎಸ್‌ಆ್ಯಂಡ್‌ಪಿ 500, ಎಂಎಸ್‌ಸಿಐ ವರ್ಲ್ಡ್ ಇಂಡೆಕ್ಸ್ ಒಳಗೊಂಡು ಜಗತ್ತಿನ ಪ್ರಮುಖ ಷೇರುಪೇಟೆಗಳೆಲ್ಲವೂ ಶೇಕಡ 12ರಿಂದ ಶೇ 15ರವರೆಗೆ ಕುಸಿತ ಕಂಡಿವೆ. ಆದರೆ ಭಾರತದ ಷೇರುಪೇಟೆಗಳು ಉತ್ತಮ ಗಳಿಕೆ ಕಂಡಿವೆ. ಎನ್‌ಎಸ್‌ಇ ನಿಫ್ಟಿ ಡಿಸೆಂಬರ್ 26ರವರೆಗಿನ ವಹಿವಾಟಿನಲ್ಲಿ ಶೇ 3.8ರವರೆಗೆ ಗಳಿಕೆ ಕಂಡುಕೊಂಡಿದೆ. 2022ರಲ್ಲಿ ಭಾರತದ ಆರ್ಥಿಕತೆಯು ಉತ್ತಮ ಬೆಳವಣಿಗೆ ಕಂಡಿರುವುದೇ ಷೇರುಪೇಟೆಗಳ ಈ ಗಳಿಕೆಗೆ ಪ್ರಮುಖ ಕಾರಣ. 2023ರಲ್ಲಿಯೂ ಷೇರುಪೇಟೆಯು ಇದೇ ಹಾದಿಯಲ್ಲಿ ಸಾಗುವ ನಿರೀಕ್ಷೆ ಇದೆ.

ದೇಶಿ ಹೂಡಿಕೆದಾರರ ಭಾಗವಹಿಸುವಿಕೆಯು ನೆಚ್ಚಿಕೊಳ್ಳಬಹುದಾದ ಶಕ್ತಿಯಾಗಿ 2022ರಲ್ಲಿ ಬೆಳವಣಿಗೆ ಕಂಡಿದ್ದು ಷೇರುಪೇಟೆಗಳ ಓಟಕ್ಕೆ ಇನ್ನೊಂದು ಪ್ರಮುಖ ಕಾರಣ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಹೆಚ್ಚಿನ ಪ್ರಮಾಣದಲ್ಲಿ ಷೇರುಗಳನ್ನು ಮಾರಾಟ ಮಾಡುತ್ತಿದ್ದಂತಹ ಸಂದರ್ಭದಲ್ಲಿ ದೇಶಿ ಸಾಂಸ್ಥಿಕ ಹೂಡಿಕೆದಾರರು (ಡಿಐಐ) ಷೇರುಗಳನ್ನು ಖರೀದಿಸುವ ಗಮನ ಹರಿಸಿದರು. ಆ ಮೂಲಕ ಷೇರುಪೇಟೆಗಳು ಹೆಚ್ಚು ಕುಸಿತ ಕಾಣುವುದನ್ನು ತಪ್ಪಿಸಿದರು. 2022ರಲ್ಲಿ ಡಿಸೆಂಬರ್ 20ರವರೆಗಿನ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು (ಎಫ್‌ಐಐ) ₹ 1.46 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇನ್ನೊಂದೆಡೆ ದೇಶಿ ಹೂಡಿಕೆದಾರರು ಡಿಸೆಂಬರ್ 27ರವರೆಗಿನ ವಹಿವಾಟಿನಲ್ಲಿ ₹ 2.51 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಹೂಡಿಕೆದಾರರ ಬಲ ಇಲ್ಲದಿದ್ದಿದ್ದರೆ, ವಿದೇಶಿ ಹೂಡಿಕೆದಾರರಿಂದ ನಡೆದ ಮಾರಾಟದ ಪರಿಣಾಮವಾಗಿ ಮಾರುಕಟ್ಟೆಗಳು ನೆಲಕಚ್ಚುತ್ತಿದ್ದವು.

2020ರ ಏಪ್ರಿಲ್‌ನಿಂದ 2021ರ ಅಕ್ಟೋಬರ್‌ವರೆಗಿನ ಅವಧಿಯಲ್ಲಿ ನಿಫ್ಟಿ ಸೂಚ್ಯಂಕವು 7,511 ಅಂಶಗಳ ಕನಿಷ್ಠ ಮಟ್ಟದಿಂದ 18,604 ಅಂಶಗಳಿಗೆ ಏರಿಕೆ ಕಂಡಿದೆ. ಆದರೆ ಆ ಬಳಿಕ ಇದುವರೆಗೆ 18 ಸಾವಿರದ ಆಸುಪಾಸಿನಲ್ಲಿಯೇ ವಹಿವಾಟು ನಡೆಸುತ್ತಿದೆ. ಏಕೆಂದರೆ ಒಂದು ದಿನ ನಿಫ್ಟಿ ಸೂಚ್ಯಂಕ ಶೇ 2–3ರಷ್ಟು ಏರಿಕೆ ಆದರೆ ಇನ್ನೊಂದು ದಿನ ಅಷ್ಟೇ ಪ್ರಮಾಣದಲ್ಲಿ ಇಳಿಕೆ ಕಂಡಿದೆ. ಅನಿಶ್ಚಿತತೆ ಹೆಚ್ಚಿದ್ದಾಗ ಇಂತಹ ಚಲನೆಗಳು ಇರುತ್ತವೆ.

ಅನಿಶ್ಚಿತ ಪರಿಸ್ಥಿತಿ ಮುಂದುವರಿಯಲಿದೆ

ಅಮೆರಿಕದ ಹಣದುಬ್ಬರ ಮತ್ತು ಉಕ್ರೇನ್ ಸಂಘರ್ಷದಿಂದ ಜಾಗತಿಕ ಮಾರುಕಟ್ಟೆಯಲ್ಲಿ ಸೃಷ್ಟಿಯಾಗಿರುವ ಅನಿಶ್ಚಿತ ಪರಿಸ್ಥಿತಿಯು ಈಗಿನಂತೆಯೇ ಮುಂದುವರಿಯಲಿದೆ. 2023ರ ಆರಂಭದಲ್ಲಿ ದೇಶದ ಮಾರುಕಟ್ಟೆಗಳ ಚಲನೆಯು ಹೆಚ್ಚು ಅಸ್ಥಿರವಾಗಿರುವ ಸಾಧ್ಯತೆ ಇದೆ. ಜಾಗತಿಕ ಆರ್ಥಿಕತೆಯ ಮೂರು ಚಾಲಕ ಶಕ್ತಿಗಳಾಗಿರುವ ಅಮೆರಿಕ, ಐರೋಪ್ಯ ವಲಯ ಮತ್ತು ಚೀನಾದಲ್ಲಿ ಆರ್ಥಿಕ ಬೆಳವಣಿಗೆಯು ಇಳಿಮುಖವಾಗಿದೆ. ಹೀಗಾಗಿ ಹೊಸ ವರ್ಷದಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ಪ್ರಮಾಣವು 2022ರಲ್ಲಿ ಆಗಿರುವುದಕ್ಕಿಂತಲೂ ಕಡಿಮೆ ಇರುವ ಅಂದಾಜು ಮಾಡಲಾಗಿದೆ. ಅಮೆರಿಕದಲ್ಲಿ ಹಣದುಬ್ಬರದ ಪ್ರಮಾಣ ಮತ್ತು ಬಡ್ಡಿದರವು 2023ರಲ್ಲಿ ಷೇರುಪೇಟೆಗಳ ದಿಕ್ಕನ್ನು ನಿರ್ಧರಿಸಲಿವೆ. ಅಮೆರಿಕದಲ್ಲಿ ಹಣದುಬ್ಬರವು 40 ವರ್ಷಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಅದನ್ನು ನಿಯಂತ್ರಿಸಲು ಫೆಡರಲ್ ರಿಸರ್ವ್ 2022ರಲ್ಲಿ ಬಿಗಿ ಹಣಕಾಸು ನೀತಿಯ ಮೊರೆ ಹೋಗಿದೆ. ಇದೀಗ ಹಣದುಬ್ಬರವು ಇಳಿಕೆ ಕಾಣುವ ಸೂಚನೆ ನೀಡುತ್ತಿದ್ದು, ಇಳಿಕೆ ಹಾದಿಯಲ್ಲೇ ಮುಂದುವರಿದರೆ 2023ನೇ ಸಾಲಿನ ಆರಂಭದಲ್ಲಿಯೇ ಫೆಡರಲ್ ರಿಸರ್ವ್ ಬಡ್ಡಿದರ ಏರಿಕೆಗೆ ತುಸು ವಿರಾಮ ನೀಡುವ ಸಾಧ್ಯತೆ ಇದೆ. ಆಗ ಷೇರುಪೇಟೆಗಳಲ್ಲಿ ಮತ್ತೆ ಗೂಳಿ ಓಟಕ್ಕೆ ವೇಗ ದೊರೆಯಲಿದೆ.

2023ರಲ್ಲಿ ಬಂಡವಾಳ ಹೂಡಿಕೆ ಹೇಗೆ?

ಹೊಸ ವರ್ಷದಲ್ಲಿ ಹೂಡಿಕೆದಾರರು ತಮ್ಮ ಬಳಿ ಇರುವ ಹಣವನ್ನು ಒಂದೇ ಕಡೆ ಹೂಡಿಕೆ ಮಾಡದೇ ಹಲವು ಕಡೆಗಳಲ್ಲಿ ತೊಡಗಿಸಬೇಕು. ಬಡ್ಡಿದರ ಏರಿಕೆ ಆಗುವುದರ ಜೊತೆಗೆ ಬಾಂಡ್ ಗಳಿಕೆಯೂ ಹೆಚ್ಚಾಗುತ್ತಿದೆ. ಹೀಗಾಗಿ ನಿಶ್ಚಿತ ಆದಾಯ ತರುವ ಹೂಡಿಕೆಗಳು ಆಕರ್ಷಕವಾಗುತ್ತಿವೆ. ಡೆಟ್ ಫಂಡ್‌ಗಳ ಮೇಲೆ ಹೂಡಿಕೆ ಮಾಡುವುದು ಬ್ಯಾಂಕ್ ಠೇವಣಿಗಳ ಮೇಲಿನ ಹೂಡಿಕೆಗಿಂತಲೂ ಉತ್ತಮ. ಏಕೆಂದರೆ, ತೆರಿಗೆ ಪಾವತಿಸಿದ ನಂತರದ ಗಳಿಕೆಯು ಡೆಟ್ ಫಂಡ್‌ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆ.

ಹೀಗಾಗಿ, ನಿಶ್ಚಿತ ಆದಾಯ ಬರುವ ಕಡೆಗಳಲ್ಲಿ ಹಣ ತೊಡಗಿಸುವುದು ಹೆಚ್ಚು ಸೂಕ್ತವಾಗಲಿದೆ. ಡಾಲರ್ ಮೌಲ್ಯ ನಿಧಾನವಾಗಿ ಕಡಿಮೆ ಆಗಲು ಆರಂಭವಾದಾಗ ಚಿನ್ನಕ್ಕೆ ಬೇಡಿಕೆ ಹೆಚ್ಚಾಗುವ ಸಾಧ್ಯತೆ ಇದೆ. ಫೆಡರಲ್ ರಿಸರ್ವ್ ಬಡ್ಡಿದರ ಏರಿಕೆಗೆ ವಿರಾಮ ನೀಡಿದರೆ ಮಾತ್ರ ಹೀಗಾಗಲಿದೆ.

ಸಾಲ ನೀಡಿಕೆ ಹೆಚ್ಚುತ್ತಿರುವುದು ಹಾಗೂ ಬಂಡವಾಳ ವೆಚ್ಚ ಜಾಸ್ತಿ ಆಗುತ್ತಿರುವುದು ದೇಶದ ಅರ್ಥ ವ್ಯವಸ್ಥೆಯಲ್ಲಿ ಕಂಡುಬಂದಿರುವ ಎರಡು ಮಹತ್ವದ ಬೆಳವಣಿಗೆಗಳು. 2022ರಲ್ಲಿ ಸಾಲ ನೀಡಿಕೆ ಮತ್ತು ಬಂಡವಾಳ ಸಂಗ್ರಹ ಉತ್ತಮ ಸ್ಥಿತಿಯಲ್ಲಿವೆ. ಸಾಲ ನೀಡಿಕೆಯು ಶೇ 17.5ರ ಮಟ್ಟದಲ್ಲಿ ಬೆಳೆದಿದೆ. ಹೀಗಾಗಿ 2023ರಲ್ಲಿಯೂ ಈ ಎರಡು ವಲಯಗಳ ಬೆಳವಣಿಗೆ ಹೆಚ್ಚಿನ ಪ್ರಮಾಣದಲ್ಲಿ ಇರುವ ಅಂದಾಜು ಮಾಡಲಾಗಿದೆ.

ವಲಯವಾರು, ಬಂಡವಾಳ ಸರಕುಗಳು ಮತ್ತು ಸಿಮೆಂಟ್ ಉತ್ತಮ ಗಳಿಕೆ ಕಾಣುವ ಸಾಮರ್ಥ್ಯ ಹೊಂದಿವೆ. ಅಮೆರಿಕದಲ್ಲಿ ಆರ್ಥಿಕ ಹಿಂಜರಿತದ ಆತಂಕ ಎದುರಾಗಿರುವುದರಿಂದ 2023ನೇ ವರ್ಷದ ಆರಂಭದಲ್ಲಿ ಮಾಹಿತಿ ತಂತ್ರಜ್ಞಾನ (ಐ.ಟಿ.) ವಲಯದ ಷೇರುಗಳು ದುರ್ಬಲವಾಗಿಯೇ ಇರುವ ಸಾಧ್ಯತೆ ಇದೆ. ಒಂದೊಮ್ಮೆ ಅಮೆರಿಕದ ಆರ್ಥಿಕತೆಯು ಉತ್ತಮ ಬೆಳವಣಿಗೆ ಕಾಣುವ ಸೂಚನೆ ಕಂಡರೆ ಆಗ ಐ.ಟಿ. ಷೇರುಗಳು ಚೇತರಿಕೆ ಹಾದಿಗೆ ಮರಳಬಹುದು.

ಸದ್ಯ ಭಾರತದ ಷೇರುಪೇಟೆಗಳ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇದೆ. ಜಾಗತಿಕ ಮಟ್ಟದಲ್ಲಿ ಯಾವುದೇ ಬದಲಾವಣೆ ಕಂಡುಬಂದರೂ ಅದು ಭಾರತದ ಮೇಲೆಯೂ ಪರಿಣಾಮ ಬೀರಲಿದ್ದು, ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಬಹುದು. ಇಂತಹ ಪರಿಸ್ಥಿತಿಯು ದೀರ್ಘಾವಧಿಗೆ ಬಂಡವಾಳ ಹೂಡಿಕೆ ಮಾಡುವವರಿಗೆ ಹೊಸದಾಗಿ ಷೇರು ಖರೀದಿಗೆ ಉತ್ತಮ ಅವಕಾಶಗಳನ್ನು ನೀಡಲಿದೆ.

ಲೇಖಕ: ಮುಖ್ಯ ಹೂಡಿಕೆ ತಜ್ಞ, ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್

ನೈರುತ್ಯ ರೈಲ್ವೆ: 2022ರಲ್ಲಿ ₹7,509 ಕೋಟಿ ಆದಾಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನೈರುತ್ಯ ರೈಲ್ವೆ ವಿಭಾಗವು 2022ರಲ್ಲಿ ₹7,509 ಕೋಟಿ ಆದಾಯ ಗಳಿಸಿದೆ. ಇದರಲ್ಲಿ ಟಿಕೆಟ್ ಮೂಲದ ₹2,534 ಕೋಟಿ ಆದಾಯ ಸೇರಿದೆ. ವಿಭಾಗ ಗಳಿಸಿರುವ ಸಾರ್ವಕಾಲಿಕ ಗರಿಷ್ಠ ಮೊತ್ತ ಇದು’ ಎಂದು ವಿಭಾಗದ ಪ್ರಕಟಣೆ ತಿಳಿಸಿದೆ.

2022ನೇ ವರ್ಷದಲ್ಲಿ ನೈರುತ್ಯ ರೈಲ್ವೆ 712 ಕಿ.ಮೀ ಮಾರ್ಗವನ್ನು ವಿದ್ಯುದ್ದೀಕರಣಗೊಳಿಸಿದೆ. 22 ಕಿ.ಮೀ ಹೊಸ ಮಾರ್ಗ ಅಭಿವೃದ್ಧಿಪಡಿಸಿದೆ. 210 ಕಿ.ಮೀ ಮಾರ್ಗ ದ್ವಿಪಥೀಕರಣಗೊಳಿಸಿದ್ದು, 19 ರೈಲ್ವೆ ಮೇಲ್ಸೇತುವೆ, 35 ರೈಲ್ವೆ ಕೆಳ ಸೇತುವೆಗಳನ್ನು ಲೋಕಾರ್ಪಣೆಗೊಳಿಸಿದೆ. ಹಬ್ಬಗಳು, ಸಾರ್ವತ್ರಿಕ ರಜೆಗಳಲ್ಲಿ 161 ಹೆಚ್ಚುವರಿ ರೈಲುಗಳ ಸೇವೆ ಒದಗಿಸಿದ್ದು, 2,585 ಕೋಚ್‌ಗಳನ್ನು ಹೆಚ್ಚುವರಿಯಾಗಿ ಜೋಡಿಸಲಾಗಿದೆ ಎಂದು ತಿಳಿಸಿದೆ.

ಧಾರವಾಡ, ಯಶವಂತಪುರ ಹಾಗೂ ಬೆಂಗಳೂರಿನ ದಂಡುಪ್ರದೇಶ ರೈಲ್ವೆ ನಿಲ್ದಾಣಗಳನ್ನು ನವೀಕರಿಸಲಾಗಿದೆ. ಹುಬ್ಬಳ್ಳಿಯ ಶ್ರೀಸಿದ್ಧಾರೂಢ ಸ್ವಾಮೀಜಿ ರೈಲ್ವೆ ನಿಲ್ದಾಣದಲ್ಲಿ 3ನೇ ಪ್ರವೇಶ ದ್ವಾರವನ್ನು ಬಳಕೆಗೆ ಮುಕ್ತಗೊಳಿಸಲಾಗಿದೆ ಎಂದು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಹೊಸತು	30000-37500	**ಶಿರಸಿ**	
ಕೋಕ	12500-25000	ಹಳತು	40000-54500	ಬೆಟ್ಟೆ	36699-42798
ಹೊಸತು	27500-38000	**ಕುಮಟ**		ಬಿಳಿಗೋಟು	23809-34599
ಹಳತು	48000-54500	ಚಿಪ್ಪು	25509-31689	ಚಾಲಿ	37608-42000
ಚಿತ್ರದುರ್ಗ		ಕೋಕ	16809-28589	ರಾಶಿ	43899-43899
ಆಪಿ	45800-46200	ಹಳೆಚಾಲಿ	31869-34739	**ಸೊರಬ**	
ಬೆಟ್ಟೆ	33159-33599	ಹೊಸಚಾಲಿ	31869-34739	ಬೆಟ್ಟೆ	30619-34069
ಕೆಂಪುಗೋಟು	29009-29410	**ಕುಂದಾಪುರ**		ಚಾಲಿ	37299-37299
ರಾಶಿ	45339-45769	ಹಳೆಚಾಲಿ	53000-55000	ಗೊರಬಲು	30699-32009
ಕಾರ್ಕಳ		ಹೊಸಚಾಲಿ	40000-47500	ರಾಶಿ	44009-45009

ಕ್ರೈಸ್ತ ಧರ್ಮದ ಪುನರುಜ್ಜೀವನಕ್ಕೆ ಶ್ರಮಿಸಿದ್ದ ಬೆನೆಡಿಕ್ಟ್

ವ್ಯಾಟಿಕನ್ ಸಿಟಿ (ಎಪಿ): ವಿಶ್ರಾಂತ ಪೋಪ್ 16ನೇ ಬೆನೆಡಿಕ್ಟ್ ಅವರು ಯುರೋಪ್‌ನಲ್ಲಿ ಜಾತ್ಯತೀತತೆ ನೆಲೆಗೊಂಡಿದ್ದ ಕಾಲಘಟ್ಟದಲ್ಲಿ ಕ್ರೈಸ್ತ ಧರ್ಮವನ್ನು ಪುನರುಜ್ಜೀವನಗೊಳಿಸಲು ಶ್ರಮಿಸಿದ್ದರು. 2013ರ ಫೆಬ್ರುವರಿ 11ರಂದು ಪೋಪ್ ಸ್ಥಾನಕ್ಕೆ ರಾಜೀನಾಮೆ ನೀಡಿ ಅಚ್ಚರಿ ಮೂಡಿಸಿದ್ದರು.

ಜನಿಸಿದ್ದು 1927ರ ಏಪ್ರಿಲ್ 16ರಂದು ಜರ್ಮನಿಯ ಮಾರ್ಕ್‌ಟಲ್ ಅಮ್ ಇನ್‌ನಲ್ಲಿ. ಮೂಲ ಹೆಸರು ಜೋಸೆಫ್ ಅಲೋಸಿಯಸ್ ರ‍್ಯಾಟ್ಜಿಂಗರ್. ತಂದೆ ಜೋಸೆಫ್ ರ‍್ಯಾಟ್ಜಿಂಗರ್. ತಾಯಿ ಹೆಸರು ಮರಿಯಾ. ಈ ದಂಪತಿಯ ಮೂವರು ಮಕ್ಕಳಲ್ಲಿ ಬೆನೆಡಿಕ್ಟ್ ಅವರೇ ಕೊನೆಯವರು.

1969ರಿಂದ 1977ರವರೆಗೆ ಅವರು ರೆಜೆನ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು. 1977ರಲ್ಲಿ ಮ್ಯೂನಿಕ್‌ನ ಆರ್ಚ್‌ಬಿಷಪ್ ಆಗಿ, ನಂತರ ಕ್ರೈಸ್ತ ಧರ್ಮಾಧ್ಯಕ್ಷರಾಗಿ ನೇಮಕವಾಗಿದ್ದ ಅವರು ಪೋಪ್ ಹುದ್ದೆಗೇರಿದ್ದು ಅನಿರೀಕ್ಷಿತ. ಸೇಂಟ್ ಜಾನ್ ಪಾಲ್–2 ಅವರ ನಿಧನದ ನಂತರ ಅವರ ಸ್ಥಾನ ಅಲಂಕರಿಸುವಂತೆ ಬೆನೆಡಿಕ್ಟ್ ಅವರ ಮೇಲೆ ಒತ್ತಡ ಹೇರಲಾಗಿತ್ತು. ಒಲ್ಲದ ಮನಸ್ಸಿನಿಂದಲೇ ಅವರು ಈ ಜವಾಬ್ದಾರಿ ವಹಿಸಿಕೊಂಡಿದ್ದರು. ಎಂಟು ವರ್ಷ ಆಡಳಿತ ನಡೆಸಿದ್ದ ಅವರಿಗೆ 2010ರಲ್ಲಿ ಕೇಳಿ ಬಂದಿದ್ದ ಲೈಂಗಿಕ ಕಿರುಕುಳ ಹಗರಣ ಮುಳುವಾಗಿತ್ತು.

ಮ್ಯೂನಿಕ್‌ನಲ್ಲಿರುವ ಕ್ಯಾಥೆಡ್ರಾಲ್ ಚರ್ಚ್‌ನಲ್ಲಿ ಬೆನೆಡಿಕ್ಟ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು —ಎಎಫ್‌ಪಿ ಚಿತ್ರ

ತಮ್ಮ ಅಧಿಕಾರಾವಧಿಯಲ್ಲಿ ಅವರು ಕೆಲವು ನಿರ್ಣಾಯಕ ಮತ್ತು ವಿವಾದಾತ್ಮಕ ನಿರ್ಣಯ ಕೈಗೊಂಡಿದ್ದರು. ಯುರೋಪಿಯನ್ನರಿಗೆ ಕ್ರೈಸ್ತ ಪರಂಪರೆ ಬಗ್ಗೆ ಅರಿವು ಮೂಡಿಸುವ ಕೆಲಸದಲ್ಲಿ ನಿರಂತರವಾಗಿ ತೊಡಗಿದ್ದರು. ಬೆನೆಡಿಕ್ಟ್ ಅವರು ಶಿಕ್ಷಕ, ದೇವತಾಶಾಸ್ತ್ರಜ್ಞ ಮತ್ತು ಸೈದ್ಧಾಂತಿಕವಾದಿಯಾಗಿ ಗುರುತಿಸಿಕೊಂಡಿದ್ದರು.

‘ಕಾಂಡೋಮ್‌ಗಳನ್ನು ಹಂಚುವುದರಿಂದ ಏಡ್ಸ್ ಸಮಸ್ಯೆ ನಿವಾರಣೆಯಾಗುವುದಿಲ್ಲ’ ಎಂದು 2009ರಲ್ಲಿ ತಿಳಿಸಿದ್ದ ಅವರು ಒಂದು ವರ್ಷದ ಬಳಿಕ ಇದಕ್ಕೆ ತದ್ವಿರುದ್ಧವಾದ ಹೇಳಿಕೆ ನೀಡಿದ್ದರು.

2006ರ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಅವರು ಹಿಂಸೆಯು ಇಸ್ಲಾಂ ಧರ್ಮದಲ್ಲಿ ಅಂತರ್ಗತವಾಗಿದೆ ಎಂಬ ಅಭಿಪ್ರಾಯವನ್ನು ಪ್ರತಿಪಾದಿಸುವ ಧಾಟಿಯಲ್ಲಿ ಮಾತನಾಡಿದ್ದರು. ಇದು ಮುಸ್ಲಿಮರ ಆಕ್ರೋಶಕ್ಕೆ ಕಾರಣವಾಗಿತ್ತು. ಬಳಿಕ ಇದಕ್ಕಾಗಿ ಕ್ಷಮೆ ಕೋರಿದ್ದರು.

ವಿಶ್ವ ನಾಯಕರ ಕಂಬನಿ: ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಇಟಲಿ ಪ್ರಧಾನಿ ಜಿಯಾರ್ಜಿಯಾ ಮೆಲಾನಿ, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಸೇರಿದಂತೆ ವಿಶ್ವ ನಾಯಕರು ವಿಶ್ರಾಂತ ಪೋಪ್ ಬೆನೆಡಿಕ್ಟ್ ಅವರ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ.

‘ಬೆನೆಡಿಕ್ಟ್ ಅವರು ಈ ಸಮಾಜಕ್ಕೆ ನೀಡಿರುವ ಕೊಡುಗೆ ಅನನ್ಯವಾದುದು. ಅವರು ಕ್ರಿಸ್ತನ ಬೋಧನೆಗಳನ್ನು ಪಸರಿಸುವುದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು’ ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಎಲ್‌ಎಸಿ ಏಕಪಕ್ಷೀಯ ಬದಲಾವಣೆ ಯತ್ನಕ್ಕೆ ಒಪ್ಪಿಗೆ ಇಲ್ಲ: ಜೈಶಂಕರ್



ನಿಕೋಸಿಯಾ (ಪಿಟಿಐ): ವಾಸ್ತವಿಕ ನಿಯಂತ್ರಣ ರೇಖೆಯನ್ನು (ಎಲ್‌ಎಸಿ) ಏಕಪಕ್ಷೀಯವಾಗಿ ಬದಲಾಯಿಸುವ ಚೀನಾದ ಯಾವುದೇ ಪ್ರಯತ್ನವನ್ನು ಭಾರತ ಒಪ್ಪುವುದಿಲ್ಲ. ರಾಷ್ಟ್ರೀಯ ಭದ್ರತೆ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಪ್ರತಿಪಾದಿಸಿದರು.

ಸೈಪ್ರಸ್‌ನಲ್ಲಿ ಶುಕ್ರವಾರ ಭಾರತೀಯ ಸಮುದಾಯ ಉದ್ದೇಶಿಸಿ ಮಾತನಾಡಿದ ಜೈಶಂಕರ್, ಭಾರತವನ್ನು ಸಂಧಾನಕ್ಕೆ ಒತ್ತಾಯಿಸಲು ಭಯೋತ್ಪಾದನೆಯನ್ನು ಸಾಧನವಾಗಿ ಬಳಸಲಾಗುವುದಿಲ್ಲ ಎಂದು ಹೇಳುವ ಮೂಲಕ ಪಾಕಿಸ್ತಾನದ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು.

ಭಾರತವು ತನ್ನ ಗಡಿಗಳಲ್ಲಿ ಹಲವು ಸವಾಲು ಹೊಂದಿದ್ದು, ಇದು ಕೋವಿಡ್ ಅವಧಿಯಲ್ಲಿ ತೀವ್ರಗೊಂಡಿದೆ ಎಂದರು.

ಶಾಂತಿಪಾಲಕರ ಕಾರ್ಯಕ್ಕೆ ಶ್ಲಾಘನೆ

ಲಾರ್ನಾಕಾ, ಸೈಪ್ರಸ್: ವಿಶ್ವ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಭಾರತೀಯ ಶಾಂತಿಪಾಲಕರ ಕಾರ್ಯವನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ಶ್ಲಾಘಿಸಿದರು.

ಜನರಲ್ ಕೆ.ಎಸ್. ತಿಮ್ಮಯ್ಯ ಅವರ ಹೆಸರಿಟ್ಟಿರುವ ಸೈಪ್ರಸ್‌ನ ಬೀದಿಗೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, ಭಾರತದ ಶಾಂತಿಪಾಲಕರ ಕೆಲಸವು ಮೆಚ್ಚುಗೆಗೆ ಪಾತ್ರವಾಗಿದೆ ಎಂದರು. ಭಾರತದ ಶಾಂತಿಪಾಲಕರು ನೀಡಿರುವ ಕೊಡುಗೆಯನ್ನು ಸೈಪ್ರಸ್ ವಿದೇಶಾಂಗ ಸಚಿವ ಅಯೋನಿಸ್ ಕಸೌಲಿಡಿಸ್ ಪ್ರಶಂಸಿಸಿದರು.

ಬಸ್‌ಗೆ ಎಸ್‌ಯುವಿ ಡಿಕ್ಕಿ– 9 ಮಂದಿ ಸಾವು

ನವಸಾರಿ: ಗುಜರಾತ್‌ನ ನವಸಾರಿ ಜಿಲ್ಲೆಯ ವೆಸ್ಮಾ ಗ್ರಾಮದ ಬಳಿಯ ಮುಂಬೈ–ಅಹಮದಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಎಸ್‌ಯುವಿ ಐಷಾರಾಮಿ ಬಸ್‌ಗೆ ಡಿಕ್ಕಿ ಹೊಡೆದ ಪರಿಣಾಮ 9 ಮಂದಿ ಮೃತಪಟ್ಟು, 29 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಲ್ಸಾದ್ ಕಡೆಗೆ ತೆರಳುತ್ತಿದ್ದ ಬಸ್‌ಗೆ ಶನಿವಾರ ಮುಂಜಾನೆ ಎದುರಿನಿಂದ ಬರುತ್ತಿದ್ದ ಎಸ್‌ಯುವಿ ರಸ್ತೆ ವಿಭಜಕವನ್ನು ದಾಟಿ ಬಂದು ಡಿಕ್ಕಿ ಹೊಡೆದಿದೆ. ಎಸ್‌ಯುವಿಯಲ್ಲಿ ಒಂಬತ್ತು ಮಂದಿ ಪ್ರಯಾಣಿಸುತ್ತಿದ್ದರು. ಅವರಲ್ಲಿ 8 ಮಂದಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, ಒಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ. ಬಸ್ ಪ್ರಯಾಣಿಕರೊಬ್ಬರು ಕೂಡ ಮೃತಪಟ್ಟಿದ್ದಾರೆ ಎಂದು ವಿವರಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ದುಃಖ ವ್ಯಕ್ತಪಡಿಸಿ, ಮೃತರ ಕುಟುಂಬದವರಿಗೆ ₹2 ಲಕ್ಷ ಹಾಗೂ ಗಾಯ ಗೊಂಡವರಿಗೆ ₹50 ಸಾವಿರ ಪರಿಹಾರ ಘೋಷಿಸಿದ್ದಾರೆ.

ನಾಪತ್ತೆಯಾಗಿದ್ದ ರಷ್ಯಾ ಪ್ರಜೆ ಪತ್ತೆ

ಭುವನೇಶ್ವರ: ಸಂಸದ ಸೇರಿ ರಷ್ಯಾದ ಇಬ್ಬರು ಪ್ರಜೆಗಳ ಅಸಹಜ ಸಾವಿನ ಬೆನ್ನಲ್ಲೇ ನಾಪತ್ತೆಯಾಗಿದ್ದ ಆ ದೇಶದ ಮತ್ತೊಬ್ಬ ಪ್ರಜೆ ಶನಿವಾರ ಪತ್ತೆಯಾಗಿದ್ದಾರೆ.

‘ಆ್ಯಂಡ್ರ್ಯೂ ಗ್ಲಗೊಲೇವ್ ಎಂಬುವರು ಇಲ್ಲಿನ ಮಾರುಕಟ್ಟೆ ಪ್ರದೇಶದಲ್ಲಿ ಪತ್ತೆಯಾಗಿದ್ದಾರೆ. ತಾವು ಉಕ್ರೇನ್ ಯುದ್ಧ ವಿರೋಧಿ ಹೋರಾಟಗಾರ ಎಂದು ಅವರು ಹೇಳಿಕೊಂಡಿದ್ದಾರೆ. ಸದ್ಯ ರೈಲ್ವೆ ಪೊಲೀಸರ (ಜಿಆರ್‌ಪಿ) ವಶದಲ್ಲಿದ್ದಾರೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಗ್ಲಗೊಲೇವ್ ಅವರ ವೀಸಾ ಅವಧಿ ಮುಗಿದಿದೆ. ಭಾರತದಲ್ಲಿ ಆಶ್ರಯ ಒದಗಿಸುವಂತೆ ಅವರು ವಿಶ್ವಸಂಸ್ಥೆಗೆ ಮನವಿ ಮಾಡಿದ್ದಾರೆ’ ಎಂದು ರೈಲು ನಿಲ್ದಾಣದ ಪೊಲೀಸ್ ಅಧಿಕಾರಿ ಜಯದೇವ್ ವಿಶ್ವಜಿತ್ ತಿಳಿಸಿದ್ದಾರೆ.

‘ವಿಚಾರಣೆ ನಡೆಸುವ ಸಲುವಾಗಿ ಅವರನ್ನು ಬಂಧಿಸಲಾಗಿದೆ. ಭಾರತದಲ್ಲಿ ಆಶ್ರಯ ಪಡೆಯಲು ಅವರಿಗೆ ಅವಕಾಶ ಇದೆಯೋ ಇಲ್ಲವೋ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

‘ಮಾಸ್ಕೊದವರಾದ ಗ್ಲಗೊಲೇವ್ 2016ರಿಂದಲೂ ಭಾರತದಲ್ಲಿ ಇದ್ದಾರೆ. ಇಲ್ಲಿ ತಂಗುವುದಕ್ಕೆ ಅವಕಾಶ ಮಾಡಿಕೊಡುವಂತೆ ಅವರು 2017ರಲ್ಲಿ ವಿಶ್ವಸಂಸ್ಥೆಗೆ ಮನವಿ ಮಾಡಿದ್ದಾರೆ. ಒಂದು ತಿಂಗಳ ಹಿಂದೆಯೇ ಅವರು ರೈಲ್ವೆ ನಿಲ್ದಾಣದಲ್ಲಿ ಪತ್ತೆಯಾಗಿದ್ದರು. ಆಗ ಅವರನ್ನು ವಿಚಾರಣೆಗೆ ಒಳಪಡಿಸಿ ಮಾಹಿತಿ ಪಡೆಯಲಾಗಿತ್ತು. ಅವರಿಗೆ ಇಲ್ಲಿ ಯಾವ ಮೂಲದಿಂದಲೂ ಆದಾಯವಿಲ್ಲ. ಹೀಗಾಗಿ ಕಳೆದ ತಿಂಗಳು ರೈಲು ನಿಲ್ದಾಣದ ಬಳಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವಿರೋಧಿ ಘೋಷಣೆಗಳಿದ್ದ ಫಲಕ ಹಿಡಿದು ಹಣಕಾಸಿನ ನೆರವು ಕೋರಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

ಅಯ್ಯಪ್ಪಸ್ವಾಮಿ ಕುರಿತು ಆಕ್ಷೇಪಾರ್ಹ ಹೇಳಿಕೆ: ಬಂಧನ

ಹೈದರಾಬಾದ್: ಅಯ್ಯಪ್ಪ ಸ್ವಾಮಿ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿ, ಭಕ್ತರ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದ್ದಾರೆ ಎಂಬ ಆರೋಪದ ಮೇಲೆ ನಾಸ್ತಿಕ ಬೈರಿ ನರೇಶ್ ಎಂಬುವವರನ್ನು ತೆಲಂಗಾಣ ಪೊಲೀಸರು ಬಂಧಿಸಿದ್ದಾರೆ.

ಕೊಡಂಗಲ್ ಪೊಲೀಸ್ ಠಾಣೆಯಲ್ಲಿ ಬೈರಿ ಅವರ ವಿರುದ್ಧ ಶುಕ್ರವಾರ ಮೊಕದ್ದಮೆ ದಾಖಲಿಸಲಾಗಿತ್ತು. ತಲೆಮರೆಸಿಕೊಂಡಿದ್ದ ಬೈರಿ ಅವರನ್ನು ಹನಮ್‌ಕೊಂಡ ಜಿಲ್ಲೆಯ ಕಮಲಾಪುರದಲ್ಲಿ ಶನಿವಾರ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಅವರನ್ನು 14 ದಿನಗಳ ಕಾಲ ನ್ಯಾಯಾಂಗ ವಶಕ್ಕೆ ನೀಡಲಾಗಿದೆ.

ನರೇಶ್ ಹೇಳಿಕೆ ಖಂಡಿಸಿ ಪ್ರತಿಭಟನೆ ಮತ್ತು ರಸ್ತೆ ತಡೆ ಶನಿವಾರವೂ ಮುಂದುವರಿಯಿತು.

ಬೀಜಿಂಗ್: ಜಾನಕಿ ವಲ್ಲಭ್ ನಿಧನ



ಜಾನಕಿ ವಲ್ಲಭ್

ಬೀಜಿಂಗ್ (ಪಿಟಿಐ): ಚೀನಿ ಸಾಹಿತ್ಯ, ಇತಿಹಾಸ ಸೇರಿದಂತೆ ಚೀನಾಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪರಿಣತರಾಗಿದ್ದ ಜಾನಕಿ ವಲ್ಲಭ್ (94) ಅವರು ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಜಾನಕಿ ವಲ್ಲಭ್, ಚೀನಾದಲ್ಲಿ ದೀರ್ಘಕಾಲ ವಾಸಿಸಲು ಅವಕಾಶ ಪಡೆದ ಮೊದಲ ಭಾರತೀಯ ಎನಿಸಿಕೊಂಡಿದ್ದರು.

ಅವರು ಉತ್ತರಾಖಂಡದ ಅಲ್ಮೋರಾ ಜಿಲ್ಲೆಯ ಡಾಲಾಕೋಟ್ ಗ್ರಾಮದಲ್ಲಿ ಜನಿಸಿದ್ದರು. ದೆಹಲಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು 1956ರಲ್ಲಿ ಹಿಂದಿ ಭಾಷಾ ತಜ್ಞರಾಗಿ ಚೀನಾಗೆ ತೆರಳಿದ್ದರು. ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾ (ಸಿಪಿಸಿ) ಸಂಸ್ಥಾಪಕ ಮಾವೊ ಝೆಡಾಂಗ್ ಅವರ ‘ಸೆಲೆಕ್ಟೆಡ್ ವರ್ಕ್ಸ್’ ಸೇರಿ ಹಲವು ಚೀನಿ ಲೇಖಕರ ಕೃತಿಗಳನ್ನು ಹಿಂದಿಗೆ ಭಾಷಾಂತರಿಸಿದ್ದಾರೆ.

1962ರ ಭಾರತ–ಚೀನಾ ಯುದ್ಧ ಸಂದರ್ಭದಲ್ಲಿ ಭಾರತಕ್ಕೆ ತೆರಳಿದ್ದ ವಲ್ಲಭ್, ‘ವೀರ ಅರ್ಜುನ್’, ‘ಸೈನಿಕ ಸಮಾಚಾರ’, ‘ನ್ಯೂ ಏಜ್’ ಮುಂತಾದ ಪ್ರಕಾಶನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. 1982ರಲ್ಲಿ ಮತ್ತೆ ಚೀನಾಗೆ ಮರಳಿದ್ದರು. ಅವರು ಬೀಜಿಂಗ್‌ನಲ್ಲಿ ವಿದೇಶಿ ಭಾಷಾ ಮುದ್ರಣಾಲಯ ಹಾಗೂ ರೇಡಿಯೊ ಚೀನಾದಲ್ಲಿ ಕಾರ್ಯನಿರ್ವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಉತ್ತರ ಕೊರಿಯಾದಿಂದ 3 ಕ್ಷಿಪಣಿ ಉಡಾವಣೆ

ಸೋಲ್ (ಎಪಿ): ಉತ್ತರ ಕೊರಿಯಾ ತನ್ನ ಕಡಲ ಗಡಿಯ ಪೂರ್ವಭಾಗದತ್ತ ಮೂರು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಶನಿವಾರ ಉಡಾವಣೆ ಮಾಡಿದೆ.

ದಕ್ಷಿಣ ಕೊರಿಯಾವು ಬಾಹ್ಯಾಕಾಶದ ಮೂಲಕವೂ ಕಣ್ಗಾವಲು ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಭಾಗವಾಗಿ ಶುಕ್ರವಾರ ಘನ ಇಂಧನ ಚಾಲಿತ ರಾಕೆಟ್ ಅನ್ನು ಉಡಾವಣೆ ಮಾಡಿತ್ತು. ಇದಕ್ಕೆ ಪ್ರತಿಯಾಗಿ ಉತ್ತರ ಕೊರಿಯಾ ಕ್ಷಿಪಣಿಗಳನ್ನು ಉಡಾಯಿಸುವ ಮೂಲಕ ತನ್ನ ಶಸ್ತ್ರಾಸ್ತ್ರ ಸಾಮರ್ಥ್ಯವನ್ನು ಪ್ರದರ್ಶಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ತನ್ನ ವಾಯುಪ್ರದೇಶದಲ್ಲಿ ಉತ್ತರ ಕೊರಿಯಾದ ಐದು ಡ್ರೋನ್‌ಗಳು ಹಾರಾಟ ನಡೆಸಿವೆ ಎಂದು ದಕ್ಷಿಣ ಕೊರಿಯಾ ಕಳೆದ ವಾರ ದೂರಿತ್ತು. ಈ ಬೆಳವಣಿಗೆ ಉಭಯ ದೇಶಗಳ ನಡುವೆ ಮತ್ತೊಂದು ಸುತ್ತಿನ ಸಂಘರ್ಷಕ್ಕೆ ಕಾರಣವಾಗಿದೆ ಎಂದೂ ಹೇಳಲಾಗುತ್ತಿದೆ.

ಕೋವಿಡ್: ಮಾಹಿತಿ ಹಂಚಿಕೊಳ್ಳಲು ಚೀನಾಗೆ ಒತ್ತಾಯ

ವಿಶ್ವಸಂಸ್ಥೆ: ಪ್ರತಿನಿತ್ಯದ ಕೋವಿಡ್ ಪ್ರಕರಣಗಳ ನಿರ್ದಿಷ್ಟ ಮಾಹಿತಿ ಹಂಚಿಕೊಳ್ಳುವಂತೆ ಚೀನಾಗೆ ವಿಶ್ವ ಆರೋಗ್ಯ ಸಂಸ್ಥೆ ಪುನಃ ಒತ್ತಾಯಿಸಿದೆ. ರಾಷ್ಟ್ರದಲ್ಲಿನ ಪ್ರಸ್ತುತ ಕೋವಿಡ್ ಸನ್ನಿವೇಶದ ಕುರಿತು ಮಾಹಿತಿ ನೀಡುವಂತೆ ಸೂಚಿಸಿದೆ.

‘ಶೂನ್ಯ ಕೋವಿಡ್’ ಕಠಿಣ ನಿಯಮವನ್ನು ಚೀನಾ ಸಡಿಲಿಸಿದ ಬೆನ್ನಲ್ಲೇ ಕೊರೊನಾ ಸೋಂಕು ಪ್ರಕರಣಗಳು ಹೆಚ್ಚಿವೆ. ಹೀಗಾಗಿ, ಆಸ್ಪತ್ರೆಗೆ ದಾಖಲಾಗಿರುವವರ ಸಂಖ್ಯೆ, ಸಾವುಗಳು ಮತ್ತು ಲಸಿಕಾಕರಣ, ಸೋಂಕು ನಿಯಂತ್ರಣಕ್ಕೆ ತೆಗೆದುಕೊಂಡಿರುವ ಕ್ರಮಗಳ ಮಾಹಿತಿ ನೀಡುವಂತೆ ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಪ್ಯಾಲೆಸ್ಟೀನ್: ಮತದಾನದಿಂದ ಭಾರತ ದೂರ

ವಿಶ್ವಸಂಸ್ಥೆ (ಪಿಟಿಐ): ಪ್ಯಾಲೆಸ್ಟೀನ್‌ನ ಕೆಲ ಪ್ರದೇಶಗಳನ್ನು ಇಸ್ರೇಲ್ ಅತಿಕ್ರಮಣ ಮಾಡಿಕೊಂಡಿದ್ದರಿಂದ ಆಗಬಹುದಾದ ಕಾನೂನಾತ್ಮಕ ಪರಿಣಾಮಗಳ ಕುರಿತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಡೆದ ಮತದಾನದಿಂದ ಭಾರತ ದೂರ ಉಳಿದಿದೆ.

‘ಇಸ್ರೇಲ್, ಪ್ಯಾಲೆಸ್ಟೀನ್ ಜನರ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿದೆ’ ಎಂಬ ನಿರ್ಣಯವನ್ನು ಸಾಮಾನ್ಯ ಸಭೆಯಲ್ಲಿ ಶುಕ್ರವಾರ ಮತಕ್ಕೆ ಹಾಕಲಾಗಿತ್ತು. 87 ದೇಶಗಳು ನಿರ್ಣಯದ ಪರವಾಗಿ ಮತ್ತು 26 ದೇಶಗಳು ನಿರ್ಣಯ ವಿರೋಧಿಸಿ ಮತ ಚಲಾಯಿಸಿದವು. ಭಾರತ ಸೇರಿದಂತೆ 53 ದೇಶಗಳು ತಟಸ್ಥವಾಗಿದ್ದವು.

ನಂತರ, ಈ ಬಗ್ಗೆ ಅಂತರರಾಷ್ಟ್ರೀಯ ನ್ಯಾಯಾಲಯದ ಅಭಿಪ್ರಾಯ ಕೇಳಲು ವಿಶ್ವಸಂಸ್ಥೆ ನಿರ್ಧರಿಸಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್

Joint Development

Out-Station

JOINT DEVELOPMENT of Layout JD Land required in Tumakuru. Contact. 9845974129

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Out-Station

40X60 NORTH Facing Site Sale, Chalukyanagar, Gopishettykoppa, Shimoga, 3,000/- Sqft. Genuine Buyers Contact: 9482635840.

ವೈವಾಹಿಕ

Brides Wanted

Muslim

DUBAI BASED Renowned Business class Sunni Muslim Family seeking an alliance for the early marriage of Their only son MBA /5'10'.Only Serious Marriage seekers may contact (080-69074951)

17TH AUGUST 1995 born Sunni Muslim boy BE/ MS Working/settled in USA, Texas Looking for an Educated Bride. Parents Govt. Employee (080-69074951)

Grooms Wanted

Hindu

ಬ್ರಾಹ್ಮಣ/ಲಿಂಗಾಯತ್ ವಧು, ವಯಸ್ಸು 26, SSLC/ವಯಸ್ಸು 28, PUC/ ವಯಸ್ಸು 34, SSLC ಕಲಿತಿರುವ ವಧುವಿಗೆ ವರ ಬೇಕಾಗಿದೆ. 9535455743.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Book Your Classifieds Ads
Online
Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸ್ಪಷ್ಟ ದೃಷ್ಟಿಕೋನ ಇದ್ದರೆ ಬಿಜೆಪಿ ಸೋಲಿಸಲು ಸಾಧ್ಯ; ಪ್ರತಿಪಕ್ಷಗಳ ಒಗ್ಗಟ್ಟಿಗೆ ರಾಹುಲ್ ಗಾಂಧಿ ಪ್ರತಿಪಾದನೆ

‘ದೇಶದಲ್ಲಿ ಬಿಜೆಪಿಗೆ ದೊಡ್ಡಮಟ್ಟದ ವಿರೋಧ’

ನವದೆಹಲಿ (ಪಿಟಿಐ): ದೇಶದಲ್ಲಿ ಬಿಜೆಪಿ ಬಗ್ಗೆ ದೊಡ್ಡ ಮಟ್ಟದ ವಿರೋಧವಿದ್ದು, ಪ್ರತಿಪಕ್ಷಗಳು ಪರ್ಯಾಯ ದೃಷ್ಟಿಕೋನ ಇರಿಸಿಕೊಂಡು ಒಗ್ಗಟ್ಟು ತೋರಿದರೆ, 2024ರ ಲೋಕಸಭಾ ಚುನಾವಣೆಯನ್ನು ಗೆಲ್ಲುವುದು ಆಡಳಿತ ಪಕ್ಷಕ್ಕೆ ಕಷ್ಟವಾಗಲಿದೆ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಶನಿವಾರ ಹೇಳಿದ್ದಾರೆ.

ಇಲ್ಲಿನ ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಪಕ್ಷಗಳು ಈ ದಿಸೆಯಲ್ಲಿ ಪರಸ್ಪರ ಗೌರವ ತೋರುವುದು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ‘ಪ್ರತಿಪಕ್ಷಗಳ ನಡುವೆ ಸರಿಯಾದ ಹೊಂದಾಣಿಕೆ ಅಗತ್ಯ. ಜನರ ಬಳಿಗೆ ಸುಮ್ಮನೆ ಹೋಗುವುದಕ್ಕಿಂತ, ಸ್ಪಷ್ಟವಾದ ದೃಷ್ಟಿಕೋನ ಇಟ್ಟುಕೊಂಡು ಹೋದರೆ ಒಳ್ಳೆಯದು’ ಎಂದರು.

‘ದೇಶದ ಸಾಂಸ್ಥಿಕ ಚೌಕಟ್ಟು ಕೇವಲ ಒಂದು ಸಿದ್ಧಾಂತದ ಕೈಯಲ್ಲಿದ್ದು, ಅದು ದೇಶದ ಇಡೀ ರಾಜಕೀಯ ವಲಯದಲ್ಲಿ ಮೇಲುಗೈ ಸಾಧಿಸಿದೆ. ಇದನ್ನು ಸೋಲಿಸಬೇಕಾದರೆ, ಮತ್ತೊಂದು ಸ್ಪಷ್ಟ ದೃಷ್ಟಿಕೋನ ಇರುವ ಸಿದ್ಧಾಂತದ ಅಗತ್ಯವಿದೆ’ ಎಂದರು.

ಪ್ರತಿಪಕ್ಷಗಳು ‘ಭಾರತ್ ಜೋಡೊ’ ಯಾತ್ರೆಯ ಜೊತೆಗಿವೆ. ಆದರೆ ಇಂದಿನ ವಾತಾವರಣದಲ್ಲಿ ರಾಜಕೀಯ ಒತ್ತಡಗಳ ಕಾರಣಕ್ಕೆ ಕೆಲವು ಪಕ್ಷಗಳಿಗೆ ಯಾತ್ರೆಯ ಜೊತೆ ಗುರುತಿಸಿಕೊಳ್ಳಲು ಆಗುತ್ತಿಲ್ಲ. ಹಿಂಸೆ, ದ್ವೇಷಮುಕ್ತ ಭಾರತವನ್ನು ಕಟ್ಟುವ ಹಾಗೂ ಒಗ್ಗೂಡಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ಯಾತ್ರೆಯು ಎಲ್ಲರಿಗೂ ಮುಕ್ತವಾಗಿದೆ’ ಎಂದು ರಾಹುಲ್ ಹೇಳಿದರು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ದೆಹಲಿಯಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದರು. ಮುಖಂಡ ಜೈರಾಮ್ ರಮೇಶ್ ಇದ್ದರು–ಪಿಟಿಐ ಚಿತ್ರ

> **ಬಿಜೆಪಿ, ಆರ್‌ಎಸ್‌ಎಸ್ ಅನ್ನು ನಾನು ಗುರು ಎಂದು ಪರಿಗಣಿಸುತ್ತೇನೆ. ನನ್ನನ್ನು ಟೀಕಿಸಿದ್ದರಿಂದ, ನನ್ನಲ್ಲಿ ಸೈದ್ಧಾಂತಿಕವಾಗಿ ಸುಧಾರಣೆ ಸಾಧ್ಯವಾಗುತ್ತಿದೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

> **ರಾಹುಲ್ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಕಾಂಗ್ರೆಸ್ ಬಿಂಬಿಸಿದರೆ ಅಡ್ಡಿಯಿಲ್ಲ. ಆ ಹುದ್ದೆಗೆ ಅವರು ಹಕ್ಕುದಾರರಲ್ಲವಾದರೂ, ವಿಪಕ್ಷಗಳ ಒಗ್ಗಟ್ಟಿಗೆ ಬದ್ಧತೆ ತೋರಿದ್ದಾರೆ**
> **ನಿತೀಶ್ ಕುಮಾರ್,** ಬಿಹಾರ ಮುಖ್ಯಮಂತ್ರಿ

‘ನಾನು ಪ್ರತಿಪಕ್ಷಗಳನ್ನು ಹಾಗೂ ಪ್ರತಿಪಕ್ಷಗಳ ನಾಯಕರನ್ನು ಹೆಚ್ಚು ಗೌರವಿಸುತ್ತೇನೆ. ಆದರೆ ಸಮಾಜವಾದಿ ಪಕ್ಷವನ್ನು ಗಮನಿಸಿದರೆ, ಅದಕ್ಕೆ ರಾಷ್ಟ್ರೀಯ ಸಿದ್ಧಾಂತ ಇಲ್ಲ ಎಂಬುದು ಯಾರಿಗಾದರೂ ಗೊತ್ತಾಗುತ್ತದೆ. ಉತ್ತರ ಪ್ರದೇಶದಲ್ಲಿ ಅದು ಉತ್ತಮ ಸ್ಥಿತಿಯಲ್ಲಿದ್ದರೂ, ಕರ್ನಾಟಕ, ಕೇರಳ, ಬಿಹಾರದಲ್ಲಿ ಆ ಪಕ್ಷದ ಚಿಂತನೆಗಳು ಕೆಲಸ ಮಾಡಲಾರವು’ ಎಂದರು.

ಆದರೆ, ಪ್ರತಿಪಕ್ಷಗಳ ಕೆಲವು ಸಿದ್ಧಾಂತಗಳಲ್ಲಿ ಸಾಮ್ಯತೆಯಿದೆ. ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್, ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಮೊದಲಾದವರು ದ್ವೇಷಮಯ ಭಾರತವನ್ನು ಬಯಸುತ್ತಿಲ್ಲ. ಪ್ರೀತಿಯ ಭಾರತವೇ ಎಲ್ಲರ ಆದ್ಯತೆಯಾಗಿದೆ. ಪ್ರತಿಪಕ್ಷಗಳಿಗೆ ಕೇಂದ್ರೀಕೃತ ಸೈದ್ಧಾಂತಿಕ ಚೌಕಟ್ಟು ಅಗತ್ಯವಿದ್ದು, ಕಾಂಗ್ರೆಸ್ ಪಕ್ಷ ಮಾತ್ರ ಇದನ್ನು ನೀಡಬಲ್ಲದು. ಪ್ರತಿಪಕ್ಷಗಳ ಮುಖಂಡರ ಜತೆ ಆರೋಗ್ಯಕರ ಸಂಬಂಧ ಇರಿಸಿಕೊಳ್ಳುವುದು ಹಾಗೂ ಅವರನ್ನು ಗೌರವಿಸುವುದು ನನಗೆ ಮುಖ್ಯ. ಮುಖಂಡರ ನಡುವೆ ಪರಸ್ಪರ ಗೌರವಿಸುವ ಗುಣ ಅಗತ್ಯ’ ಎಂದು ರಾಹುಲ್ ಪ್ರತಿಪಾದಿಸಿದರು.

ರಾಹುಲ್ ಕೆಲವು ಚಿಂತನೆಗಳನ್ನು ಹೊರಗೆಡವಿದರು. ‘ಭಾರತವು ಉತ್ಪಾದಕ ರಾಷ್ಟ್ರವಾಗಿ ಹೊರಹೊಮ್ಮಬೇಕು. ಮಕ್ಕಳು ತಮ್ಮ ಕನಸಿಗೆ ರೆಕ್ಕೆ ಕಟ್ಟುವಂತಹ ಶಿಕ್ಷಣ ನೀತಿ ಅಗತ್ಯವಿದೆ. ವೈದ್ಯಕೀಯ, ಎಂಜಿನಿಯರಿಂಗ್, ನಾಗರಿಕ ಸೇವೆ, ಕಾನೂನು ವೃತ್ತಿಗಳಲ್ಲದೇ, ಅದರಾಚೆಗೂ ಅವರು ನೋಡುವಂತಹ ನೀತಿಯನ್ನು ರೂಪಿಸಬೇಕಿದೆ’ ಎಂದರು.

‘ಸೇನೆಯ ಹಿಂದೆ ಅವಿತು ಹೇಡಿಗಳಾಗಬೇಡಿ’

‘ನಾನು ಸರ್ಕಾರದ ಬಗ್ಗೆ ಮಾತನಾಡುವಾಗ, ಆ ಬಗ್ಗೆಯೇ ಮಾತನಾಡುತ್ತೇನೆ, ಸೇನೆಯ ಬಗ್ಗೆ ಅಲ್ಲ. ಸರ್ಕಾರವು ಸೇನೆ, ನೌಕಾಪಡೆ ಅಥವಾ ವಾಯುಪಡೆಯ ಹಿಂದೆ ಅವಿತುಕೊಳ್ಳಬಾರದು. ಅದು ಹೇಡಿತನ’ ಎಂದು ರಾಹುಲ್ ಗಾಂಧಿ ಅವರು ಕೇಂದ್ರದ ವಿರುದ್ಧ ಹರಿಹಾಯ್ದಿದ್ದಾರೆ.

‘ಚೀನಾ ಹಾಗೂ ಪಾಕಿಸ್ತಾನಗಳನ್ನು ಒಂದುಗೂಡಿಸಿದ್ದೇ ಮೋದಿ ಸರ್ಕಾರದ ದೊಡ್ಡ ತಪ್ಪು. ಕಾಂಗ್ರೆಸ್ ಅವಧಿಯ ವಿದೇಶಾಂಗ ನೀತಿಯಲ್ಲಿ ಪಾಕಿಸ್ತಾನ ಹಾಗೂ ಚೀನಾಗಳು ಪ್ರತ್ಯೇಕವಾಗಿ ಪರಿಗಣಿತವಾಗಿದ್ದವು. ಅವು ಒಂದಾಗಲು ನಾವು ಅವಕಾಶ ನೀಡಿರಲಿಲ್ಲ. ಆದರೆ, ಈಗ ಚೀನಾ ಮತ್ತು ಪಾಕಿಸ್ತಾನ ಒಂದಾಗಿವೆ, ಇದು ಅಪಾಯಕಾರಿ. ಸರ್ಕಾರವು ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಿಸದ ಕಾರಣ ಹೀಗಾಗಿದೆ’ ಎಂದು ರಾಹುಲ್ ಗಾಂಧಿ ಅವರು ವಿವರಿಸಿದರು.

‘ಚೀನಾ ಜೊತೆ ಗಡಿಯಲ್ಲಿ ನಡೆಯುತ್ತಿರುವ ಸಂಘರ್ಷಗಳ ಸತ್ಯಾಂಶವನ್ನು ಮುಚ್ಚಿಡಬೇಡಿ. ಗಡಿಯಲ್ಲಿ ಚೀನಾ ಸೈನಿಕರು ಒಳನುಸುಳಿರುವ ಪ್ರದೇಶವು ಭಾರತಕ್ಕೆ ಸೇರಿದ್ದು ಎಂದು ಚೀನಾಕ್ಕೆ ಸ್ಪಷ್ಟದನಿಯಲ್ಲಿ ಹೇಳಿ’ ಎಂದು ಅವರು ಪ್ರಧಾನಿಗೆ ಒತ್ತಾಯಿಸಿದ್ದಾರೆ.

ಗಡಿಯಲ್ಲಿ ಮಾಡಿರುವ ತಪ್ಪುಗಳನ್ನು ಸರ್ಕಾರ ಒಪ್ಪಿಕೊಂಡು, ಸರಿಪಡಿಸಿಕೊಳ್ಳಲು ಮುಂದಾದರೆ ಪ್ರತಿಪಕ್ಷಗಳು ಬೆಂಬಲಕ್ಕೆ ನಿಲ್ಲಲಿವೆ ಎಂದು ಅವರು ಹೇಳಿದ್ದಾರೆ.

ಶಿಷ್ಟಾಚಾರ: ಸರ್ಕಾರದ ವಿರುದ್ಧ ಟೀಕೆ

ಭಾರತ್ ಜೋಡೊ ಯಾತ್ರೆಯಲ್ಲಿ ಶಿಷ್ಟಾಚಾರ ಪಾಲನೆ ವಿಚಾರಕ್ಕೆ ಸಂಬಂಧಿಸಿ ಕೇಂದ್ರವನ್ನು ತರಾಟೆಗೆ ತೆಗೆದುಕೊಂಡಿರುವ ರಾಹುಲ್ ಗಾಂಧಿ, ‘ಬಿಜೆಪಿ ಮುಖಂಡರಿಗೆ ಒಂದು, ನನಗೊಂದು ರೀತಿಯ ಶಿಷ್ಟಾಚಾರ ಅನ್ವಯಿಸುವುದು ಏಕೆ’ ಎಂದು ಪ್ರಶ್ನಿಸಿದ್ದಾರೆ.

‘ಗುಂಡುನಿರೋಧಕ ವಾಹನದಲ್ಲಿ ಕುಳಿತು ನಾನು ಭಾರತ್ ಜೋಡೊ ಯಾತ್ರೆ ಮಾಡಬೇಕು ಎಂಬುದು ಸರ್ಕಾರದ ಬಯಕೆಯಾಗಿತ್ತು. ಆದರೆ ಅದು ಸಾಧ್ಯವಾಗದ ವಿಚಾರ. ಶಿಷ್ಟಾಚಾರ ಪಾಲಿಸಬೇಕು ಎಂದು ಹೇಳುವವರು ಅದನ್ನು ಪಾಲಿಸುತ್ತಿಲ್ಲ. ಗುಂಡುನಿರೋಧಕ ವಾಹನದಲ್ಲಿ ತೆರಳುವ ಬಿಜೆಪಿ ನಾಯಕರು, ವಾಹನದಿಂದ ಇಳಿಯುವುದಿಲ್ಲವೇ? ಬಿಜೆಪಿ ಮುಖಂಡರು ತೆರೆದ ವಾಹನದಲ್ಲಿ ರೋಡ್‌ಷೋ ನಡೆಸುವುದಿಲ್ಲವೇ? ಇವೆಲ್ಲವೂ ಶಿಷ್ಟಾಚಾರ ಉಲ್ಲಂಘನೆಯಲ್ಲವೇ? ಹೀಗಿದ್ದೂ ನನಗೆ ಮಾತ್ರ ಪತ್ರ ಬರೆಯುವುದು ಏಕೆ ಎಂದು ರಾಹುಲ್ ಪ್ರಶ್ನಿಸಿದ್ದಾರೆ. ರಾಹುಲ್ ಅವರು 2020ರಿಂದ ಇಲ್ಲಿಯವರೆಗೆ 133 ಬಾರಿ ಶಿಷ್ಟಾಚಾರ ಉಲ್ಲಂಘಿಸಿದ್ದಾರೆ ಎಂದು ಹೇಳಿದ್ದ ಕೇಂದ್ರ ಸರ್ಕಾರಕ್ಕೆ ರಾಹುಲ್ ಈ ಪ್ರತಿಕ್ರಿಯೆ ನೀಡಿದ್ದಾರೆ.

ಇಸ್ರೊ: ಈ ವರ್ಷ ಹಲವು ಆವಿಷ್ಕಾರ

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಈ ವರ್ಷ ಹಲವು ವೈಜ್ಞಾನಿಕ ಆವಿಷ್ಕಾರಗಳನ್ನು ಕೈಗೊಳ್ಳುವತ್ತ ಗಮನ ಹರಿಸಲಿದೆ.

ಗಗನಯಾನ ಯೋಜನೆ ಸಂಬಂಧ ಹಲವು ಕಾರ್ಯಾಚರಣೆಗಳನ್ನು ಪರೀಕ್ಷಾರ್ಥವಾಗಿ ನಡೆಸಲು ಇಸ್ರೊ ನಿರ್ಧರಿಸಿದ್ದು, ಇದಕ್ಕೆ 2023 ಸಾಕ್ಷಿಯಾಗಲಿದೆ. ಸೂರ್ಯನಲ್ಲಿಗೆ ಒಂದು ಉಪಗ್ರಹ ಹಾಗೂ ಚಂದ್ರನಲ್ಲಿಗೆ ನೌಕೆ ರವಾನಿಸುವ ಯೋಜನೆಯನ್ನೂ ಇಸ್ರೊ ಹೊಂದಿದೆ.

ಕರ್ನಾಟಕದ ಚಿತ್ರದುರ್ಗದಲ್ಲಿರುವ ಬಾಹ್ಯಾಕಾಶ ಪರೀಕ್ಷಾ ವಲಯದಿಂದ ಈ ವರ್ಷದ ಆರಂಭದಲ್ಲಿ ಮರುಬಳಕೆ ಮಾಡಬಹುದಾದಂತಹ ಉಡ್ಡಯನ ವಾಹನದ ಮೊದಲ ರನ್‌ವೇ ಲ್ಯಾಂಡಿಂಗ್ ಪರೀಕ್ಷೆ (ಆರ್‌ಎಲ್‌ವಿ-ಎಲ್‌ಇಎಕ್ಸ್) ನಡೆಸುವುದಾಗಿ ಪ್ರಧಾನ ಮಂತ್ರಿಗಳ ಕಚೇರಿಯ (ಪಿಎಂಒ) ರಾಜ್ಯ ಸಚಿವ ಜಿತೇಂದ್ರ ಸಿಂಗ್ ಡಿಸೆಂಬರ್‌ನಲ್ಲಿ ಲೋಕಸಭೆಗೆ ತಿಳಿಸಿದ್ದಾರೆ.

ಭಾರತದ ಹಲವು ನವೋದ್ಯಮಗಳೂ ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳನ್ನು ನಡೆಸುವ ಗುರಿ ಹೊಂದಿವೆ.

‘ನಾವು ಒಟ್ಟು ಆರು ಹೈಪರ್‌ಸ್ಪೆಕ್ಟ್ರಲ್ ಇಮೇಜರಿ ಉಪಗ್ರಹಗಳನ್ನು ಅಭಿವೃದ್ಧಿಪಡಿಸುತ್ತಿದ್ದು ಇವು 2023ರಲ್ಲಿ ಉಡಾವಣೆಗೆ ಸಿದ್ಧಗೊಳ್ಳಲಿವೆ’ ಎಂದು ಪಿಕ್ಸೆಲ್ ಕಂಪನಿಯ ಸಹ ಸ್ಥಾಪಕ ಮತ್ತು ಸಿಇಒ ಅವೈಸ್ ಅಹ್ಮದ್ ಹೇಳಿದ್ದಾರೆ.

ಖಾಸಗಿಯಾಗಿ ರಾಕೆಟ್ (ವಿಕ್ರಂ-ಎಸ್) ಅಭಿವೃದ್ಧಿಪಡಿಸಿ ಉಡಾವಣೆ ಮಾಡಿರುವ ದೇಶದ ಮೊದಲ ಬಾಹ್ಯಾಕಾಶ ನವೋದ್ಯಮ ಸಂಸ್ಥೆ ‘ಸ್ಕೈರೂಟ್ ಏರೋಸ್ಪೇಸ್’, ಈ ವರ್ಷ ಉಪಗ್ರಹವೊಂದನ್ನು ಉಡಾವಣೆ ಮಾಡುವ ಯೋಜನೆ ಹೊಂದಿದೆ.

ಉಸಿರಾಟ ಸಮಸ್ಯೆ, ಶೀತಜ್ವರ: ಪ್ರತಿವಾರ ವರದಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜನವರಿ ತಿಂಗಳಿನಲ್ಲಿ ಕೋವಿಡ್ ಪ್ರಕರಣಗಳು ಏರಿಕೆಯಾಗಬಹುದು ಎಂದು ಅಂದಾಜಿಸಿರುವ ಕೇಂದ್ರ, ತೀವ್ರ ಉಸಿರಾಟ ಸಮಸ್ಯೆ (ಎಸ್‌ಎಆರ್‌ಐ) ಮತ್ತು ಶೀತಜ್ವರ ಮಾದರಿಯ ಆರೋಗ್ಯ ಸಮಸ್ಯೆಗೆ (ಐಎಲ್‌ಐ) ಸಂಬಂಧಿಸಿದ ಪ್ರಕರಣಗಳನ್ನು ಪ್ರತೀ ವಾರವೂ ವರದಿ ಮಾಡುವಂತೆ ಎಲ್ಲ ರಾಜ್ಯಗಳಿಗೆ ಸೂಚನೆ ನೀಡಿದೆ. ಎಸ್‌ಎಆರ್‌ಐ ಹಾಗೂ ಐಎಲ್‌ಐಗಳಿಂದ ಕೋವಿಡ್ ಪ್ರಕರಣಗಳ ಏರಿಕೆಯ ಆರಂಭಿಕ ಸೂಚನೆಗಳನ್ನು ಪತ್ತೆಮಾಡಬಹುದು.

ದೇಶದಲ್ಲಿ ಕೋವಿಡ್ ಔಷಧಗಳು ಹಾಗೂ ವೈದ್ಯಕೀಯ ಸಲಕರಣೆಗಳ ಕೊರತೆಯಾಗಂತೆ ನಿಗಾ ವಹಿಸುವಂತೆ ವಾಣಿಜ್ಯ ಸಚಿವಾಲಯಕ್ಕೆ ಸೂಚನೆ ನೀಡಲಾಗಿದೆ. ಪ್ರಧಾನಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಪಿ.ಕೆ. ಮಿಶ್ರಾ ಅವರ ನೇತೃತ್ವದಲ್ಲಿ ಕೋವಿಡ್-19 ಕುರಿತ ಉನ್ನತ ಮಟ್ಟದ ಪರಿಶೀಲನಾ ಸಭೆಯಲ್ಲಿ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಕಳೆದ 10 ದಿನಗಳಲ್ಲಿ ನಡೆದ ನಾಲ್ಕನೇ ಉನ್ನತ ಮಟ್ಟದ ಸಭೆ ಇದಾಗಿದೆ.

ವೈರಾಣು ಸಂರಚನೆ ವಿಶ್ಲೇಷಣೆಗೆ ಹೆಚ್ಚು ಮಾದರಿಗಳನ್ನು ಕಳುಹಿಸುವಂತೆ ಈ ಹಿಂದೆ ಸೂಚನೆ ನೀಡಲಾಗಿತ್ತು.

‘ಕೆಲವರಿಗಷ್ಟೇ ಮೂಲಭೂತ ಹಕ್ಕು ಸೀಮಿತ’

ಶ್ರೀನಗರ (ಪಿಟಿಐ): ‘ಮೂಲಭೂತ ಹಕ್ಕುಗಳು ಭಾರತದಲ್ಲೀಗ ರಾಜಕೀಯ, ಧಾರ್ಮಿಕ ವಿಷಯಗಳಲ್ಲಿ ಸರ್ಕಾರದ ಮಾತು ಕೇಳುವವರಿಗಷ್ಟೇ ಇರುವ ‘ವಿಲಾಸಿತನದ ಹಕ್ಕುಗಳಾಗಿವೆ’ ಎಂದು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಅಭಿಪ್ರಾಯಪಟ್ಟಿದ್ದಾರೆ.

ಶನಿವಾರ ಈ ಸಂಬಂಧ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿಗೆ ಪತ್ರ ಬರೆದಿರುವ ಅವರು, 2019ರಲ್ಲಿ ಸಂವಿಧಾನದ 370 ವಿಧಿ ಅನ್ನು ರದ್ದುಪಡಿಸಿದ ಬಳಿಕ ರಾಜ್ಯದಲ್ಲಿ ವಿಶ್ವಾಸದ ಕೊರತೆ ಮತ್ತು ಹಕ್ಕುಗಳ ಕಸಿಯುವಿಕೆ ಹೆಚ್ಚಿದೆ ಎಂದಿದ್ದಾರೆ.

ದೇಶದಲ್ಲಿ ಈಗಿರುವ ಸ್ಥಿತಿ ಕುರಿತಂತೆ ಆತಂಕ, ಕಳವಳದಿಂದಲೇ ಪತ್ರ ಬರೆಯುತ್ತಿದ್ದೇನೆ. ಸಾಮಾನ್ಯವಾದ ಪ್ರಕರಣದಲ್ಲಿಯೂ ಕೆಳಹಂತದ ಕೋರ್ಟ್‌ಗಳು ಜಾಮೀನು ನಿರಾಕರಿಸುತ್ತಿವೆ ಎಂಬ ಇತ್ತೀಚಿನ ನಿಮ್ಮ ಹೇಳಿಕೆಯು ಪತ್ರಿಕೆಗಳಲ್ಲಿ ಕೇವಲ ಚಿಕ್ಕ ಸುದ್ದಿಯಾಗುವ ಬದಲಿಗೆ ಒಂದು ನಿರ್ದೇಶನವಾಗಿ ಜಾರಿಗೆ ಬರಬೇಕು ಎಂದು ಪ್ರತಿಪಾದಿಸಿದ್ದಾರೆ. ಪತ್ರವನ್ನು ಅವರು ಟ್ವಿಟರ್‌ನಲ್ಲಿಯೂ ಹಂಚಿಕೊಂಡಿದ್ದಾರೆ.

ಆಂಧ್ರಪ್ರದೇಶ ನ್ಯಾಯಾಂಗ ಅಕಾಡೆಮಿ ಉದ್ಘಾಟನೆ ಸಂದರ್ಭದಲ್ಲಿ ಶುಕ್ರವಾರ ಮಾತನಾಡಿದ್ದ ಸಿಜೆಐ, ದಾಖಲೆಗಳ ಕೊರತೆ, ವಕೀಲರ ಅಲಭ್ಯತೆ ಕಾರಣದಿಂದಲೇ ದೇಶದಲ್ಲಿ ಸುಮಾರು 77 ಲಕ್ಷ ವ್ಯಾಜ್ಯಗಳು ಬಾಕಿ ಉಳಿದಿವೆ ಎಂದು ಹೇಳಿದ್ದರು.

2019ರ ನಂತರ ಜಮ್ಮು ಕಾಶ್ಮೀರದ ಪ್ರತಿಯೊಬ್ಬ ಪ್ರಜೆಯ ಪ್ರಾಥಮಿಕ ಹಕ್ಕುಗಳನ್ನು ಕಸಿಯಲಾಗಿದೆ. ನಾಗರಿಕರ ಪಾಸ್‌ಪೋರ್ಟ್ ತಡೆಹಿಡಿಯಲಾಗಿದೆ. ಪತ್ರಕರ್ತರು ಗಡಿದಾಟದಂತೆ ನಿರ್ಬಂಧ ಹೇರಲಾಗುತ್ತಿದೆ, ಜೈಲಿಗೆ ಹಾಕಲಾಗುತ್ತಿದೆ ಎಂದು ಹೇಳಿದ್ದಾರೆ. ಸಿಜೆಐ ಅವರ ಮಧ್ಯಪ್ರವೇಶವು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಘನತೆಯ ಬದುಕು ತಂದುಕೊಡಬಲ್ಲದು ಎಂದು ಆಶಿಸಿದ್ದಾರೆ.

ಹೊಸ ವರ್ಷ

ಹೊಸ ವರ್ಷಾಚರಣೆ ಅಂಗವಾಗಿ ದೆಹಲಿಯ ಇಂಡಿಯಾ ಗೇಟ್ ಎದುರು ಶನಿವಾರ ರಾತ್ರಿ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮ –ಪಿಟಿಐ ಚಿತ್ರ

ಆರ್‌ಎಸ್‌ಎಸ್ ಕಚೇರಿ ಸ್ಫೋಟಿಸುವ ಬೆದರಿಕೆ: ಬಿಗಿ ಬಂದೋಬಸ್ತ್

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರದಲ್ಲಿರುವ ಆರ್‌ಎಸ್‌ಎಸ್ ಕೇಂದ್ರ ಕಚೇರಿಯನ್ನು ಬಾಂಬ್ ಇಟ್ಟು ಸ್ಫೋಟಿಸುವುದಾಗಿ ಅಜ್ಞಾತ ವ್ಯಕ್ತಿಯೊಬ್ಬರು ಶನಿವಾರ ಕರೆ ಮಾಡಿದ ಕಾರಣ ಅಲ್ಲಿ ಭದ್ರತಾವ್ಯವಸ್ಥೆಯನ್ನು ಬಿಗಿಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಪೊಲೀಸ್ ನಿಯಂತ್ರಣ ಕೊಠಡಿಗೆ ಮಧ್ಯಾಹ್ನ 1 ಗಂಟೆಗೆ ಈ ಕರೆ ಬಂದಿದೆ. ಮಹಲ್ ಪ್ರದೇಶದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಚೇರಿಯನ್ನು ಬಾಂಬ್ ಮೂಲಕ ಸ್ಫೋಟಿಸುವುದಾಗಿ ಕರೆ ಮಾಡಿದ ವ್ಯಕ್ತಿ ಬೆದರಿಕೆ ಹಾಕಿದ್ದ’ ಎಂದು ಡಿಸಿಪಿ ಗೋರಖ್ ಭಾಮ್ರೆ ತಿಳಿಸಿದ್ದಾರೆ.

ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳವನ್ನು ಸ್ಥಳಕ್ಕೆ ಕರೆಸಿ ಶೋಧ ನಡೆಸಲಾಯಿತು. ಆದರೆ ಅನುಮಾನಸ್ಪದ ವಸ್ತುಗಳು ಪತ್ತೆಯಾಗಲಿಲ್ಲ ಎಂದು ತಿಳಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಪಹರೆ ಬಿಗಿಗೊಳಿಸಲಾಗಿದೆ. ಪೊಲೀಸರು ಕರೆಯ ಜಾಡು ಪತ್ತೆ ಹಚ್ಚುತ್ತಿದ್ದಾರೆ ಎಂದೂ ಡಿಸಿಪಿ ಮಾಹಿತಿ ನೀಡಿದ್ದಾರೆ.

ವಕೀಲರ ಹಾಜರಾತಿಗೆ ಆನ್‌ಲೈನ್ ಪೋರ್ಟಲ್ ನಾಳೆಯಿಂದ ಸಕ್ರಿಯ

ನವದೆಹಲಿ (ಪಿಟಿಐ): ಕಲಾಪಕ್ಕೆ ವಕೀಲರ ಹಾಜರಾತಿಯ ಮಾಹಿತಿಯನ್ನು ಕೋರ್ಟ್‌ಗೆ ತಿಳಿಸುವ ವಿಧಾನವನ್ನು ಸರಳಗೊಳಿಸಲಾಗಿದ್ದು, ಸುಪ್ರೀಂ ಕೋರ್ಟ್ ರೂಪಿಸಿರುವ ಆನ್‌ಲೈನ್ ಪೋರ್ಟಲ್ ಜನವರಿ 2ರಿಂದ ಸಕ್ರಿಯಗೊಳ್ಳಲಿದೆ.

ಪೋರ್ಟಲ್ ಕುರಿತಂತೆ ಡಿ.16ರಂದು ಮಾಹಿತಿ ನೀಡಿದ್ದ ಸಿಜೆಐ ಡಿ.ವೈ. ಚಂದ್ರಚೂಡ್, ವಕೀಲರು ಇನ್ನು ಮುಂದೆ ಲಿಖಿತವಾಗಿ ತಮ್ಮ ಹಾಜರಾತಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ ಎಂದಿದ್ದರು. ವಕೀಲರು ತಮ್ಮ ಹಾಜರಾತಿಯನ್ನು ಆನ್‌ಲೈನ್ ವಿಧಾನದಲ್ಲಿ ವಕೀಲರ ಹಾಜರಾತಿ ಪೋರ್ಟಲ್‌ನಲ್ಲಿ ನಮೂದಿಸಿದರೆ ಸಾಕು.

ಪ್ರಸ್ತುತ ಈಗಿರುವ ವಿಧಾನದಲ್ಲಿ, ವಕೀಲರು ತಮ್ಮ ಹೆಸರು, ಪ್ರಕರಣ, ಪ್ರಕರಣದ ಸಂಖ್ಯೆಯನ್ನು ಗೊತ್ತುಪಡಿಸಿದ ನಮೂನೆಯಲ್ಲಿ ಲಿಖಿತವಾಗಿ ಅಥವಾ ಇ-ಮೇಲ್ ಮೂಲಕ ಸಲ್ಲಿಸಬೇಕಿದೆ. ನಮೂನೆಯನ್ನು ಸಲ್ಲಿಸಿದರೆ, ಅವರು ಕಲಾಪದಲ್ಲಿ ಹಾಜರಾಗಿದ್ದಾರೆ ಎಂದು ಪರಿಗಣಿಸಲಾಗುತ್ತದೆ. ಕೋರ್ಟ್‌ನ ತೀರ್ಪುಗಳಲ್ಲಿ ವಕೀಲರ ಹೆಸರು ಉಲ್ಲೇಖವಾಗುತ್ತದೆ. ಹೊಸ ವರ್ಷದಿಂದ ಈ ವಿಧಾನ ಕೊನೆಗೊಳ್ಳಲಿದೆ.

ನಿಖರತೆ, ಕಾರ್ಯಕ್ಷಮತೆ ತರುವ ಉದ್ದೇಶದಿಂದ ‘ಅಡ್ವೊಕೇಟ್ ಆನ್ ರೆಕಾರ್ಡ್’ (ಎಒಆರ್) ವಿಧಾನವನ್ನು ಪರಿಚಯಿಸಲಾಗಿದೆ.

ವರ್ಷದಲ್ಲಿ ಪಾಕ್‌ನ 56 ಮಂದಿ ಸೇರಿ 186 ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತಾ ಪಡೆಗಳು 2022ರಲ್ಲಿ ನಡೆಸಿದ ವಿವಿಧ ಕಾರ್ಯಾಚರಣೆಗಳಲ್ಲಿ 56 ಪಾಕಿಸ್ತಾನಿಯರು ಸೇರಿ 186 ಉಗ್ರರು ಹತರಾಗಿದ್ದಾರೆ.

ಈ ವರ್ಷ 100 ಸ್ಥಳೀಯ ಯುವಕರನ್ನು ಭಯೋತ್ಪಾದಕ ಶ್ರೇಣಿಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ. 2021ಕ್ಕೆ ಹೋಲಿಸಿದರೆ ಶೇ 37 ಕಡಿಮೆಯಾಗಿದೆ. 100 ಸ್ಥಳೀಯರ ಪೈಕಿ 65 ಮಂದಿ ತಟಸ್ಥರಾಗಿದ್ದರೆ, 17 ಮಂದಿಯನ್ನು ಬಂಧಿಸಲಾಗಿದೆ. 18 ಮಂದಿ ಇನ್ನೂ ಸಕ್ರಿಯರಾಗಿದ್ದಾರೆ ಎಂದು ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ದಿಲ್ಬಾಗ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಳೆದ ನಾಲ್ಕು ವರ್ಷಗಳಿಗೆ ಹೋಲಿಸಿದರೆ, 2022 ಭದ್ರತಾ ದೃಷ್ಟಿಯಿಂದ ಅತ್ಯಂತ ಶಾಂತಿಯುತವಾಗಿತ್ತು. ಪೊಲೀಸರ ಹೊಸ ವರ್ಷದ ನಿರ್ಣಯವು 'ಮಿಷನ್ ಝೀರೋ ಟೆರರ್' ಆಗಿದೆ ಎಂದರು.

ಮಾದಕ ವ್ಯಸನಿಗಳ ವಿರುದ್ಧ 1693 ಪ್ರಕರಣ ದಾಖಲಾಗಿದ್ದು, 212 ಕಿಲೋಗ್ರಾಂ ಹೆರಾಯಿನ್, 383 ಕಿಲೋಗ್ರಾಂ ಗಾಂಜಾ ಮತ್ತು 12 ಕಿಲೋಗ್ರಾಂ ಬ್ರೌನ್ ಶುಗರ್ ವಶಪಡಿಸಿಕೊಳ್ಳಲಾಗಿದೆ ಎಂದು ಡಿಜಿಪಿ ತಿಳಿಸಿದ್ದಾರೆ.

ನೀರಿನ ತೊಟ್ಟಿಗೆ ಎಸೆದ ದುಷ್ಕರ್ಮಿಗಳು

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಲಖನೌ: ಏಳನೇ ತರಗತಿ ವಿದ್ಯಾರ್ಥಿನಿಯ ಮೇಲೆ ಮೂವರು ಯುವಕರು ಸಾಮೂಹಿಕ ಅತ್ಯಾಚಾರ ಎಸಗಿ, ಬಳಿಕ ಆಕೆಯನ್ನು ನೀರಿನತೊಟ್ಟಿಗೆ ಎಸೆದ ಘಟನೆ ಉತ್ತರಪ್ರದೇಶದ ಮೌ ಜಿಲ್ಲೆಯಲ್ಲಿ ಶನಿವಾರ ನಡೆದಿದೆ.

ಘಟನೆಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಮೂರನೇ ಆರೋಪಿಗಾಗಿ ತೀವ್ರ ಶೋಧ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತೆಯು ಕಸ ಚೆಲ್ಲಲು ಮನೆಯಿಂದ ಹೊರಬಂದಿದ್ದಾಗ ಅದೇ ಗ್ರಾಮದ ಮೂವರು ಯುವಕರು ಆಕೆಯನ್ನು ಅಪಹರಿಸಿ, ಏಕಾಂತ ಸ್ಥಳಕ್ಕೆ ಕರೆದೊಯ್ದು ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ. ಸಹಾಯಕ್ಕಾಗಿ ಕೂಗಲು ಸಾಧ್ಯವಾಗದಂತೆ ಆಕೆಯ ಬಾಯಿಗೆ ಬಟ್ಟೆ ತುರುಕಿ, ಕೈಕಾಲುಗಳನ್ನು ಕಟ್ಟಿಹಾಕಿ ನೀರಿನತೊಟ್ಟಿಗೆ ಎಸೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಳಿಕ ಸ್ಥಳೀಯರು ಗಮನಿಸಿ ಸಂತ್ರಸ್ತೆಯನ್ನು ಹೊರಗೆ ತೆಗೆದು, ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಈ ಸಂಬಂಧ ಸಂತ್ರಸ್ತೆಯ ತಂದೆಯು ನೀಡಿದ ದೂರಿನ ನಂತರ ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಸಂತ್ರಸ್ತೆಯನ್ನು ಆಸ್ಪತ್ರೆಯಲ್ಲಿ ಭೇಟಿಯಾಗದಂತೆ ಪೊಲೀಸರು ತಡೆಯೊಡ್ಡುತ್ತಿದ್ದು, ಆರೋಪಿಗಳೊಂದಿಗೆ ಶಾಮೀಲಾಗಿದ್ದಾರೆ ಎಂದು ಸಂತ್ರಸ್ತೆಯ ಸಂಬಂಧಿಕರು ದೂರಿದ್ದಾರೆ. ಆಕ್ರೋಶಗೊಂಡ ಗುಂಪು ಪೊಲೀಸರ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿ ಖಾಸಗಿ ಭಾಗಕ್ಕೆ ನೂಲು ಸುತ್ತಿ ಹಲ್ಲೆ

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳ ಗುಂಪೊಂದು ಎರಡನೇ ತರಗತಿ ವಿದ್ಯಾರ್ಥಿಯ ಖಾಸಗಿ ಅಂಗಕ್ಕೆ ನೈಲಾನ್ ರೀತಿಯ ನೂಲು ಸುತ್ತಿ ಹಲ್ಲೆ ಮಾಡಿರುವ ಘಟನೆ ದಕ್ಷಿಣ ದೆಹಲಿಯ ಕಿದ್ವಾಯಿ ನಗರದ ಎನ್‌ಡಿಎಂಸಿ (ದೆಹಲಿ ಮಹಾನಗರ ಪಾಲಿಕೆ) ಶಾಲೆಯಲ್ಲಿ ನಡೆದಿದೆ ಎಂದು ಪೊಲೀಸರು ಶನಿವಾರ ತಿಳಿಸಿದರು.

‘ಬುಧವಾರ ಪೋಷಕರು, ಬಾಲಕನಿಗೆ ಸ್ನಾನ ಮಾಡಿಸುವಾಗ ಹಲ್ಲೆಯಾಗಿರುವುದು ಬೆಳಕಿಗೆ ಬಂದಿದೆ. ತಕ್ಷಣ ಅವರು ಬಾಲಕನನ್ನು ಆಸ್ಪತ್ರೆಗೆ ದಾಖಲಿಸಿ, ನಂತರ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸದ್ಯ ಬಾಲಕನ ಆರೋಗ್ಯ ಸ್ಥಿರವಾಗಿದೆ. ಆದಾಗ್ಯೂ ವೈದ್ಯರು ನಿಗಾ ವಹಿಸಿದ್ದಾರೆ’ ಎಂದು ತಿಳಿಸಿದರು.

‘ತನ್ನ ಮೇಲೆ ಹಲ್ಲೆ ಮಾಡಿದ ಸಹಪಾಠಿಗಳನ್ನು ಬಾಲಕ ಗುರುತಿಸದ ಕಾರಣ ಈವರೆಗೆ ಪ್ರಕರಣ ದಾಖಲಿಸಿಲ್ಲ' ಎಂದು ಉಪ ಪೊಲೀಸ್ ಆಯುಕ್ತ (ದಕ್ಷಿಣ) ಚಂದನ್ ಚೌದರಿ ಹೇಳಿದರು. ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ. ಈಗಲೇ ಈ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದು ಶಾಲೆಯ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ಇತಿಹಾಸ ಸಂಶೋಧನಾ ಪರಿಷತ್‌ನ ಕಾರ್ಯ

ಮಧ್ಯಯುಗದ ಹಸ್ತಪ್ರತಿಗಳಿಗೆ ಡಿಜಿಟಲ್ ಸ್ಪರ್ಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು, ಧಾರವಾಡ, ಗುವಾಹಟಿ, ಜೋಧಪುರದ ಚೌಪಾಸನಿ ಸೇರಿದಂತೆ ದೇಶದ ವಿವಿಧ ಪ್ರದೇಶಗಳಲ್ಲಿ ದೊರೆತಿರುವ ಮಧ್ಯಯುಗಕ್ಕೆ ಸೇರಿದ 150 ಹಸ್ತಪ್ರತಿ ಹಾಗೂ ಇತರೆ ಕಡತಗಳು ಎಲ್ಲರಿಗೂ ಸುಲಭವಾಗಿ ದೊರೆಯುವಂತೆ ಮಾಡುವ ಉದ್ದೇಶದಿಂದ ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ (ಐಸಿಎಚ್‌ಆರ್) ಇವುಗಳಿಗೆ ಡಿಜಿಟಲ್ ಸ್ಪರ್ಶ ನೀಡಲು ಮುಂದಾಗಿದೆ. ಇವು ಸದ್ಯದಲ್ಲೇ ಐಸಿಎಚ್‌ಆರ್ ಪೋರ್ಟಲ್‌ನಲ್ಲಿ ಲಭ್ಯವಾಗಲಿವೆ.

ಮರಾಠರ ಆಳ್ವಿಕೆಗೆ ಸಂಬಂಧಿಸಿದಂತೆ ದೊರೆತಿರುವ ಹಸ್ತಪ್ರತಿಗಳನ್ನೂ ಡಿಜಿಟಲೀಕರಣಗೊಳಿಸಲು ನಿರ್ಧರಿಸಿರುವ ಐಸಿಎಚ್‌ಆರ್, ಈ ಸಂಬಂಧ ಛತ್ರಪತಿ ಸಾಹು ಮಹಾರಾಜ್ ಮರಾಠ ಇತಿಹಾಸ ಅಧ್ಯಯನ ಕೇಂದ್ರದ ಜೊತೆಗೆ ಜನವರಿ 2ರಂದು ಒಡಂಬಡಿಕೆಗೆ ಸಹಿ ಹಾಕಲಿದೆ.



ಹಸ್ತಪ್ರತಿ

ಕನ್ನಡ ಹಾಗೂ ಕರ್ನಾಟಕದ ವಿವಿಧ ಭಾಷೆಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳ ಡಿಜಿಟಲೀಕರಣಕ್ಕೆ ಸಂಬಂಧಿಸಿದಂತೆ ಐಸಿಎಚ್‌ಆರ್ ಈಗಾಗಲೇ ಬೆಂಗಳೂರಿನ ಮಿಥಿಕ್ ಸೊಸೈಟಿ ಜೊತೆ ಒಡಂಬಡಿಕೆ ಮಾಡಿಕೊಂಡಿದೆ.

ಅಸ್ಸಾಂನ ಅಹೋಮ್ ಬುರಂಜಿಯ ಹಸ್ತಪ್ರತಿಗಳು, ಸಿಕ್ಕಿಂನ ನಾಮಗ್ಯಾಲ್ ವಿಶ್ವವಿದ್ಯಾಲಯದಲ್ಲಿರುವ ಟಿಬೆಟಿಯನ್ ಹಸ್ತಪ್ರತಿಗಳು, ಕಾಶ್ಮೀರದಲ್ಲಿ ಲಭಿಸಿರುವ ಸಂಸ್ಕೃತದ ಹಸ್ತಪ್ರತಿಗಳಿಗೂ ಡಿಜಿಟಲ್ ಸ್ಪರ್ಶ ನೀಡಲು ತೀರ್ಮಾನಿಸಲಾಗಿದೆ. ಐಸಿಎಚ್‌ಆರ್ ಜನವರಿ 16ರಂದು ಉದಯಪುರದಲ್ಲಿ ಮತ್ತೊಂದು ಒಡಂಬಡಿಕೆಗೆ ಸಹಿ ಹಾಕಲಿದೆ.

‘ಪ್ರಾಚೀನ, ಮಧ್ಯ ಹಾಗೂ ಆಧುನಿಕ ಯುಗಕ್ಕೆ ಸಂಬಂಧಿಸಿದ ದೇಶದ ಎಲ್ಲಾ ಭಾಷೆಗಳಲ್ಲಿನ ಹಸ್ತಪ್ರತಿಗಳನ್ನು ಡಿಜಿಟಲೀಕರಣಗೊಳಿಸುವುದು ಈ ಯೋಜನೆಯ ಭಾಗವಾಗಿದೆ’ ಎಂದು ಐಸಿಎಚ್‌ಆರ್ ಸದಸ್ಯ ಕಾರ್ಯದರ್ಶಿ ಉಮೇಶ್ ಅಶೋಕ್ ಕದಂ ಅವರು ಹೇಳಿದ್ದಾರೆ.

‘ದೇಶದ ಯಾವ ಗ್ರಂಥಾಲಯಗಳಲ್ಲೂ ಈ ಹಸ್ತಪ್ರತಿಗಳನ್ನು ಸಂಗ್ರಹಿಸಿಡಲಾಗಿಲ್ಲ. ಇವು ಖಾಸಗಿಯವರ ಬಳಿ ಇರುವುದರಿಂದ ಸಾರ್ವಜನಿಕರಿಗೆ ದೊರೆಯುತ್ತಿಲ್ಲ. ಇವುಗಳ ಡಿಜಿಟಲೀಕರಣ ಪೂರ್ಣಗೊಂಡ ಬಳಿಕ ಐಸಿಎಚ್‌ಆರ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ವಾರ್ಷಿಕ ಶುಲ್ಕ ಪಾವತಿಸಿದವರಿಗೆ ಇವು ಲಭ್ಯವಾಗಲಿವೆ’ ಎಂದಿದ್ದಾರೆ.



ಬಾಕ್ಸಿಂಗ್: ಕೌಶಿಕ್, ರೋಹಿತ್ ಶುಭಾರಂಭ

ಹಿಸಾರ್ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ಮನೀಶ್ ಕೌಶಿಕ್, ರೈಲ್ವೆಯ ಬಾಕ್ಸರ್‌ಗಳಾದ ರೋಹಿತ್ ತೋಕಾಸ್ ಮತ್ತು ಸಚಿನ್ ಅವರು ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದರು.

ಶನಿವಾರ ಆರಂಭವಾದ ಟೂರ್ನಿಯ 63.5 ಕೆ.ಜಿ ವಿಭಾಗದಲ್ಲಿ ಕೌಶಿಕ್ ಅವರು ಮಧ್ಯಪ್ರದೇಶದ ಪ್ರಭಾತ್ ದ್ವಿವೇದಿ ವಿರುದ್ಧ ಸುಲಭವಾಗಿ ಗೆದ್ದರು. 16ರ ಘಟ್ಟದ ಹಣಾಹಣಿಯಲ್ಲಿ ಅವರು ಆಂಧ್ರ ಪ್ರದೇಶದ ಸಂದೀಪ್ ಅವರ ಸವಾಲು ಎದುರಿಸುವರು.

ತೋಕಾಸ್ ಅವರು 67 ಕೆ.ಜಿ. ವಿಭಾಗದ ಮೊದಲ ಸುತ್ತಿನಲ್ಲಿ ಉತ್ತರಾಖಂಡ್‌ನ ರಾಹುಲ್ ಅವರನ್ನು ಮಣಿಸಿದರು. 57 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಸಚಿನ್ 5–0 ರಲ್ಲಿ ರಮಣ್ ಶರ್ಮಾ ಅವರನ್ನು ಸೋಲಿಸಿದರು.

ಕಾರು ಅಪಘಾತ: ಹಣೆಯ ಗಾಯಕ್ಕೆ ಪ್ಲಾಸ್ಟಿಕ್ ಸರ್ಜರಿ

ಪಂತ್ ಆರೋಗ್ಯದಲ್ಲಿ ಚೇತರಿಕೆ

ಡೆಹ್ರಾಡೂನ್, ಉತ್ತರಾಖಂಡ (ಪಿಟಿಐ): ಕಾರು ಅಪಘಾತದಲ್ಲಿ ಗಾಯಗೊಂಡಿರುವ ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರ ಆರೋಗ್ಯದಲ್ಲಿ 'ಗಣನೀಯ ಸುಧಾರಣೆ' ಕಂಡುಬಂದಿದೆ ಎಂದು ಕುಟುಂಬದ ಮೂಲಗಳು ಹೇಳಿವೆ.

ಪಂತ್ ಆರೋಗ್ಯದ ಬಗ್ಗೆ ಅವರು ಚಿಕಿತ್ಸೆ ಪಡೆಯುತ್ತಿರುವ ಮ್ಯಾಕ್ಸ್ ಆಸ್ಪತ್ರೆಯ ಅಧಿಕಾರಿಗಳು ಯಾವುದೇ ಮಾಹಿತಿ ನೀಡಿಲ್ಲ. ಆದರೆ ಅವರನ್ನು ಭೇಟಿಯಾದ ಕುಟುಂಬದ ಸದಸ್ಯರು ಮತ್ತು ಗೆಳೆಯರು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ ಎಂದಿದ್ದಾರೆ.

25 ವರ್ಷದ ಪಂತ್ ಅವರು ದೆಹಲಿ–ಡೆಹ್ರಾಡೂನ್ ಹೆದ್ದಾರಿಯಲ್ಲಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದ್ದ ಅಪಘಾತದಲ್ಲಿ ಗಾಯಗೊಂಡಿದ್ದರು. ತಲೆ, ಬೆನ್ನು, ಮಂಡಿ, ಕಾಲಿಗೆ ಗಾಯಗಳಾಗಿದ್ದವು. ಅಪಘಾತದಲ್ಲಿ ಕಾರು ಸುಟ್ಟು ಹೋಗಿದ್ದರೂ, ಪಂತ್ ಪವಾಡಸದೃಶ ರೀತಿಯಲ್ಲಿ ಪಾರಾಗಿದ್ದರು.

ರಿಷಭ್ ಪಂತ್

'ಅವರನ್ನು ಬೇರೆ ಆಸ್ಪತ್ರೆಗೆ ದಾಖಲಿಸುವ ಯೋಚನೆ ಸದ್ಯಕ್ಕಂತೂ ಇಲ್ಲ. ಕಳೆದ ಒಂದೂವರೆ ದಿನದಲ್ಲಿ ಆರೋಗ್ಯದಲ್ಲಿ ಗಣನೀಯ ಚೇತರಿಕೆ ಕಂಡುಬಂದಿದೆ' ಎಂದು ಕುಟುಂಬದ ಗೆಳೆಯರಾದ ಉಮೇಶ್ ಕುಮಾರ್ ತಿಳಿಸಿದರು.

'ಅವರ ಹಣೆಯ ಗಾಯಕ್ಕೆ ಶುಕ್ರವಾರವೇ ಪ್ಲಾಸ್ಟಿಕ್ ಸರ್ಜರಿ ಮಾಡಲಾಗಿದೆ. ಶುಕ್ರವಾರ ಹೊಸದಾಗಿ ಬ್ಯಾಂಡೇಜ್ ಮಾಡಲಾಗಿದೆ' ಎಂದರು.

'ಬಿಸಿಸಿಐ ವೈದ್ಯರು ಮ್ಯಾಕ್ಸ್ ಆಸ್ಪತ್ರೆಯ ವೈದ್ಯರ ಜತೆ ಸಂಪರ್ಕದಲ್ಲಿದ್ದಾರೆ. ಪಂತ್ ಆರೋಗ್ಯದ ಪೂರ್ಣ ಮಾಹಿತಿ ಪಡೆದುಕೊಂಡಿದ್ದಾರೆ. ಮಂಡಿಯ ಲಿಗಮೆಂಟ್ ಗಾಯದ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಕರೆದೊಯ್ಯಬೇಕೇ ಎಂಬ ಬಗ್ಗೆ ಬಿಸಿಸಿಐ ವೈದ್ಯರು ತೀರ್ಮಾನಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ದೆಹಲಿ ಮತ್ತು ಜಿಲ್ಲಾ ಕ್ರಿಕೆಟ್ ಸಂಸ್ಥೆ (ಡಿಡಿಸಿಎ) ನಿರ್ದೇಶಕ ಶ್ಯಾಮ್ ಶರ್ಮ, ಬಾಲಿವುಡ್ ನಟರಾದ ಅನಿಲ್ ಕಪೂರ್ ಮತ್ತು ಅನುಪಮ್ ಖೇರ್ ಅವರು ಶನಿವಾರ ಪಂತ್ ಅವರನ್ನು ಭೇಟಿಯಾದರು.

'ಇಲ್ಲಿನ ವೈದ್ಯರು ಅವರಿಗೆ ಸೂಕ್ತ ಚಿಕಿತ್ಸೆ ನೀಡುತ್ತಿದ್ದಾರೆ. ಸದ್ಯಕ್ಕೆ ಇದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಯಲಿದೆ' ಎಂದು ಶ್ಯಾಮ್ ಶರ್ಮ ಮಾಧ್ಯಮದವರಿಗೆ ತಿಳಿಸಿದರು.

'ಪಂತ್ ಚೆನ್ನಾಗಿಯೇ ಇದ್ದಾರೆ. ಒಬ್ಬ ಅಭಿಮಾನಿಯಾಗಿ ಅವರನ್ನು ಭೇಟಿಯಾದೆ. ಅವರು ಶೀಘ್ರದಲ್ಲೇ ಗುಣಮುಖರಾಗಿ ಮತ್ತೆ ರಾಷ್ಟ್ರೀಯ ತಂಡದಲ್ಲಿ ಆಡುವಂತಾಗಲಿ' ಎಂದು ಅನಿಲ್ ಕಪೂರ್ ಹಾರೈಸಿದರು.

ಫುಟ್‌ಬಾಲ್: ದೆಹಲಿಗೆ ಮಣಿದ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡವು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ಸೋಲು ಅನುಭವಿಸಿತು. ನವದೆಹಲಿಯಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ದೆಹಲಿ 1–0ಯಿಂದ ಕರ್ನಾಟಕವನ್ನು ಮಣಿಸಿತು. 77ನೇ ನಿಮಿಷದಲ್ಲಿ ಗೌರವ್ ರಾವತ್ ಗಳಿಸಿದ ಗೋಲು ದೆಹಲಿ ತಂಡದ ಜಯಕ್ಕೆ ಕಾರಣವಾಯಿತು.



ಪ್ರತಿಯೊಬ್ಬರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು!

ಹಾಕಿ: ವೈಲ್ಡ್‌ಬೋರ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಆಟವಾಡಿದ ವೈಲ್ಡ್‌ಬೋರ್ ತಂಡವು ರಾಜ್ಯ ಬಿ ಡಿವಿಷನ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಸಾಧಿಸಿತು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ ವೈಲ್ಡ್‌ಬೋರ್ 2–1ರಿಂದ ರಾಯಲ್ ಹಾಕಿ ಕ್ಲಬ್ ತಂಡದ ಎದುರು ಜಯಿಸಿತು. ವಿಜೇತ ತಂಡಕ್ಕಾಗಿ ಪ್ರಜ್ವಲ್ 4ನೇ ನಿಮಿಷದಲ್ಲೇ ಗೋಲು ಗಳಿಸಿ ಮುನ್ನಡೆ ಒದಗಿಸಿದರು. 24ನೇ ನಿಮಿಷದಲ್ಲಿ ಭರತ್ ಪಾಲಂಗಪ್ಪ ತೋರಿದ ಕೈಚಳಕದಿಂದ ತಂಡದ ಮುನ್ನಡೆ 2–0ಗೆ ಹೆಚ್ಚಿತು.

ಕರುಣ್ 38ನೇ ನಿಮಿಷದಲ್ಲಿ ಗೋಲು ಗಳಿಸಿ ರಾಯಲ್ ಕ್ಲಬ್ ತಂಡದ ಹಿನ್ನಡೆ ತಗ್ಗಿಸಿದರು. ಆದರೆ ಸೋಲು ತಪ್ಪಲಿಲ್ಲ.

ಭಾನುವಾರ ವಿರಾಮದ ದಿನವಾಗಿದೆ. ಸೋಮವಾರ ನಡೆಯುವ ಮೊದಲ ಪಂದ್ಯದಲ್ಲಿ ಬಿಸಿವೈಎ 'ಎ'–ರಾಯಲ್ ಎಚ್‌ಸಿ ಸೆಣಸಲಿವೆ. ಬಳಿಕ, ಸಂದೀಪ್ ಎಚ್‌ಸಿ–ಬಳ್ಳಾರಿ ಎಚ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ಪ್ರಶಸ್ತಿ ಗೆದ್ದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಂಡ: ಎಡದಿಂದ– ನಿಂತವರು: ಪ್ರದ್ಯುಮ್ನ, ಸುಮುಖ್, ಅನೀಶ್, ಅಕ್ಷನ್, ಸಚಿನ್ ಬೆಳವಡಿ (ಕೋಚ್), ಆದರ್ಶ್, ಅಭಿಷೇಕ್, ರೆಹಾನ್, ದಿನೇಶ್. ಕುಳಿತವರು: ಶಿವಂ, ಚಲ್ಲ ಶ್ರೀನಿವಾಸ್, ಧ್ರುವ, ಕಾರ್ತಿಕ್

ರಾಮಯ್ಯ ಇನ್‌ಸ್ಟಿಟ್ಯೂಟ್‌ಗೆ ಪ್ರಶಸ್ತಿ

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ತಂಡವು ಉಮನ್ ಮ್ಯಾಥ್ಯು ಸ್ಮಾರಕ ಅಂತರಕಾಲೇಜು ರಾಜ್ಯಮಟ್ಟದ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಬಿಎಂಎಸ್‌ಸಿಇ ಕಾಲೇಜು ಆಯೋಜಿಸಿದ್ದ ಟೂರ್ನಿಯ ಫೈನಲ್ ಪಂದ್ಯದಲ್ಲಿ ರಾಮಯ್ಯ ಕಾಲೇಜು ತಂಡ 61–50ರಿಂದ ಆರ್‌ವಿ ಇಂಜಿನಿಯರಿಂಗ್ ಕಾಲೇಜು ತಂಡದ ವಿರುದ್ಧ ಗೆದ್ದಿತು. ವಿಜೇತ ತಂಡದ ಅಕ್ಷನ್ ಮತ್ತು ಪ್ರದ್ಯುಮ್ನ ಕ್ರಮವಾಗಿ 16 ಮತ್ತು 15 ಪಾಯಿಂಟ್ಸ್ ಗಳಿಸಿದರು.

ಕ್ಯಾಮರಾನ್‌ಗೆ ಮಣಿದ ನಡಾಲ್

ಸಿಡ್ನಿ (ರಾಯಿಟರ್ಸ್): ಆಸ್ಟ್ರೇಲಿಯಾ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಗೆ ಸಿದ್ಧತೆ ನಡೆಸುತ್ತಿರುವ ಸ್ಪೇನ್‌ನ ರಫೆಲ್ ನಡಾಲ್ ಅವರು ಇಲ್ಲಿ ನಡೆಯುತ್ತಿರುವ ಯುನೈಟೆಡ್ ಕಪ್ ಟೂರ್ನಿಯಲ್ಲಿ ನಿರಾಸೆ ಅನುಭವಿಸಿದರು.

22 ಗ್ರ್ಯಾನ್‌ಸ್ಲಾಮ್ ಕಿರೀಟ ಧರಿಸಿರುವ ನಡಾಲ್ ಅವರನ್ನು ಕ್ಯಾಮರಾನ್ ನೊರಿ 3–6, 6–3, 6–4ರಿಂದ ಸೋಲಿಸಿದರು. ಇದರೊಂದಿಗೆ ಮಿಕ್ಸೆಡ್ ತಂಡ ವಿಭಾಗದ ಟೂರ್ನಿಯಲ್ಲಿ ಬ್ರಿಟನ್ 2–0ಯಿಂದ ಸ್ಪೇನ್ ವಿರುದ್ಧ ಮುನ್ನಡೆ ಸಾಧಿಸಿತು.

ನಡಾಲ್ ಅವರು 2022ರಲ್ಲಿ ಆಸ್ಟ್ರೇಲಿಯಾ ಓಪನ್ ಮತ್ತು ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಪ್ರಶಸ್ತಿ ಜಯಿಸಿದ್ದರು.

ಈ ಪಂದ್ಯದ ಮೊದಲ ಸೆಟ್‌ಅನ್ನು ಗೆದ್ದುಕೊಂಡ ನಡಾಲ್ ಅವರಿಗೆ ಎರಡು ಮತ್ತು ಮೂರನೇ ಸೆಟ್‌ಗಳಲ್ಲಿ ತಿರುಗೇಟು ನೀಡಿದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ಸ್ಪೇನ್ ಆಟಗಾರನ ವಿರುದ್ಧ ಬ್ರಿಟನ್‌ನ ಕ್ಯಾಮರಾನ್‌ಗೆ ಇದು ಮೊದಲ ಜಯವಾಗಿದೆ.

ದಿಗ್ಗಜ ಪೆಲೆ ನೆನೆದು ಭಾವುಕರಾದ ಅಭಿಮಾನಿಗಳು

ವಿದಾಯಕ್ಕೆ ಸ್ಯಾಂಟೊಸ್‌ನಲ್ಲಿ ಸಿದ್ಧತೆ

ಸ್ಯಾಂಟೊಸ್, ಬ್ರೆಜಿಲ್ (ಎಎಫ್‌ಪಿ): ಫುಟ್‌ಬಾಲ್ ದಿಗ್ಗಜ ಪೆಲೆ ಅವರಿಗೆ ಭಾವಪೂರ್ಣ ವಿದಾಯ ಹೇಳಲು ಬ್ರೆಜಿಲ್‌ನ ಸ್ಯಾಂಟೊಸ್ ನಗರದಲ್ಲಿ ಸಿದ್ಧತೆ ನಡೆದಿದೆ.

ಫುಟ್‌ಬಾಲ್‌ನ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಪೆಲೆ ತಮ್ಮ ಜೀವನದ ಬಹುಪಾಲು ಅವಧಿಯನ್ನು ಸಾವೊ ಪೌಲೊದಿಂದ 75 ಕಿ.ಮೀ. ದೂರದಲ್ಲಿರುವ ಸ್ಯಾಂಟೊಸ್ ನಗರದಲ್ಲಿ ಕಳೆದಿದ್ದರು. ಇಲ್ಲಿನ ಸ್ಯಾಂಟೊಸ್ ಸ್ಮಾರಕ ಸ್ಮಶಾನದಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಲಿದೆ.

ಪೆಲೆ ಎಂದೇ ಜನಪ್ರಿಯತೆ ಪಡೆದಿರುವ ಎಡ್ಸನ್ ಅರಾಂಟೆಸ್ ಡು ನಸಿಮೆಂಟೊ ಅವರು ಗುರುವಾರ ನಿಧನರಾಗಿದ್ದರು.

ತಮ್ಮ 15ನೇ ವಯಸ್ಸಿನಲ್ಲಿ ಸ್ಯಾಂಟೊಸ್ ಕ್ಲಬ್ ಸೇರಿಕೊಂಡಿದ್ದ ಅವರು ಆ ಬಳಿಕ ತಂಡದ ಪರ 1,116 ಪಂದ್ಯಗಳನ್ನು ಆಡಿ 1,091 ಗೋಲುಗಳನ್ನು ಗಳಿಸಿದ್ದರು. ತಂಡದ ಆಟಗಾರನಾಗಿದ್ದುಕೊಂಡು 45 ಪ್ರಶಸ್ತಿಗಳನ್ನು ಜಯಿಸಿದ್ದರು.

ಸ್ಯಾಂಟೊಸ್ ಕ್ಲಬ್‌ನ ವಿಲಾ ಬೆಲ್ಮಿರೊ ಕ್ರೀಡಾಂಗಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸೋಮವಾರ ಬೆಳಿಗ್ಗೆ 10 ರಿಂದ ಮಂಗಳವಾರ ಬೆಳಿಗ್ಗೆ 10ರ ವರೆಗೆ ಮೃತದೇಹವನ್ನು ಮೈದಾನದಲ್ಲಿ ಇರಿಸಲಾಗುವುದು ಎಂದು ಕ್ಲಬ್ ಹೇಳಿದೆ.

ಪೆಲೆ ನಿಧನ ಸುದ್ದಿ ಹೊರಬಿದ್ದ ದಿನದಿಂದಲೂ ವಿಲಾ ಬೆಲ್ಮಿರೊ ಕ್ರೀಡಾಂಗಣ ತೀರ್ಥಯಾತ್ರೆಯ ಸ್ಥಳವಾಗಿ ಬದಲಾಗಿದೆ. ಸಾವಿರಾರು ಅಭಿಮಾನಿಗಳು ಮತ್ತು ಫುಟ್‌ಬಾಲ್ ಪ್ರೇಮಿಗಳು ಇಲ್ಲಿಗೆ ಭೇಟಿ ನೀಡಿ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದಾರೆ. ಕ್ರೀಡಾಂಗಣದ ಹೊರಗೆ ಇರುವ ಪೆಲೆ ಅವರ ಪ್ರತಿಮೆ ಮುಂದೆ ಹೂಗುಚ್ಛ ಇರಿಸಿ ತಮ್ಮ ನೆಚ್ಚಿನ ಆಟಗಾರನಿಗೆ ಗೌರವ ಸಲ್ಲಿಸಿದ್ದಾರೆ.

ಪೆಲೆ ಹುಟ್ಟೂರು ತ್ರೇಸ್ ಕೊರಾಸೊಯೆಸ್‌ನ ಪೆಲೆ ಚೌಕದಲ್ಲಿರುವ ಪ್ರತಿಮೆ ಮುಂದೆ ಅಭಿಮಾನಿಗಳು ಹೂಗುಚ್ಛ ಇರಿಸಿರುವುದು –ಎಎಫ್‌ಪಿ ಚಿತ್ರ

ಪೆಲೆ ನಿಧನದ ಬೆನ್ನಲ್ಲೇ ಬ್ರೆಜಿಲ್ ಸರ್ಕಾರ ಮೂರು ದಿನ ಶೋಕಾಚರಣೆ ಘೋಷಿಸಿದ್ದರೆ, ಸ್ಯಾಂಟೊಸ್ ನಗರದಲ್ಲಿ ಏಳು ದಿನಗಳ ಶೋಕಾಚರಣೆ ನಡೆಯಲಿದೆ.

'ಪೆಲೆ ನಿಧನರಾಗಿದ್ದಾರೆ ನಿಜ. ಆದರೆ ಅವರ ಆತ್ಮ ಈ ಕ್ರೀಡಾಂಗಣದ ಸುತ್ತ ಹಾಗೂ ಬ್ರೆಜಿಲ್‌ನ ಎಲ್ಲ ಜನರ ಹೃದಯದಲ್ಲಿ ನೆಲೆಸಿದೆ' ಎಂದು ಸ್ಯಾಂಟೊಸ್ ಕ್ಲಬ್ ಅಭಿಮಾನಿ ಜೋನಸ್ ಆಗಸ್ಟೊ ಡೊಸ್ ಸ್ಯಾಂಟೊಸ್ ಪ್ರತಿಕ್ರಿಯಿಸಿದ್ದಾರೆ.

'ನಾನು ಸಹೋದರನನ್ನು ಕಳೆದುಕೊಂಡಿದ್ದೇನೆ' ಎಂದು ಹಲವು ವರ್ಷ ಪೆಲೆ ಅವರ ಆಪ್ತ ಸಹಾಯಕರಾಗಿ ಕೆಲಸ ಮಾಡಿದ್ದ ಜೋಸ್ ಪೆಪಿಟೊ ಫೊರ್ನೋಸ್ ದುಃಖಿತರಾದರು.

ಮೃತದೇಹವನ್ನು ಇರಿಸಿರುವ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಯ ಹೊರಗೆ ಶನಿವಾರವೂ ಸಾವಿರಾರು ಅಭಿಮಾನಿಗಳು ನೆರೆದಿದ್ದರು.

'ಕರುಳಿನ ಕ್ಯಾನ್ಸರ್ ಇತರೆಡೆಗೆ ವ್ಯಾಪಿಸಿ ಬಹು ಅಂಗಾಂಗ ವೈಫಲ್ಯದಿಂದ ಪೆಲೆ ಮೃತಪಟ್ಟಿದ್ದಾರೆ' ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಅಲ್ ನಸ್ರ್ ಕ್ಲಬ್ ಸೇರಿದ ಕ್ರಿಸ್ಟಿಯಾನೊ ರೊನಾಲ್ಡೊ

₹ 1,775 ಕೋಟಿ ಮೊತ್ತದ ಒಪ್ಪಂದ!

ರಿಯಾದ್ (ಎಎಫ್‌ಪಿ/ ರಾಯಿಟರ್ಸ್): ಪೋರ್ಚುಗಲ್ ಫುಟ್‌ಬಾಲ್ ತಂಡದ ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಸೌದಿ ಅರೇಬಿಯಾದ ಅಲ್ ನಸ್ರ್ ಕ್ಲಬ್ ಸೇರಿಕೊಂಡಿದ್ದಾರೆ.

2025ರ ಜೂನ್‌ವರೆಗಿನ ಒಪ್ಪಂದಕ್ಕೆ ಸಹಿ ಹಾಕಿದ್ದು, ಅವರು ₹1,775 ಕೋಟಿ ಪಡೆಯಲಿದ್ದಾರೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಆದರೆ ಒಪ್ಪಂದದ ನಿಖರ ಮೊತ್ತ ಎಷ್ಟು ಎಂಬುದನ್ನು ಕ್ಲಬ್ ಬಹಿರಂಗಪಡಿಸಿಲ್ಲ.

'ಹೊಸ ದೇಶದಲ್ಲಿ ಹೊಸ ಫುಟ್‌ಬಾಲ್ ಕ್ಲಬ್ ಜತೆ ಆಡುವುದನ್ನು ಎದುರು ನೋಡುತ್ತಿದ್ದೇನೆ. ಯೂರೋಪಿಯನ್ ಫುಟ್‌ಬಾಲ್‌ನಲ್ಲಿ ಬಹುತೇಕ ಎಲ್ಲ ಟ್ರೋಫಿಗಳನ್ನು ಜಯಿಸುವ ಅದೃಷ್ಟ ನನಗೆ ಲಭಿಸಿದೆ. ನನ್ನ ಅನುಭವವನ್ನು ಏಷ್ಯಾದ ಜತೆ ಹಂಚಿಕೊಳ್ಳಲು ಇದು ಸೂಕ್ತ ಸಮಯ ಎಂದು ಭಾವಿಸಿದ್ದೇನೆ' ಎಂದು 37 ವರ್ಷದ ರೊನಾಲ್ಡೊ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಲ್ ನಸ್ರ್ ತಂಡದ ಜೆರ್ಸಿ ಪ್ರದರ್ಶಿಸಿದ ರೊನಾಲ್ಡೊ. ಕ್ಲಬ್ ಅಧ್ಯಕ್ಷ ಮುಸಲ್ಲಿ ಅಲ್‌ಮುಅಮ್ಮರ್ ಇದ್ದಾರೆ –ಎಎಫ್‌ಪಿ ಚಿತ್ರ

ರೊನಾಲ್ಡೊ ಅವರು ತಂಡದ ಜೆರ್ಸಿ ಪ್ರದರ್ಶಿಸುತ್ತಿರುವ ಚಿತ್ರವನ್ನು ಅಲ್ ನಸ್ರ್ ಕ್ಲಬ್ ತನ್ನ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿದೆ.

'ಈ ಒಪ್ಪಂದದಿಂದ ಹೊಸ ಇತಿಹಾಸ ನಿರ್ಮಾಣವಾಗಲಿದೆ. ರೊನಾಲ್ಡೊ ಅವರ ಸಾನ್ನಿಧ್ಯವು ನಮ್ಮ ತಂಡ ಮಾತ್ರವಲ್ಲದೆ, ಸೌದಿ ಅರೇಬಿಯಾ ಲೀಗ್, ಇಡೀ ದೇಶ ಮತ್ತು ಮುಂದಿನ ತಲೆಮಾರಿನ ಯುವ ಪ್ರತಿಭೆಗಳಿಗೂ ಉತ್ತೇಜನ ನೀಡಲಿದೆ' ಎಂದು ಅಲ್ ನಸ್ರ್ ಫುಟ್‌ಬಾಲ್ ಕ್ಲಬ್ ಅಧ್ಯಕ್ಷ ಮುಸಲ್ಲಿ ಅಲ್‌ಮುಅಮ್ಮರ್ ಹೇಳಿದ್ದಾರೆ.

ಅಲ್ ನಸ್ರ್ ಕ್ಲಬ್ ಇದುವರೆಗೆ ಸೌದಿ ಪ್ರೊ ಲೀಗ್‌ನಲ್ಲಿ ಒಂಬತ್ತು ಸಲ ಚಾಂಪಿಯನ್ ಆಗಿದೆ. ರೊನಾಲ್ಡೊ ಅವರ ನೆರವಿನಿಂದ 10ನೇ ಲೀಗ್ ಪ್ರಶಸ್ತಿ ಹಾಗೂ ಎಎಫ್‌ಸಿ ಏಷ್ಯನ್ ಚಾಂಪಿಯನ್ಸ್ ಲೀಗ್‌ನಲ್ಲಿ ಕಿರೀಟ ಮುಡಿಗೇರಿಸಿಕೊಳ್ಳಲು ಪ್ರಯತ್ನಿಸಲಿದೆ.

ರೊನಾಲ್ಡೊ ಅವರು ಕತಾರ್‌ನಲ್ಲಿ ನಡೆದಿದ್ದ ವಿಶ್ವಕಪ್ ಟೂರ್ನಿಗೂ ಮುನ್ನ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್‌ಅನ್ನು ತೊರೆದಿದ್ದರು. ಸಂದರ್ಶನವೊಂದರಲ್ಲಿ ಅವರು ಯುನೈಟೆಡ್ ಕ್ಲಬ್ ಹಾಗೂ ಕೋಚ್ ಎರಿಕ್ ಟೆನ್ ಹಾಗ್ ವಿರುದ್ಧ ಹರಿಹಾಯ್ದಿದ್ದರು.

ರೊನಾಲ್ಡೊ 5 ಚಾಂಪಿಯನ್ಸ್ ಲೀಗ್ ಪ್ರಶಸ್ತಿಗಳನ್ನು (2008, 2014, 2016, 2017, 2018) ಗೆದ್ದುಕೊಂಡಿದ್ದಾರೆ. ಅದೇ ರೀತಿ ಇಟಲಿ ಯಲ್ಲಿ ಯುವೆಂಟಸ್ ಪರ (2019, 2020), ಸ್ಪೇನ್‌ನಲ್ಲಿ ರಿಯಲ್ ಮ್ಯಾಡ್ರಿಡ್ ಪರ (2012, 2017) ಹಾಗೂ ಇಂಗ್ಲೆಂಡ್‌ನಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್ ಪರ (2007, 2008, 2009) ಲೀಗ್ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ಅಮಿತ್ ಶಾ ಭೇಟಿಯಾದ ಹಾರ್ದಿಕ್

ನವದೆಹಲಿ (ಪಿಟಿಐ): ಭಾರತ ಟಿ20 ಕ್ರಿಕೆಟ್ ತಂಡ ನಾಯಕ ಹಾರ್ದಿಕ್ ಪಾಂಡ್ಯ ಮತ್ತು ಸಹೋದರ ಕೃಣಾಲ್ ಪಾಂಡ್ಯ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನವದೆಹಲಿಯ ನಿವಾಸದಲ್ಲಿ ಭೇಟಿಯಾದರು.

'ನಿಮ್ಮ ಜತೆ ಅಮೂಲ್ಯ ಸಮಯವನ್ನು ಕಳೆಯಲು ನಮ್ಮನ್ನು ಆಹ್ವಾನಿಸಿದ್ದಕ್ಕೆ ಧನ್ಯವಾದಗಳು. ನಿಮ್ಮ ಭೇಟಿಯ ಅವಕಾಶ ನಮಗೆ ದೊರೆತ ಬಲುದೊಡ್ಡ ಗೌರವ' ಎಂದು ಹಾರ್ದಿಕ್ ಟ್ವೀಟ್ ಮಾಡಿದ್ದಾರೆ. ಗೃಹ ಸಚಿವರ ಜತೆ ಕುಳಿತಿರುವ ಚಿತ್ರವನ್ನೂ ಪೋಸ್ಟ್ ಮಾಡಿದ್ದಾರೆ.

ಶ್ರೀಲಂಕಾ ವಿರುದ್ಧ ತವರಿನಲ್ಲಿ ಜ.3 ರಂದು ಆರಂಭವಾಗಲಿರುವ ಟಿ20 ಕ್ರಿಕೆಟ್ ಸರಣಿಗೆ ಹಾರ್ದಿಕ್ ಅವರನ್ನು ಭಾರತ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

2024ರ ಟಿ20 ವಿಶ್ವಕಪ್‌ಗೆ ಈಗಿನಿಂದಲೇ ತಂಡವನ್ನು ಕಟ್ಟುವ ಉದ್ದೇಶದೊಂದಿಗೆ ಆಯ್ಕೆ ಸಮಿತಿಯು ಯುವ ಆಟಗಾರರಿಗೆ ಮಣೆ ಹಾಕಿತ್ತು. ರೋಹಿತ್ ಶರ್ಮ, ವಿರಾಟ್ ಕೊಹ್ಲಿ ಮತ್ತು ಕೆ.ಎಲ್.ರಾಹುಲ್ ಅವರನ್ನು ಟಿ20 ಸರಣಿಗೆ ಪರಿಗಣಿಸಿಲ್ಲ.

2023 ಮುನ್ನೋಟ

ಹಾಕಿ, ಏಕದಿನ ಕ್ರಿಕೆಟ್ ವಿಶ್ವಕಪ್

ಭಾರತ ಹಾಕಿ ತಂಡ– ಪಿಟಿಐ ಚಿತ್ರ

ಭಾರತ ಆಯೋಜಿಸಲಿರುವ ಪುರುಷರ ಏಕದಿನ ಕ್ರಿಕೆಟ್ ವಿಶ್ವಕಪ್, ಪುರುಷರ ಹಾಕಿ ವಿಶ್ವ ಚಾಂಪಿಯನ್‌ಷಿಪ್, ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಈ ವರ್ಷ ನಡೆಯಲಿರುವ ಪ್ರಮುಖ ಕ್ರೀಡಾಕೂಟಗಳಲ್ಲಿ ಸೇರಿವೆ. 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಬಯಸುವ ಭಾರತದ ಅಥ್ಲೀಟ್ ನೀರಜ್ ಚೋಪ್ರಾ, ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು, ಎಚ್.ಎಸ್. ಪ್ರಣಯ್ ಮತ್ತಿತರರಿಗೆ ಈ ವರ್ಷ ಮಹತ್ವದ್ದೆನಿಸಿದೆ.

2023ರಲ್ಲಿ ನಡೆಯಲಿರುವ ಪ್ರಮುಖ ಕೂಟಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ...

- **ಪುರುಷರ ಹಾಕಿ ವಿಶ್ವಕಪ್**: ಜನವರಿ 13ರಿಂದ 29ರವರೆಗೆ ಒಡಿಶಾದ ಭುವನೇಶ್ವರ ಮತ್ತು ರೂರ್ಕೆಲಾದಲ್ಲಿ ಆಯೋಜನೆಯಾಗಿದೆ.
- **ಆಸ್ಟ್ರೇಲಿಯಾ ಓಪನ್ ಟೆನಿಸ್**: ಆಸ್ಟ್ರೇಲಿಯಾದ ಮೆಲ್ಬರ್ನ್‌ನಲ್ಲಿ ಜನವರಿ 16ರಿಂದ 29ರವರೆಗೆ ಟೂರ್ನಿ ನಡೆಯಲಿದೆ.
- **ಇಂಡಿಯಾ ಓಪನ್ ಬ್ಯಾಡ್ಮಿಂಟನ್**: ಜನವರಿ 17ರಿಂದ 22ರವರೆಗೆ ನವದೆಹಲಿಯಲ್ಲಿ ನಡೆಯಲಿದೆ.
- **ಖೇಲೊ ಇಂಡಿಯಾ ಯೂತ್ ಗೇಮ್ಸ್**: ಜನವರಿ 31ರಿಂದ ಫೆಬ್ರುವರಿ 11ರವರೆಗೆ ಮಧ್ಯಪ್ರದೇಶದಲ್ಲಿ ನಡೆಯಲಿದೆ.
- **ವಿಶ್ವ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಷಿಪ್**: ಮಾರ್ಚ್ 15ರಿಂದ 31ರವರೆಗೆ ಭಾರತದ ನವದೆಹಲಿಯಲ್ಲಿ ಆಯೋಜನನೆಯಾಗಲಿದೆ.
- **ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್**: ಮಾರ್ಚ್ 14ರಿಂದ 19ರವರೆಗೆ ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿದೆ.
- **ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್**: ಮಾರ್ಚ್ 28ರಿಂದ ಏಪ್ರಿಲ್ 2ರವರೆಗೆ ಭಾರತದ ದೆಹಲಿ ಆತಿಥ್ಯ ವಹಿಸಲಿದೆ.
- **ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್**: ಉಜ್ಬೆಕಿಸ್ತಾನದ ತಾಷ್ಕೆಂಟ್‌ನಲ್ಲಿ ಮಾರ್ಚ್ ಮೇ 1ರಿಂದ 14ರವರೆಗೆ ನಡೆಯಲಿದೆ.
- **ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್**: ಮೇ 3ರಿಂದ 13ರವೆಗೆ ದಕ್ಷಿಣ ಕೊರಿಯಾದ ಜಿಂಜುನಲ್ಲಿ ನಡೆಯಲಿದೆ.
- **ದೋಹಾ ಡೈಮಂಡ್ ಲೀಗ್ ಅಥ್ಲೆಟಿಕ್ಸ್**: ಮೇ 5ರಂದು ಕತಾರ್‌ನಲ್ಲಿ ನಡೆಯಲಿದೆ.
- **ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್**: ದಕ್ಷಿಣ ಕೊರಿಯಾದ ಡರ್ಬನ್‌ನಲ್ಲಿ ಮೇ 22ರಿಂದ 28ರವರೆಗೆ ಆಯೋಜನೆಯಾಗಲಿದೆ.
- **ಫ್ರೆಂಚ್ ಓಪನ್ ಟೆನಿಸ್**: ಮೇ 28ರಿಂದ ಜೂನ್ 11ರವರೆಗೆ ಪ್ಯಾರಿಸ್‌ನಲ್ಲಿ ನಡೆಯಲಿದೆ.
- **ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್**: ಇಂಗ್ಲೆಂಡ್‌ನಲ್ಲಿ ಜುಲೈ 3ರಿಂದ 16ರವರೆಗೆ ನಡೆಯಲಿದೆ.
- **ಫಿಫಾ ಮಹಿಳಾ ವಿಶ್ವಕಪ್**: ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಆತಿಥ್ಯದಲ್ಲಿ ಜುಲೈ 20ರಿಂದ ಆಗಸ್ಟ್ 20ರವರೆಗೆ ನಡೆಯಲಿದೆ.
- **ವಿಶ್ವ ಈಜು ಚಾಂಪಿಯನ್‌ಷಿಪ್**: ಜಪಾನ್‌ನ ಫುಕುವೊಕಾದಲ್ಲಿ ಜುಲೈ 14ರಿಂದ 30ರವರೆಗೆ ನಡೆಯಲಿದೆ.
- **ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್**: ಹಂಗರಿಯ ಬುಡಾಪೆಸ್ಟ್‌ನಲ್ಲಿ ಆಗಸ್ಟ್ 19ರಿಂದ 27ರವರೆಗೆ ನಡೆಯಲಿದೆ.
- **ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್**: ಡೆನ್ಮಾರ್ಕ್‌ನ ಕೋಪನ್‌ಹೇಗನ್‌ನಲ್ಲಿ ಆಗಸ್ಟ್ 21ರಿಂದ 27ರವೆಗೆ ಆಯೋಜನೆಯಾಗಲಿದೆ.
- **ಅಮೆರಿಕ ಓಪನ್ ಟೆನಿಸ್**: ಆಗಸ್ಟ್ 28ರಿಂದ ಸೆಪ್ಟೆಂಬರ್ 10ರವರೆಗೆ ನ್ಯೂಯಾರ್ಕ್‌ನಲ್ಲಿ ನಡೆಯಲಿದೆ.
- **ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್**: ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಸೆಪ್ಟೆಂಬರ್ 2ರಿಂದ 17ರವರೆಗೆ ನಡೆಯಲಿದೆ.
- **ವಿಶ್ವ ರೋಯಿಂಗ್ ಚಾಂಪಿಯನ್‌ಷಿಪ್**: ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ಸೆಪ್ಟೆಂಬರ್ 3ರಿಂದ 10ರವರೆಗೆ ಆಯೋಜನೆಯಾಗಲಿದೆ.
- **ವಿಶ್ವ ಕುಸ್ತಿ ಚಾಂಪಿಯನ್‌ಷಿಪ್**: ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ಸೆಪ್ಟೆಂಬರ್ 16ರಿಂದ 24ರವರೆಗೆ ನಡೆಯಲಿದೆ.
- **ಏಷ್ಯನ್ ಗೇಮ್ಸ್**: ಚೀನಾದ ಹ್ಯಾಂಗ್‌ಜೌನಲ್ಲಿ ಸೆಪ್ಟೆಂಬರ್ 23ರಿಂದ ಅಕ್ಟೋಬರ್ 8ರವರೆಗೆ ನಡೆಯಲಿದೆ.
- **ಎಟಿಪಿ ಫೈನಲ್ಸ್**: ನವೆಂಬರ್ 12ರಿಂದ 18ರವರೆಗೆ ಟುರಿನ್‌ನಲ್ಲಿ ನಡೆಯಲಿದೆ.
- **ವಿಶ್ವ ಬ್ಯಾಡ್ಮಿಂಟನ್ ಟೂರ್ ಫೈನಲ್ಸ್**: ಡಿಸೆಂಬರ್ 13ರಿಂದ 17ರವರೆಗೆ ನಡೆಯಲಿದ್ದು, ಸ್ಥಳ ನಿಗದಿಯಾಗಿಲ್ಲ.
- **ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್**: ಇನ್ನೂ ದಿನಾಂಕ ಪ್ರಕಟಣೆಯಾಗಿಲ್ಲ (ತಾತ್ಕಾಲಿಕ: ಮಾರ್ಚ್ 25ರಿಂದ ಮೇ 28).
- **ಪುರುಷರ ಏಕದಿನ ಕ್ರಿಕೆಟ್ ವಿಶ್ವಕಪ್**: ಭಾರತದಲ್ಲಿ ಅಕ್ಟೋಬರ್– ನವೆಂಬರ್‌ನಲ್ಲಿ ನಡೆಯಲಿದ್ದು, ಅಧಿಕೃತ ದಿನಾಂಕ ಇನ್ನೂ ನಿಗದಿಯಾಗಿಲ್ಲ.
- **ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್**: ಇಂಗ್ಲೆಂಡ್‌ನ ಓವಲ್‌ನಲ್ಲಿ ಜೂನ್‌ನಲ್ಲಿ ನಿಗದಿಯಾಗಿದೆ.
- **ಎಎಫ್‌ಸಿ ಏಷ್ಯಾಕಪ್ ಫುಟ್‌ಬಾಲ್**: ಕತಾರ್‌ನಲ್ಲಿ ನಿಗದಿಯಾಗಿದ್ದು, ದಿನಾಂಕ ಪ್ರಕಟವಾಗಿಲ್ಲ.

ರಾಮ್‌ಕುಮಾರ್ ರಾಮನಾಥನ್– ಪಿಟಿಐ ಚಿತ್ರ

ಟಾಟಾ ಓಪನ್ ಟೆನಿಸ್: ಯೂಕಿ, ರಾಮನಾಥನ್‌ಗೆ ಜಯ

ಪುಣೆ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಮತ್ತು ರಾಮ್‌ಕುಮಾರ್ ರಾಮ್‌ನಾಥನ್ ಅವರು ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಶುಭಾರಂಭ ಮಾಡಿದ್ದಾರೆ.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಯೂಕಿ 6-2 6-2ರಿಂದ ಈಕ್ವೆಡಾರ್‌ನ ಡಿಯೆಗೊ ಹಿಡಾಲ್ಗೊ ಎದುರು ಗೆದ್ದರು. ರಾಮನಾಥನ್ 2-6 7-5 6-2ರಿಂದ ಫಿನ್ಲೆಂಡ್‌ನ ಒಟ್ಟೊ ವಿರ್ಟಾನೆನ್ ವಿರುದ್ಧ ಜಯ ಸಾಧಿಸಿದರು.

ಬೋಪಣ್ಣಗೆ ರಾಮ್‌ಕುಮಾರ್ ಎದುರಾಳಿ: ರೋಹನ್ ಬೋಪಣ್ಣ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಮುಖಾಮುಖಿಯಾಗಲಿದ್ದಾರೆ.

ಕನ್ನಡಿಗ ಬೋಪಣ್ಣ ಅವರು ನೆದರ್ಲೆಂಡ್ಸ್‌ನ ವ್ಯಾನ್ ಡಿ ಜಾಂಡ್‌ಶಪ್ ಅವರ ಜೊತೆಯಾಗಿ ಕಣಕ್ಕಿಳಿಯಲಿದ್ದರೆ, ರಾಮನಾಥನ್ ಅವರು ಮೆಕ್ಸಿಕೊದ ಮಿಗೆಲ್ ಎಂಜೆಲ್ ರೇಯಸ್ ವರೆಲಾ ಜೊತೆಗೂಡಿ ಆಡುವರು.

ಸಿಲಿಚ್‌ಗೆ ಮೊದಲ ಸುತ್ತಿನ ಬೈ: ಅಮೆರಿಕ ಓಪನ್ ಮಾಜಿ ಚಾಂಪಿಯನ್, ಕ್ರೊವೇಷ್ಯಾದ ಮರಿನ್ ಸಿಲಿಚ್ ಅವರಿಗೆ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಬೈ ಸಿಕ್ಕಿದೆ. ಎರಡನೇ ಸುತ್ತಿನಲ್ಲಿ ಅವರು ಕಳೆದ ಆವೃತ್ತಿಯ ಫೈನಲಿಸ್ಟ್, ಫಿನ್ಲೆಂಡ್‌ನ ಎಮಿಲ್ ರುಸೊವರಿ ಎದುರು ಆಡುವರು.

ಮಾನಸ್ ದಾಮ್ನೆಗೆ ವೈಲ್ಡ್‌ಕಾರ್ಡ್: ದಕ್ಷಿಣ ಏಷ್ಯಾದ ಏಕೈಕ ಎಟಿಪಿ 250 ಟೂರ್ನಿಯಾದ ಟಾಟಾ ಓಪನ್‌ಗೆ ಭಾರತದ ಉದಯೋನ್ಮುಖ ಆಟಗಾರ ಮಾನಸ್ ದಾಮ್ನೆ ಅವರಿಗೆ ವೈಲ್ಡ್‌ಕಾರ್ಡ್ ಲಭಿಸಿದೆ.

ಕೋಲ್ಕತ್ತ ರೇಸ್

ಓಯಸಿಸ್ ಗೆಲ್ಲುವ ನಿರೀಕ್ಷೆ

ವೂಲ್ಫ್ 777 ನ್ಯೂ ಇಯರ್ಸ್ ಡೇ ಹ್ಯಾಂಡಿಕ್ಯಾಪ್ ಭಾನುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಓಯಸಿಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸರ್ಕಲ್ ಆಫ್ ಲವ್ 6, ಸಮ್ಮರ್ ಆಫ್ ನೈಟ್ 1, ಬಸಾರತ್ 4
2ನೇ ರೇಸ್: ಫುಲ್ ಆಫ್ ಗ್ರೇಸ್ 3, ಅಟ್ಲಾಂಟಿಕ 5, ಹೆಲ್‌ಬ್ಲೇಜರ್ 4
3ನೇ ರೇಸ್: ಆಸ್ಟೆರಿಕ್ 1, ಪ್ರಾಸ್ಪರಿಸ್ ಪ್ರಿನ್ಸ್ 4, ಸೀ ಡ್ರಾಗನ್ 5
4ನೇ ರೇಸ್: ಸೆಂಚೂರಿಯನ್ 5, ಮ್ಯಾಂಡೊಲಿನ್ 1, ಡಿವೈನ್ ಹಂಟ್ 6
5ನೇ ರೇಸ್: ಓಯಸಿಸ್ 5, ಸ್ಟಾಕ್‌ಬ್ರಿಡ್ಜ್ 4, ಥರ್ಡ್ ಅವೆನ್ಯೂ 6,
6ನೇ ರೇಸ್: ಕಾಂಟ್ರಿಬ್ಯೂಟ್ 1, ಕೈಂಡ್ ಆಫ್ ಮ್ಯಾಜಿಕ್ 6, ಸೂಪರ್‌ಸ್ಟ್ರೈಡ್ 5
7ನೇ ರೇಸ್: ರೀಜೆನ್ಸಿ ಸ್ಮೈಲ್ 6, ಪಿಸಾ 8, ಡ್ರೀಮ್ಸ್ 9

ಉತ್ತಮ ಬೆಟ್: ಸೆಂಚೂರಿಯನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಪ್ರಜಾವಾಣಿ ಭಾನುವಾರದ ಪುರವಣಿ
2023
ಭಾನುವಾರ, 1 ಜನವರಿ 2023

ಯುವ ಮನಸು ನವ ಕನಸು

ಹೊಸವರ್ಷದ ಸೂರ್ಯೋದಯದ ಈ ಸಮಯದಲ್ಲಿ ಯುವ ಮನಸುಗಳ ಹೊಸ ಕನಸುಗಳೇನು? ವಿವಿಧ ಕ್ಷೇತ್ರಗಳ ಆಯ್ದ ಯುವ ಸಾಧಕರು ಬಿಡಿಸಿಟ್ಟ ಕನಸಿನ ಚಿತ್ತಾರ ಇಲ್ಲಿದೆ...

ಮನುಷ್ಯ ಪ್ರೀತಿಯೊಂದೇ ಶಾಶ್ವತ

ಮೆಹಬೂಬ್ ಮುಲ್ತಾನಿ, ಕವಿ



ವರ್ಷಗಳು ಉರುಳಿದಂತೆ ನಾವು ಪ್ರಗತಿಯತ್ತ ಸಾಗುತ್ತಿದ್ದೇವೆ ಎನ್ನುವ ಸೋಗಿನಡಿ ನಾಟಕದ ಪಾತ್ರಧಾರಿಗಳಾಗಿ ನಿಂತಂತೆ ಭಾಸವಾಗುತ್ತಿದೆ. ಕ್ಷಣ ಕ್ಷಣಕ್ಕೂ ನಮ್ಮ ಭದ್ರತೆಯ ಕೋಟೆ ಒಡೆದು ಹೋಳಾಗುತ್ತಿರುವುದನ್ನು ನೋಡುತ್ತ ನಿಲ್ಲುವ ಸರದಿ ನಮ್ಮದಾಗುತ್ತಿದೆ. ಕನ್ನಡಿ ಮುಂದೆ ನಿಂತು ನೋಡಿದರೆ ನಮ್ಮ ಕ್ರೌರ್ಯ ನಮಗೆ ಕಾಣಿಸುವಂತಾಗಿದೆ. ಪ್ರೀತಿ, ಮಮತೆ ತುಂಬಿದ ತಾಯಿ ನಮ್ಮನ್ನು ಪೊರೆದರೂ, ಜಾತಿ, ಧರ್ಮ ಮತ್ತು ರಾಜಕೀಯ ಡೊಂಬರಾಟಗಳು ನಮ್ಮನ್ನು ಮನುಷ್ಯ ಪ್ರೀತಿಯಿಂದ ದೂರಮಾಡುತ್ತಿವೆ. ನಂದನವನಗಳಾಗಿದ್ದ ಯಾವ ಸ್ಥಳಗಳೂ ಇಂದು ಮೊದಲಿನಂತಿಲ್ಲ.

ನಾವು ಮನುಷ್ಯರು ಎನ್ನುವುದನ್ನು ಮರೆತು ಮೃಗಗಳಂತೆ ವರ್ತಿಸುತ್ತಿದ್ದೇವೆ. ನಮ್ಮಲ್ಲಿ ಇರುವ ಮೃಗತ್ವ ಕಡಿಮೆಯಾಗುವಲ್ಲಿ ಸಾಹಿತ್ಯ ಮತ್ತು ಓದಿನ ಪಾತ್ರ ಬಹಳಷ್ಟಿದೆ. ಉತ್ತಮ ಸಮಾಜ ಮತ್ತು ಮನುಷ್ಯನನ್ನು ನಿರ್ಮಿಸುವಲ್ಲಿ ಓದು ಸಹಾಯಕವಾಗಬಹುದೆಂಬ ಭಾವ ನನ್ನದು. ಮನುಷ್ಯನೊಬ್ಬ ಓದನ್ನು ರೂಢಿಸಿಕೊಂಡಾಗ ಸರಿ ತಪ್ಪುಗಳ ಅರಿವು ಮೂಡುವುದು. ಮನುಷ್ಯ ಪ್ರೀತಿಯ ಮಹತ್ವವನ್ನು ಸಾಹಿತ್ಯ ತಿಳಿಸಿಕೊಡುವುದು. ಸಾಮಾಜಿಕ ಜಾಲತಾಣಗಳಲ್ಲಿ ಕಾಣುವುದಷ್ಟೇ ಸತ್ಯವೆಂದು ನಂಬಿದ ಯುವ ಜನಾಂಗ ಮರಳಿ ಓದಿನ ಮಾರ್ಗದಲ್ಲಿ ಸಾಗಬೇಕಾದ ಅವಶ್ಯಕತೆ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ. ಇತಿಹಾಸವನ್ನೆ ಬದಲಿಸುವ ಈ ಕಾಲದಲ್ಲಿ ಯಾವುದು ಸತ್ಯ, ಯಾವುದು ನಿಖರವೆಂದು ತಿಳಿಯುವ ಮತ್ತು ಅದನ್ನು ಜಾಡಿ ಹಿಡಿಯುವ ಜಾಣ್ಮೆ ಕೇವಲ ಓದಿನಿಂದ ಸಾಧ್ಯ. ಸಾಹಿತ್ಯ ಮನುಷ್ಯತ್ವ ಗುಣ ಬೆಳೆಸುವಲ್ಲಿ ಸಹಾಯ ಮಾಡಿದರೆ ಓದು ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಸಹಾಯಕವಾಗುತ್ತದೆ. ಈ ನಿಟ್ಟಿನಲ್ಲಿ ಈ ವರ್ಷ ನನ್ನನ್ನೂ ಒಳಗೊಂಡು ನಮ್ಮ ಗೆಳೆಯರ ಬಳಗ ಓದಿನ ವಿಸ್ತಾರ ಹೆಚ್ಚಿಸುವ ಮತ್ತು ಮನುಷ್ಯ ಪ್ರೀತಿ ಬೆಳೆಸುವ ಕಾರ್ಯಗಳನ್ನು ಮಾಡುವ ಕನಸು ಹೊಂದಿದೆ. ಒಂದಿಲ್ಲ ಒಂದು ದಿನ ಈ ಮನುಷ್ಯ ಪ್ರೀತಿಯೇ ನಮ್ಮನ್ನು ಉಳಿಸುತ್ತದೆ ಎನ್ನುವ ಆಶಾಭಾವದೊಂದಿಗೆ ಹೊಸ ವರ್ಷವನ್ನು ಪ್ರಾರಂಭಿಸುತ್ತಿದ್ದೇವೆ.

ಸ್ವಂತಿಕೆಯ ಯತ್ನಕ್ಕೆ ವಿಶ್ವವೇ ವೇದಿಕೆ

ವಾರಿಜಾಶ್ರೀ ವೇಣುಗೋಪಾಲ್, ಗಾಯಕಿ

ನಾಲ್ಕೈದು ವರ್ಷಗಳಿಂದ ಮನಸ್ಸಿನಲ್ಲಿಯೇ ಬಿತ್ತಿಕೊಂಡಿದ್ದ ಬೀಜ ಹೊಸವರ್ಷದಲ್ಲಿ ಫಲ ನೀಡಲಿದೆ. ಜಗತ್ತಿನ ಹಲವು ಖ್ಯಾತನಾಮ ಸಂಗೀತ ನಿರ್ದೇಶಕರ ಜೊತೆ ಕೆಲಸ ಮಾಡಿದ್ದೇನೆ, ಬಿಡಿಬಿಡಿಯಾದ ಹಲವು ಆಲ್ಬಂಗಳಲ್ಲಿ ಹಾಡಿದ್ದೇನೆ, ಸಂಗೀತ ಸಂಯೋಜನೆ ಮಾಡಿದ್ದೇನೆ. ಆದರೆ ಸಂಪೂರ್ಣ ಸ್ವಂತಿಕೆಯ ಮೂಲ ಸಂಗೀತ ಆಲ್ಬಂ (ಒರಿಜಿನಲ್ ಮ್ಯೂಸಿಕ್ ಆಲ್ಬಂ) ಹೊರತರಬೇಕೆಂಬ ಕನಸು ಕನಸಾಗಿಯೇ ಇತ್ತು, ಈಗ ಆ ಕನಸಿಗೆ ಸ್ವರೂಪ ಸಿಕ್ಕಿದೆ.

ಹೊಸ ಕನಸಿನ ಪಯಣಕ್ಕೆ ವಿಶ್ವವೇ ವೇದಿಕೆ (ಗ್ಲೋಬಲ್ ಮ್ಯೂಸಿಕ್ ಫ್ಲಾಟ್‌ಫಾರ್ಮ್). ಯಾವುದೋ ಒಂದು ಪ್ರಕಾರದ ಚೌಕಟ್ಟು ಈ ಸಂಗೀತ ಸಂಪುಟಕ್ಕಿಲ್ಲ, ಭಾಷೆ, ದೇಶಗಳ ಬೇಲಿಯಿಲ್ಲ. ಎಲ್ಲಾ ದಿಕ್ಕುಗಳ ಕೇಳುಗ ಈ ಸಂಗೀತ ಆಲಿಸಿ ತಲೆದೂಗಬೇಕಷ್ಟೆ. ಇಲ್ಲಿ ಭಾರತೀಯ ಸಂಗೀತದ ಬಲವಾದ ಅಡಿಪಾಯವಿದೆ. ಶೇ 90ರಷ್ಟು ಭಾರತೀಯ ಪ್ರಾಚೀನ ವಾದ್ಯಗಳನ್ನೇ ಬಳಸಿದ್ದೇನೆ. 40- 50 ಸಂಗೀತಗಾರರು ನನ್ನ ಕಲ್ಪನೆಗಳಿಗೆ ಜೀವ ತುಂಬಿದ್ದಾರೆ. ಬಹುವಾದ್ಯ ಪಾರಂಗತ, ಅಮೆರಿಕದ ಮೈಕೆಲ್ ಲೀಗ್ ವಾದ್ಯ ನಿರ್ವಹಣೆ ಮಾಡಿದ್ದಾರೆ.

ಇದು ಸಂಪೂರ್ಣ ಸ್ವಂತಿಕೆಯ ಪ್ರಯತ್ನ ಎನ್ನಲು ಇನ್ನೊಂದು ಕಾರಣವಿದೆ, ಆಲ್ಬಂನ ಸಾಹಿತ್ಯ ಕೂಡ ನನ್ನದೇ. ಕಳೆದ ವರ್ಷದ ಕೋವಿಡ್ ಬಿಡುವಿನಲ್ಲಿ ಮೂಡಿದ ಭಾವನೆಗಳಿಗೆ ಸಾಹಿತ್ಯ ರೂಪ ನೀಡಿದ್ದೇನೆ. ಹಲವು ಸಂಗೀತಗಳ ವೈವಿಧ್ಯವಿದ್ದರೂ ಸಾಹಿತ್ಯ ಮಾತ್ರ ನನ್ನ ಭಾಷೆ ಕನ್ನಡದಲ್ಲಿರುತ್ತದೆ, ಇದು ಕೂಡ ಇನ್ನೊಂದು ವಿಶೇಷ.

ಎಲ್ಲವೂ ಅಂದುಕೊಂಡಂತೆ ನಡೆದರೆ 2023ರ ಮೇ ತಿಂಗಳಲ್ಲಿ ಈ ಆಲ್ಬಂ ನಾಮಕೋಟಿಗಳನ್ನು ಮೀಟಿ ವಿಶ್ವಾರ್ಪಣೆಯಾಗಲಿದೆ. ನಾನು ವೇದಿಕೆಯಲ್ಲಿ ಹಾಡಲಿಕ್ಕೆ ಆರಂಭಿಸಿ 25 ವರ್ಷ ತುಂಬುತ್ತಿರುವ ಮತ್ತೊಂದು ವಿಶೇಷ ಈ ಮೇ ತಿಂಗಳ ಜೊತೆ ಬೆಸೆದುಕೊಂಡಿದೆ. ಇದರ ಜೊತೆಗೆ ಭಾರತೀಯ ಸಂಗೀತದಲ್ಲಿ ಹೊಸತೆನ್ನುವ ಧ್ವನಿ, ಹೊಸ ಸವಿಯ ಹುಡುಕಾಟವೂ ಈ ವರ್ಷ ಸೇರಿಕೊಳ್ಳಲಿದೆ.

ನಿರೂಪಣೆ: ಎಂ.ಎನ್.ಯೋಗೇಶ್

ಬಾಕ್ಸ್ ಆಫೀಸ್ ದೂಳಿನಿಂದ ದೂರ

ಪೃಥ್ವಿ ಅಂಬಾರ್, ನಟ



ಪ್ರತಿ ಸಿನಿಮಾದಲ್ಲೂ ಭಿನ್ನವಾದ ಪಾತ್ರಗಳನ್ನು ನಿಭಾಯಿಸಬೇಕು, ಆ ಪಾತ್ರಗಳನ್ನು ನೋಡಿ ಪ್ರೇಕ್ಷಕರು ತಮ್ಮ ಜೀವನದಲ್ಲಿ ಒಳ್ಳೆಯ ಬದಲಾವಣೆಗಳನ್ನು ತರಬೇಕು ಎನ್ನುವುದು ಪ್ರತಿಯೊಬ್ಬ ಕಲಾವಿದನ ಆಸೆ. ಇದೇ ಅಭಿಲಾಷೆ ಹೊತ್ತು ಮತ್ತೊಂದು ಹೊಸ ವರ್ಷಕ್ಕೆ ಹೆಜ್ಜೆ ಇಟ್ಟಿದ್ದೇನೆ.

ಕೋವಿಡ್ ಕಾರಣದಿಂದಾಗಿ 2020 ಹಾಗೂ 2021ರಲ್ಲಿ ಚಿತ್ರರಂಗ ಸಂಪೂರ್ಣ ಸ್ತಬ್ಧವಾಗಿತ್ತು. ಇದರ ಪರಿಣಾಮ 2022ರಲ್ಲಿ ನಾವು ಬಿಡುವಿಲ್ಲದಷ್ಟು ಕಾಲ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿದ್ದೆವು. ಕುಟುಂಬಕ್ಕೆ ಸಮಯವನ್ನು ಮೀಸಲಿಡಲು ಯಾರಿಗೂ ಸಾಧ್ಯವಾಗಿರಲಿಲ್ಲ. ಹೀಗಾಗಿ ಈ ವರ್ಷ ಕುಟುಂಬದೊಂದಿಗೆ ಹೆಚ್ಚು ಸಮಯ ಕಳೆಯುವ ನಿರ್ಧಾರಕ್ಕೆ ಬಂದಿದ್ದೇನೆ. ಕೇವಲ ನಮ್ಮ ಗುರಿಯ ಹಿಂದೆ ಓಡಾಡಿಕೊಂಡು ಇರುತ್ತೇವೆ. ಆದರೆ ಈ ಗುರಿಯನ್ನು ಮುಟ್ಟುವ ಅವಧಿಯಲ್ಲಿ ಜೀವನದಲ್ಲಿ ಪ್ರಮುಖವಾದ ಕೆಲ ಅಂಶಗಳನ್ನು ಕಳೆದುಕೊಂಡಿರುತ್ತೇವೆ. ಅದರಲ್ಲಿ ಪ್ರಮುಖವಾಗಿ ಕುಟುಂಬದೊಂದಿಗಿನ ಒಡನಾಟ. ಸಿನಿಮಾ ಹಾಗೂ ಕುಟುಂಬಕ್ಕೆ ಸಮಾನವಾದ ಸಮಯ ನೀಡಬೇಕು ಎನ್ನುವುದು ನನ್ನ ಈ ವರ್ಷದ ರೆಸೊಲ್ಯೂಷನ್.

ಚಿತ್ರರಂಗಕ್ಕೆ ಇಳಿದ ಬಳಿಕ ಒಂದಿಷ್ಟು ಹವ್ಯಾಸಗಳನ್ನು ಮೂಟೆಕಟ್ಟಿ ಬದಿಗಿರಿಸಿದ್ದೆ. ಅದನ್ನು ಎತ್ತಿಕೊಂಡು ಮತ್ತೆ ಹೆಜ್ಜೆ ಹಾಕಬೇಕು. ಹಿಮಾಲಯ, ಕೇದಾರನಾಥ ಚಾರಣ ಈ ವರ್ಷದ ಬಕೆಟ್‌ಲಿಸ್ಟ್‌ನಲ್ಲಿದೆ. ಜೊತೆಗೆ ತಂದೆಯೊಂದಿಗೆ ಲಾಂಗ್‌ಡ್ರೈವ್ ಹೋಗಬೇಕು ಎನ್ನುವ ಕನಸಿದೆ.

ಸಿನಿಮಾ ವಿಚಾರಕ್ಕೆ ಬಂದರೆ, ಚಂದನವನದಲ್ಲಿ ನಾನಿನ್ನೂ ಹೊಸಮುಖ. ನನ್ನನ್ನು ನಾನು ಪ್ರಯೋಗಕ್ಕೆ ಒಡ್ಡಿಕೊಳ್ಳಲು ಅವಕಾಶವಿರುವ ಅವಧಿ ಇದು. ಹೀಗಾಗಿ ಇನ್ನೊಂದೆರಡು ವರ್ಷ ನಾನು ಪ್ರಯೋಗಾತ್ಮಕ ಚಿತ್ರಗಳಲ್ಲಿ ಕಾಣಿಸಿಕೊಳ್ಳಲು ಇಚ್ಛಿಸುತ್ತೇನೆ. 'ಸುಮ್ಮನೆ ಸಿನಿಮಾಗಳನ್ನು ಮಾಡುತ್ತಿದ್ದೀಯ, ಮಾರ್ಕೆಟ್ ನೋಡುವುದಿಲ್ಲ' ಎಂದು ಹಲವರು ಭಯ ಹುಟ್ಟಿಸುತ್ತಾರೆ. ಆದರೆ ನಾನು ಸೋಲು, ಗೆಲುವುಗಳ ಲೆಕ್ಕಾಚಾರವಿಡದೆ, ಬಾಕ್ಸ್ ಆಫೀಸ್ ದೂಳಿನಿಂದ ದೂರವಿದ್ದು ನಟನಾಗಿ ಈ ಕ್ಷೇತ್ರವನ್ನು ಅನುಭವಿಸುವ ಆಸೆ ಹೊತ್ತಿದ್ದೇನೆ. ಭಾಷೆಯ ಗಡಿ ಹಾಕಿಕೊಂಡಿಲ್ಲ, ಮರಾಠಿ, ತಮಿಳು ಚಿತ್ರಗಳಲ್ಲೂ ನಟಿಸಿದ್ದೇನೆ. ಆದರೆ ಕನ್ನಡಕ್ಕೆ ಆದ್ಯತೆ.

ಪ್ರತಿ ಗ್ರಾಮಕ್ಕೂ ನಾಟಕ ತಲುಪಬೇಕು

ಅಕ್ಷತಾ ಪಾಂಡವಪುರ, ರಂಗಭೂಮಿ ಕಲಾವಿದೆ

'ಲೀಕ್ ಔಟ್' ಏಕವ್ಯಕ್ತಿ ಪ್ರದರ್ಶನ ನೀಡಲೆಂದು ನಾನು ರಾಜ್ಯದಾದ್ಯಂತ ತಿರುಗಾಡುತ್ತಿದ್ದೇನೆ. ಹೀಗೆ ಹೋದಾಗಲೆಲ್ಲ, ಜನರು ನನ್ನನ್ನು ಕೇಳುತ್ತಿದ್ದದ್ದು ಒಂದೇ ಪ್ರಶ್ನೆ- 'ನೀವು ಡ್ಯಾನ್ಸ್ ಮಾಡಲೇ ಇಲ್ಲ, ಹಾಡು ಹೇಳಲೇ ಇಲ್ಲ'. ಈ ಎಲ್ಲದರಿಂದ ನನಗೆ ಅರ್ಥ ಆಗಿದ್ದು, ಜನರು ಈವರೆಗೂ ಕಂಪನಿ ನಾಟಕ, ಪೌರಾಣಿಕ ನಾಟಕಗಳ ಗುಂಗಿನಿಂದ ಹೊರಬಂದಿಲ್ಲ. ರಂಗಭೂಮಿ ಹಲವು ಸ್ಥಿತ್ಯಂತರಗಳನ್ನು ಕಂಡಿವೆ. ಆದರೆ, ಇವು ಯಾವುವೂ ಗ್ರಾಮೀಣ ಭಾಗದ ಜನರಿಗೆ ತಿಳಿದಿಲ್ಲ. ಈ ಕಾರಣಕ್ಕಾಗಿಯೇ ಬರುವ ವರ್ಷದಲ್ಲಿ 'ಮೊಬೈಲ್ ಥಿಯೇಟರ್' ಅನ್ನುವ ಪ್ರಯೋಗ ಮಾಡುವ ಇಚ್ಛೆಯನ್ನು ಹೊಂದಿದ್ದೇನೆ. ಮುಂದಿನ ವರ್ಷ ಇದರ ಸಾಕಾರಕ್ಕಾಗಿ ದುಡಿಯುವ ಪಣ ತೊಟ್ಟಿದ್ದೇನೆ.

ಮೊಬೈಲ್ ಥಿಯೇಟರ್ ಅಥವಾ ನ್ಯಾನೊ ಥಿಯೇಟರ್ ಅಂದರೆ ಏನು? ಒಂದೆಡೆ, ಜನರಿಗೆ ರಂಗಭೂಮಿಯ ಸಾಧ್ಯತೆಗಳ ಪರಿಚಯವಿಲ್ಲ. ಇನ್ನೊಂದೆಡೆ ಜನರ ಬಳಿಯೇ ರಂಗಭೂಮಿ ಹೋಗಬೇಕು. ಈ ಕಾರಣಕ್ಕಾಗಿ 'ಮೊಬೈಲ್ ಥಿಯೇಟರ್' ಬಹಳ ಮುಖ್ಯ ಎನಿಸುತ್ತದೆ. ಅಸ್ಸಾಂನಲ್ಲಿ ಈ ಪ್ರಯೋಗವಿದೆ. ಟೆಂಟ್‌ನಲ್ಲಿ ನಡೆಯುವ ನಾಟಕವನ್ನು ದೊಡ್ಡ ಸಂಖ್ಯೆಯಲ್ಲಿ ಜನ ನೋಡುತ್ತಾರೆ. ನನಗೆ ಇರುವುದು ದೊಡ್ಡ ಸಂಖ್ಯೆಯ ಜನರು ಒಂದೆಡೆ ಸೇರಬೇಕು ಎನ್ನುವ ಬಯಕೆ ಅಲ್ಲ. ಬದಲಿಗೆ, ಪ್ರತಿ ಗ್ರಾಮಕ್ಕೂ ನಾಟಕ ತಲುಪಬೇಕು ಎನ್ನುವುದು. ಜೊತೆಗೆ, ದೊಡ್ಡ ದೊಡ್ಡ ನಾಟಕಗಳನ್ನೂ ಒಂದು ಗಾಡಿ ತೆಗೆದುಕೊಂಡು ಹೋಗಿ ಅದರಲ್ಲೇ ಪ್ರದರ್ಶನ ನೀಡಬೇಕು. ಇದು ನನ್ನ ಸಂಕಲ್ಪ.

ರಂಗಭೂಮಿ ಅಂದರೆ ಸೇವೆ ಅಲ್ಲ. ನಿಜ ಹೇಳಬೇಕೆಂದರೆ, ಕಲೆ ಅಂದರೇನೇ ಸೇವೆ ಅಲ್ಲ. ಆದ್ದರಿಂದ ರಂಗಭೂಮಿಯ ಮೂಲಕವೂ ಜನರು ಬದುಕು ಕಟ್ಟಿಕೊಳ್ಳಬೇಕು. ಇದಕ್ಕೆ ಬೆಂಗಳೂರು ನಗರವೇ ಕೇಂದ್ರವಾಗಬಾರದು. ನನ್ನ ಈ 'ಮೊಬೈಲ್ ಥಿಯೇಟರ್'ನ ಮೂಲಕವೂ ಜನರು ಉದ್ಯೋಗ ಪಡೆಯುವಂತಾಗಬೇಕು.

ನಿರೂಪಣೆ: ಸುಕೃತ ಎಸ್.

ಶಿಶುನಾಳಧೀಶನ ಭಾಷೆ ಒಂದೇ...



ವಿಶಾಲಾಕ್ಷಿ ಅಕ್ಕಿ

ಬದುಕೇ ಹಾಡಾದ ಹಾವೇರಿ ಜಿಲ್ಲೆಯದು ಅಪ್ಪಟ ರೈತಾಪಿ ನೆಲ. ನೇಗಿಲ ದುಡಿಮೆಯೇ ಬದುಕು; ಅದೇ ಕಾವ್ಯ. 'ನಂಬಿಗೀಲೆ ದುಡಿತಾನ ಬಸವಣ್ಣ; ನಂಬಿಗ್ಯಾಗೈತಿ ಅವನ ಕಸುವಣ್ಣ' ಎಂದು ಬೇಂದ್ರೆಯವರು ಹಾಡಿದಂತೆ, ಬಸವಣ್ಣನನ್ನೇ ನಂಬಿ ದುಡಿಯುವ ಇಲ್ಲಿನ ಶ್ರಮಿಕರೆಲ್ಲ ನಡೆದಾಡುವುದು ಸಾಧುಸಂತರ-ಶರಣರ ಪಾದದೂಳಿಯಲ್ಲಿ; ಉಸಿರಾಡುವುದು ಸಂತತನದ ಗಾಳಿಯನ್ನೇ. ನಿಷ್ಠುರ; ಆದರೆ, ಬಡಿವಾರವಿಲ್ಲದ ಬದುಕು! ಶರೀಫನೇ ಶಿವಯೋಗಿಯಾದ ಭೂಮಿ!

ದುಡಿಮೆ-ಭಾವೈಕ್ಯವನ್ನು ಸಾರುವ ಶಿಶುವಿನಹಾಳದ 'ಶರೀಫಗಿರಿ' ಆಗಿರುವುದೇ ಶರೀಫರು- ಗುರುಗೋವಿಂದ ಭಟ್ಟರ ಗದ್ದುಗೆ ಹಾಗೂ ಬಸವಣ್ಣನಿಂದ. ಈ ಬಸವಣ್ಣನೇ ಶಿಶುನಾಳಧೀಶ. ಅವನ ಭಾಷೆ ಎಂದರೆ ಧರ್ಮ-ಮತಗಳನ್ನು ಮೀರಿದ ಕಾಯಕ.

ಎಲ್ಲವೂ ಇದ್ದು ಇಲ್ಲದಂತಿರುವ ನಿರ್ಲಿಪ್ತತೆ, ಕೊಡುಗೈಗೆ ಬಡತನ ಬಾಧಿಸದಂತಹ ಭಾವಸಿರಿತನ ಈ ನೆಲದ ಹೆಚ್ಚುಗಾರಿಕೆ. ರಾಜ್ಯದ ಉತ್ತರ-ದಕ್ಷಿಣಕ್ಕೆ ಸಂಪರ್ಕ ಕಲ್ಪಿಸುವ ಹೆಬ್ಬಾಗಿಲಾಗಿ, ಎರಡೂ ದಿಕ್ಕಿನ ಗಾಳಿ-ಗಂಧವನ್ನು ಉಂಡ ಭೂಮಿ ಹಾವೇರಿ. ಅಂತಲೇ ಅದನ್ನು ತಡೆದುಕೊಳ್ಳಲು ಬೇಕಾದ ಕಸುವು-ಸೈರಣೆಯನ್ನೂ ಬಲ್ಲದು! ಅಂದಮೇಲೆ ಇಲ್ಲಿನ ಕಳ್ಳು-ಬಳ್ಳಿಗೆ ಅದನ್ನು ಕಲಿಸಬೇಕೇ?

ನೆಲದ ಗರಿಮೆ ಮುಕ್ಕಾಗಿಸುವ ದೂಳಿನ ಕಣವೊಂದು ಯಾವ ಮಾಯದಿಂದ ಹಾರಿಬಂದರೂ ಅದರ ಕೂನು ಹಿಡಿದು, ಕೂಡಲೇ ತೊಳೆದು ಬಿಡುವ ತಿಳಿವು ಇಲ್ಲಿಯದು. ಮುಕ್ಕು ಮಾಡಲು ಎಳೆಸಿದವರಿಗೆ ಮಣ್ಣು ಮುಕ್ಕಿಸುವ ಜಾಣ್ಮೆಯೂ ಗೊತ್ತು.

ಬಯಲುಸೀಮೆಯ ಈ ನೆಲದ ಜಾತ್ರೆ-ಉರುಸುಗಳಲ್ಲಿ, ಹಬ್ಬ-ಹರಿದಿನಗಳಲ್ಲಿ ಆ ತಿಳಿವಿನ ಬೆಳಕು ವೇದ್ಯವಾಗುತ್ತದೆ. ಮೊಹರಂ ಕುಣಿತದಲ್ಲಿ, ಡೊಳ್ಳಿಗಳ ಪೂಜೆಯಲ್ಲಿ, ಚೊಂಗ್ಯಾದ ಸವಿಯಲ್ಲಿ, ಆಲೇದೇವರ ಮೆರವಣಿಗೆಯಲ್ಲಿ, ಕೃಷಿಕರ ಹಟ್ಟಿಹಬ್ಬದಲ್ಲಿ, ವ್ಯಾಪಾರಸ್ಥರ ದೀಪಾವಳಿಯಲ್ಲಿ, ಲಕ್ಷ್ಮೀಪೂಜೆಗೆ ಕಳೆತರುವ ಕಂಠಮಾಲಿಯಲ್ಲಿ, 'ಮಾನಾಮಿ'ಯಲ್ಲಿ, ದ್ಯಾಮವ್ವ-ದುರ್ಗವ್ವರ ಬನ್ನಿಯಲ್ಲಿ (ಬನ್ನಿ ಮುಡಿಯುವುದು) ಶ್ರಾವಣ-ರಮ್ಜಾನ್ ಮಾಸ ಆಚರಣೆಯಲ್ಲಿ ಸಹಬಾಳ್ವೆಯ ಸಂಕೇತಗಳಿವೆ.

ಜೋಕಾಲಿ ಜೀಕುಗಳಲ್ಲಿ, ಎತ್ತುಗಳು ಕರಿ ಹರಿಯುವ ಕಾರಹುಣ್ಣಿಮೆಯಲ್ಲಿ, ಚರಗ ಚೆಲ್ಲುವ ಸೀಗೆಹುಣ್ಣಿಮೆಯಲ್ಲಿ, ಗಣಪ್ಪನ ಹಬ್ಬದಲ್ಲಿ, ಗೌರಿ ಹುಣ್ಣಿಮೆಯ ಚೆಂಡು ಹೂವಿನ ದಂಡೆಯ ಸಡಗರದಲ್ಲಿ, ಸಂಕ್ರಮಣದ ಸಕ್ಕರೆಗೊಂಬೆಗಳ ಸಿಹಿಯಲ್ಲಿ, ಯುಗಾದಿಯ ಬೇವು-ಬೆಲ್ಲದಲ್ಲಿ, ಊರಲ್ಲಿ ಅಲ್ಲಲ್ಲಿ ಕೆಲ ಮನೆಗಳ ಮೇಲೆ ಕಾಣುವ ಗುಡಿ ಪಾಡವಾ ಸಂಭ್ರಮದಲ್ಲಿ, ದರ್ಗಾದಲ್ಲಿ ಸಕ್ಕರೆ ಓದುಕೆ ಮಾಡುವಲ್ಲಿ, ಹಾವನೂರಿನ ದ್ಯಾಮವ್ವನಿಗೆ ಹರಕೆ ಸಲ್ಲಿಸುವಲ್ಲಿ, ಹೊಲ ಹರಗುವಲ್ಲಿ, ಬಿತ್ತಿ-ಬೆಳೆಯುವಲ್ಲಿ, ಒಕ್ಕಲು ಮಾಡುವಲ್ಲಿ, ರಾಶಿ ಪೂಜೆಯಲ್ಲಿ, ಬಣವೆ ಒಟ್ಟುವಲ್ಲಿ ಎಲ್ಲೆಲ್ಲಿಯೂ ಆ ತಿಳಿವಿನ ಗಾಳಿಯದೇ ಘಮ.

ಕಲೆ: ಗುರು ನಾವಳ್ಳಿ



ಕನ್ನಡದ ಸ್ಫೂರ್ತಿಯ ಸೆಲೆ ನಮ್ಮಂತೆಯೇ ಪುಟಿದೇಳಲಿ ಎನ್ನುತ್ತಿವೆಯೇ ಹಾವೇರಿಯ ಗುರುತಾಗಿರುವ ಈ ಕೃಷ್ಣಮೃಗಗಳು. ಬಾಡದಲ್ಲಿರುವ ಕನಕ ಸ್ಮಾರಕ ಕೂಡ ಸಾಮರಸ್ಯದ ಗೀತೆ ಹಾಡುವಂತೆ ಒತ್ತಾಯಿಸುತ್ತಿದೆ
ಚಿತ್ರಗಳು: ಶಶಿಧರಸ್ವಾಮಿ ಹಿರೇಮಠ

ಯಾರ ನಂಬಿಕೆಗಳು ಯಾರನ್ನೂ ಗಾಸಿ ಮಾಡಿಲ್ಲ. ಯಾರ ಅನ್ನಕ್ಕೂ ಕಲ್ಲು ಹಾಕಿಲ್ಲ. ಗುರು-ಶಿಷ್ಯ ಸಂಬಂಧಕ್ಕೆ, ಬದುಕಿನ ರೀತಿ-ನೀತಿಗೆ ಹೊಸ ವ್ಯಾಖ್ಯಾನ ಕೊಟ್ಟ ಶಿಶುನಾಳ ಶರೀಫರು, 'ಕುಲ ಕುಲಕುಲವೆಂದು ಬಡಿದಾಡದಿರಿ' ಎಂದು ಹಾಡಿ, ಅಂತೆಯೇ ಬದುಕಿ ತೋರಿದ ಕನಕದಾಸರು, 'ಊರಿಗೆ ದಾರಿಯನಾರು ತೋರಿದರೇನು? ಯಾತರದು ಹೂವದು ನಾತರದು ಸಾಲದೇ?' ಎಂದು ಗುಣವೊಂದೇ ಮೇಲಾಗಿ ಉಳಿದುದೆಲ್ಲದಕ್ಕೆ ಸೋಲಾಗಬೇಕು ಎಂದು ಸಾರಿದ ಸರ್ವಜ್ಞ, ನಿಜಶರಣ ಅಂಬಿಗರ ಚೌಡಯ್ಯನಂಥವರು ಜನಿಸಿದ ಈ ನೆಲದಲ್ಲಿ ಸುಳಿಯುವ ಗಾಳಿಗೂ ಧನ್ಯತೆಯ ಭಾವ.

ಗುರು ಗೋವಿಂದರು, ಶಿಶುನಾಳಕ್ಕೇ ಬಂದು ಶಿಷ್ಯನನ್ನು ಕರೆದೊಯ್ದರೆ; ಮುಧೋಳದ ರನ್ನನಿಗೆ ಬಂಕಾಪುರದ ಗುರು ಅಜಿತಸೇನಾಚಾರ್ಯರಲ್ಲಿ ಶಿಷ್ಯವೃತ್ತಿ! ಈ ಗುರು-ಶಿಷ್ಯ ಪರಂಪರೆಯ ಮುಂದುವರಿಕೆಯ ಫಲವೇ ಇಲ್ಲಿನ ವಿನಯವಂತಿಕೆಗೆ ಕನ್ನಡಿ.

ಅಂಧ-ಅನಾಥ ಮಕ್ಕಳಿಗೆ ಅನ್ನವಿಕ್ಕಿ- ಅಕ್ಷರ ಕಲಿಸಿ, ಪೋಷಿಸಿ, ಸಂಗೀತ ಸರಸ್ವತಿಯ ಸಾಕ್ಷಾತ್ಕಾರ ಮಾಡಿಸಿದ ಹಾನಗಲ್ಲಿನ ಕುಮಾರಸ್ವಾಮೀಜಿ ತನ್ನ ಕೂಸೆಂಬ ಹೆಮ್ಮೆ ಹಾವೇರಿಯದು. ಅವರ ಉಡಿಗೆ ಬಿದ್ದ ಗಾನಯೋಗಿ ಪಂಚಾಕ್ಷರಿ ಗವಾಯಿ, ಪಂಚಾಕ್ಷರಿ ಶಿವಯೋಗಿಗಳ ಶಿಷ್ಯರಾದ ಪುಟ್ಟರಾಜ ಗವಾಯಿಗಳೂ ಈ ಜಿಲ್ಲೆಯವರೆ. ಜಾತಿ-ಧರ್ಮಗಳ ಹಂಗು ಹರಿದುಕೊಂಡು ಮನುಕುಲದ ಉದ್ಧಾರಕ್ಕೆ ದುಡಿದವರು. ಸಾಹಿತ್ಯ-ಸಂಗೀತ-ಸಾಂಸ್ಕೃತಿಕ ಕ್ಷೇತ್ರದ ಕೈಂಕರ್ಯಕ್ಕಾಗಿ ಜೋಳಿಗೆ ಹಿಡಿದವರು. ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ ಎರಡರಲ್ಲೂ ಸಾಧನೆಗೈದ, ಜೀವನ ಮೌಲ್ಯಗಳನ್ನು ಬೆಳೆಸುವ ಕಾಯಕ ಮಾಡಿದ ಪುಣ್ಯಾಶ್ರಮದ ಪುಣ್ಯಪುರುಷರು.

ಬಿತ್ತಿದ್ದೇ ಬೆಳೆಯುವುದು ಎಂಬುದನ್ನು ಬಲ್ಲ ಈ ನೆಲಕ್ಕೆ, ಸಾಮರಸ್ಯವನ್ನೇ ಬಿತ್ತಿ, ಅದನ್ನೇ ಒಕ್ಕಿ, ನಾಡಿನ ತುಂಬ ಸೂರೆ ಮಾಡುವುದೇ ಕಾಯಕ. ಈ ಕಾಯಕದಲ್ಲಿ ತುಸು ಅಡಚಣೆಗಳಾಗಿರಬಹುದು. ಆದರೆ, ನಿಂತಿಲ್ಲ. ಅಂಥ ಕೈಂಕರ್ಯದಲ್ಲಿ ನಿರತ ಹುಕ್ಕೇರಿಮಠ ಜಿಲ್ಲೆಯ ಮತ್ತೊಂದು ಗರಿ. ಅಗಡಿಯ ಶೇಷಾಚಲ ಸದ್ಗುರುಗಳು, ಸವಣೂರಿನ ಸತ್ಯಬೋಧರ ಅಧ್ಯಾತ್ಮದ ನೆರಳಿನ ತಂಪಿನಲ್ಲಿ ಈ ನೆಲ ವಿನೀತಗೊಂಡಿದೆ. 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಜನಪದರ ಶ್ರಮ- ಅಭಿಮಾನ ಪೊರೆದಿದೆ.

2ನೇ ಪುಟಕ್ಕೆ...

ಭಾವೈಕ್ಯದ ಬೀಡು, ಗುರು–ಶಿಷ್ಯ ಸಂಬಂಧಕ್ಕೆ ಹೊಸಭಾಷ್ಯ ಬರೆದ ನಾಡು, ಕೃಷ್ಣಮೃಗಗಳ ಕಾಡು ಹಾವೇರಿಯಲ್ಲಿ ಇದೇ 6ರಿಂದ ನುಡಿಹಬ್ಬ. ಸಾಮರಸ್ಯವನ್ನೇ ಬಿತ್ತಿ ಬೆಳೆಯುವ, ಏಲಕ್ಕಿ ಹಾರ, ಸವಣೂರು ಖಾರವನ್ನು ಪ್ರೀತಿಯಿಂದ ಎತ್ತಿ ಕೊಡುವ ಈ ನಾಡಿನ ಅನನ್ಯತೆಯ ಕಡೆಗೊಂದು ನುಡಿಹಬ್ಬದ ನೆಪದಲ್ಲಿ ಹೊರಳುನೋಟ...

'ಯಾವುದೇ ಭಾಷೆಗೆ ಕಿರೀಟ ಬೇಡ'

ಭಾರತದ ಸಂವಿಧಾನದಲ್ಲಿ ಒಪ್ಪಿತವಾದ ಭಾಷೆಗಳಿಗೆ ಸರಿಸಮಾನವಾದ ಸ್ಥಾನಮಾನ ಸಿಗಬೇಕು. ಯಾವುದಕ್ಕೂ ಕಿರೀಟ ತೊಡಿಸುವುದು ಬೇಡ. ಅಥವಾ ತಲೆಪಟ್ಟಿ ಕಟ್ಟಿ ನೀನು ಯಜಮಾನ, ಪ್ರಮುಖ ಎಂದು ಹೇಳುವುದು ಬೇಡ ಎನ್ನುತ್ತಾರೆ ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ದೊಡ್ಡರಂಗೇಗೌಡ. ಅವರೊಂದಿಗಿನ ಒಂದು ಆತ್ಮೀಯ ಮಾತುಕತೆ...

ಪುಟ-2



‘ಯಾವುದೇ ಭಾಷೆಗೆ ಕಿರೀಟ ಬೇಡ’

ಕನ್ನಡದ ಪ್ರಗಾಥಗಳ ಸಾಮ್ರಾಟ ಎಂದೇ ಖ್ಯಾತರಾದ ದೊಡ್ಡರಂಗೇಗೌಡರು ಕವಿ, ಸಾಹಿತಿ, ಚಲನಚಿತ್ರ ಗೀತ ರಚನೆಕಾರ, ಮೇಲಾಗಿ ನೆಚ್ಚಿನ ಶಿಷ್ಯರ ಪ್ರೀತಿಯ ಮೇಷ್ಟ್ರು. ‘ಮನುಜ’ ಎಂಬ ಕಾವ್ಯನಾಮವನ್ನೂ ಹೊಂದಿರುವ ಈ ಕವಿಯೀಗ, ‘ಮನುಷ್ಯ ಜಾತಿ ತಾನೊಂದೆ ವಲಂ’ ಎಂದು ಸಾರಬೇಕಾದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದಾರೆ. ಆ ನೆಪದಲ್ಲಿ ‘ಪ್ರಜಾವಾಣಿ’ ಅವರೊಂದಿಗೆ ನಡೆಸಿದ ಮಾತುಕತೆಯ ಆಯ್ದಭಾಗ ಇಲ್ಲಿದೆ



ದೊಡ್ಡರಂಗೇಗೌಡ

ಚಿತ್ರ: ರಂಜು ಪಿ.

ಸಂದರ್ಶನ: ಅಭಿಲಾಷ್ ಪಿ.ಎಸ್.

- **ಅಧ್ಯಕ್ಷರಾಗಿ ಘೋಷಣೆಯಾಗಿ ಎರಡು ವರ್ಷ ಕಳೆದಿದೆ. ಈ ಅವಧಿ ನಿಮ್ಮ ಮೇಲೆ ಮಾಡಿದ ಪರಿಣಾಮ...**

ಈ ಅವಧಿಯಲ್ಲಿ ನಾನು ಸಂಪೂರ್ಣವಾಗಿ ಅಧ್ಯಯನ ನಿರತನಾದೆ. ನನ್ನ ಜೀವನದಲ್ಲಿ ನಾನು ಬರೆಯದ ದಿನಗಳೇ ಇಲ್ಲ. ಈ ಅಭ್ಯಾಸ ಅಷ್ಟು ಒಗ್ಗಿಹೋಗಿದೆ. 70-80ರ ದಶಕದಲ್ಲಿ 80-85 ಕಥೆಗಳನ್ನು ಬರೆದಿದ್ದೆ. ನಂತರದಲ್ಲಿ ನಾನು ಎಷ್ಟರಮಟ್ಟಿಗೆ ಕಾವ್ಯರಚನೆಯಲ್ಲಿ ಮಗ್ನನಾದೆ ಎಂದರೆ, ಪದ್ಯ ಬರೆಯದೇ ಇದ್ದ ಕ್ಷಣವೇ ಇಲ್ಲವೇನೋ ಎಂಬಷ್ಟರ ಮಟ್ಟಿಗೆ ಕಾವ್ಯದ ಸಂಸರ್ಗದಲ್ಲಿ ಬಿದ್ದೆ. ಇದನ್ನು ನಾನು ಕಾವ್ಯ ಕೃಷಿ ಎನ್ನುತ್ತೇನೆ. ಸಾಹಿತ್ಯ ತಪಸ್ವಿಯಂತೆ ನನ್ನ ಸುತ್ತ ನಾನೇ ವಲ್ಮೀಕವನ್ನು ಕಟ್ಟಿಕೊಳ್ಳುತ್ತಾ ಏಕಾಂತತೆಯನ್ನು ಅನುಭವಿಸುತ್ತಾ, ಜೀವನಾನುಭವವನ್ನು ಕಂಡ ರೀತಿಯಲ್ಲಿ ಅವುಗಳನ್ನೇ ಪುಟ್ಟಪುಟ್ಟ ಕಥೆಗಳನ್ನಾಗಿ ಮಾಡಿ ಝೆನ್ ಕಥೆಗಳನ್ನೂ ಬರೆದೆ.

ಗದ್ಯ ಬರೆಯುವುದು ಬಹಳ ಕಷ್ಟದ ಕೆಲಸ. ಪದ್ಯವಾದರೆ ಒಂದು ಆವೇಗ, ಆವೇಷ, ಉನ್ಮಾದದಲ್ಲಿ ಕಾರಂಜಿಯ ರೀತಿ ಚಿಮ್ಮಿಬಿಡುತ್ತೆ. ಆಮೇಲೆ ಅದಕ್ಕೊಂದು ವಿರಾಮ. ಅದನ್ನೇ ವರ್ಡ್ಸ್‌ವರ್ತ್ ‘They flash upon that inward eye’ ಎಂದಿರುವುದು. ಪದ್ಯ ಕೋಲ್ಮಿಂಚಿನಂತೆ... ನಾಳೆ ಬರೆಯುತ್ತೇನೆ ಎಂದು ಮುಂದೂಡಿದರೆ ಅದರಲ್ಲಿ ಆ ತೀವ್ರತೆ, ಪದಪುಂಜದ ಅನುಕ್ರಮಣಿಕೆ ಇರುವುದಿಲ್ಲ. ಆದರೆ ಕಥೆಗೆ ಮಾನಸಿಕವಾಗಿ ಸಿದ್ಧತೆ ಬೇಕು. ಶಿಲ್ಪಿ ಒಂದು ಮೂರ್ತಿಯನ್ನು ಕೆತ್ತಿದಂತೆ ಕಥೆಯನ್ನು ಕೆತ್ತಬೇಕು. ಇಲ್ಲ ಶಿಲ್ಪಭಗ್ನವಾಗುತ್ತದೆ. ಪಾತ್ರಗಳ ಮೇಲೆ ಬಲವಂತವಾಗಿ ತತ್ವ, ಸಿದ್ಧಾಂತಗಳನ್ನು ಹೇರಬಾರದು. ಅವುಗಳು ಅದರ ಪಾಡಿಗೆ ಬೆಳೆದು, ಅಂತ್ಯ ಕಾಣಬೇಕು. ನಾನು ಈ ದಿಸೆಯಲ್ಲಿ ಪ್ರಯತ್ನ ಮಾಡಿದೆ. ಹೀಗೆ ಕೋವಿಡ್ ಅವಧಿಯಲ್ಲಿ ಮತ್ತೆ ಆರಂಭವಾದ ಗದ್ಯ ಪಯಣದಲ್ಲಿ 47 ಕಥೆಗಳನ್ನು ಬರೆದೆ ಎಂದರೆ ಆಶ್ಚರ್ಯವಾಗಬಹುದು! ನಿಂತು ಹೋದ ಕಥಾಬರವಣಿಗೆಯನ್ನು ಮತ್ತೆ ಪ್ರಾರಂಭಿಸಲು ಕೋವಿಡ್ ಒಂದು ನೆಪವಾಯ್ತು. ಜೊತೆಗೆ 84 ಕವಿತೆಗಳ ಹೊಸ ಸಂಕಲನ ‘ಮಣ್ಣಿನ ಹಣತೆಗಳು’ ಕೂಡಾ ಶೀಘ್ರದಲ್ಲೇ ಬಿಡುಗಡೆಯಾಗಲಿದೆ.

- **ಈ ಅವಧಿಯಲ್ಲಿ ಅಧ್ಯಕ್ಷರ ಉತ್ಸಾಹ ಕುಂದಿದೆಯೇ?**

ಸಮ್ಮೇಳನಕ್ಕೆ ಸಿದ್ಧತೆ ಹೇಗಿತ್ತು?

ದೈಹಿಕವಾಗಿ ನಾನು ಆಗಿನಷ್ಟು ಸದೃಢನಾಗಿಲ್ಲ. ಕೊಂಚ ಮಂಡಿನೋವು... ಆದರೆ ಮಾನಸಿಕವಾಗಿ ನಾನು ಬಹಳ ಗೆಲುವಿನಲ್ಲಿದ್ದೇನೆ. ನನಗೆ ಬರೆಯದೇ ಇದ್ದರೆ ಐಸೊಲೇಷನ್! ಅಥವಾ ಲಾಕ್‌ಡೌನ್! ಬರವಣಿಗೆ ಅಭ್ಯಾಸ ನನ್ನ ಮನೋಸ್ಥೈರ್ಯ ಹೆಚ್ಚಿಸಿದೆ.

ಕಳೆದೆರಡು ವರ್ಷಗಳ ಅವಧಿಯಲ್ಲಿ ನನಗಿಂತ ಪ್ರಬುದ್ಧರು, ಹಿರಿಯರು, ಬರವಣಿಗೆಯ ಸಂಶೋಧನೆಗಳಲ್ಲಿ ಕೆಲಸ ಮಾಡಿದಂಥವರನ್ನು ಭೇಟಿಯಾಗಿದ್ದೆ. ಅವರ ಬಳಿ ಕುಳಿತು ಚರ್ಚಿಸಿ, ವಿದ್ಯಾರ್ಥಿಯ ಹಾಗೆ ಟಿಪ್ಪಣಿ ಮಾಡಿಕೊಂಡಿದ್ದೇನೆ. ಭಾಷಣದಲ್ಲಿ ಕರ್ನಾಟಕದ, ಕನ್ನಡದ ಎಲ್ಲ ಬಗೆಯ ಕಾರ್ಯಾಲಯಗಳ ಸಮಸ್ಯೆಗಳನ್ನು ಹೇಳಬೇಕು ಎನ್ನುವುದು ನನ್ನ ಇಂಗಿತ. ಇದಕ್ಕಾಗಿ ಟಿಪ್ಪಣಿ ಮಾಡಿಕೊಂಡಿದ್ದೇನೆ. ಇವೆಲ್ಲವುಗಳನ್ನೂ ಸೇರಿಸಿದರೆ ದೊಡ್ಡ ಗ್ರಂಥವೇ ಆಗುತ್ತದೆ. ಇವುಗಳಲ್ಲಿ ಆಯ್ದ ಅಂಶಗಳನ್ನು 48 ಪುಟಗಳ ಭಾಷಣವನ್ನಾಗಿ ಮಾಡಿದ್ದೇನೆ. ಉಳಿದ ಅಂಶಗಳನ್ನು ಮುಂದೆ ಬಿಡಿಬಿಡಿ ಲೇಖನಗಳನ್ನಾಗಿ ಮಾಡುತ್ತೇನೆ.

- **ಅಧ್ಯಕ್ಷರಾಗಿ ವೇದಿಕೆಯೇರುವ ಸಂದರ್ಭದಲ್ಲಿ ಗಡಿ ವಿವಾದ ನಿಮ್ಮ ಮುಂದೆ ಬಂದಿದೆ...**

ಭಾಷಾವಾರು ಪ್ರಾಂತ್ಯಗಳ ವರ್ಗೀಕರಣವನ್ನು ವಲ್ಲಭಬಾಯಿ ಪಟೇಲ್ ಅವರು ಮಾಡಿದ ಮೇಲೆ, ಗಡಿ ಹಾಕಿ ಇದು ಕರ್ನಾಟಕದ ವ್ಯಾಪ್ತಿ, ಇದು ಮಹಾರಾಷ್ಟ್ರದ ವ್ಯಾಪ್ತಿ ಎಂದು ತೋರಿಸಿದ್ದಾರೆ. ಈ ಕುರಿತು ಬೇಕಾದಷ್ಟು ಆಯೋಗಗಳು ಆಗಿವೆ, ತೀರ್ಪುಗಳೂ ಬಂದಿದ್ದಾವೆ. ಮಹಾಜನ್ ವರದಿ ನಮಗೆ ಭಗವದ್ಗೀತೆ, ಬೈಬಲ್, ಕುರಾನ್. ಅದಕ್ಕೆ ಅಷ್ಟು ಬೆಲೆ ಇದೆ. ಪ್ರತಿವರ್ಷವೂ ಸಮ್ಮೇಳನದ ಸಂದರ್ಭದಲ್ಲೇ ಮರಾಠಿಗರು ಈ ವಿಷಯದ ಬಗ್ಗೆ ಕ್ಯಾತೆ ತೆಗೆಯುತ್ತಾರೆ. ಅವರು ಮಹಾಮೇಳವನ್ನು ಅದ್ಧೂರಿಯಾಗಿ ಮಾಡುತ್ತಾರೆ. ಅದಕ್ಕೆ ಎಳ್ಳಷ್ಟು ಅಡಚಣೆ ಆಗದ ರೀತಿ ನೋಡಿಕೊಳ್ಳುತ್ತಾರೆ. ನಮಗೆ ಗಡಿತಂಟೆ ತೆಗೆದು, ಸಮ್ಮೇಳನದ ಸಂದರ್ಭದಲ್ಲಿ ಗಲಿಬಿಲಿಗೊಳಿಸುವ ಕಿಡಿಗೇಡಿತನ ಮಹಾರಾಷ್ಟ್ರದ ಮಂತ್ರಿಗಳು ಮತ್ತು ಅಲ್ಲಿನ ಅತಿರೇಕವಾದಿಗಳದ್ದು. ಅದನ್ನೇ ಮೂಲಧನವನ್ನಾಗಿ ಮಾಡಿ, ಮೈಬೆಚ್ಚಗೆ ಮಾಡಿಕೊಳ್ಳುತ್ತಿದ್ದಾರೆ.

ನಾನು ತಯಾರಿಸಿದ ಅಧ್ಯಕ್ಷ ಭಾಷಣದ ಮೊದಲ ಅಜೆಂಡಾದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿರಲಿಲ್ಲ. ಆದರೆ ಕಳೆದೆರಡು ವಾರದಿಂದ ನಡೆದ ಘಟನೆಗಳ ನಂತರ, ಈ ವಿಷಯವನ್ನು ಸೇರಿಸಿ, ಅದಕ್ಕೆ ಮೊದಲ ಆದ್ಯತೆ ನೀಡಿದ್ದೇನೆ. ಮಹಾಜನ್ ವರದಿ ಅನ್ವಯ ಬೆಳಗಾವಿ ಕನ್ನಡ ನಾಡಿಗೆ ಸೇರಬೇಕು. ಒಂದು ಅಂಗುಲ ನೆಲವನ್ನೂ ನಿಮಗೆ ಬಿಟ್ಟುಕೊಡುವುದಿಲ್ಲ ಎಂದು ನಾವು ಗಂಟಾಘೋಷವಾಗಿ ಹೇಳಬೇಕಾಗಿದೆ. ಒಂದು ಹಳ್ಳಿಯನ್ನೂ ಬಿಟ್ಟುಕೊಡುವುದಿಲ್ಲ ಎಂಬುವುದು ಇದರ ಅರ್ಥ. ಇಷ್ಟೆಲ್ಲ ಹೇಳುವುದಕ್ಕೂ ಕಾರಣವಿದೆ.

ನಾನು ಪ್ರವಾಸಪ್ರಿಯ. ಅಕ್ಕಲಕೋಟೆ, ಜತ್ತ, ಸೊಲ್ಲಾಪುರ ನೋಡಿದ್ದೇನೆ. ಅಲ್ಲಿ ನೂರು ಮನೆಗಳಿದ್ದರೆ ಆ ಪೈಕಿ ತೊಂಬತ್ತು ಮನೆಯಲ್ಲಿ ಕನ್ನಡವನ್ನು ಮಾತನಾಡುತ್ತಾರೆ. ಸೊಲ್ಲಾಪುರ, ಆಗಿನ ಸೊನ್ನಲಗಿ, ಕನ್ನಡದ ಆವಾಸಸ್ಥಾನ. ನಾವು ಆ ಪ್ರಾಂತವನ್ನು ನಮ್ಮದು ಎನ್ನಲು ಏಕೆ ಹಿಂದೆಮುಂದೆ ನೋಡಬೇಕು. ನಮಗೆ ಸೇರಬೇಕು ಎನ್ನುವುದು ನೈತಿಕ ಹಕ್ಕು. ಇದಕ್ಕೆ ವಿರೋಧವಾಗಿರುವವರನ್ನು ವಿರೋಧಿಸುವಲ್ಲಿ ತಪ್ಪಿಲ್ಲ. ಈ ಕಾರಣಕ್ಕಾಗಿ ನಾನು ಮರಾಠಿಗರನ್ನು ವಿರೋಧಿಸಿದ್ದೇನೆ.

ಇದೇ ರೀತಿ ಕಾಸರಗೋಡಿನಲ್ಲೂ ಒಂದು ಸಮಸ್ಯೆ ಇದೆ. ಇಲ್ಲಿ ಶಾಲೆಗಳು ಇಕ್ಕಟ್ಟಿಗೆ ಸಿಲುಕಿವೆ. ಇಲ್ಲಿನ ಶಾಲೆಗಳಲ್ಲಿ ಕನ್ನಡ ಭಾಷೆ ತಿಳಿದಿಲ್ಲದ ಶಿಕ್ಷಕರನ್ನು ನೇಮಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಕನ್ನಡದ ಮಕ್ಕಳಿಗೆ ಕನ್ನಡದಲ್ಲಿ ಪಾಠ ಹೇಳಬೇಕು. ಇದು ಸಾಂವಿಧಾನಿಕ ಹಕ್ಕೊತ್ತಾಯ. ಕಾಸರಗೋಡು ಕನ್ನಡ ನಾಡಿಗೆ ಸೇರಬೇಕಾದದ್ದು ಎನ್ನುವುದು ಒಳ್ಳೆಯ ಇಂಗಿತ, ಇದರಲ್ಲಿ ಯಾವುದೇ ಪ್ರಲೋಭನೆಯೂ ಇಲ್ಲ.

- **ಭಾಷಾ ವಿಚಾರ ಬಗೆಹರಿಯದ ಸವಾಲಿನಂತೆ ಮತ್ತೆ ಮತ್ತೆ ಉದ್ಭವಿಸುತ್ತಿದೆ...**

ಭಾರತದ ಸಂವಿಧಾನದಲ್ಲಿ ಒಪ್ಪಿತವಾದ ಭಾಷೆಗಳಿಗೆ ಸರಿಸಮಾನವಾದ ಸ್ಥಾನಮಾನ ಸಿಗಬೇಕು. ಯಾವುದಕ್ಕೂ ಕಿರೀಟ ತೊಡಿಸುವುದು ಬೇಡ. ಅಥವಾ ತಲೆಪಟ್ಟಿ ಕಟ್ಟಿ ನೀನು ಯಜಮಾನ, ಪ್ರಮುಖ ಎಂದು ಹೇಳುವುದು ಬೇಡ. ಇದರಿಂದಲೇ ಹೆಚ್ಚು ಅಪಾಯ. ನಿಜವಾದ ಅರ್ಥದಲ್ಲಿ ಹೇಳುವುದಾದರೆ ಕನ್ನಡಿಗರು ಹಿಂದಿಯನ್ನು ವಿರೋಧಿಸಲೇ ಇಲ್ಲ. ತಮಿಳುನಾಡಿನಲ್ಲಿ ಹಿಂದಿ ವಿರುದ್ಧ ಇರುವ ಅಲೆಯನ್ನು ನೋಡಿದರೆ ಇಲ್ಲಿ ಕಡಿಮೆ. ಹಿಂದಿ ಪ್ರಚಾರ ಸಮಿತಿಗಳು ಕರ್ನಾಟಕದಲ್ಲಿ ಇರುವಷ್ಟು ಬೇರೆ ಎಲ್ಲೂ ಇಲ್ಲ ಎನಿಸುತ್ತದೆ.

ಪ್ರಸ್ತುತ ಕನ್ನಡಕ್ಕೆ ದೊಡ್ಡ ಸಮಸ್ಯೆ ಇರುವುದು ಹಿಂದಿ, ತಮಿಳು, ಮಲಯಾಳಂ, ತೆಲುಗು ಅಥವಾ ಇತರೆ ಭಾರತೀಯ ಭಾಷೆಗಳಿಂದ ಅಲ್ಲ. ಸದ್ಯ ಇಂಗ್ಲಿಷಿನ ವಿರುದ್ಧ ಸೆಟೆದುನಿಂತು ಹೋರಾಡಲೇಬೇಕಾದ ಕ್ರಮದ ಅಗತ್ಯವಿದೆ. ನಮ್ಮನ್ನು ಆಳಿದ ಬ್ರಿಟಿಷರು ನಮ್ಮನ್ನು ಹೇಗೆ ತಲೆಕೆಡಿಸಿದ್ದಾರೆ ಎಂದರೆ ಇಡೀ ಜಗತ್ತಿನಲ್ಲಿ ಇಂಗ್ಲಿಷ್ ಬಿಟ್ಟರೆ ಬೇರೆ ಭಾಷೆ ಇಲ್ಲ ಎಂದು ತುಂಬಿಸಿದ್ದಾರೆ. ನಾನು ಪ್ರವಾಸ ಮಾಡಿದ ಸಂದರ್ಭದಲ್ಲಿ ಗಮನಿಸಿದೆ; ಫ್ರಾನ್ಸ್, ಜಪಾನ್, ಜರ್ಮನಿ, ಸಿಲೋನ್, ಚೀನಾದಲ್ಲಿ ಇಂಗ್ಲಿಷ್‌ಗೆ ಸೊಪ್ಪು ಹಾಕುವುದಿಲ್ಲ. ಇವರ್‍ಯಾರೂ ಇಂಗ್ಲಿಷ್‌ಗೆ ನೇತುಬಿದ್ದಿಲ್ಲ. ಇಂಗ್ಲಿಷ್ ಇಲ್ಲದೆಯೂ ಸ್ವತಂತ್ರರಾಗಿದ್ದಾರೆ, ಪ್ರಭುತ್ವವನ್ನು ಹೊಂದಿದ್ದಾರೆ. ಅವರೆಲ್ಲರೂ ವೈಜ್ಞಾನಿಕವಾಗಿ ಮುಂದುವರಿದಿಲ್ಲವೇ? ತಂತ್ರಜ್ಞಾನದ ಅಭಿವೃದ್ಧಿಯೂ ಅವರವರ ಭಾಷೆಗಳ ಮೂಲಕವೇ ಆಗುತ್ತಿದೆ. ಈ ಮೂಲಕ ತಮ್ಮ ಭಾಷೆ ಸಮರ್ಥವಾಗಿದೆ ಎಂದು ತೋರಿಸಿದ್ದಾರೆ. ಕನ್ನಡ ಅನ್ನದ ಭಾಷೆ ಅಲ್ಲ ಎನ್ನುವ ಪೋಷಕರ ತಪ್ಪು ತಿಳಿವಳಿಕೆ ನಮ್ಮಲ್ಲಿನ ಈ ಸಮಸ್ಯೆಗೆ ಕಾರಣ. ನಾವಿನ್ನೂ ಇಂಗ್ಲಿಷ್‌ನ ಭ್ರಮೆಯಲ್ಲಿದ್ದೇವೆ.

- **ಸಮ್ಮೇಳನಗಳಲ್ಲಿನ ನಿರ್ಣಯಗಳ ಮೇಲೆ ನಿಗಾ ಇಡುವವರು ಯಾರು?**

ಈ ಬಾರಿ ಕೇವಲ ಮೂರು ನಿರ್ಣಯ ಮಂಡಿಸಬೇಕು ಎನ್ನುವ ಆಲೋಚನೆ ಇದೆ. ಕನ್ನಡದ ಪ್ರಾಮುಖ್ಯತೆ ಬಗ್ಗೆ ಒಂದು ನಿರ್ಣಯ ಇದ್ದೇ ಇರಲಿದೆ. ನಾವು ಏನೇ ನಿರ್ಣಯ ಮಾಡಿದರೂ, ಅದನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿ ಸರ್ಕಾರದ ಮೇಲಿದೆ. ಸರ್ಕಾರ ಈ ನಿಟ್ಟನಲ್ಲಿ ಯೋಚನೆ ಮಾಡಬೇಕು. ಹೆಚ್ಚು ನಿರ್ಣಯಗಳನ್ನು ಮಾಡುವುದರಲ್ಲಿ ಅಥವಾ ಸಣ್ಣಪುಟ್ಟದಕ್ಕೂ ನಿರ್ಣಯ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಸಮ್ಮೇಳನಗಳಲ್ಲಿ ತೆಗೆದುಕೊಂಡ ನಿರ್ಣಯಗಳ ಅನುಷ್ಠಾನಕ್ಕೆ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಪರಿಶೀಲನಾ ಸಮಿತಿ ರಚಿಸಿ, ಒತ್ತಾಯಗಳನ್ನು ತರುವ ಕೆಲಸ ಮಾಡಬೇಕು ಎಂದು ನಿರ್ಧರಿಸಿದ್ದೇವೆ. ಮುಂದಿನ ಸಮ್ಮೇಳನ ಆರಂಭವಾಗುವ ಮೊದಲು ಹಿಂದಿನ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು ಅನುಷ್ಠಾನ ಆಗಲೇಬೇಕು. ❖

ಮೂರು ತಿಂಗಳು ಕನ್ನಡ..ಕನ್ನಡ..

ನನ್ನದೊಂದು ಸಿದ್ಧಾಂತವಿದೆ. ಬೇರೆ ರಾಜ್ಯದಿಂದ ಬಂದು ಕರ್ನಾಟಕದಲ್ಲಿ ನೆಲೆನಿಂತು, ಇಲ್ಲಿ ಕೆಲಸ ಮಾಡಬೇಕು ಎಂದರೆ ಕನಿಷ್ಠ ಮೂರು ತಿಂಗಳು ಇಲ್ಲಿಯ ಭಾಷೆಯನ್ನು ಕಲಿಯಬೇಕು ಎನ್ನುವುದು ನನ್ನ ಪ್ರಸ್ತಾವ. ಆಗ ಕನ್ನಡದ, ಕನ್ನಡಿಗರ ಒಳತಿರುಳು ಅವರಿಗೆ ಗೊತ್ತಾಗುತ್ತದೆ. ಕನ್ನಡದಲ್ಲಿ ಕರ್ನಾಟಕ ಇದೆ. ಕರ್ನಾಟಕದಲ್ಲಿ ಕನ್ನಡಿಗ ಇದ್ದಾನೆ. ಇವು ಒಂದಕ್ಕೊಂದು ತಳುಕು ಹಾಕಿಕೊಂಡಿವೆ.

‘ಶಾಸ್ತ್ರೀಯ ಭಾಷೆ ಸ್ಥಾನ ಎಳ್ಳಷ್ಟೂ ನೆರವಾಗಿಲ್ಲ’

‘ಈ ವಿಷಯ ಹೇಳಲು ನನಗೆ ದುಃಖ ಆಗುತ್ತದೆ. ಪಕ್ಕದ ತಮಿಳುನಾಡಿನ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಶಾಸ್ತ್ರೀಯ ಭಾಷಾ ಸ್ಥಾನಮಾನದಡಿ ತಮಿಳು ಭಾಷೆ ಅಭಿವೃದ್ಧಿಗೆ ₹500 ಕೋಟಿ ತೆಗೆದುಕೊಂಡರು. ನಮ್ಮವರು ಇನ್ನೂ ₹25-30 ಕೋಟಿ ತೆಗೆದುಕೊಳ್ಳಲು ಆಗಲಿಲ್ಲ. ಭಾಷೆಯ ಉನ್ನತೀಕರಣಕ್ಕೆ ದುಡ್ಡು ಇರಬೇಕಲ್ಲವೇ. ನಮಗೆ ನಾಚಿಕೆಯಾಗಬೇಕು. ಶಾಸ್ತ್ರೀಯ ಭಾಷೆಗೊಂದು ಕಾರ್ಯಾಲಯ ಇರಬೇಕು. ಇಷ್ಟು ದಿನ ನನೆಗುದಿಗೆ ಬಿದ್ದಿದ್ದ ಈ ಯೋಜನೆ ಈಗ ಒಂದು ಹಂತ ತಲುಪಿದೆ. ಇದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳ ಬಗ್ಗೆ ಸರ್ಕಾರ ಇನ್ನೂ ಗಮನಹರಿಸಿಲ್ಲ. ಶಾಸ್ತ್ರೀಯ ಭಾಷೆ ಸ್ಥಾನಮಾನ ಸಿಕ್ಕರೂ ಕನ್ನಡಕ್ಕೆ ಎಳ್ಳಷ್ಟು ಸಹಾಯವಾಗಲಿಲ್ಲ ಎನ್ನುವ ದುಃಖ ನನಗೆ. ಇದನ್ನು ನಾನು ಸುದೀರ್ಘವಾಗಿ ಸಮ್ಮೇಳನದಲ್ಲಿ ಪ್ರಸ್ತಾಪಿಸುತ್ತೇನೆ. ಶಾಸ್ತ್ರೀಯ ಭಾಷೆ ಸ್ಥಾನಮಾನದ ಶೀರ್ಷಿಕೆಯಡಿ ಕೇಂದ್ರ ಸರ್ಕಾರದ ಮೇಲೆ ಇನ್ನಾದರೂ ಒತ್ತಡ ಹೇರಿ ನಮ್ಮ ಸಂಸದರು ಹಣವನ್ನು ಮಂಜೂರು ಮಾಡಿಸಿಕೊಂಡು ಕನ್ನಡದ ಅಭಿವೃದ್ಧಿಗೆ ಕಟಿಬದ್ಧರಾಗಲಿ’ ಎನ್ನುತ್ತಾರೆ ದೊಡ್ಡರಂಗೇಗೌಡರು.

ಮುನ್ನೋಟ 01-01-2023 ರಿಂದ 07-01-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ದೀರ್ಘಕಾಲೀನ ಕೆಲಸಗಳು ನಿಧಾನಗತಿಯಲ್ಲಿ ಸಾಗುತ್ತವೆ. ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಯಶಸ್ಸು ದೊರೆಯುತ್ತದೆ. ರೇಷ್ಮೆ ಉದ್ದಿಮೆದಾರರಿಗೆ ವ್ಯಾಪಾರಕ್ಕೆ ಹೊಸ ಅವಕಾಶಗಳು ದೊರೆಯುತ್ತವೆ. ನಿಮ್ಮ ಮಕ್ಕಳಿಗೆ ಹಿತವಚನವನ್ನು ಹೇಳುವ ಮೊದಲು ಅದಕ್ಕೆ ಬೆಲೆ ಇದೆಯೇ ಎಂದು ಖಚಿತಪಡಿಸಿಕೊಳ್ಳಿರಿ. ರಾಜಕೀಯ ಚಟುವಟಿಕೆಗಳು ಹೆಚ್ಚಾಗುತ್ತವೆ. ಸೂಕ್ತ ಸ್ಥಾನಮಾನ ಪಡೆಯಲು ಮೇಲಾಟ ನಡೆಸುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಕುಟುಂಬದಲ್ಲಿ ನಿಮ್ಮ ನಿಲುವುಗಳೇನು ಎಂಬುದನ್ನು ಸ್ಪಷ್ಟಪಡಿಸಬೇಕಾಗಬಹುದು. ಆಟಿಕೆ ವಸ್ತುಗಳನ್ನು ತಯಾರಿಸುವವರಿಗೆ ಉತ್ತಮ ಮಾರುಕಟ್ಟೆ ದೊರೆಯುತ್ತದೆ. ಮನೆಗೆ ಅಲಂಕಾರಿಕ ವಸ್ತುಗಳನ್ನು ಖರೀದಿ ಮಾಡಲು ಹೆಚ್ಚು ಹಣ ಖರ್ಚು ಮಾಡುವಿರಿ. ಸರ್ಕಾರಿ ಸಾಲ ಸಿಗುವುದು ನಿಧಾನವಾಗಬಹುದು. ಕೆಲವು ಸ್ತ್ರೀಯರಿಗೆ ವಿದೇಶ ಪ್ರಯಾಣ ಮಾಡುವ ಅವಕಾಶ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಬಟ್ಟೆ ವ್ಯಾಪಾರಿಗಳಿಗೆ ಹೊಸ ಮಳಿಗೆಗಳನ್ನು ತೆರೆಯುವ ಯೋಗವಿದೆ. ವಿದೇಶಿ ಹಣ ವ್ಯವಹಾರ ಮಾಡುವವರಿಗೆ ಹೆಚ್ಚಿನ ವ್ಯವಹಾರ ಒದಗುತ್ತದೆ. ಒಟ್ಟು ಕುಟುಂಬದ ವ್ಯವಹಾರಗಳಲ್ಲಿ ನಿಮಗೆ ಸ್ಥಾನ ಸಿಗುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಯಶಸ್ಸು ಇರುತ್ತದೆ. ಶರೀರದಲ್ಲಿ ಪಿತ್ತೋಷ್ಣ ಹೆಚ್ಚಾಗಬಹುದು. ಸಂಗಾತಿಗೆ ಉತ್ತಮ ಕೆಲಸ ದೊರೆಯುವ ಸಾಧ್ಯತೆಗಳಿವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವೃತ್ತಿಯಲ್ಲಿ ಹೆಚ್ಚಿನ ಸೌಲಭ್ಯಗಳು ದೊರೆಯುತ್ತವೆ. ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕುತ್ತದೆ. ತಂದೆಯಿಂದ ಪಾರಂಪರಿಕ ವಿದ್ಯೆಗಳ ಬಗ್ಗೆ ತಿಳಿವಳಿಕೆ ಸಿಗುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿದ್ದರೂ ಖರ್ಚು ಹೆಚ್ಚಿಗೆ ಇರುತ್ತದೆ. ಆಸ್ತಿ ವಿಚಾರದಲ್ಲಿ ಹೆಚ್ಚಿನ ಬೆಳವಣಿಗೆಗಳು ಆಗುತ್ತವೆ. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರವಹಿಸಿರಿ. ಹಿರಿಯರ ಆರೋಗ್ಯದ ಬಗ್ಗೆ ಗಮನವಿರಲಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಆತ್ಮಗೌರವ ಹೆಚ್ಚಾಗಿರುತ್ತದೆ. ಹಣದ ಒಳಹರಿವು ನಿರೀಕ್ಷೆಯ ಮಟ್ಟಕ್ಕಿರುತ್ತದೆ. ನಿಮ್ಮ ಧನ ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಬಂಧುಗಳಲ್ಲಿ ವೈಮನಸ್ಸು ಮೂಡಬಹುದು. ವೃತ್ತಿಯಲ್ಲಿ ಅಂತಹ ತೊಂದರೆಗಳಿರುವುದಿಲ್ಲ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಮೂತ್ರ ಸಂಬಂಧಿ ಕಾಯಿಲೆ ಇರುವವರು ಚಿಕಿತ್ಸೆಗೆ ಹೋಗಬೇಕಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕುಟುಂಬದಲ್ಲಿ ಹಣಕಾಸಿನ ವ್ಯತ್ಯಾಸಗಳು ಹೆಚ್ಚಾಗಬಹುದು. ಬಾಯಿಹುಣ್ಣು ಅಥವಾ ಕೆಮ್ಮಿನ ತೊಂದರೆ ಎದುರಾಗಬಹುದು. ತಂದೆಯಿಂದ ಧನ ಸಹಾಯ ದೊರೆಯಬಹುದು. ಸಂಗಾತಿಗೆ ಪಿತ್ರಾರ್ಜಿತ ಆಸ್ತಿ ಅಥವಾ ವಸ್ತುಗಳು ದೊರೆಯಬಹುದು. ವಿದ್ಯಾರ್ಥಿಗಳಿಗೆ ಮಂದಗತಿಯ ಪ್ರಗತಿ ಇರುತ್ತದೆ. ಕೆಲವರಿಗೆ ಮೂಳೆ ನೋವು ಬಾಧಿಸಬಹುದು. ಸಂಗಾತಿಯ ಸಂಪಾದನೆಯಲ್ಲಿ ಸ್ವಲ್ಪ ಏರಿಕೆ ಕಾಣಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಕೆಲಸ ಮಾಡುವವರಿಗೆ ಹೆಚ್ಚಿನ ಕೆಲಸಗಳು ದೊರೆಯುತ್ತವೆ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು. ಬಂಧುಗಳಲ್ಲಿ ಹಿರಿಯರು ನಿಮ್ಮ ಬಗ್ಗೆ ಅಸಹನೆಯನ್ನು ತೋರುವರು. ಇಷ್ಟಪಟ್ಟ ನಿವೇಶನದ ಬೆಲೆ ಹೆಚ್ಚಾಗಬಹುದು. ಮಕ್ಕಳಿಗೆ ಏಳಿಗೆ ಹಿತಕರವಾಗಿರುವುದಿಲ್ಲ. ಪಿತ್ತ ವಿಕಾರಗಳು ಸ್ವಲ್ಪ ಬಾಧಿಸಬಹುದು. ಕೆಲಸ ಕಾರ್ಯಗಳಿಗೆಂದು ಕೊಟ್ಟ ಹಣ ವಾಪಸ್ಸು ಬರುವುದಿಲ್ಲ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕೆಲಸ ಕಾರ್ಯಗಳಲ್ಲಿ ಚುರುಕುತನ ಕಾಣಬಹುದು. ಭಾಷಣಕಾರರಿಗೆ ಉತ್ತಮ ವೇದಿಕೆ ದೊರಕುತ್ತದೆ. ಸ್ತ್ರೀಯರು ತಮ್ಮ ಬಂಧುಗಳ ದ್ವೇಷವನ್ನು ಚಾಣಾಕ್ಷತನದಿಂದ ನಿವಾರಿಸಿಕೊಳ್ಳುವರು. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಒದಗುವ ಕಾಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ನಡವಳಿಕೆ ಸಂಪೂರ್ಣ ವ್ಯವಹಾರಿಕವಾಗಿರುತ್ತದೆ. ಹಣದ ಒಳಹರಿವಿನಲ್ಲಿ ಏರಿಕೆಯನ್ನು ಕಾಣಬಹುದು. ಸೂಕ್ಷ್ಮವಾಗಿ ಮಾತಾಡಿ ನಿಮ್ಮ ಶತ್ರುಗಳನ್ನು ಗೆಲ್ಲುವಿರಿ. ಆಸ್ತಿ ವಿಚಾರಗಳಲ್ಲಿ ಶುಭ ಸಮಾಚಾರ ಕೇಳಿ ಬರಲಿದೆ. ಸಂಸಾರದಲ್ಲಿ ಸಂತೋಷವಿರುತ್ತದೆ. ಹೆಣ್ಣು ಮಕ್ಕಳ ಅಭಿವೃದ್ಧಿಯು ಸ್ವಲ್ಪ ನಿಧಾನಗತಿಯಲ್ಲಿ ಇರುತ್ತದೆ. ಕೈಕಾಲುಗಳಿಗೆ ಗಾಯವಾಗುವ ಸಂದರ್ಭವಿದೆ, ಎಚ್ಚರವಹಿಸಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಶ್ರಮಪಟ್ಟು ಕೆಲಸ ಮಾಡಿ ಉತ್ತಮ ಹೆಸರನ್ನು ಪಡೆಯುವಿರಿ. ಹಣದ ಹರಿವು ಸಾಮಾನ್ಯವಾಗಿರುತ್ತದೆ. ಒಡಹುಟ್ಟಿದವರ ಸಹಾಯ ನಿಮಗೆ ಒದಗಿ ಬರುತ್ತದೆ. ಉತ್ತಮ ಗುಣಗಳಿಂದ ಜನರನ್ನು ಗೆಲ್ಲುವಿರಿ. ಆಸ್ತಿ ವಿಚಾರದಲ್ಲಿ ಸದ್ಯಕ್ಕೆ ಮುಂದುವರಿಯುವುದು ಬೇಡ. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ಅಧ್ಯಯನ ಮಾಡುತ್ತಿರುವವರಿಗೆ ಉತ್ತಮ ಮುನ್ನಡೆ ಇದೆ. ಹಿರಿಯರ ವ್ಯವಹಾರಗಳಲ್ಲಿ ನಿಮಗೆ ಸ್ಥಾನ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ದೃಢ ನಿರ್ಧಾರಗಳನ್ನು ಕೈಗೊಳ್ಳುವುದು ಬಹಳ ಉತ್ತಮ. ಹಣದ ಹರಿವು ಅಗತ್ಯವನ್ನು ಪೂರೈಸುತ್ತದೆ. ಸಂಗೀತಗಾರರಿಗೆ ಬೇಡಿಕೆ ಬರುತ್ತದೆ. ಹಣಕಾಸಿನ ವ್ಯವಹಾರ ಮಾಡುವವರಿಗೆ ಹೆಚ್ಚಿನ ಸಂಪಾದನೆ ಇರುತ್ತದೆ. ಒಡಹುಟ್ಟಿದವರಿಂದ ಉತ್ತಮ ಸಹಕಾರ ಇರುವುದಿಲ್ಲ. ಆಸ್ತಿ ವಿಷಯದಲ್ಲಿ ಮುನ್ನಡೆಯನ್ನು ಕಾಣುವಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಅತಿಯಾದ ಆತ್ಮಾಭಿಮಾನ ನಿಮಗಿರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಉತ್ತಮ ಆಸ್ತಿಯೊಂದನ್ನು ಈಗ ಖರೀದಿ ಮಾಡುವ ಯೋಗವಿದೆ. ಮಕ್ಕಳಿಗಾಗಿ ಧನ ವ್ಯಯ ಆಗಬಹುದು. ಮೂತ್ರ ಸಂಬಂಧಿ ಕಾಯಿಲೆ ಇರುವವರು ಚಿಕಿತ್ಸೆ ತೆಗೆದುಕೊಳ್ಳುವುದು ಬಹಳ ಉತ್ತಮ. ಹಿರಿಯರ ವಶೀಲಿಯಿಂದ ಕೆಲಸ ಸಿಗುವ ಸಾಧ್ಯತೆಗಳಿವೆ. ಅನಿರೀಕ್ಷಿತ ಖರ್ಚು ಎದುರಾಗುವ ಸಾಧ್ಯತೆಗಳಿವೆ.

ಭಾಷೆ ಒಂದೇ...

1ನೇ ಪುಟದಿಂದ...

ಹಾವೇರಿಯ ಯಾಲಕ್ಕಿ ಹಾರ- ಸವಣೂರು ವೀಳ್ಯದೆಲೆಯ ಕಂಪು, ಬ್ಯಾಡಗಿ ಮೆಣಸಿನಕಾಯಿ ಕೆಂಪು, ಸವಣೂರು ಖಾರಾದ ಸವಿಯು ಬದುಕಿಗೆ ಇಂಬು ನೀಡಿದೆ.

ಮೈಲಾರ ಮಹಾದೇವ, ಸಂಗೂರ ಕರಿಯಪ್ಪ, ಹೊಸಮನಿ ಸಿದ್ದಪ್ಪ, ಗುದ್ಲೆಪ್ಪ ಹಳ್ಳಿಕೇರಿಯವರಂಥ ಸ್ವಾತಂತ್ರ್ಯ ಹೋರಾಟಗಾರರ ಸ್ಫೂರ್ತಿ ಇಲ್ಲಿದೆ. ಕಾದಂಬರಿ ಪಿತಾಮಹ ಗಳಗನಾಥರು, ಸಾಹಿತಿಗಳಾದ ವಿ.ಕೃ. ಗೋಕಾಕ, ಮಹಾದೇವ ಬಣಕಾರ, ಸು.ರಂ. ಎಕ್ಕುಂಡಿ, ಜಿ.ಎಸ್. ಆಮೂರ, ಪಾಟೀಲ ಪುಟ್ಟಪ್ಪ, ಚಂದ್ರಶೇಖರ ಪಾಟೀಲ, ಸತೀಶ ಕುಲಕರ್ಣಿ, ಗಂಗಾಧರ ನಂದಿ ಅಂಥವರ ಸಾಹಿತ್ಯ ಕೃಷಿಯು ಬುದ್ಧಿ-ಭಾವವನ್ನು ಹಸನುಗೊಳಿಸಿದೆ.

ದೊಡ್ಡಾಟದ ಪರಂಪರೆಯೊಂದಿಗೆ ನೆಲದ ಚೆಲುವನ್ನೆಲ್ಲ ಕಾಪಿಡಲು ಶ್ರಮಿಸಿದ ಟಿ.ಬಿ.ಸೊಲಬಕ್ಕನವರ ಹೆಜ್ಜೆಗುರುತು ಬಿಟ್ಟುಹೋಗಿದ್ದಾರೆ. ಮಾತುಮಾತಿಗೂ ಹುಟ್ಟೂರನ್ನು ನೆನೆದು ‘ಹಾಲುಂಡ ತವರಿಗೆ ಏನೆಂದು ಹಾಡಲಿ... ಹೊಳೆದಂಡೀಲಿರುವ ಕರಕಿಯ ಕುಡಿಹಂಗ ಹಬ್ಬಲಿ ಅವರ ರಸಬಳ್ಳಿ’ ಎಂದು ಹಾರೈಸುವ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ, ಶಿಗ್ಗಾವಿಯ ಸುಧಾಮೂರ್ತಿ ನಾಡಿಗೇ ಚೈತನ್ಯದ ತಾಯಿ ಆಗಿದ್ದಾರೆ.

ಜಿಲ್ಲೆಗೆ ಚಾಲುಕ್ಯ-ಕದಂಬ, ಹೊಯ್ಸಳರ ಶಿಲ್ಪಕಲೆ-ಸಾಂಸ್ಕೃತಿಕ ಸಂಸ್ಕಾರವಿದೆ. ಶರಣನೇ ಆದ ಅನ್ನದಾತನ ಕಾರುಣ್ಯವಿದೆ; ಅಭಿಮಾನಕ್ಕೆ ಧಕ್ಕೆಯಾದಾಗ ಸಿಡಿದೇಳುವ ಬಂಡಾಯವೂ ಇದೆ. ದಾಸೋಹಕ್ಕಾಗಿ ಕೊಡುಗೈ ದಾನಿಗಳಾಗಿ ರೈತರು-ವ್ಯಾಪಾರಸ್ಥರಿದ್ದಾರೆ. ಗುಡಿಗೋಪುರಗಳಿವೆ, ಮಠ-ಮಾನ್ಯಗಳಿವೆ. ಮಸೀದಿ-ದರ್ಗಾಗಳು; ಬಸದಿಗಳೂ!

ವರದೆ-ತುಂಗಭದ್ರೆಯರಿಗೂ ಮಿಗಿಲಾಗಿ ಪೋಷಿಸುವ ಕೆರೆ-ಕಟ್ಟೆ- ತಾಲಾಬುಗಳು ಜೀವದಾಯಿನಿ ಎನಿಸಿವೆ. ಮದಗ ಮಾಸೂರಿನ ಕೆಂಚಮ್ಮನ ಕೆರೆಯ ಕಥೆಯೊಂದೇ ಸಾಕು; ಇಲ್ಲಿನ ಕೆರೆಗಳ ಹಿರಿಮೆ ಸಾರಲು. ಸವಣೂರಿನ ಮೋತಿ ತಾಲಾಬ್, ಶಿಗ್ಗಾವಿಯ ನಾಗನೂರು ಕೆರೆ, ಹಾವೇರಿಯ ಹೆಗ್ಗೇರಿ ಕೆರೆ, ರಾಣೆಬೆನ್ನೂರಿನ ಅಸುಂಡಿ ಕೆರೆ, ಹಾನಗಲ್ಲಿನ ಆನೆಹೊಂಡ.... ಹೀಗೆ ಕೆರೆಗಳ ಕಥೆ, ಅವುಗಳಿಗಾಗಿ ಕಥೆಯಾದವರ ಕಥೆಗಳು ಜನಪದ ಹಾಡಾಗಿವೆ. ಹೀಗಾಗಿ, ಕೆರೆ ಕಾಯ್ದ ಭೀಮವ್ವ- ಅಗಸರ ಗಂಗವ್ವರು ಇಲ್ಲಿ ಭೀಮೆ-ಗಂಗೆಯಾಗಿ ವಂದನೀಯರು.

ಸ್ವಾತಂತ್ರ್ಯ ಹೋರಾಟಗಾರರ ಕೆಚ್ಚು, ಹೊಸರಿತ್ತಿಯ ಗಾಂಧಿ ಗುರುಕುಲದ ಶಿಸ್ತು, ಇಲ್ಲಿ ಆಳ್ವಿಕೆ ನಡೆಸಿದ ಸಾಮಂತ ರಾಜರು-ನವಾಬರ ಧರ್ಮಸಹಿಷ್ಣುತೆ, ಸೂಫಿಸಂತರು-ಶರಣರ ಸಂಯಮವು ನಾಡು- ನುಡಿಗೆ ಕಸುವು ನೀಡಿವೆ.

ಮತ-ಗಡಿ- ಭಾಷೆಯನ್ನು ಮೀರಿ ಬದುಕನ್ನು ಪ್ರೀತಿಸಿದ ಮನಸ್ಸುಗಳು ಇಲ್ಲಿಯವು. ಉರ್ದು, ಪಾರ್ಸಿ, ಮರಾಠಿ ಸೊಗಡನ್ನೂ ಒಳಗೊಂಡ ಇಲ್ಲಿನ ಕನ್ನಡ ಬದುಕಿಗೆ ಅದರಿಂದ ಫಾಯದೆ ಆಗಿದ್ದೇ ಹೆಚ್ಚು. ಸಾಮರಸ್ಯದ ಕನ್ನಡವು ಸಮರಸದ ಸಹಬಾಳ್ವೆಯನ್ನು ಕರುಳಿಗೂ ಕಲಿಸಿದೆ.

ನಾಡಿನಲ್ಲಿ ನುಡಿ ಸಂಸ್ಕಾರವೇ ಮರೆತುಹೋಗುತ್ತಿರುವ ಈ ಹೊತ್ತಿನಲ್ಲಿ, ಸಂತತನದಲ್ಲೇ ನಾಡು-ನುಡಿ ಕಟ್ಟಿದ ಸರ್ವಜ್ಞ ಕವಿಯ ‘.....ಮಾತೇ ಮಾಣಿಕವು’ ತ್ರಿಪದಿ ಮತ್ತೆ ಮತ್ತೆ ಕೇಳಬೇಕಿದೆ. ಒಡೆಯುವ- ಕೆಡಹುವ ಮಾತು ಇಲ್ಲವಾಗಿ, ಕಟ್ಟುವ-ಕೂಡಿಸುವ ಮಾತು ಅನುರಣಿಸಬೇಕಿದೆ.

‘ಬೋಧ ಒಂದೇ ಬ್ರಹ್ಮನಾದ ಒಂದೇ/ ಸಾಧನ ಮಾಡುವ ಹಾದಿ ಒಂದೇ/ ಆದಿ ಪದ ಒಂದೇ/ ಶಿಶುನಾಳಧೀಶನ ಭಾಷೆ ಒಂದೇ/ ಭವನಾಶ ಒಂದೇ/

ಎಂಬುದು ಕನ್ನಡ ಸಾಹಿತ್ಯ ಸಮ್ಮೇಳನದ ಶರೀಫರ ವೇದಿಕೆಯಿಂದ ಮಾರ್ದನಿಸಬೇಕಿದೆ. ❖

ಅಸ್ಗರ್ ವಜಾಹತ್ ಅವರ ಹಿಟ್ಲರ್‌ನ ಮೀಸೆಯ ಕೂದಲು ಕಳುವಾದ ಪ್ರಸಂಗ
ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

ಸ್ಮಿತಾ ಅಮೃತರಾಜ್ ಅವರ ಕಳೆದುಕೊಳ್ಳುವುದೆಂದರೆ..

ಕಿಂಡರ್ ಕಥಾ, ಹೇಳಿ ಸ್ವಾಗತ...

ರಘುನಾಥ ಚ.ಹ.

ಕೃತಿಯ ಹೆಸರು	ಲೇಖಕ	ಚಿತ್ರಗಳು
ಕಡಲೆ ಬೀಜ ಕಳ್ಳ	ಶೇಷಗಿರಿ ಆರ್. ಕುಲಕರ್ಣಿ	ವೆಂಕಟೇಶ ಆರ್. ದೇಸಾಯಿ
ಸಹಬಾಳ್ವೆ	ವಿದ್ಯಾ ಶಂಕರ್	ಸಂತೋಷ್ ಸಸಿಹಿತ್ಲು
ಯಾವ ನಲ್ಲಿ ಯಾವ ಪೈಪು	ಶ್ರುತಿ ರಾವ್	ಬಿ.ಜಿ. ಗುಜ್ಜಾರಪ್ಪ
ಜೈ ಭೀಮ್	ವಿಕಾಸ ಆರ್. ಮೌರ್ಯ	ಸುರೇಶ್ ಆರ್. ಅರ್ಕಸಾಲಿ
ಮಳೆ ಎಲ್ಲಿ ಸಿಗುತ್ತೆ...?	ಸೋಮು ಕುದರಿಹಾಳ	ನಿಖಿಲಾ ಅನಿಲ್
ಮುನ್ನಿಗೆ ಮದುವೆ	ಡಾ. ಕೆ.ಎಸ್. ಚೈತ್ರಾ	ಮುರಳೀಧರ ಎನ್.ಜಿ.
ಅಮ್ಮನ ಊರು	ಶರಧಿ ಹುಲ್ಸೆ	ಹರಿಶ್ಚಂದ್ರ ಶೆಟ್ಟಿ
ಗಣಿತ ಕಲಿತ ಗಿಣಿ	ಹೂರ್ ಬಾನು	ಮೋಹನ್ ಎಂ.
ಅಜ್ಜನಿಗೊಂದು ದೋಣಿ	ಪಲ್ಲವಿ ರಾವ್	ರಘುಪತಿ ಶೃಂಗೇರಿ
ಹಳದಿ ಟೋಪಿಯ ಹಕ್ಕಿ	ರಾಧಿಕಾ ವಿಟ್ಲ	ನಾಗನಾಥ್ ಜಿ.ಎಸ್.

ಪ್ರತೀ ಪುಸ್ತಕದ ಪುಟಗಳು: 20 ಪ್ರತೀ ಪುಸ್ತಕದ ದರ: ₹60
ಪ್ರ: ನವಕರ್ನಾಟಕ, ಬೆಂಗಳೂರು. ಸಂ: 080-22161900

ಹೊಳಪು ಕಾಗದ ಹಾಗೂ ಬಣ್ಣದ ಚಿತ್ರಗಳೊಂದಿಗೆ ಇಂಗ್ಲಿಷ್‌ನಲ್ಲಿ ಪ್ರಕಟಗೊಳ್ಳುವ ಮಕ್ಕಳ ಕಥೆಗಳ ಪುಸ್ತಕಗಳನ್ನು ನೋಡಿದಾಗಲೆಲ್ಲ, ‘ಈ ಭಾಗ್ಯ ಕನ್ನಡದ ಕಂದಮ್ಮಗಳಿಗಿಲ್ಲವಲ್ಲ’ ಎಂದು ಸಾಹಿತ್ಯಪ್ರಿಯರು ನಿಟ್ಟುಸಿರುಬಿಡುತ್ತಿದ್ದ ದಿನಗಳು ಕೊನೆಗೊಳ್ಳುವಂತೆ ಕಾಣಿಸುತ್ತಿದೆ. ಜರ್ಮನ್ ಶೈಕ್ಷಣಿಕ ಸಂಸ್ಥೆ ‘Goethe institute’ ಸಹಯೋಗದಲ್ಲಿ ಬೆಂಗಳೂರಿನ ‘ನವಕರ್ನಾಟಕ ಪ್ರಕಾಶನ’ ಪ್ರಕಟಿಸಿರುವ ‘ಕಿಂಡರ್ ಕಥಾ’ ಮಾಲಿಕೆಯ ಮಕ್ಕಳ ಪುಸ್ತಕಗಳು ತಮ್ಮ ಸೊಗಸಿನಿಂದ ಎಳೆಯರ ಮನಸ್ಸನ್ನು ಸೆಳೆಯುತ್ತಿವೆ. ಹೊಳಪು ಕಾಗದದಲ್ಲಿ, ಬಣ್ಣದ ಚಿತ್ರಗಳೊಂದಿಗೆ ಮುದ್ರಣಗೊಂಡಿರುವ ಪುಟ್ಟ ಪುಟ್ಟ ಕಥೆಗಳ ಹತ್ತು ಪುಸ್ತಕಗಳು ಚಿಣ್ಣರನ್ನು ಸೆಳೆಯುವಂತಿವೆ.

ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ 2022 ಮಹತ್ವದ ವರ್ಷ. ಕೆ.ವಿ. ತಿರುಮಲೇಶರ ಹತ್ತು ಕವನ ಸಂಕಲನಗಳನ್ನು ‘ಅಭಿನವ’ ಪ್ರಕಾಶನ ಒಮ್ಮೆಗೇ ಪ್ರಕಟಿಸಿದ್ದು, ಎಚ್.ಎಸ್. ವೆಂಕಟೇಶಮೂರ್ತಿ ಸಂಪಾದಕತ್ವದ ‘ವಸಂತ ಬಾಲ ಸಾಹಿತ್ಯಮಾಲೆ’ಯ ಚಂದದ ಕೃತಿಗಳು ಪ್ರಕಟಗೊಂಡಿದ್ದು, 2022ರಲ್ಲೇ. ಈ ಸಾಲಿಗೆ ಹೊಸ ಸೇರ್ಪಡೆ, ‘ಕಿಂಡರ್ ಕಥಾ’ ಪುಸ್ತಕಗಳು. ಈ ಪುಸ್ತಕಗಳು ಕನ್ನಡ ಮಕ್ಕಳ ಸಾಹಿತ್ಯ ಬದಲಾಗುತ್ತಿರುವ ದಿಕ್ಕನ್ನು ಸೂಚಿಸುವಂತಿವೆ.

ವಿಭಿನ್ನ ಹಿನ್ನೆಲೆಯ ಲೇಖಕರು ‘ಕಿಂಡರ್ ಕಥಾ’ ಮಾಲಿಕೆಯಲ್ಲಿ ಒಟ್ಟುಗೂಡಿದ್ದಾರೆ. ಕನ್ನಡದ ಮೂಲಕ ಲೋಕಗ್ರಹಿಕೆಯನ್ನು ವಿಸ್ತರಿಸಿಕೊಳ್ಳಲು ಈ ಪುಟ್ಟ ಪುಟ್ಟ ಪುಸ್ತಕಗಳು ನೆರವಾಗುವಂತಿವೆ. ಪ್ರಾಥಮಿಕ ಶಾಲಾಮಕ್ಕಳು ತಾವೇ ಓದಿಕೊಳ್ಳಬಹುದಾದ ಈ ಕಥನಗಳಿಗೆ ಪೂರಕವಾಗಿ ಸೊಗಸಾದ ಇಲ್ಲುಸ್ಟ್ರೇಷನ್‌ಗಳಿವೆ.

ಮುದ್ರಣದ ಸೊಗಸಿನಿಂದ ಗಮನಸೆಳೆಯುವ ‘ಕಿಂಡರ್ ಕಥಾ’ ಪುಸ್ತಕಗಳು, ಕಥಾಸ್ವರೂಪದ ಕಾರಣದಿಂದಾಗಿ ಚರ್ಚೆಗೆ ಆಹ್ವಾನಿಸುವಂತಿವೆ. ಇದೇ ಮಾದರಿಯ ಅನೇಕ ಕೃತಿಗಳನ್ನು ‘ಪ್ರಥಮ್ ಬುಕ್ಸ್’ ಈಗಾಗಲೇ ಪ್ರಕಟಿಸಿದೆ. ಇಂಗ್ಲಿಷ್‌ನಲ್ಲಂತೂ ಇಂಥ ಪುಸ್ತಕಗಳು ಪೇಟೆಯಲ್ಲಿ ಸಾಕಷ್ಟಿವೆ. ಈ ಕೃತಿಗಳಲ್ಲಿ, ಅಕ್ಷರರೂಪದ ಕಥನ ಗೌಣವಾಗಿದ್ದು, ದೃಶ್ಯರೂಪದ ಚಿತ್ರಗಳೇ ಹೆಚ್ಚು ಮಹತ್ವ ಪಡೆದುಕೊಂಡಿರುತ್ತವೆ. ಚಿಣ್ಣರನ್ನು ಚಿತ್ರಗಳು ಸುಲಭವಾಗಿ ಸೆಳೆಯುವುದರಿಂದ, ಈ ದೃಶ್ಯಭಾಷೆ ಮಹತ್ವ ಪಡೆದುಕೊಂಡಿದೆ.

ಈ ಚಿತ್ರಪ್ರಧಾನ ಕಥನಗಳು ಮಕ್ಕಳ ಕಲ್ಪನಾಶಕ್ತಿಯನ್ನು ಮೊಟಕುಗೊಳಿಸುವ ಸಾಧ್ಯತೆಯ ಬಗ್ಗೆಯೂ ಯೋಚಿಸಬೇಕು. ಅಕ್ಷರಭಾಷೆಯ ಮೂಲಕ ಮಕ್ಕಳ ಮನಸ್ಸು ಸೃಜಿಸಿಕೊಳ್ಳಬಹುದಾದ ಕಲ್ಪನೆಯ ವ್ಯಾಪಕತೆ ಬಿಂಬಗಳ ಮೂಲಕ ಸಾಧ್ಯವಾಗುವುದಿಲ್ಲ. ಚಿತ್ರಗಳು ಮಕ್ಕಳ ಕಲ್ಪನಾಶಕ್ತಿಗೆ ಒಂದು ಚೌಕಟ್ಟನ್ನು ಹಾಕುತ್ತವೆ. ಆ ಕಾರಣದಿಂದಾಗಿಯೇ ಚಿತ್ರಗಳೊಂದಿಗೆ ಭಾಷೆಯೂ ಹದವಾಗಿ ಮಿಳಿತಗೊಳ್ಳದಿದ್ದರೆ, ಇಂಥ ಪುಸ್ತಕಗಳ ಉದ್ದೇಶ ಸೀಮಿತವಾಗಿಬಿಡುತ್ತದೆ. ಈ ವ್ಯತ್ಯಾಸ, ‘ಚಂದಮಾಮ’ ಮಾದರಿಯ ಕಥನಗಳನ್ನು ನೆನಪಿಸಿಕೊಂಡರೆ ಸ್ಪಷ್ಟವಾಗುತ್ತದೆ. ಅದ್ಭುತ ಚಿತ್ರಗಳನ್ನು ಹೊಂದಿರುತ್ತಿದ್ದ ‘ಚಂದಮಾಮ’ ಕಥೆಗಳಲ್ಲಿ ಬಣ್ಣದ ಬಿಂಬಗಳಷ್ಟೇ ಅಕ್ಷರಗಳಿಗೂ ಮಹತ್ವವಿತ್ತು. ಈ ಸಮತೋಲನ ‘ಕಿಂಡರ್ ಕಥಾ’ ಪುಸ್ತಕಗಳಲ್ಲಿ ಸಾಧ್ಯವಾಗಿಲ್ಲ. ಇದನ್ನು ಈ ಪುಸ್ತಕಗಳ ಕೊರತೆಯೆಂದು ಭಾವಿಸಬೇಕಿಲ್ಲ. ಕಾರ್ಪೊರೇಟ್ ಸಂಸ್ಥೆಗಳ ಪ್ರಭಾವಳಿಯಲ್ಲಿ ಪ್ರಕಟಗೊಳ್ಳುವ ಮಕ್ಕಳ ಕಥಾಸಾಹಿತ್ಯದ ಬಹುಪಾಲು, ಚಿತ್ರಗಳನ್ನು ನೆಚ್ಚಿರುವಂತಹದ್ದೇ ಆಗಿದೆ.

ಕಥಾವಸ್ತುವಿನ ಸಾಧ್ಯತೆಗಳ ಚರ್ಚೆಗೂ ‘ಕಿಂಡರ್ ಕಥಾ’ ಪುಸ್ತಕಗಳು ಒತ್ತಾಯಿಸುವಂತಿವೆ. ಸಾಮಾಜಿಕ ಹಾಗೂ ಪರಿಸರ ಸಮಸ್ಯೆಗಳನ್ನು ಮಕ್ಕಳಿಗೆ ದಾಟಿಸುವ ಜನಪ್ರಿಯ ಸೂತ್ರ ಇಲ್ಲಿನ ಬಹುತೇಕ ಕೃತಿಗಳಲ್ಲಿದೆ. ಮಾಹಿತಿ ತಲುಪಿಸುವುದು ಹಾಗೂ ಸಾಮಾಜಿಕ ಎಚ್ಚರ ರೂಪಿಸುವುದೇ ಆದ್ಯತೆಯಾಗಿಬಿಟ್ಟರೆ, ಮಕ್ಕಳ ಸಾಹಿತ್ಯದ ಪ್ರಮುಖ ಉದ್ದೇಶಗಳಾದ ಮನರಂಜನೆ ಮತ್ತು ಮನೋವಿಕಾಸದ ಸಾಧ್ಯತೆಗಳು ಹಿನ್ನೆಲೆಗೆ ಸರಿಯುತ್ತವೆ. ಈ ಬಗ್ಗೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ರಚಿಸುತ್ತಿರುವವರು ಗಂಭೀರವಾಗಿ ಚಿಂತಿಸಬೇಕು. ಪಠ್ಯಪುಸ್ತಕಗಳಾಚೆಗೆ ನಾವು ಏನನ್ನು ನೀಡಬಲ್ಲೆವು ಎನ್ನುವುದು ಬರಹಗಾರರಿಗೆ ಸ್ಪಷ್ಟವಿಲ್ಲದೆ ಹೋದರೆ, ನಮ್ಮ ಮಕ್ಕಳಿಗೆ ಮಹತ್ವವಾದುದೇನನ್ನೂ ಕೊಡುವುದು ಸಾಧ್ಯವಾಗಲಾರದು.

ಜನಪ್ರಿಯ ಕಥಾವಸ್ತುಗಳ ನಡುವೆಯೂ ‘ಜೈ ಭೀಮ್’ನಂಥ ಕಥೆ ಥಟ್ಟನೆ ಗಮನಸೆಳೆಯುವಂತಿದೆ. ಅಂಬೇಡ್ಕರ್ ಅವರನ್ನು ಕಾಮಿಕ್ಸ್ ಪಾತ್ರದ ರೂಪದಲ್ಲಿ ಮಕ್ಕಳಿಗೆ ಮುಟ್ಟಿಸಲು ಪ್ರಯತ್ನಿಸಿರುವ ಭೀಮ್ ಕಥೆಯ ಪರಿಕಲ್ಪನೆ ಸೊಗಸಾಗಿದೆ. ಸಾಮಾಜಿಕ ಸಮಸ್ಯೆಗಳಿಗೆ ಉತ್ತರದ ರೂಪದಲ್ಲಿ ಸಂವಿಧಾನವನ್ನು ಬಿಂಬಿಸಿರುವ ಪ್ರಯತ್ನ ಚೆನ್ನಾಗಿದೆ. ಈ ಕಥೆಗೆ ಕಲಾವಿದರ ಸೃಜನಶೀಲ ಸ್ಪಂದನವೂ ಎದ್ದುಕಾಣುವಂತಿದೆ. ಕಟ್ಟುವಿಕೆಯಲ್ಲಿ ಇನ್ನಷ್ಟು ಸಾವಧಾನ ಹಾಗೂ ರಂಜಕ ಗುಣ ಇದ್ದಿದ್ದರೆ ‘ಜೈ ಭೀಮ್’ ಮತ್ತಷ್ಟು ಗಟ್ಟಿಯಾಗುತ್ತಿತ್ತು.

ಗಿಣಿ ಮತ್ತು ಜೇನ್ನೊಣದ ಭೇಟಿಯ ‘ಗಣಿತ ಕಲಿತ ಗಿಣಿ’, ಲಾಜಿಕ್ ಗೇಟ್ಸ್ ತತ್ವಗಳನ್ನು ಪರಿಚಯಿಸುವ ‘ಯಾವ ನಲ್ಲಿ ಯಾವ ಪೈಪು’ ಕಥೆಗಳು ಪ್ರಯೋಗದ ರೂಪದಲ್ಲಿ ಗಮನಸೆಳೆಯುತ್ತವೆ.

ಸೊಗಸಿನ ಕಾರಣಕ್ಕಾಗಿ ‘ಕಿಂಡರ್ ಕಥಾ’ ಪುಸ್ತಕಗಳಿಗೆ ವಿಶೇಷ ಮಹತ್ವವಿದೆ. ಶಾಲಾಮಕ್ಕಳಿಗೆ ಪುಸ್ತಕದ ಅಭಿರುಚಿ ಮೂಡಿಸುವ ನಿಟ್ಟನಲ್ಲಿ ಸ್ವಾಗತಾರ್ಹ ಕೃತಿಗಳಿವು. ❖

ಪದಬಂಧ 2770



ಮೇಲಿನಿಂದ ಕೆಳಕ್ಕೆ
1. ಗಗನ ಇತಿಹಾಸ ಶಾಸ್ತ್ರವಿದು 6
2. ಸುಪ್ರಭಾತದಲ್ಲಿ ಒಳ್ಳೆಯ ಪೌರನಾದ ಕೌಸಲ್ಯೆಯ ಪುತ್ರ 3
3. ಸ್ವಾರ್ಥ ಸಾಧನೆಗೆ ಅನ್ಯರನ್ನು ಅಧೀನಗೊಳಿಸಿಕೊಳ್ಳುವ ತಂತ್ರ 3
4. ರಮಿಸುವ ಲಕ್ಷ್ಮಿಯ ಸಂತಸಕಾರಕ 4
5. ನಿರ್ದಿಷ್ಟವಾದ ಕಾಲಾವಕಾಶ 3
7. ಶೂಲವನ್ನು ಹಿಡಿದಿರುವವ 4
8. ಮರಾಠಿ ಕೇರಳದ ಕಡೆಯ ಚಿಕ್ಕಪ್ಪ 2
11. ಪ್ರಾಣಿಗಳಂತೆ ಮಂದಿಯ ಗುಂಪು 5
13. ಕುಬೇರನ ಊರಿಂದ ಬಂದ ಗುಂಗುರು ಕೂದಲಿನ ಸುಂದರ ಮಗಳು 6
15. ಮಂಗಳಕರವಾದ ತುಂಬಿದ ಕೊಡ 3
16. ಪರಮಾತ್ಮ ವಾಸಿಸುವ ಮನೆ 4
17. ನರ್ತಿಸು ಹಳ್ಳ ಸಿಗುತ್ತೆ 2
20. ಅವಮಾನಿಸಿ ಹೀಗೆಳೆ 3
21. ಇಕಾರಾಂತದ ಬದಲು ಅಕಾರಾಂತ ಪಡೆದ ಕೃಷ್ಣ ಮಾತೆ 3

ಎಡದಿಂದ ಬಲಕ್ಕೆ
1. ಇಲ್ಲೇ ಆಕಡೆ ಈಕಡೆ ಸುತ್ತಮುತ್ತ ಓಡಾಡಲು ಸಿಗುವ ಪರವಾನಗಿ 4
3. ಋತುರಾಜನ ಕಾಲದಲ್ಲಿ ಪ್ರವಾಸ ಮಾಡಲು ಯೋಗ್ಯವಾದ ದೆಹಲಿಯ ಪ್ರತಿಷ್ಠಿತ ಪ್ರದೇಶ 6
5. ಗಜನ ಮುಂದೆ ಅತಿ ಚಿಕ್ಕದಾಗಿ ಕಾಣಿಸುವ ಆಡು 2
6. ಭಾಷೆಯ ಬರಹಕ್ಕೊಂದು ಆಕಾರ 2
8. ಕಾವ್ಯದಲ್ಲಿ ಬರುವ ಅಡವಿಯುಂ 3
9. ಸಿಖ್ ಜನಾಂಗದ ಗುರು 3
10. ದೊರೆಯ ಪರಾಕಿನಲ್ಲಿ ‘ಅರಸರಿಗೆ ಅರಸ’ 5
12. ಮನುಷ್ಯತ್ವವನ್ನು ಮರೆತ ಕುರುಡು ಮಾನವ 3
14. ಕಾಪಾಡುವ ಶಕ್ತಿಯನ್ನು ಹೊಂದಿರುವ ಸೈನ್ಯ 5
17. ಬಾಯಿ ರುಚಿಗೆ ಕರಿದ ಪದಾರ್ಥ 3
18. ವರುಣನ ದಿಕ್ಕಿನಿಂದ ಬಂದವಳು 3
19. ಮರವನ್ನು ಸುತ್ತಿಕೊಳ್ಳುವ ಬಳ್ಳಿ 2
21. ಮಣ್ಣುಗುಣ ಪಡೆದ ನಮ್ಮ ದೇಶ 2
22. ಮಂತ್ರ ತಂತ್ರಗಳಿಗೆ ಬಲಿಯಾಗುವ ಅಮಾಯಕ ಪ್ರಾಣಿಗಳು 6
23. ಜ್ಞಾನ ವಿವೇಕಗಳನ್ನು ಕರುಣಿಸುವ ದುರ್ಗಾ ಸ್ವರೂಪಿಣಿ 4

ಪದಬಂಧ ಉತ್ತರ -2769

ಮೇಲಿಂದ ಕೆಳಕ್ಕೆ

1. ಪ್ರಸೇನ 2.ಕ್ಷಮಿಸು 3.ಪರದೈವ 4.ವಿಮಾಧನ 9.ಕೂಲಂಕುಶ 11.ದಧಿಸಾರ 12.ಶೋಭನಾ 13.ಪಶು 15.ಲಯಕಾರ 16.ವರ್ತನೆ 18.ಭಾವುಕ 20.ಕುವಲಯ 21.ಯಿತಾ 23.ನಾರಂಗಿ 24.ನವಗತಿ 25.ಕಲಿಗಾಲ 26.ಜಟಕಾ 27.ಮರಣ

ಎಡದಿಂದ ಬಲಕ್ಕೆ

1. ಪ್ರತಿಪಕ್ಷ 3.ಪದವಿ 5.ಮಿತಾಕ್ಷರ 6.ಮಾಗಿಸು 8.ನಮ್ಮಕೂಸು 10.ವದನಶೋಭ 14.ಕುಲದೈವ 17.ಶುಭಾಶಯ 19.ಸಾಕುನಾಯಿ 22.ಕಲರವ 23.ನಾಕನರಕ 26.ಜಯರಾಮ 29.ಗಾಳಿಪಟ 30.ತಿಕ್ಕಲ 31.ಕಾಡುಕೋಣ

ಸಲೀಂ ಅಲಿ 'ರೆಕ್ಕೆಯ ರುಜುಗಳು'

ಸರ್ಜಾಶಂಕರ ಹರಳಿಮಠ

ರಂಗಭೂಮಿ

ಒಬ್ಬ ಹುಡುಗ ತನ್ನ ಹುಟ್ಟಿದ ಹಬ್ಬಕ್ಕೆ ಚಿಕ್ಕಪ್ಪ ಉಡುಗೊರೆಯಾಗಿ ನೀಡಿದ ಏರ್‌ಗನ್‌ನಿಂದ ಪಕ್ಷಿಯೊಂದನ್ನು ಹೊಡೆದ. ಆ ಪಕ್ಷಿ ಯಾವುದೆಂದು ತಿಳಿಯದೆ, ಅದನ್ನು ತಿಳಿಯುವುದಕ್ಕಾಗಿ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಗೆ ತೆರಳಿದ. ಆ ಸಂಸ್ಥೆಯ ಗೌರವ ಕಾರ್ಯದರ್ಶಿ ಡಬ್ಲ್ಯೂ.ಎಸ್. ಮಿಲ್ಲಾರ್ಡನ್ ಆ ಹುಡುಗನಿಗೆ ಆ ಪಕ್ಷಿ ಯಾವುದೆಂದು ತಿಳಿಸಿದರು. ಪಕ್ಷಿಗಳ ಕುರಿತು ಹುಡುಗನಿಗೆ ಇರುವ ತೀವ್ರತರ ಆಸಕ್ತಿಯನ್ನು ಗಮನಿಸಿ. ಇಡೀ ಭಾರತದ ಪಕ್ಷಿ ವೈವಿಧ್ಯವನ್ನು ಎಳೆ ಎಳೆಯಾಗಿ ಪರಿಚಯಿಸಿದರು. ಹಾಗೆ ಮಿಲ್ಲಾರ್ಡನ್ ಅವರು ಒಬ್ಬ ಪಕ್ಷಿ ಪಿತಾಮಹನೇ ಭಾರತದಲ್ಲಿ ರೂಪುಗೊಳ್ಳಲು ಕಾರಣರಾದರು. ಸಲೀಂ ಅಲಿ ಎಂಬ ಪಕ್ಷಿ ಲೋಕದ ವಿಸ್ಮಯ ಚಿಗುರಿದ ಕಥೆಯಿದು.

ಸಲೀಂ ಅವರ ಬದುಕು ಮತ್ತು ಪಕ್ಷಿಲೋಕದ ಕುರಿತ ಅವರ ಸಾಧನೆಯನ್ನು ಆಧರಿಸಿ ಇತ್ತೀಚೆಗೆ ಮೈಸೂರಿನ ರಂಗಾಯಣದಲ್ಲಿ 'ಅರಿವು ರಂಗ, ಮೈಸೂರು' ಬಳಗದವರು 'ಸಲೀಂ ಅಲಿ, ಪಕ್ಷಿ ಲೋಕದ ಬೆರಗು' ನಾಟಕವನ್ನು ರಂಗಕ್ಕೆ ತಂದಿದ್ದಾರೆ. ಒಬ್ಬ ವ್ಯಕ್ತಿಯ ಬದುಕಿನ ಸಾಧನೆಗಳನ್ನು ರಂಗಕ್ಕೆ ತರುವ ಸಂದರ್ಭದಲ್ಲಿ ಸಾಕ್ಷ್ಯಚಿತ್ರದ ಛಾಯೆಗಳು ಅನಿವಾರ್ಯವಾಗಿ ನುಸುಳಿಬಿಡುತ್ತವೆ. ಇಂತಹ ಅಪಾಯದಿಂದ ನಾಟಕವನ್ನು ಪಾರು ಮಾಡುವುದರಲ್ಲಿ ನಿರ್ದೇಶಕರು ಸಾಕಷ್ಟು ಯಶಸ್ವಿಯಾಗಿದ್ದಾರೆ. ನಾಟಕದ ಮೊದಲರ್ಧ ಸ್ವಲ್ಪ ನಿಧಾನಗತಿಯಲ್ಲಿ ಸಾಗಿ ದೀರ್ಘವೆನಿಸುತ್ತದೆ. ಉಳಿದಂತೆ ಸಲೀಂ ಅವರ ಬದುಕಿನ ಕುತೂಹಲಕಾರಿ ತಿರುವುಗಳು, ಕೌಟುಂಬಿಕ ಏಳು ಬೀಳುಗಳು, ಗಾಂಧಿ, ನೆಹರೂ, ಇಂದಿರಾ ಗಾಂಧಿಯವರೊಂದಿಗಿನ ಅವರ ಸಂಬಂಧಗಳು ಲವಲವಿಕೆಯಿಂದ ರಂಗದಲ್ಲಿ ಜೀವ ಪಡೆದು ಪ್ರೇಕ್ಷಕರನ್ನು ಹಿಡಿದಿಡುತ್ತವೆ.

ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿಯೇ ಹಲವರು ತಮ್ಮ ತಮ್ಮ ಕ್ಷೇತ್ರದಲ್ಲಿ ಅಧ್ಯಯನ, ಸಂಶೋಧನೆಗಳಲ್ಲಿ ತೊಡಗಿದ್ದರು. ಸ್ವಾತಂತ್ರ್ಯ ಚಳವಳಿಗೆ ಬೆನ್ನು ತಿರುಗಿಸಿ ಈ ರೀತಿ ತಮ್ಮದೇ ಪ್ರಪಂಚದಲ್ಲಿ ಮುಳುಗುವುದು ಸರಿಯೇ ಎಂಬ ಪ್ರಶ್ನೆಯನ್ನು ಇಂಥವರು ಎದುರಿಸಿದ್ದಿದೆ. ಪಕ್ಷಿತಜ್ಞ ಸಲೀಂ ಅಲಿ ಕೂಡ ಇಂತಹ ಪ್ರಶ್ನೆಯನ್ನು ಎದುರಿಸಿದವರೇ. ನಾಟಕವೂ ಇದಕ್ಕೆ ಉತ್ತರವನ್ನು ಕೊಡಲು ಪ್ರಯತ್ನಿಸಿದೆ.

ಪಕ್ಷಿಸಂಕುಲದ ಅಧ್ಯಯನದ ಮೂಲಕ ಭಾರತದ ಪರಿಸರವನ್ನು ಗ್ರಹಿಸುವಲ್ಲಿ ಮಹತ್ವದ ಕೊಡುಗೆ ನೀಡುವುದರೊಂದಿಗೆ ಸ್ವಾತಂತ್ರ್ಯಾನಂತರ ಅವನತಿಯತ್ತ ಸಾಗಿದ್ದ ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯನ್ನು ಸಲೀಂ ಮೇಲೆತ್ತಿದರು. ಅವರ ಪಾಂಡಿತ್ಯ ಹಾಗೂ ನಾಯಕತ್ವದ ಗುಣ, ಸರ್ಕಾರದ ವಿವೇಕಹೀನ ನಿರ್ಧಾರಗಳನ್ನು ಹಿಮ್ಮೆಟ್ಟಿಸಿ ರಾಜಸ್ಥಾನದ ಭರತಪುರದಲ್ಲಿರುವ ಘಾನಾ ಪಕ್ಷಿಧಾಮ ಮತ್ತು ಕೇರಳದ ಸೈಲೆಂಟ್ ವ್ಯಾಲಿ ರಾಷ್ಟ್ರೀಯ ಉದ್ಯಾನವನವನ್ನು ರಕ್ಷಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ಮಡದಿ ತೆಹಮಿನಾ (ಸರಳಾ ನಟರಾಜ್) ಮತ್ತು ಗೆಳತಿ ಮಿಸ್ ಕೆ (ಸೀಮಂತಿನಿ ಬಿ.) ಪಾತ್ರಗಳು ಉತ್ತರಾರ್ಧದ ನಾಟಕದ ಬಹುಪಾಲನ್ನು ಆವರಿಸಿದ್ದವು. ಇದಕ್ಕೆ ಈ ನಟಿಯರ ಅಭಿನಯವೂ ಒಂದು ಕಾರಣ. ಸಲೀಂ ಅವರಿಗೆ ಪಕ್ಷಿಗಳ ಅಧ್ಯಯನದಲ್ಲಿ ಕುಟುಂಬ ನಿರ್ವಹಣೆಗಾಗುವಷ್ಟೂ ಆದಾಯ ಬಾರದಿದ್ದಾಗ ಮತ್ತು ಅದಕ್ಕೆ ಅನಿವಾರ್ಯವಾಗಿ ವಿದಾಯ ಹೇಳಬೇಕಾದ ಸಂದರ್ಭ ಸೃಷ್ಟಿಯಾದಾಗ ತೆಹಮಿನಾ ತಾವೇ ಅರೆಕಾಲಿಕ ಉದ್ಯೋಗಕ್ಕೆ ಸೇರಿ ಸಲೀಂ ಅವರಿಗೆ ಅವರ ಅಧ್ಯಯನವನ್ನು ಮುಂದುವರೆಸಲು ಅವಕಾಶ ಮಾಡಿಕೊಟ್ಟು ಹೃದಯ ವೈಶಾಲ್ಯ ಮೆರೆಯುತ್ತಾರೆ.

ತೆಹಮಿನಾ ಅವರ ಮರಣದ ನಂತರ ಪತ್ರಕರ್ತೆ ಮಿಸ್ ಕೆ ಅವರು ಸಲೀಂ ಅವರ ಬದುಕನ್ನು ಪ್ರವೇಶಿಸುತ್ತಾರೆ. ಇವರೀರ್ವರು ಮದುವೆಯಾಗದೆ ಲಿವಿಂಗ್ ಟುಗೆದರ್ ರೀತಿ ಬದುಕುತ್ತಿರುತ್ತಾರೆ. ಮಿಸ್ ಕೆ ಅವರು ಸಲೀಂ ಅವರೊಂದಿಗೆ ಇರುವ ಸಂದರ್ಭದಲ್ಲಿ ಮಡದಿ ತೆಹಮಿನಾ ಪ್ರತ್ಯಕ್ಷವಾಗಿ 'ನೀವು ಸಲೀಂ ಅವರೊಂದಿಗೆ ಇರುವುದು ನನಗೇನೂ ಬೇಸರ ತರಿಸಿಲ್ಲ. ಸಲೀಂ ಖುಷಿಯಾಗಿರುವುದು ನನಗೆ ಮುಖ್ಯ' ಎನ್ನುವ ರೀತಿಯ ಮಾತುಗಳನ್ನು ಹೇಳಿಸುವ ದೃಶ್ಯವೊಂದನ್ನು ಸೃಷ್ಟಿಸಲಾಗಿದೆ. 'ಮಡದಿಯನ್ನು ಕಳೆದುಕೊಂಡ ನಂತರ ಸಲೀಂ ಅವರು ಇನ್ನೊಂದು ಹೆಣ್ಣಿನೊಂದಿಗೆ ಸಂಬಂಧ ಬೆಳೆಸಬಾರದಿತ್ತೇನೋ' ಎಂದು ಯೋಚಿಸುವ ಸಾಂಪ್ರದಾಯಿಕ ಮನಸ್ಸುಗಳ ದೃಷ್ಟಿಯಲ್ಲಿ ಸಲೀಂ ಅವರ ವ್ಯಕ್ತಿತ್ವವನ್ನು ಕಾಪಾಡುವ ಉದ್ದೇಶದಿಂದ ಈ ದೃಶ್ಯ ಸೃಷ್ಟಿಸಿದಂತೆ ಭಾಸವಾಗುತ್ತದೆ. ನಾಟಕದ ಒಟ್ಟು ಪರಿಣಾಮದ ದೃಷ್ಟಿಯಿಂದ ಇದು ಭಾರವೆನಿಸುತ್ತದೆ.

ವೈದ್ಯ ಡಾ.ಮನೋಹರ್ ಎಂ.ಸಿ. ಅವರು ಈ ನಾಟಕವನ್ನು ರಚಿಸಿದ್ದು, ಬರ್ಟಿ ಒಲಿವೆರಾ ನಿರ್ದೇಶಿಸಿದ್ದಾರೆ. ನಾಟಕ ರಚನೆ ಮತ್ತು ನಿರ್ದೇಶನದ ಜೊತೆ ಇವರಿಬ್ಬರೂ ಕ್ರಮವಾಗಿ ಯುವ ಸಲೀಂ ಮತ್ತು ಸಲೀಂ ಅವರ ಲೇಖಕಮಿತ್ರ ಜೆ.ಸಿ. ಡೇನಿಯಲ್ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಆರ್. ಚಲಪತಿ ಅವರು ಇಳಿವಯಸ್ಸಿನ ಸಲೀಂ ಅಲಿ ಪಾತ್ರದಲ್ಲಿ ಮನೋಜ್ಞ ಅಭಿನಯ ನೀಡಿದ್ದಾರೆ. ಧ್ವನಿಯ ಏರಿಳಿತ, ನಡುಗುವ ದೇಹದ ಚಲನೆಯನ್ನು ಒಂದೆರಡು ಕ್ಷಣಗಳನ್ನು ಹೊರತುಪಡಿಸಿದಂತೆ ನಾಟಕದ ಆರಂಭದಿಂದ ಕೊನೆಯವರೆಗೂ ಅವರು ಕಾಪಿಟ್ಟುಕೊಂಡಿದ್ದಾರೆ. ರಂಗಸಜ್ಜಿಕೆ (ಕಾಜು) ಪೂರಕವಾಗಿತ್ತು. ಬೆಳಕಿನ ನಿರ್ವಹಣೆ ಇನ್ನಷ್ಟು ಸುಧಾರಿಸಬೇಕಿತ್ತು. ಸಂಗೀತ ಕೆಲವು ಸಂದರ್ಭಗಳಲ್ಲಿ ಸಂಭಾಷಣೆಗೆ ತೊಡಕಾಗಿ ಮೂಡುತ್ತಿತ್ತು.

ವ್ಯಕ್ತಿಯ ಸಾಧನೆಯನ್ನು ಆತ ಜನಿಸಿದ ಜಾತಿ-ಧರ್ಮದ ಕಾರಣಕ್ಕೆ ವೈಭವೀಕರಿಸುವ ಅಥವಾ ಹಿನ್ನೆಲೆಗೆ ಸರಿಸುವ, ಮಸುಕುಗೊಳಿಸುವ, ವಿಕೃತಗೊಳಿಸುವ ನಿರಂತರ ಪ್ರಯತ್ನ ಒಂದು ಮಟ್ಟದಲ್ಲಿ ಲಾಗಾಯ್ತಿನಿಂದಲೂ ಎಲ್ಲ ಕಡೆಯೂ ನಡೆದುಬಂದಿದೆ. ಈಗ ಢಾಳಾಗಿ ಕಾಣುವಂತೆ ನಡೆಯುತ್ತಿದೆ. ಸಾಹಿತ್ಯ ದಾಟಿ ಸಿನಿಮಾ ಮತ್ತು ರಂಗಭೂಮಿಗೂ ಆ ಪ್ರವೃತ್ತಿ ಪ್ರವೇಶಿಸಿದೆ. ಈ ವಿಷಮ ಸನ್ನಿವೇಶದಲ್ಲಿ ಜಾತಿ-ಧರ್ಮವನ್ನು ಮೀರಿ ನೈಜ ಚಿತ್ರಣ ನೀಡುವ ಪ್ರವೃತ್ತಿ ಕಲಾಕ್ಷೇತ್ರಗಳಲ್ಲಿ ಅತ್ಯಗತ್ಯವಾಗಿದೆ. ಈ ಹಿಂದೆ ಗಣಿತಜ್ಞ ಶ್ರೀನಿವಾಸ ರಾಮಾನುಜಂ ಕುರಿತ ನಾಟಕ 'ನಿಲುಕದ ನಕ್ಷತ್ರ', ವಿಜ್ಞಾನಿ 'ಅಬ್ದುಸ್ ಸಲಾಂ ಒಂದು ವಿಚಾರಣೆ' ನಾಟಕಗಳನ್ನು ರಂಗಕ್ಕೆ ತಂದಿದ್ದ 'ಅರಿವು ರಂಗ' ಈಗ ಸಲೀಂ ಅಲಿ ಕುರಿತ ನಾಟಕದ ಮೂಲಕ ಈ ಕರ್ತವ್ಯವನ್ನು ನಿರ್ವಹಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ❖

ಯುವ ಮನಸು

ನವ ಕನಸು

ನನ್ನದೇ ಬ್ರ್ಯಾಂಡ್, ನನ್ನದೇ ಮಾರುಕಟ್ಟೆ

ಶ್ರೀಕಾಂತ್ ಪ. ಕುಂಬಾರ, ರೈತ

ನನ್ನ ಸಾವಯವ ಕೃಷಿಯ ಪಯಣಕ್ಕೆ ಹನ್ನೆರಡು ವರ್ಷ. 12 ಎಕರೆಯಲ್ಲಿ ಸಾವಯವ ಪದ್ಧತಿಯಲ್ಲಿ ಕಬ್ಬು, ಅರಿಸಿನ, ಸೋಯಾಬಿನ್, ಹೆಸರು, ಅಲಸಂದೆ, ಗೋಧಿ, ಜವೆ ಗೋಧಿ, ಈರುಳ್ಳಿ, ಬೆಳ್ಳುಳ್ಳಿ, ಬಣ್ಣದ ದೇಸಿ ಗೋವಿನಜೋಳ, ಕಾಯಿಪಲ್ಲೆ ಬೆಳೆಗಳನ್ನು ಬೆಳೆಯುತ್ತಿದ್ದೇನೆ. ಜೊತೆಗೆ ಔಷಧಿ ಸಸ್ಯ, ಪುಷ್ಪ ಕೃಷಿ, ಅರಣ್ಯ ಕೃಷಿ ಇದೆ. ಪಶು ಸಂಗೋಪನೆ, ಜೇನು ಸಾಕಾಣಿಕೆಯೂ ಇದೆ. ಇಷ್ಟೆಲ್ಲ ಬೆಳೆ ವೈವಿಧ್ಯವಿದ್ದರೂ ಮಾರುಕಟ್ಟೆಯಲ್ಲಿ ನ್ಯಾಯುತ ಬೆಲೆ ಸಿಗದೇ ನಷ್ಟ ಅನುಭವಿಸಿದ್ದೇನೆ. ಇದನ್ನು ಅರಿತ ಮೇಲೆ, 'ನಾನು ಬೆಳೆಯುವ ಎಲ್ಲ ಬೆಳೆಗಳನ್ನು ಮೌಲ್ಯ ವರ್ಧಿಸಿ ಮಾರುಕಟ್ಟೆ ಮಾಡಬೇಕು ಎಂದು ನಿರ್ಧರಿಸಿದ್ದೇನೆ. ಆದರೆ, ಈವರೆಗೂ ಶೇ 25ರಷ್ಟು ಬೆಳೆ ಮೌಲ್ಯವರ್ಧಿಸಿ ಮಾರಾಟ ಮಾಡಲು ಸಾಧ್ಯವಾಗಿದೆ. ಈ ವರ್ಷ (2023), ಶೇ 100ರಷ್ಟು ಬೆಳೆಯನ್ನು ಮೌಲ್ಯವರ್ಧಿಸಿ, ನನ್ನದೇ ಬ್ರ್ಯಾಂಡ್‌ನಡಿ ನೇರವಾಗಿ ಗ್ರಾಹಕರಿಗೆ ತಲುಪಿಸಬೇಕೆಂಬ ಗುರಿ ಇಟ್ಟುಕೊಂಡಿದ್ದೇನೆ. ಗುರಿಯಷ್ಟೇ ಅಲ್ಲ, ಕಳೆದ ವರ್ಷದಿಂದಲೇ ಅದಕ್ಕೆ ಬೇಕಾದ ಪೂರ್ವ ತಯಾರಿ ಮಾಡಿಕೊಂಡು ಬಂದಿರುವೆ. ಸಾವಯವ ಬೆಲ್ಲ ಉತ್ಪಾದನಾ ಘಟಕ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಇಲ್ಲಿ ಸಾವಯವ ಬೆಲ್ಲ, ಕಾಕಂಬಿ, ಜೋನಿಬೆಲ್ಲ, ಹರಳುಬೆಲ್ಲ, ಪುಡಿಬೆಲ್ಲ, ಅಚ್ಚು ಬೆಲ್ಲ, ಆಯುರ್ವೇದಿಕ್ ಬೆಲ್ಲ, ಬೆಲ್ಲದ ವಿಗ್ರಹ.. ಹೀಗೆ ಬೆಲ್ಲದಲ್ಲಿ ಹಲವು ವಿವಿಧ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುತ್ತೇನೆ.

ಸಾವಯವ ಪದ್ಧತಿಯಲ್ಲಿ ಅರಿಸಿನ ಬೆಳೆಯುತ್ತಿದ್ದು, ಅದನ್ನು ಹಸಿ ಇರುವಾಗಲೇ ಕತ್ತರಿಸಿ ಸೋಲಾರ್ ಡ್ರೈಯರ್‌ನಲ್ಲಿ ಒಣಗಿಸಿ ಪುಡಿ ಮಾಡಿ ಮಾರುಕಟ್ಟೆ ಮಾಡಲು ವ್ಯವಸ್ಥೆಯೂ ಆಗಿದೆ. ಇದರ ಜೊತೆಗೆ, ಕರಿಬೇವು, ನಿಂಬೆ ಹುಲ್ಲು, ಬಸಳೆ, ತುಳಸಿ, ಸ್ಟೀವಿಯಾವನ್ನು ಒಣಗಿಸಿ ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುವ ಆಲೋಚನೆಯೂ ಇದೆ. ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಏರಿಳಿತಗಳಿಂದ ಪಾರಾಗಲು ನಾನು ಬೆಳೆಯುವ ಎಲ್ಲ ಬೆಳೆಗಳನ್ನೂ ಮೌಲ್ಯವರ್ಧನೆ ಮಾಡಿ ಮಾರಾಟ ಮಾಡುತ್ತೇನೆ ಅಥವಾ ಮೌಲ್ಯವರ್ಧನೆಗೆ ಅವಕಾಶವಿರುವ ಬೆಳೆಗಳನ್ನು ಮಾತ್ರ ಬೆಳೆಯುತ್ತೇನೆ - ಇದೇ ನನ್ನ ರೆಸಲ್ಯೂಷನ್.

ಹೂಡಿಕೆಯನ್ನು ಕಲಿಸುವ ಗುರಿ

ತೇಜಸ್ ಖೋಡೆ, ಉದ್ಯಮಿ

ನಮ್ಮಲ್ಲಿ ಬಹುತೇಕ ಎಲ್ಲರೂ ಹೂಡಿಕೆಗೆ ಭೌತಿಕ ಆಸ್ತಿಯನ್ನು ಹೆಚ್ಚೆಚ್ಚು ಆಯ್ಕೆ ಮಾಡಿಕೊಳ್ಳುತ್ತಾರೆ. ಚಿನ್ನ, ರಿಯಲ್ ಎಸ್ಟೇಟ್‌ನಲ್ಲಿ ಅವರು ಹಣ ತೊಡಗಿಸುತ್ತಿದ್ದಾರೆ. ದುಡಿದು ಸಂಪಾದಿಸಿದ ಹಣವನ್ನು ಹೂಡಿಕೆ ಮಾಡುವ ಸಂದರ್ಭ ಬಂದಾಗ, ಅದನ್ನು ಭೌತಿಕ ಆಸ್ತಿಯಲ್ಲಿ ತೊಡಗಿಸುತ್ತಾರೆ. ನಮ್ಮ ಗುರಿ, ದೇಶದ ಉಳಿತಾಯದ ಹಣವು ಹಣಕಾಸು ಉತ್ಪನ್ನಗಳಲ್ಲಿ ವಿನಿಯೋಗವಾಗುವಂತೆ ಮಾಡುವುದು. ದುಡಿದು ಸಂಪಾದಿಸುವವರು ಷೇರು, ಬಾಂಡ್‌ಗಳಲ್ಲಿ ಹಣ ತೊಡಗಿಸಬೇಕು. ಇದು ನಮ್ಮ ಒಟ್ಟು ಧ್ಯೇಯವೂ ಹೌದು. ತಂತ್ರಜ್ಞಾನದ ನೆರವಿನಿಂದ ನಾವು ಇದನ್ನು ಸಾಧ್ಯವಾಗಿಸಲು ಕೆಲಸ ಮಾಡುತ್ತಿದ್ದೇವೆ. 2023ರಲ್ಲಿ ನಮ್ಮ ಆದ್ಯತೆ ಇದರ ಕಡೆ ಇರುತ್ತದೆ.

ಅನಿವಾಸಿ ಭಾರತೀಯರು (ಎನ್‌ಆರ್‌ಐ) ರಿಯಲ್ ಎಸ್ಟೇಟ್, ಫ್ಲ್ಯಾಟ್‌ನಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಅವರಿಗೆ ಹಣಕಾಸು ಉತ್ಪನ್ನಗಳಲ್ಲಿ ಹೂಡಿಕೆ ಮಾಡುವುದನ್ನು ಸುಲಭವಾಗಿಸುವ ಕೆಲಸ ಮಾಡುತ್ತೇವೆ. ಅವರು ಷೇರುಗಳಲ್ಲಿ ಹೂಡಿಕೆ ಮಾಡಿದರೆ, ಕಂಪನಿಗಳಿಗೆ ಬಂಡವಾಳ ಹೆಚ್ಚು ಸಿಗುತ್ತದೆ, ಆಗ ಉದ್ಯೋಗ ಸೃಷ್ಟಿ ಜಾಸ್ತಿ ಆಗುತ್ತದೆ. ಎಲ್ಲರೂ ಜಮೀನು, ಫ್ಲ್ಯಾಟ್‌ಗಳ ಮೇಲೆ ಹೂಡಿಕೆ ಮಾಡಿದರೆ ದೇಶದ ಅರ್ಥ ವ್ಯವಸ್ಥೆ ಹೆಚ್ಚು ಬೆಳೆಯುವುದಿಲ್ಲ.

ನಮ್ಮ ಬೆಂಗಳೂರು ಐ.ಟಿ. ಕೇಂದ್ರವಾಗಿ ಬೆಳೆದಿದೆ. ನಮ್ಮ ಬೆಂಗಳೂರು ದೇಶದ ಹಣಕಾಸಿನ ಕೇಂದ್ರವೂ ಆಗಬೇಕು ಎಂಬುದು ನಮ್ಮ ಕನಸು. ನಾವು ಬಂಡವಾಳ ಮಾರುಕಟ್ಟೆ ವಲಯದಲ್ಲಿ ಉದ್ಯೋಗ ಸೃಷ್ಟಿಗೆ ಗಮನ ನೀಡುತ್ತಿದ್ದೇವೆ. ಬೇರೆ ರಾಜ್ಯಗಳ ಜನರಿಗೆ, ಇಲ್ಲಿಗೆ ಬಂದು ಕೆಲಸ ಮಾಡಿ ಎಂದು ಕರೆಯುತ್ತಿದ್ದೇವೆ. ಈಗ ಮುಂಬೈನಲ್ಲಿ ಹೆಚ್ಚಿನ ಹಣಕಾಸು ಸಂಸ್ಥೆಗಳು ಇವೆ. ಬೆಂಗಳೂರು ಕೂಡ ಹಾಗೆಯೇ ಬೆಳೆಯುವಂತೆ ಆಗಬೇಕು.

ಟಾಪ್ 50ರಲ್ಲಿ ಸೇರುವಾಸೆ

ಅವನಿ ಪ್ರಶಾಂತ್, ಗಾಲ್ಫ್ ಆಟಗಾರ್ತಿ

ಮುಂಬರುವ ಒಂದು ವರ್ಷವು ನನ್ನ ಕ್ರೀಡಾ ಜೀವನದ ಮಹತ್ವದ ಕಾಲಘಟ್ಟವಾಗಿದೆ. ಇದುವರೆಗಿನ ನನ್ನ ಪಯಣ ಅತ್ಯುತ್ತಮವಾಗಿದೆ. ಮುಂದಿನ ವರ್ಷದಲ್ಲಿ ಮೂರು ಗುರಿಗಳನ್ನು ಸಾಧಿಸುವುದಿದೆ.

ಮೊದಲನೆಯದಾಗಿ; ಗಾಲ್ಫ್ ಕ್ರೀಡೆಯಲ್ಲಿ ಪ್ರೊಫೆಷನಲ್ ಮೇಜರ್ ಟೂರ್ನಿಗಳನ್ನು ಆಡುವುದು. ಇದು ಬಹಳ ಕ್ಲಿಷ್ಟವಾದ ಸವಾಲು. ಆದರೆ ಇದನ್ನು ಸಾಧಿಸುವ ಛಲ ಮತ್ತು ವಿಶ್ವಾಸವಿದೆ. ಮಹಿಳೆಯರ ವಿಭಾಗದಲ್ಲಿ ನಾಲ್ಕು ಮೇಜರ್ ಟೂರ್ನಿಗಳಿವೆ. ಮುಂದಿನ ಮೂರು ತಿಂಗಳಲ್ಲಿ ನಡೆಯುವ ಅಮೇಚೂರ್ ಟೂರ್ನಿಗಳಲ್ಲಿರುವ ಕಠಿಣ ಸವಾಲು ಮೀರಿ ನಿಲ್ಲಬೇಕು. ಆಗ ಮೇಜರ್ ಆಡುವ ಅವಕಾಶ ಸಿಗಲಿದೆ. ಕನಿಷ್ಠ ಒಂದಾದರೂ ಮೇಜರ್ ಟೂರ್ನಿ ಆಡಲೇಬೇಕು.

ಎರಡನೆಯದಾಗಿ; ಮುಂದಿನ ವರ್ಷದಲ್ಲಿ ಮೂರು ಲೇಡಿಸ್ ಯುರೋಪಿಯನ್ ಟೂರ್ನಿಗಳಲ್ಲಿ ಆಡಲಿದ್ದೇನೆ. ಅದರಲ್ಲಿ ಒಂದರಲ್ಲಿ ಗೆಲ್ಲಬೇಕು. ಇನ್ನೊಂದು ಕ್ವಾಲಿಫೈಯರ್ ಇದೆ. ಅದರ ಮೂಲಕ ಎಲ್‌ಜಿಟಿಗೆ ಪ್ರವೇಶಿಸಬೇಕು. ಆದರೆ ಈ ಟೂರ್ನಿಗಳಲ್ಲಿ ಅತ್ಯಂತ ಕಠಿಣ ಸ್ಪರ್ಧೆ ಇದೆ. ಬಹಳ ನುರಿತ ಪ್ರತಿಸ್ಪರ್ಧಿಗಳು ಇದ್ದಾರೆ.

ಮೂರನೆಯದಾಗಿ; ಅಮೇಚೂರ್ ಮಹಿಳೆಯರ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರ 50ರಲ್ಲಿ ಸ್ಥಾನ ಗಳಿಸಬೇಕು. ಸದ್ಯ 106ನೇ ರ್‍ಯಾಂಕಿಂಗ್‌ನಲ್ಲಿದ್ದೇನೆ. ಅದಕ್ಕಾಗಿ ಸಾಕಷ್ಟು ಪರಿಶ್ರಮ ಪಡುತ್ತಿದ್ದೇನೆ. ಸಮರ್ಪಣಾಭಾವದಿಂದ ಅಭ್ಯಾಸ ಮಾಡುತ್ತಿದ್ದೇನೆ. ಸತತ ಟೂರ್‌ಗಳಲ್ಲಿ ಸಾಧನೆ ಮಾಡುತ್ತಿದ್ದೇನೆ.

ಆನ್‌ಲೈನ್ ಮೂಲಕ ಮಾರ್ಗದರ್ಶನ ನೀಡುತ್ತಿರುವ ಇಂಗ್ಲೆಂಡ್ ದೇಶದ ಕೋಚ್ ಲಾರೆನ್ಸ್ ಬ್ರದರ್‌ಇಜ್ ಮತ್ತು ಬೆಂಗಳೂರಿನಲ್ಲಿ ಸ್ಟ್ರೆಂಥ್ ಮತ್ತು ಕಂಡಿಷನಿಂಗ್ ಕೋಚ್ ಆಗಿರುವ ಡೆಕ್ಲೈನ್ ಲಿಟಾವೊ ಅವರ ಸಹಕಾರ ಬಹಳಷ್ಟಿದೆ. ನಿರೂಪಣೆ: ಗಿರೀಶ ದೊಡ್ಡಮನಿ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿಗಮ್ಮತ್ತು

ದೊಡ್ಡಾಟ

2023ರ ದಿಢೀರ್ ಕ್ಯಾಲೆಂಡರ್

2023ನೇ ಇಸ್ವಿಯ ಯಾವ ದಿನ ಯಾವ ವಾರವೆಂದು ಲೆಕ್ಕಹಾಕಿ ಅರೆಕ್ಷಣದಲ್ಲಿ ಹೇಳಿಬಿಡಬಹುದು. ಅದು ಹೇಗೆ? ಹೀಗೆ...

ಜ	ಫೆ	ಮಾ	ಏ	ಮೇ	ಜೂ	ಜು	ಆ	ಸೆ	ಅ	ನ	ಡಿ
6	2	2	5	0	3	5	1	4	6	2	4

622/503/514/624– ಈ ನಾಲ್ಕು ಸಂಖ್ಯೆಗಳನ್ನು ನೆನಪಿಟ್ಟುಕೊಳ್ಳಿ. ಇವು ಕ್ರಮವಾಗಿ ಜನವರಿಯಿಂದ ಡಿಸೆಂಬರ್‌ವರೆಗಿನ ನಿಯತಾಂಕಗಳು. ನಿಮಗೆ ಯಾವ ತಿಂಗಳಿನ ಯಾವ ದಿನಾಂಕ, ಯಾವ ವಾರವೆಂದು ತಿಳಿಯಬೇಕಾಗಿದೆಯೋ ಆ ತಿಂಗಳಿನ ನಿಯತಾಂಕಕ್ಕೆ ನಿಮಗೆ ಬೇಕಾದ ದಿನಾಂಕ ಕೂಡಿಸಿ 7ರಿಂದ ಭಾಗಿಸಬೇಕು. ಇಲ್ಲಿ ಶೇಷ ಮುಖ್ಯ. 1 ಶೇಷ ಉಳಿದರೆ–ಸೋಮ, 2–ಮಂಗಳ, 3–ಬುಧ, 4–ಗುರು, 5–ಶುಕ್ರ, 6–ಶನಿ, 0–ರವಿವಾರ ಎಂದು ತಿಳಿಯಬೇಕು. ಒಂದು ವೇಳೆ ನಿಯತಾಂಕಕ್ಕೆ ದಿನಾಂಕ ಕೂಡಿಸಿದಾಗ 7ರಿಂದ ಭಾಗಹೋಗದಿದ್ದರೆ, ಅದೇ ಶೇಷವೆಂದು ತಿಳಿದು ವಾರ ಹೇಳುವುದು.

ಉದಾ: ಈ ವರ್ಷ ಆಗಸ್ಟ್ 15 ಯಾವ ವಾರ?

ಆಗಸ್ಟ್ ನಿಯತಾಂಕ 01
ದಿನಾಂಕ 15
ಎರಡನ್ನೂ ಕೂಡಿಸಿದಾಗ 16

7ರಿಂದ ಭಾಗಿಸಿದಾಗ
7)16(2
14
2–ಶೇಷ
ಮಂಗಳವಾರ

ಸಣ್ಣಾಟ ಗುಣಿಸಿ–ಹೊಸವರ್ಷ ಬರಮಾಡಿಕೊಳ್ಳಿ

12447
x 9
1-1-2023

ಪುಟಾಣಿ ಪದಬಂಧ

ಸುಳಿವು ಆಧರಿಸಿ ಪದಪೂರ್ಣ ಮಾಡಿ					
1		ಕಾ	ಯಿ		'ಕಾಯಿ' ಕದಿಯುವ ಕಳ್ಳ
2		ಲಂ	ಕಾ		'ಲಂಕಾ'ದೊಳಗಿನ ಶೃಂಗಾರ
3		ಮಂ	ತ್ರ		'ಮಂತ್ರ' ಹೇಳಲು ಕರೆಯುವಿಕೆ
4		ಸ	ರ		'ಸರ' ಹಾಕಿಕೊಂಡೇ ಮಾಡುವ ವ್ಯಾಯಾಮ
5		ಜ	ಮಾ		'ಜಮಾ' ಮಾಡಿದ ಮಾಲಿಕ

ಎಷ್ಟು ಹಕ್ಕಿ ಉಳಿದವು? ಒಂದು ಮರದಲ್ಲಿ ನೂರು ಹಕ್ಕಿಗಳಿದ್ದವು. ಬೇಟೆಗಾರನೊಬ್ಬ ಒಂದು ಹಕ್ಕಿಗೆ ಗುಂಡು ಹಾರಿಸಿದ. ಹಾಗಾದರೆ ಮರದಲ್ಲಿ ಇನ್ನೆಷ್ಟು ಹಕ್ಕಿಗಳು ಉಳಿದವು?

ಡಕ್ಲಗ ಚಕ್ಕು ಕೇಶ್ರಷ್ಟ ಕಥೆಯ

ವಿದ್ಯಾರೇಖೆ ಕೆತ್ತಿದ ಬಾಲಕ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ತಕ್ಷಶಿಲೆ ಪ್ರಾಚೀನ ಭಾರತದ ಅತಿದೊಡ್ಡ ಗುರುಕುಲ. ತಮ್ಮ ಮಕ್ಕಳು ಅಲ್ಲಿ ಓದಿ ವಿದ್ಯಾವಂತರಾಗಲಿ ಎನ್ನುವ ಆಸೆ ಎಲ್ಲ ತಂದೆ–ತಾಯಿಗಳಲ್ಲಿ ಇತ್ತು. ಇದೇ ರೀತಿ ಆಸೆ ಹೊತ್ತಿದ್ದವಳು ದಕ್ಷಿ. ಮುಂದೊಂದು ದಿನ ತನ್ನ ಮಗನನ್ನು ಗುರುಕುಲಕ್ಕೆ ಸೇರಿಸಲೆಂದು ಬಂದಳು. ವಿದ್ಯೆ ಕಲಿಸುವಂತೆ ಗುರುಗಳಲ್ಲಿ ಬೇಡಿಕೊಂಡಳು

ಗುರುಗಳು ತಮ್ಮ ಶಿಷ್ಯರಿಗೆ ಗುರುಕುಲದ ಆವರಣದಲ್ಲಿ ಬೋಧನೆಯಲ್ಲಿ ನಿರತರಾಗಿದ್ದರು. ದಕ್ಷಿಯ ಮಗನನ್ನು ಬಳಿಗೆ ಕರೆದು, ಆತನ ಕೈ ನೋಡಿದರು. 'ಇವನಿಗೆ ಓದಿನಲ್ಲಿ ಅಭಿರುಚಿಯಿಲ್ಲ. ಅವನ ಕೈಯಲ್ಲಿ ವಿದ್ಯಾರೇಖೆಯಿಲ್ಲ, ವಿದ್ಯೆ ಹತ್ತುವುದಿಲ್ಲ' ಎಂದಾಗ ದಕ್ಷಿಗೆ ಅಳು ಬಂದಿತು. ತಾಯಿಯ ನೋವನ್ನು ಮಗ ಗಮನಿಸಿದ...

'ಗುರುಗಳೇ, ವಿದ್ಯಾರೇಖೆ ಹೇಗಿರುತ್ತದೆ?' ಎಂದು ಪ್ರಶ್ನಿಸಿದ ಆ ಬಾಲಕ, ಬೆಣಚುಕಲ್ಲಿನಿಂದ ವಿದ್ಯಾರೇಖೆಯನ್ನು ಕೈಮೇಲೆ ಕೊರೆದುಕೊಂಡ. ರಕ್ತ ಸುರಿಯಲು ಆರಂಭಿಸಿದರೂ, ಭಯಪಡಲಿಲ್ಲ. ಮತ್ತೆ ಗುರುಗಳ ಬಳಿ ಹೋದ

ಗುರುಗಳ ಮನಸ್ಸು ಕಲಕಿತು. ಬಾಲಕನ ವಿದ್ಯೆ ಕಲಿಯುವ ಛಲವನ್ನು ಗುರುತಿಸಿದರು. 'ನಿನ್ನಂತಹ ಶಿಷ್ಯನಿಗೆ ಅಲ್ಲದೆ, ಇನ್ಯಾರಿಗೆ ವಿದ್ಯಾದಾನ ಮಾಡಲಿ' ಎಂದರು. ಈ ಬಾಲಕನೇ ಪಾಣಿನಿ. ಮುಂದೆ ಸಂಸ್ಕೃತ ಭಾಷೆಗೆ ವ್ಯಾಕರಣ ಶಾಸ್ತ್ರ ರಚಿಸಿದವನು.

ಅಕ್ಷರ ಆಟ

ಇಲ್ಲಿ ಕೊಟ್ಟಿರುವ '**ದರು**' ಎಂಬ ಅಕ್ಷರಗಳಿಗೆ ಹಿಂದೆ ಒಂದಕ್ಷರ ಸೇರಿಸಿ 10 ಪದಗಳನ್ನು ರಚಿಸಿಕೊಡಿ

1. __ದರು
2. __ದರು
3. __ದರು
4. __ದರು
5. __ದರು
6. __ದರು
7. __ದರು
8. __ದರು
9. __ದರು
10. __ದರು

ಅದಲು ಬದಲು ಕಂಚಿ ಕದಲು

ಇಲ್ಲಿ ಎಡಬದಿಯ ಪದವನ್ನು ಬಲಬದಿಯ ಪದ ಮಾಡಿ, ಬಲಬದಿಯ ಪದವನ್ನು ಎಡಬದಿಗೆ ಬರೆದರೂ ಬೇರೊಂದು ಅರ್ಥಕೊಡುವ ಪದ ಬದಲಾವಣೆಯಾಗುತ್ತದೆ.

1. ರಾಜ–ಗಿರಿ/ಗಿರಿ–ರಾಜ
2. ನಟ–ರಾಜ/ರಾಜ–ನಟ
3. ವರ–ನಟ/ನಟ–ವರ
4. ಯೋಗ–ರಾಜ/ರಾಜ–ಯೋಗ
5. ಗಡಿ–ಯಾರ/ಯಾರ–ಗಡಿ
6. ರಾಜ–ಗುರು/ಗುರು–ರಾಜ
7. ಗಜ–ರಾಜ/ರಾಜ–ಗಜ

ಟ್ವೆಂಟಿ–20 ಮ್ಯಾಚ್

ಇಲ್ಲಿ ಕೊಟ್ಟಿರುವ ಎಡಪದಗಳಿಗೆ ಹೊಂದಿಕೆಯಾಗುವಂತೆ ಬಲಪದಗಳು ಬಳಕೆಯಾಗುತ್ತದೆ. ಯಾವ ಪದಕ್ಕೆ ಯಾವ ಪದ? ಹೊಂದಿಸಿರಿ...

1	ಧನ	A	ವಿವಾದ
2	ಸಿಂಹ	B	ಪಟ್ಟಿ
3	ಕಪಿ	C	ಮೇಷ
4	ರಾಜ	D	ಪೂರ್ತಿ
5	ಮೀನ	E	ಲೇಪ
6	ಬಿಡಿ	F	ಬಂಗಾರ
7	ಗದಾ	G	ಕಾಸು
8	ನುಡಿ	H	ಕಟ್ಟಡ
9	ಸುವರ್ಣ	I	ಸ್ವಪ್ನ
10	ಕಾಗೆ	J	ನಿಟ್ಟು
11	ಹಿಮ	K	ಮುಷ್ಟಿ
12	ಕಡು	L	ಗಟ್ಟು
13	ದಟ್ಟ	M	ಬೇಸಿಗೆ
14	ಗೋ	N	ಪಿಶಾಚಿ
15	ಕಟ್ಟು	O	ಪ್ರಹಾರ
16	ಭವ್ಯ	P	ಮೂತ್ರ
17	ನಡ	Q	ಯೋಗ
18	ಜಡಿ	R	ಪಾತ
19	ಕಂಠ	S	ಮಳೆ
20	ಗಡಿ	T	ದರಿದ್ರ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ: 1. ದಡಿ 2. ದುಡಿ 3. ದೀಡು 4. ದೂಡು 5. ದಂಡ

ಅದಲು ಬದಲು: 1. ದಾಸರವಾಣಿ 2. ಯಮನರಾಗ 3. ಮಾಯಗಾರ 4. ಮತ್ತೆ ಅದ್ದು

ಅಕ್ಷರ ಆಟ : ಎ. 1. ತುಪ್ಪಳ 2. ಕೊಪ್ಪಳ 3. ಹಪ್ಪಳ 4. ಸಪ್ಪಳ

ಬಿ. 1.ಸಂಬಳ 2.ಕುಂಬಳ 3.ಕಂಬಳ 4.ಸಿಂಬಳ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ದಿಶಾ ಜಿ.ಆರ್. ಸಿದ್ದಾಪುರ (ಉ.ಕ.)



ನಿಖಿಲ್ ಕೆ.ಟಿ., ದಾವಣಗೆರೆ

ಸುಮಿತ್ರಮ್ಮ ತಳವಾರ, ರಡ್ಡೇರ ನಾಗನೂರ (ಗದಗ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ್

ಜನವರಿ

ಭಾನು	1	8	15	22	29
ಸೋಮ	2	9	16	23	30
ಮಂಗಳ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6°	13	20	27	
ಶನಿ	7	14	21•	28	

ಫೆಬ್ರುವರಿ

ಭಾನು		5°	12	19	26
ಸೋಮ		6	13	20•	27
ಮಂಗಳ		7	14	21	28
ಬುಧ	1	8	15	22	
ಗುರು	2	9	16	23	
ಶುಕ್ರ	3	10	17	24	
ಶನಿ	4	11	18	25	

ಮಾರ್ಚ್

ಭಾನು		5	12	19	26
ಸೋಮ		6	13	20	27
ಮಂಗಳ		7°	14	21•	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	

ಏಪ್ರಿಲ್

ಭಾನು	30	2	9	16	23
ಸೋಮ		3	10	17	24
ಮಂಗಳ		4	11	18	25
ಬುಧ		5	12	19	26
ಗುರು		6°	13	20•	27
ಶುಕ್ರ		7	14	21	28
ಶನಿ	1	8	15	22	29

ಮೇ

ಭಾನು		7	14	21	28
ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5°	12	19•	26	
ಶನಿ	6	13	20	27	

ಜೂನ್

ಭಾನು		4°	11	18•	25
ಸೋಮ		5	12	19	26
ಮಂಗಳ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	

ಜುಲೈ

ಭಾನು	30	2	9	16	23
ಸೋಮ	31	3°	10	17•	24
ಮಂಗಳ		4	11	18	25
ಬುಧ		5	12	19	26
ಗುರು		6	13	20	27
ಶುಕ್ರ		7	14	21	28
ಶನಿ	1	8	15	22	29

ಆಗಸ್ಟ್

ಭಾನು		6	13	20	27
ಸೋಮ		7	14	21	28
ಮಂಗಳ	1°	8	15	22	29
ಬುಧ	2	9	16•	23	30
ಗುರು	3	10	17	24	31°
ಶುಕ್ರ	4	11	18	25	
ಶನಿ	5	12	19	26	

ಸೆಪ್ಟೆಂಬರ್

ಭಾನು		3	10	17	24
ಸೋಮ		4	11	18	25
ಮಂಗಳ		5	12	19	26
ಬುಧ		6	13	20	27
ಗುರು		7	14•	21	28
ಶುಕ್ರ	1	8	15	22	29°
ಶನಿ	2	9	16	23	30

ಅಕ್ಟೋಬರ್

ಭಾನು	1	8	15	22	29
ಸೋಮ	2	9	16	23	30
ಮಂಗಳ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14•	21	28°	

ನವೆಂಬರ್

ಭಾನು		5	12	19	26
ಸೋಮ		6	13•	20	27°
ಮಂಗಳ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	
ಶನಿ	4	11	18	25	

ಡಿಸೆಂಬರ್

ಭಾನು	31	3	10	17	24
ಸೋಮ		4	11	18	25
ಮಂಗಳ		5	12•	19	26°
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

• ಅಮಾವಾಸ್ಯೆ ○ ಹುಣ್ಣಿಮೆ ■ ಸಾರ್ವತ್ರಿಕ ರಜೆ ■ ನಿರ್ಬಂಧಿತ ರಜೆ

ರಜಾ ದಿನಗಳು

ಜನವರಿ
- 1- ಹೊಸ ವರ್ಷಾರಂಭ (ನಿ.)
- 15- ಮಕರ ಸಂಕ್ರಾಂತಿ, ಉತ್ತರಾಯಣ ಪುಣ್ಯಕಾಲ
- 26- ಗಣರಾಜ್ಯೋತ್ಸವ
- 30- ಮಧ್ವನವಮಿ (ನಿ.)

ಫೆಬ್ರುವರಿ
- 18- ಮಹಾಶಿವರಾತ್ರಿ

ಮಾರ್ಚ್
- 7- ಷಬ್-ಎ-ಬರಾತ್ (ನಿ.)
- 8- ಹೋಳಿ ಹಬ್ಬ (ನಿ.)
- 22- ಚಾಂದ್ರಮಾನ ಯುಗಾದಿ
- 26- ದೇವರ ದಾಸಿಮಯ್ಯ ಜಯಂತಿ (ನಿ.)
- 30- ಶ್ರೀರಾಮ ನವಮಿ (ನಿ.)

ಏಪ್ರಿಲ್
- 3- ಮಹಾವೀರ ಜಯಂತಿ (ನಿ.)
- 7- ಗುಡ್ ಫ್ರೈಡೆ
- 8- ಹೋಲಿ ಸ್ಯಾಟರ್‌ಡೇ (ನಿ.)
- 14- ಅಂಬೇಡ್ಕರ್ ಜಯಂತಿ
- 18- ಷಬ್-ಎ-ಖದ್ರ್ (ನಿ.)
- 21- ಜಮಾತ್-ಉಲ್-ವಿದಾ (ನಿ.)
- 22- ಕುತ್ಬ್-ಎ-ರಂಜಾನ್ (ನಿ.)
- 23- ಬಸವೇಶ್ವರ ಜಯಂತಿ
- 25- ಶ್ರೀ ಶಂಕರಾಚಾರ್ಯರ ಜಯಂತಿ (ನಿ.)
  ಶ್ರೀ ರಾಮಾನುಜಾಚಾರ್ಯರ ಜಯಂತಿ (ನಿ.)

ಮೇ
- 1- ಕಾರ್ಮಿಕರ ದಿನಾಚರಣೆ
- 5- ಬುದ್ಧ ಪೂರ್ಣಿಮೆ (ನಿ.)

ಜೂನ್
- 29- ಬಕ್ರೀದ್

ಜುಲೈ
- 29- ಮೊಹರಂ ಕೊನೆದಿನ

ಆಗಸ್ಟ್
- 15- ಸ್ವಾತಂತ್ರ್ಯ ದಿನಾಚರಣೆ
- 25- ವರಮಹಾಲಕ್ಷ್ಮೀ ವ್ರತ (ನಿ.)
- 29- ತಿರು ಓಣಂ, ಋಗ್-ಉಪಾಕರ್ಮ (ನಿ.)
- 30- ಯಜುರ್ ಉಪಾಕರ್ಮ (ನಿ.)
- 31- ಬ್ರಹ್ಮಶ್ರೀ ನಾರಾಯಣಗುರು ಜಯಂತಿ (ನಿ.)

ಸೆಪ್ಟೆಂಬರ್
- 6- ಶ್ರೀಕೃಷ್ಣ ಜನ್ಮಾಷ್ಟಮಿ (ನಿ.)
- 8- ಕನ್ಯಾ ಮರಿಯಮ್ಮ ಜಯಂತಿ (ನಿ.)
- 17- ವಿಶ್ವಕರ್ಮ ಜಯಂತಿ (ನಿ.)
- 18- ಸ್ವರ್ಣಗೌರಿ ವ್ರತ, ಗಣೇಶ ಚತುರ್ಥಿ
- 28- ಈದ್ ಮಿಲಾದ್, ಅನಂತ ಪದ್ಮನಾಭ ವ್ರತ

ಅಕ್ಟೋಬರ್
- 2- ಗಾಂಧಿ ಜಯಂತಿ
- 14- ಮಹಾಲಯ ಅಮಾವಾಸ್ಯೆ
- 18- ತುಲಾ ಸಂಕ್ರಮಣ (ನಿ.)
- 23- ಮಹಾನವಮಿ, ಆಯುಧ ಪೂಜೆ
- 24- ವಿಜಯದಶಮಿ
- 28- ವಾಲ್ಮೀಕಿ ಜಯಂತಿ

ನವೆಂಬರ್
- 1- ಕರ್ನಾಟಕ ರಾಜ್ಯೋತ್ಸವ
- 12- ನರಕ ಚತುರ್ದಶಿ
- 14- ಬಲಿಪಾಡ್ಯಮಿ
- 27- ಗುರುನಾನಕ್ ಜಯಂತಿ (ನಿ.)
- 28- ಹುತ್ತರಿ ಹಬ್ಬ (ನಿ.)
- 30- ಕನಕದಾಸ ಜಯಂತಿ

ಡಿಸೆಂಬರ್
- 24- ಕ್ರಿಸ್‌ಮಸ್ ಈವ್ (ನಿ.)
- 25- ಕ್ರಿಸ್‌ಮಸ್